ಬುಧವಾರ, ಜೂನ್ 12, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 163 | ಪುಟ 16

• www.prajavani.net

prajavani·net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಕೀಟನಾಶಕಗಳಿಂದ ರೈತರಿಗೆ ರಕ್ಷಣೆಯನ್ನು ಒದಗಿಸಬಲ್ಲ ಬಟ್ಟೆಯನ್ನು ಕಂಡುಹಿಡಿಯಲಾಗಿದೆ

ಆಳ–ಅಗಲ
ರಾಜ್ಯ ರಾಜಕಾರಣದ ಪುನರಾಗಮನ

ಜೋರು ಮಳೆಯಾದಾಗಲೆಲ್ಲ ನಡುಗಡ್ಡೆಯಾಗುವ ಲಕ್ಷ್ಮಿನಗರ
ಹರಿಯುವ ಹಳ್ಳ: ಅಕ್ಷರ ಕಲಿಕೆಗೆ ಮಕ್ಕಳ ಹರಸಾಹಸ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
76,456	23,264	₹73,500 (ಬೆಂಗಳೂರು)	₹90,400 (ಬೆಂಗಳೂರು)	83.59

ಚಿತ್ರದುರ್ಗದ ರೇಣುಕಾಸ್ವಾಮಿ ಹತ್ಯೆ: ನಟ ಸೇರಿ 13 ಆರೋಪಿಗಳು 6 ದಿನ ಪೊಲೀಸ್ ವಶಕ್ಕೆ

ದರ್ಶನ್, ಆಪ್ತೆ ಪವಿತ್ರಾ ಕಸ್ಟಡಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮ್ಮ ಸ್ನೇಹಿತೆಗೆ ಅಶ್ಲೀಲ ಸಂದೇಶ ಕಳುಹಿಸಿದ್ದ ಎಂಬ ಕಾರಣಕ್ಕೆ ಚಿತ್ರದುರ್ಗದ ರೇಣುಕಾಸ್ವಾಮಿ (35) ಎಂಬವರನ್ನು ಕೊಲೆ ಮಾಡಿದ್ದ ಆರೋಪದಡಿ ನಟ ದರ್ಶನ್ ತೂಗುದೀಪ (47), ಅವರ ಸ್ನೇಹಿತೆ ಪವಿತ್ರಾ ಗೌಡ ಸೇರಿ 13 ಮಂದಿಯನ್ನು ಬಂಧಿಸಿರುವ ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು, ಹೆಚ್ಚಿನ ತನಿಖೆಗಾಗಿ ಆರು ದಿನ ಕಸ್ಟಡಿಗೆ ಪಡೆದುಕೊಂಡಿದ್ದಾರೆ.

ಉತ್ತರಹಳ್ಳಿ ಮುಖ್ಯರಸ್ತೆಯಲ್ಲಿರುವ ಸ್ಟೋನ್ ಬ್ರೂಕ್ ಹೋಟೆಲ್ ಮಾಲೀಕ ವಿ.ವಿನಯ್, ದರ್ಶನ್ ಅವರ ಮ್ಯಾನೇಜರ್ ಆರ್.ನಾಗರಾಜ್, ಆಪ್ತ ಲಕ್ಷ್ಮಣ್, ಹೋಟೆಲ್ ಉದ್ಯಮಿ ಎಸ್. ಪ್ರದೋಶ್, ಪವಿತ್ರಾ ಗೌಡ ಅವರ ಸ್ನೇಹಿತ ಕೆ.ಪವನ್, ದೀಪಕ್‌ಕುಮಾರ್, ನಂದೀಶ್, ದರ್ಶನ್ ಫ್ಯಾನ್ಸ್ ಅಸೋಸಿಯೇಷನ್ ಅಧ್ಯಕ್ಷ ಕಾರ್ತಿಕ್, ಬನ್ನೇರುಘಟ್ಟದ ನಿವಾಸಿ ನಿಖಿಲ್ ನಾಯಕ್, ಕೇಶವಮೂರ್ತಿ ಹಾಗೂ ದರ್ಶನ್ ಅಭಿಮಾನಿ ಬಳಗದ ಅಧ್ಯಕ್ಷ ರಾಘವೇಂದ್ರ ಅಲಿಯಾಸ್ ರಾಘು ಬಂಧಿತರು.

ಆರೋಪಿಗಳ ಮೊಬೈಲ್ ಜಪ್ತಿ ಮಾಡಿಕೊಳ್ಳಲಾಗಿದೆ. ಕೃತ್ಯ ನಡೆದ ಸ್ಥಳ ಹಾಗೂ ಮೃತದೇಹ ಎಸೆದ ಸ್ಥಳದಲ್ಲಿ ಲಭಿಸಿದ ಸಿ.ಸಿ.ಟಿವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ಸಿನಿಮಾವೊಂದರ ಚಿತ್ರೀಕರಣಕ್ಕೆ ತೆರಳಿದ್ದ ದರ್ಶನ್ ಅವರು ಮೈಸೂರಿನ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದರು.

ಬೆಂಗಳೂರಿನ ನೃಪತುಂಗ ರಸ್ತೆಯಲ್ಲಿರುವ ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ಹಾಜರು ಪಡಿಸಲು ನಟ ದರ್ಶನ್ ಅವರನ್ನು ಪೊಲೀಸರು ಕರೆದೊಯ್ದರು
–ಪ್ರಜಾವಾಣಿ ಚಿತ್ರ / ಎಂ.ಎಸ್.ಮಂಜುನಾಥ್

ದೇಹದ ಮೇಲಿದ್ದ ಗಾಯದ ಗುರುತು ಆಧರಿಸಿ ಕೊಲೆ ಪ್ರಕರಣ ದಾಖಲು ಮಾಡಿಕೊಳ್ಳಲಾಗಿತ್ತು. ಸಿ.ಸಿ ಟಿ.ವಿ ಕ್ಯಾಮೆರಾ ದೃಶ್ಯಾವಳಿ, ತಾಂತ್ರಿಕ ಸಾಕ್ಷ್ಯಾಧಾರದ ಮೇಲೆ ಆರೋಪಿಗಳನ್ನು ಬಂಧಿಸಲಾಗಿದೆ

ಬಿ.ದಯಾನಂದ, ನಗರ ಪೊಲೀಸ್ ಕಮಿಷನರ್

ಮಂಗಳವಾರ ಬೆಳಿಗ್ಗೆ ಮೈಸೂರಿಗೆ ತೆರಳಿ ಪೊಲೀಸರು ದರ್ಶನ್ ಅವರನ್ನು ವಶಕ್ಕೆ ಪಡೆದು ನಗರಕ್ಕೆ ಕರೆತಂದರು. ನಂತರ, ದರ್ಶನ್ ಅವರ ಸ್ನೇಹಿತೆ ಪವಿತ್ರಾ ಗೌಡ ಅವರನ್ನು ಬಂಧಿಸಿದರು. ಆರೋಪಿಗಳನ್ನು ಬೌರಿಂಗ್ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ಹಾಜರುಪಡಿಸಿದರು. ನ್ಯಾಯಾಲಯವು ಆರೋಪಿಗಳನ್ನು ಆರು ದಿನ ಪೊಲೀಸ್ ಕಸ್ಟಡಿಗೆ ನೀಡಿ ಆದೇಶಿಸಿತು.

‘ಚಿತ್ರದುರ್ಗದ ಫಾರ್ಮಸಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ರೇಣುಕಾಸ್ವಾಮಿ ಅವರು ಸಾಮಾಜಿಕ ಮಾಧ್ಯಮದಲ್ಲಿ ಪವಿತ್ರಾ ಗೌಡ ಅವರ ಬಗ್ಗೆ ನಿಂದನೆ ಹಾಗೂ ಅಶ್ಲೀಲ ಸಂದೇಶ ಕಳುಹಿಸಿದ್ದರು ಎನ್ನಲಾಗಿದೆ. ಪವಿತ್ರಾ ಅವರಿಂದಾಗಿಯೇ ದರ್ಶನ್ ಕುಟುಂಬದಲ್ಲಿ ಬಿರುಕು ಮೂಡಿದೆ ಎಂದೂ ರೇಣುಕಾಸ್ವಾಮಿ ಬರೆದಿದ್ದರು. ಇದಕ್ಕೆ ಕೆಲವರು ಪ್ರತಿಕ್ರಿಯಿಸಿದ್ದರು.

‘ರೇಣುಕಾಸ್ವಾಮಿ ಬರಹಕ್ಕೆ ಯಾರೂ ಪ್ರತಿಕ್ರಿಯಿಸುವುದು ಬೇಡ. ಸದ್ಯದಲ್ಲೇ ಉತ್ತರ ಸಿಗಲಿದೆ ಎಂದು ಪವಿತ್ರಾ ಗೌಡ ಪ್ರತಿಕ್ರಿಯಿಸಿದ್ದರು. ರೇಣುಕಾಸ್ವಾಮಿ ಬರಹದ ವಿಷಯವನ್ನು ಪವಿತ್ರಾ ಅವರು ದರ್ಶನ್‌ಗೆ ತಿಳಿಸಿದ್ದರು. ದರ್ಶನ್ ತಮ್ಮ ಆಪ್ತರಿಗೆ ಈ ವಿಷಯ ತಿಳಿಸಿದ್ದರು. ನಂತರ, ಸಿಟ್ಟಿಗೆದ್ದ ತಂಡವು ಕೊಲೆಗೆ ಸಂಚು ರೂಪಿಸಿತ್ತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಜೂನ್ 8ರಂದು ರೇಣುಕಾಸ್ವಾಮಿ ಅವರನ್ನು ಆರೋಪಿ ರಾಘವೇಂದ್ರ ನೇತೃತ್ವದಲ್ಲಿ ಚಿತ್ರದುರ್ಗದಿಂದ ಅಪಹರಿಸಿ ಬೆಂಗಳೂರಿಗೆ ಕರೆತರಲಾಗಿತ್ತು.

7ನೇ ಪುಟ ನೋಡಿ

ನಟನ ವಿರುದ್ಧದ ಪ್ರಕರಣಗಳು

- ಪತ್ನಿ ವಿಜಯಲಕ್ಷ್ಮಿ ಮೇಲೆ ಹಲ್ಲೆ ನಡೆಸಿದ್ದ ಆರೋಪದಡಿ ದರ್ಶನ್ ವಿರುದ್ಧ 2011ರಲ್ಲಿ ಪ್ರಕರಣ ದಾಖಲಾಗಿತ್ತು. ಈ ಪ್ರಕರಣದಲ್ಲಿ ದರ್ಶನ್ ಅವರು 28 ದಿನ ಜೈಲಿನಲ್ಲಿದ್ದರು
- 2019ರಲ್ಲಿ ಸಿನಿಮಾ ಚಿತ್ರೀಕರಣದ ವೇಳೆ ಸಹ ನಟನ ಮೇಲೆ ದರ್ಶನ್ ಹಲ್ಲೆ ನಡೆಸಿದ್ದರು ಎನ್ನಲಾಗಿತ್ತು. ಆದರೆ ದೂರು ದಾಖಲಾಗಿರಲಿಲ್ಲ
- 2021ರಲ್ಲಿ ಸಾಲ ಹಾಗೂ ವಂಚನೆ ಸಂಬಂಧ ನಿರ್ಮಾಪಕರೊಬ್ಬರು ಹಾಗೂ ದರ್ಶನ್ ನಡುವೆ ಆರೋಪ– ಪ್ರತ್ಯಾರೋಪ ನಡೆದಿತ್ತು
- ಮೈಸೂರಿನ ಹೋಟೆಲ್ ಸಿಬ್ಬಂದಿಯ ಮೇಲೆ ದರ್ಶನ್ ಅವರು ಹಲ್ಲೆ ನಡೆಸಿದ್ದಾರೆ ಎಂದು ನಿರ್ದೇಶಕರೊಬ್ಬರು ಆರೋಪಿಸಿದ್ದರು. ಪೊಲೀಸರು ಹೋಟೆಲ್‌ಗೆ ತೆರಳಿ ತನಿಖೆ ನಡೆಸಿದ್ದರು
- ‘ಕಾಟೇರ’ ಸಿನಿಮಾ ಯಶಸ್ಸಿಗೆ ಸಂಬಂಧಿಸಿ ಬೆಂಗಳೂರಿನ ಜೆಟ್‌ಲ್ಯಾಗ್ ಪಬ್‌ನಲ್ಲಿ ಪಾರ್ಟಿ ಆಯೋಜಿಸಲಾಗಿತ್ತು. ದರ್ಶನ್ ಸೇರಿ ಹಲವರು ನಿಯಮ ಉಲ್ಲಂಘಿಸಿ ತಡರಾತ್ರಿ ವರೆಗೆ ಪಾರ್ಟಿ ನಡೆಸಿದ್ದ ಆರೋಪವಿತ್ತು. ಸುಬ್ರಹ್ಮಣ್ಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ದರ್ಶನ್ ಅವರನ್ನು ಪೊಲೀಸರು ವಿಚಾರಣೆ ನಡೆಸಿದ್ದರು

‘ಯಾರ ಕೊಲೆಗೂ ಸೂಚಿಸಿಲ್ಲ’

ದರ್ಶನ್ ಅವರನ್ನು ನಗರಕ್ಕೆ ಕರೆತಂದ ಬಳಿಕ ಅನ್ನಪೂರ್ಣೇಶ್ವರಿ ನಗರ ಠಾಣೆಯಲ್ಲಿ ವಿಚಾರಣೆ ನಡೆಸಲಾಯಿತು. ‘ನಾನು ಯಾರನ್ನೂ ಕೊಲೆ ಮಾಡಲು ಸೂಚಿಸಿಲ್ಲ. ಅಶ್ಲೀಲ ಸಂದೇಶ ಕಳುಹಿಸದಂತೆ ಬುದ್ಧಿಮಾತು ಹೇಳುವಂತೆ ಸ್ನೇಹಿತರಿಗೆ ತಿಳಿಸಿದ್ದೆ ಎಂದು ದರ್ಶನ್ ವಿಚಾರಣೆ ವೇಳೆ ಹೇಳಿದ್ದಾರೆ’ ಎಂಬುದು ಗೊತ್ತಾಗಿದೆ.

ತಿಳಿ ನೀಲದಲ್ಲಿ ತಾ ಲೀನವಾಗಿ...

• ಸುಮಂಗಲಾ

‘ಅರೆ... ಎಲ್ಲಿಯ 1932 ಮತ್ತು ಎಲ್ಲಿಯ 2022... ನಡುವೆ 90 ವರ್ಷಗಳು ಕಳೆದುಹೋದವೇ? ಇಲ್ಲ ಕಳೆದಿಲ್ಲ... ಇದು ಸಂಗೀತ, ಗುರುಭಕ್ತಿ, ಸಾಹಿತ್ಯ, ಚಿತ್ರಕಲೆ, ಮೋಟರ್ ಬೈಕ್ ರಿಪೇರಿ, ಕೋಳಿ ಸಾಕಾಣಿಕೆ, ಅಡುಗೆ... ಹೀಗೆ ಹತ್ತು ಹಲವು ಆಸಕ್ತಿಗಳು ಒಳಚೈತನ್ಯವನ್ನು ಪೊರೆಯುತ್ತ ಕೂಡಿದ, ಕಟ್ಟಿದ ಬದುಕು.

ಈ ಸರೋದ್ ತಂತಿಗಳಿಗೆ ತುಕ್ಕು ಹಿಡಿಯುವುದಿಲ್ಲ. ಸ್ವರಗಳು ಬೇಸುರಾ ಆಗುವುದಿಲ್ಲ. ಬೆರಳುಗಳು ರಾಗವನ್ನು ಮರೆಯುವುದಿಲ್ಲ. ಬೆರಳಿನ ಲಾಸ್ಯದೊಳು ರಾಗಗಳು ದಣಿಯುವುದಿಲ್ಲ. ಪರಿಚಿತ ರಾಗಗಳೊಳಗೆ ಮತ್ತೇನೋ ತಡಕಾಟ, ಹುಡುಕಾಟ ಮುಗಿಯುವುದಿಲ್ಲ. ಸ್ವರಗಳ ಬೆನ್ನುಹತ್ತಿದ ಮನಸ್ಸಿಗೆ ವಯಸ್ಸಿನ ಹಂಗಿಲ್ಲ. ಮಾತುಗಳು ಚೂಪು ಲಯವನ್ನು ಕಳೆದುಕೊಳ್ಳುವುದಿಲ್ಲ. ಎಂದೋ ಕೇಳಿದ ಕರೀಂಖಾನರ ಗಾಯನವೂ ಜೀವಕೊರಳಿನೊಳು ಉಸಿರುಪಡೆವುದು. ಮತ್ತೆ ಇಲ್ಲೀಗ ಸರೋದ್ ನಾದವನ್ನಾಲಿಸುತ್ತ ಕಾಲವೂ ಮೆತ್ತಗೆ ನಡೆಯುವುದು...’

ನಮ್ಮ ನಡುವಿನ ಸಾಕ್ಷಿಪ್ರಜ್ಞೆಯಂತಿದ್ದ ಪಂಡಿತ್ ರಾಜೀವ ತಾರಾನಾಥ ಅವರಿಗೆ ತೊಂಬತ್ತು ವರ್ಷ ತುಂಬಿದಾಗ ‘ಪ್ರಜಾವಾಣಿ’ಗೆ ನಾನು ಬರೆದಿದ್ದ ಲೇಖನದಲ್ಲಿನ ಸಾಲುಗಳಿವು. ಈಗ ಆ ಸಾಲುಗಳ ಮೇಲೆ ಕಣ್ಣಾಡಿಸಲು ಹೋದರೆ ಅವುಗಳು ಮಸುಕು ಮಸುಕಾಗಿ ಕೊನೆಗೆ ಕಾಣದಂತೆ ಕಣ್ಣಾಲಿಗಳು ತುಂಬಿಕೊಳ್ಳುತ್ತವೆ. ಬೆರಳುಗಳಿಗೆ ದಣಿವಿಲ್ಲದೆ ಸರೋದ್ ನುಡಿಸುತ್ತಿದ್ದ, ರಾಗಗಳೇ ಮೈವೆತ್ತ ಮೂರ್ತಿಯಾಗಿದ್ದ, ವಯಸ್ಸಿನ ಹಂಗಿಲ್ಲದೆ ಅನ್ಯಾಯದ ವಿರುದ್ಧ ಸಿಡಿದೇಳುತ್ತಿದ್ದ ಆ ಮಹಾನ್ ವ್ಯಕ್ತಿತ್ವ ಈಗ ನಮ್ಮ ನಡುವೆ ಇಲ್ಲ ಎಂಬುದನ್ನು ಅರಗಿಸಿಕೊಳ್ಳಲೇ ಆಗುತ್ತಿಲ್ಲ.

ನಮ್ಮ ರಾಜೀವರು ಎಂತಹ ಪ್ರಖರ ಚಿಂತಕರಾಗಿದ್ದರು ಗೊತ್ತೇ? ಕೆಲವು ವರ್ಷಗಳ ಹಿಂದೆ ನಗರ ನಕ್ಸಲರು ಎಂಬ ಹೆಸರಿನಲ್ಲಿ ಬಂಧನಗಳು ಹೆಚ್ಚಾದಾಗ ಯಾವುದೇ ಭಯವಿಲ್ಲದೆ ಅವರು ಆಡಿದ ಮಾತುಗಳನ್ನು ನೋಡಿ: ‘ಅರ್ಬನ್ ನಕ್ಸಲರು– ಇದೊಂದು ಕಾರಣವೋ? ನೆಪವೋ? ಕೋರ್ಟು ಕೇಳಿತು– ‘ನೀವು ಯಾವ ಕಾರಣಕ್ಕೆ ಬಂಧಿಸಿದಿರಿ’ ಅಂತ.

17-10-1932 - 11-06-2024

ರಾಜೀವ ತಾರಾನಾಥ ಇನ್ನಿಲ್ಲ

ಮೈಸೂರು: ಖ್ಯಾತ ಸರೋದ್ ವಾದಕ ಪಂಡಿತ್ ರಾಜೀವ ತಾರಾನಾಥ (92) ಅವರು ಇಲ್ಲಿನ ಮಣಿಪಾಲ್ ಆಸ್ಪತ್ರೆಯಲ್ಲಿ ಮಂಗಳವಾರ ರಾತ್ರಿ 7.05ರ ವೇಳೆಗೆ ಅನಾರೋಗ್ಯದಿಂದ ನಿಧನರಾದರು.

‘ಕುವೆಂಪುನಗರದ ನಿವಾಸದಲ್ಲಿ ಬುಧವಾರ ಬೆಳಿಗ್ಗೆ 9ರಿಂದ ಮಧ್ಯಾಹ್ನ 12 ಗಂಟೆವರೆಗೆ ಸಾರ್ವಜನಿಕರಿಗೆ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ನಂತರ ಅಂತ್ಯಕ್ರಿಯೆ ನಡೆಯಲಿದೆ’ ಎಂದು ಅವರ ಆಪ್ತ, ಲೇಖಕ ಟಿ.ಎಸ್.ವೇಣುಗೋಪಾಲ್ ‘ಪ್ರಜಾವಾಣಿ’ಗೆ ತಿಳಿಸಿದರು.

8ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಪ್ರತಿಕ್ರಿಯೆ ಸಲ್ಲಿಸುವಂತೆ ಕೇಂದ್ರ ಸರ್ಕಾರ, ಎನ್‌ಟಿಎಗೆ ಸೂಚನೆ

ನೀಟ್ ಪಾವಿತ್ರ್ಯಕ್ಕೆ ಧಕ್ಕೆ: ‘ಸುಪ್ರೀಂ’

ನವದೆಹಲಿ (ಪಿಟಿಐ): ‘ನೀಟ್–ಯುಜಿ 2024’ ಪರೀಕ್ಷೆಯ ಪಾವಿತ್ರ್ಯಕ್ಕೆ ಧಕ್ಕೆ ಉಂಟಾಗಿದೆ ಎಂದು ಹೇಳಿರುವ ಸುಪ್ರೀಂ ಕೋರ್ಟ್, ಪ್ರಶ್ನೆಪತ್ರಿಕೆ ಸೋರಿಕೆ ಹಾಗೂ ಇತರ ಅಕ್ರಮಗಳ ಕಾರಣದಿಂದ ಹೊಸದಾಗಿ ಪರೀಕ್ಷೆ ನಡೆಸಬೇಕು ಎಂಬ ಕೋರಿಕೆ ಇರುವ ಅರ್ಜಿಯ ಕುರಿತು ಪ್ರತಿಕ್ರಿಯೆ ಸಲ್ಲಿಸುವಂತೆ ಕೇಂದ್ರ ಸರ್ಕಾರ ಹಾಗೂ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಗೆ (ಎನ್‌ಟಿಎ) ಸೂಚನೆ ನೀಡಿದೆ.

ಆದರೆ ಎಂಬಿಬಿಎಸ್, ಬಿಡಿಎಸ್ ಹಾಗೂ ಇತರ ಕೋರ್ಸ್‌ಗಳ ಪ್ರವೇಶಕ್ಕೆ ವಿದ್ಯಾರ್ಥಿಗಳಿಗೆ ಕೌನ್ಸೆಲಿಂಗ್ ನಡೆಸುವುದಕ್ಕೆ ತಡೆ ನೀಡಲು ನಿರಾಕರಿಸಿದೆ.

ನೀಟ್ ಪರೀಕ್ಷೆ ಕುರಿತ ಆರೋಪಗಳನ್ನು ಗಮನಿಸಿದ ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಅಹ್ಸಾನುದ್ದೀನ್ ಅಮಾನುಲ್ಲಾ ಅವರು ಇದ್ದ ವಿಭಾಗೀಯ ಪೀಠವು, ಬಹಳ ಪವಿತ್ರವಾದ ಕೆಲಸವನ್ನು ಮಾಡುವ ಹೊಣೆ ಎನ್‌ಟಿಎ ಮೇಲಿತ್ತು ಎಂದು ಹೇಳಿತು. ‘ಪಾವಿತ್ರ್ಯಕ್ಕೆ ಧಕ್ಕೆ ಆಗಿದೆ. ಹೀಗಾಗಿ ನಮಗೆ ಉತ್ತರ ಬೇಕಾಗಿದೆ’ ಎಂದು ಪೀಠ ಹೇಳಿತು.

ನೀಟ್ ಪರೀಕ್ಷೆ ವೇಳೆ ಬಿಹಾರದಲ್ಲಿ ಅಕ್ರಮ ನಡೆದಿದೆ ಎಂಬ ಆರೋಪ ಇರುವ ಕಾರಣ ಬಿಹಾರ ಸರ್ಕಾರಕ್ಕೆ ಕೂಡ ನೋಟಿಸ್ ಜಾರಿಗೆ ಪೀಠ ಆದೇಶಿಸಿದೆ. ಶಿವಾಂಗಿ ಮಿಶ್ರಾ ಮತ್ತು ಇತರ ಕೆಲವು ಎಂಬಿಬಿಎಸ್ ಸೀಟು ಆಕಾಂಕ್ಷಿಗಳು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಪೀಠವು ನಡೆಸಿತು.

ನೀಟ್–ಯುಜಿ 2024 ಪರೀಕ್ಷೆಯು ಮೇ 5ರಂದು ನಡೆದಿದೆ. ಫಲಿತಾಂಶವನ್ನು ಜೂನ್ 4ರಂದು ಪ್ರಕಟಿಸಲಾಗಿದೆ.

‘ಪ್ರಶ್ನೆಪತ್ರಿಕೆಗಳು ಸೋರಿಕೆಯಾಗಿದ್ದವು, ಭಾರಿ ಸಂಖ್ಯೆಯ ವಿದ್ಯಾರ್ಥಿಗಳಿಗೆ ಅವು ಪರೀಕ್ಷೆಗೆ ಮೊದಲೇ ಸಿಕ್ಕಿದ್ದವು, ಆ ವಿದ್ಯಾರ್ಥಿಗಳು ಯಶಸ್ಸು ಕಂಡಿದ್ದಾರೆ ಎಂಬ ಆರೋಪ ಇದೆ. 23 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ, ಲಭ್ಯವಿರುವ ಸೀಟುಗಳ ಸಂಖ್ಯೆ ಒಂದು ಲಕ್ಷ. 67 ವಿದ್ಯಾರ್ಥಿಗಳಿಗೆ ಪೂರ್ಣ ಅಂಕ ಲಭಿಸಿದೆ. ಕೌನ್ಸೆಲಿಂಗ್‌ಗೆ ತಡೆ ನೀಡಲು ಕೋರ್ಟ್ ನಿರಾಕರಿಸಿದೆ’ ಎಂದು ವಿದ್ಯಾರ್ಥಿಗಳ ಪರ ವಕೀಲ ಮ್ಯಾಥ್ಯೂಸ್ ಜೆ. ನೆಡುಂಪಾರ ಅವರು ಸುದ್ದಿಸಂಸ್ಥೆಗೆ ತಿಳಿಸಿದರು.

ಪರೀಕ್ಷೆಯ ಫಲಿತಾಂಶವನ್ನು ಹಿಂಪಡೆಯುವಂತೆ ಎನ್‌ಟಿಎಗೆ ಸೂಚನೆ ನೀಡಬೇಕು ಎಂದು ಅರ್ಜಿಯಲ್ಲಿ ಕೋರಲಾಗಿದೆ. ಪ್ರಶ್ನೆಪತ್ರಿಕೆ ಸೋರಿಕೆಯಂತಹ ಅಕ್ರಮಗಳು ಮತ್ತೆ ನಡೆಯದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಎನ್‌ಟಿಎ ಹಾಗೂ ಕೇಂದ್ರಕ್ಕೆ ಸೂಚನೆ ನೀಡುವಂತೆಯೂ ಅರ್ಜಿಯಲ್ಲಿ ಮನವಿ ಮಾಡಲಾಗಿದೆ.

ತೆರಿಗೆ: ಗುರಿ ಮುಟ್ಟದಿದ್ದರೆ ಕ್ರಮ

ಐದು ಇಲಾಖೆಗಳ ಅಧಿಕಾರಿಗಳಿಗೆ ಮುಖ್ಯಮಂತ್ರಿ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣೆ ಮುಗಿದ ಬೆನ್ನಲ್ಲೇ ಸಂಪನ್ಮೂಲ ಕ್ರೋಡೀಕರಣದ ಜವಾಬ್ದಾರಿ ಹೊಂದಿರುವ ಐದು ಇಲಾಖೆಗಳ ಅಧಿಕಾರಿಗಳ ಸಭೆ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ವರಮಾನ ಸೋರಿಕೆ ತಡೆಗೆ ಬಿಗಿ ಕ್ರಮ ಕೈಗೊಳ್ಳುವಂತೆ ತಾಕೀತು ಮಾಡಿದರು. ತೆರಿಗೆ ಸಂಗ್ರಹದಲ್ಲಿ ಗುರಿ ಮುಟ್ಟದ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮದ ಎಚ್ಚರಿಕೆಯನ್ನೂ ನೀಡಿದರು.

ವಿಧಾನಸೌಧ ಮತ್ತು ಶಕ್ತಿ ಭವನದಲ್ಲಿ ಮಂಗಳವಾರ ಇಡೀ ದಿನ ಸಭೆ ನಡೆಸಿದ ಅವರು, ಹಣಕಾಸು ಇಲಾಖೆ ಅಧಿಕಾರಿಗಳ ಜತೆಗೆ ವಾಣಿಜ್ಯ ತೆರಿಗೆ, ಅಬಕಾರಿ, ನೋಂದಣಿ ಮತ್ತು ಮುದ್ರಾಂಕ, ಗಣಿ, ಭೂ ವಿಜ್ಞಾನ ಹಾಗೂ ಸಾರಿಗೆ ಇಲಾಖೆಗಳ ಪ್ರಗತಿ ಪರಿಶೀಲಿಸಿದರು. ಮೊದಲ ತ್ರೈಮಾಸಿಕ ಅವಧಿಯಲ್ಲಿ ಗುರಿ ತಲುಪಲು ವಿಫಲರಾದ ಅಧಿಕಾರಿಗಳ ಸ್ಥಾನಪಲ್ಲಟ ಮಾಡುವುದಾಗಿ ಎಚ್ಚರಿಸಿದರು.

ಪ್ರಸಕ್ತ ಆರ್ಥಿಕ ವರ್ಷದ ಮೊದಲ ಎರಡು ತಿಂಗಳಲ್ಲಿ ವಾಣಿಜ್ಯ ತೆರಿಗೆ ಹಾಗೂ ನೋಂದಣಿ ಮತ್ತು ಮುದ್ರಾಂಕ ಇಲಾಖೆಗಳು ಗುರಿ ಸಾಧಿಸಿವೆ. ಅಬಕಾರಿ ಇಲಾಖೆಯಲ್ಲಿ ತೆರಿಗೆ ಸಂಗ್ರಹ ಏಪ್ರಿಲ್ ತಿಂಗಳಲ್ಲಿ ಕುಸಿದಿತ್ತು. ಮೇ ತಿಂಗಳಿನಿಂದ ಏರಿಕೆ ಹಾದಿಯಲ್ಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಅಬಕಾರಿ ಸಚಿವ ಆರ್‌.ಬಿ. ತಿಮ್ಮಾಪುರ, ಕಂದಾಯ ಸಚಿವ ಕೃಷ್ಣ ಬೈರೇಗೌಡ, ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ, ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ, ಹಣಕಾಸು ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್‌.ಕೆ. ಅತೀಕ್, ಕಾರ್ಯದರ್ಶಿ ಪಿ.ಸಿ. ಜಾಫರ್ ಹಾಗೂ ಆಯಾ ಇಲಾಖೆಗಳ ಮುಖ್ಯಸ್ಥರು ಸಭೆಯಲ್ಲಿದ್ದರು.

7ನೇ ಪುಟ ನೋಡಿ

ಎರಡು ತಿಂಗಳ ವರಮಾನ ಸಂಗ್ರಹ (₹ ಕೋಟಿಗಳಲ್ಲಿ)	
ವಾಣಿಜ್ಯ ತೆರಿಗೆ	17,089
ಅಬಕಾರಿ	7,714.03
ನೋಂದಣಿ ಮತ್ತು ಮುದ್ರಾಂಕ	3,736.73

ಆಸ್ತಿ ತೆರಿಗೆ ಪಾವತಿಗೆ ಜುಲೈ 31ರ ಗಡುವು

ಬೆಂಗಳೂರು: ‘ಆಸ್ತಿ ತೆರಿಗೆ ಪಾವತಿಸದವರಿಗೆ ಬಿಬಿಎಂಪಿ ನೀಡಿರುವ ಒಂದು ಬಾರಿ ತೀರುವಳಿ (ಒಟಿಎಸ್) ಅವಕಾಶ ಜುಲೈ 31ರವರೆಗೆ ಮಾತ್ರ ಇರಲಿದೆ. ಈ ಅವಕಾಶವನ್ನು ಸದುಪಯೋಗ ಮಾಡಿಕೊಳ್ಳಬೇಕು’ ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ‘ಒಟಿಎಸ್ ಅವಕಾಶವನ್ನು ಯಾವುದೇ ಕಾರಣಕ್ಕೂ ವಿಸ್ತರಿಸುವುದಿಲ್ಲ. ಈ ಅವಕಾಶದಲ್ಲಿ ದಂಡದ ಮೇಲೆ ಶೇ 50ರಷ್ಟು ವಿನಾಯಿತಿ, ಶೇ 100ರಷ್ಟು ಬಡ್ಡಿ ಮನ್ನಾ ಮಾಡಲಾಗುವುದು’ ಎಂದರು.

3Bನೇ ಪುಟ ನೋಡಿ

ವರ್ಷಕ್ಕೆ 2 ಬಾರಿ ಪ್ರವೇಶ ವಿ.ವಿಗಳಿಗೆ ಅವಕಾಶ

ನವದೆಹಲಿ (ಪಿಟಿಐ): ವಿದೇಶಿ ವಿಶ್ವವಿದ್ಯಾಲಯಗಳ ರೀತಿಯಲ್ಲಿಯೇ ಭಾರತೀಯ ವಿಶ್ವವಿದ್ಯಾಲಯಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಿಗೆ ವರ್ಷಕ್ಕೆ 2 ಬಾರಿ ಪ್ರವೇಶ ಪ್ರಕ್ರಿಯೆ ಕೈಗೊಳ್ಳಲು ಅನುಮತಿ ನೀಡಲಾಗುವುದು ಎಂದು ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಅಧ್ಯಕ್ಷ ಎಂ.ಜಗದೀಶ್ ಕುಮಾರ್ ತಿಳಿಸಿದ್ದಾರೆ.

ಇದನ್ನು 2024–25ನೇ ಸಾಲಿನಿಂದಲೇ ಜಾರಿಗೆ ತರಲಾಗುವುದು. ಮೊದಲ ಸುತ್ತಿನ ಪ್ರವೇಶವು ಜುಲೈ–ಆಗಸ್ಟ್‌ನಲ್ಲಿ ಮತ್ತು ಎರಡನೇ ಸುತ್ತಿನ ಪ್ರವೇಶ ಪ್ರಕ್ರಿಯೆ ಜನವರಿ–ಫೆಬ್ರುವರಿಯಲ್ಲಿ ನಡೆಯಲಿದೆ ಎಂದು ಅವರು ಮಾಹಿತಿ ನೀಡಿದ್ದಾರೆ. ಆದಾಗ್ಯೂ, ವಿಶ್ವವಿದ್ಯಾಲಯ ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಇದು ಕಡ್ಡಾಯವಲ್ಲ, ಆದರೆ ಅಳವಡಿಸಿಕೊಂಡರೆ ವಿದ್ಯಾರ್ಥಿಗಳಿಗೆ ಹೆಚ್ಚು ಅನುಕೂಲವಾಗುತ್ತದೆ ಎಂದು ಅವರು ವಿವರಿಸಿದ್ದಾರೆ.

ಎಂ.ಜಗದೀಶ್ ಕುಮಾರ್

ಈ ಕುರಿತು ಯುಜಿಸಿ ಅಧ್ಯಕ್ಷರು ಪಿಟಿಐ ಸುದ್ದಿ ಸಂಸ್ಥೆಗೆ ನೀಡಿರುವ ಮಾಹಿತಿ ಇಲ್ಲಿದೆ.

- ವಿವಿಧ ಮಂಡಳಿಗಳಿಂದ ಫಲಿತಾಂಶ ಪ್ರಕಟಣೆಯಲ್ಲಿ ಆಗುವ ವಿಳಂಬ, ಆರೋಗ್ಯ ಸಮಸ್ಯೆ ಅಥವಾ ಇತರ ವೈಯಕ್ತಿಕ ಕಾರಣಗಳಿಂದ ಮೊದಲ ಸುತ್ತಿನಲ್ಲಿ (ಜುಲೈ–ಆಗಸ್ಟ್) ಪ್ರವೇಶ ಪಡೆಯಲು ಆಗದ ಅನೇಕ ವಿದ್ಯಾರ್ಥಿಗಳಿಗೆ ಎರಡನೇ ಸುತ್ತಿನ ಪ್ರವೇಶ ಪ್ರಕ್ರಿಯೆಯು (ಜನವರಿ–ಫೆಬ್ರುವರಿ) ಪ್ರಯೋಜನವಾಗುತ್ತದೆ. ಇದರಿಂದ ಆರಂಭದಲ್ಲಿ ಪ್ರವೇಶ ಪಡೆಯಲಾಗದ ವಿದ್ಯಾರ್ಥಿಗಳು ಪದವಿ ಕೋರ್ಸ್‌ನ ಪ್ರವೇಶಕ್ಕಾಗಿ ಒಂದು ವರ್ಷ ಕಾಯುವುದು ತಪ್ಪುತ್ತದೆ

9ನೇ ಪುಟ ನೋಡಿ

ನೌಕರರ ವೇತನ ಪರಿಷ್ಕರಣೆ ಜುಲೈ 1ರಿಂದ ಜಾರಿ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೌಕರರ ವೇತನ ಪರಿಷ್ಕರಣೆಗೆ ರಚಿಸಿದ್ದ ಏಳನೇ ವೇತನ ಆಯೋಗದ ಶಿಫಾರಸುಗಳನ್ನು ಜುಲೈ 1ರಿಂದ ಜಾರಿಗೊಳಿಸಲು ರಾಜ್ಯ ಸರ್ಕಾರ ಚಿಂತನೆ ನಡೆಸಿದೆ.

ಗುರುವಾರ ನಡೆಯುವ ಸಂಪುಟ ಸಭೆಯಲ್ಲಿ ಈ ಕುರಿತು ಚರ್ಚಿಸಿ, ಜುಲೈ 1ರಿಂದ ಅನ್ವಯವಾಗುವಂತೆ ಪರಿಷ್ಕೃತ ವೇತನ ನೀಡಲು ಕ್ರಮಕೈಗೊಳ್ಳಲಾಗುತ್ತದೆ ಎಂದು ಮೂಲಗಳು ಹೇಳಿವೆ.

ವೇತನ ಪರಿಷ್ಕರಣೆ ಕುರಿತು ಅಧ್ಯಯನ ಮಾಡಿ, ವರದಿ ಸಲ್ಲಿಸಲು ನಿವೃತ್ತ ಮುಖ್ಯಕಾರ್ಯದರ್ಶಿ ಕೆ.ಸುಧಾಕರ್ ರಾವ್ ಅಧ್ಯಕ್ಷತೆಯಲ್ಲಿ 2022ರ ನವೆಂಬರ್ 19ರಂದು ಆಯೋಗ ರಚಿಸಲಾಗಿತ್ತು. ಆರು ತಿಂಗಳು ನೀಡಿದ್ದ ಅವಧಿಯನ್ನು ಎರಡು ಬಾರಿ ವಿಸ್ತರಿಸಿದ ನಂತರ ಈ ಮಾರ್ಚ್ 16ರಂದು ಆಯೋಗವು ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. ವರದಿ ಸಲ್ಲಿಕೆಯಾದ ದಿನದಿಂದಲೇ ಲೋಕಸಭಾ ಚುನಾವಣೆಯ ನೀತಿ ಸಂಹಿತೆ ಜಾರಿಯಾಗಿತ್ತು. ಹಾಗಾಗಿ, ವೇತನ ಪರಿಷ್ಕರಣೆ ಕುರಿತು ಸರ್ಕಾರ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗಿರಲಿಲ್ಲ.

ವೇತನ ಆಯೋಗವು ಶೇಕಡ 31ರಷ್ಟು ತುಟ್ಟಿಭತ್ಯೆಯನ್ನು ಮೂಲವೇತನದಲ್ಲಿ ವಿಲೀನಗೊಳಿಸುವ ಜತೆಗೆ, ಶೇ 27.50ರಷ್ಟು ಫಿಟ್‌ಮೆಂಟ್ ನೀಡುವಂತೆ ಸರ್ಕಾರಕ್ಕೆ ಶಿಫಾರಸು ಮಾಡಿತ್ತು. 2022ರ ಜೂನ್‌ನಿಂದ ಪೂರ್ವಾನ್ವಯವಾಗುವಂತೆ ಜಾರಿ ಮಾಡುವುದು ಸೇರಿದಂತೆ ಹಲವು ಶಿಫಾರಸುಗಳನ್ನು ಒಳಗೊಂಡ 244 ಪುಟಗಳ ವರದಿಯನ್ನು ಸಲ್ಲಿಸಿತ್ತು.

ಸೇನೆಯ ಮುಖ್ಯಸ್ಥರಾಗಿ ಉಪೇಂದ್ರ ದ್ವಿವೇದಿ

ಉಪೇಂದ್ರ ದ್ವಿವೇದಿ

ನವದೆಹಲಿ (ಪಿಟಿಐ): ಸೇನೆಯ ನೂತನ ಮುಖ್ಯಸ್ಥರಾಗಿ ಲೆಫ್ಟಿನೆಂಟ್ ಜನರಲ್ ಉಪೇಂದ್ರ ದ್ವಿವೇದಿ ನೇಮಕಗೊಂಡಿದ್ದಾರೆ. ಹಾಲಿ ಮುಖ್ಯಸ್ಥ ಜನರಲ್ ಪಾಂಡೆ ಅವರು ಜೂನ್ 30ರಂದು ನಿವೃತ್ತರಾಗಲಿದ್ದು, ಅವರ ಸ್ಥಾನದಲ್ಲಿ ದ್ವಿವೇದಿ ಅಧಿಕಾರ ಸ್ವೀಕರಿಸಲಿದ್ದಾರೆ. ದ್ವಿವೇದಿ ಅವರು ಪ್ರಸ್ತುತ ಸೇನೆಯ ಉಪಮುಖ್ಯಸ್ಥರಾಗಿದ್ದಾರೆ. ಸೇವಾ ಹಿರಿತನ ಆಧರಿಸಿ ಅವರನ್ನು ನೇಮಿಸಲಾಗಿದೆ ಎಂದು ರಕ್ಷಣಾ ಸಚಿವಾಲಯ ಮಂಗಳವಾರ ಪ್ರಕಟಿಸಿದೆ.

'ಬಿಬಿಎಂಪಿ ಚುನಾವಣೆ ಶೀಘ್ರ'

ಪ್ರಜಾವಾಣಿ ವಾರ್ತೆ

ಡಿ.ಕೆ. ಶಿವಕುಮಾರ್

ಬೆಂಗಳೂರು: 'ಬಿಬಿಎಂಪಿ ಚುನಾವಣೆ ಮಾಡುವ ಸಂಬಂಧ ವಾರ್ಡ್ ಮೀಸಲಾತಿ ಸೇರಿದಂತೆ ಇತರೆ ಪ್ರಕ್ರಿಯೆ ಪೂರ್ಣಗೊಳಿಸಲು ಈಗಾಗಲೇ ತಯಾರಿ ಮಾಡಿದ್ದೇವೆ. ಆದಷ್ಟು ಬೇಗ ಚುನಾವಣೆ ಮಾಡುತ್ತೇವೆ' ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಬಿಬಿಎಂಪಿ ವಿಭಜನೆ ಪ್ರಸ್ತಾವ ಈ ಹಿಂದೆಯೇ ಇತ್ತು. ಆ ಬಗ್ಗೆ ಚರ್ಚೆ ಮಾಡಲಾಗುತ್ತಿದೆ. ಏನೇ ಇದ್ದರೂ, ಆದಷ್ಟು ಬೇಗ ಚುನಾವಣೆ ಮಾಡಲಾಗುವುದು. ಚುನಾವಣೆ ಮಾಡದಿದ್ದರೆ ಕೋರ್ಟ್ ಬಿಡುವುದಿಲ್ಲ' ಎಂದರು.

ಈಗಲೇ ಟೀಕೆ ಸರಿಯಲ್ಲ: ಬಿಜೆಪಿ ಸಂಸದ ವಿ. ಸೋಮಣ್ಣ ಅವರಿಗೆ ಜಲಶಕ್ತಿ ರಾಜ್ಯ ಖಾತೆ ಸಚಿವ ಸ್ಥಾನ ನೀಡಿರುವುದಕ್ಕೆ ತಮಿಳುನಾಡಿನ ಆಕ್ಷೇಪ ವಿಚಾರವಾಗಿ ಪ್ರತಿಕ್ರಿಯಿಸಿದ ಶಿವಕುಮಾರ್, 'ಸೋಮಣ್ಣ ಸಚಿವರಾಗಿರುವುದು ಇಡೀ ದೇಶಕ್ಕೆ. ಅವರು ಒಂದು ರಾಜ್ಯಕ್ಕೆ ಸೀಮಿತವಲ್ಲ. ರಾಜ್ಯದ ಬಗ್ಗೆ ಹೆಚ್ಚಿನ ಆದ್ಯತೆ ಕೊಡುವುದು ಸಹಜ' ಎಂದರು.

'ಸಚಿವರಾಗಿ ಸೋಮಣ್ಣ ಇನ್ನೂ ಕಣ್ಣೇ ಬಿಟ್ಟಿಲ್ಲ. ಈಗಲೇ ಏಕೆ ಟೀಕೆ ಮಾಡುವುದು? ಅವರು ರಾಜ್ಯದ ಹಿತ ಕಾಪಾಡಲಿ' ಎಂದರು.

ಚುನಾವಣೆ 'ಮಂತ್ರ'; ವಿಭಜನೆಯದ್ದೇ ತಂತ್ರ

ಬಿಬಿಎಂಪಿ: ಕಾರ್ಪೊರೇಟರ್‌ಗಳಿರುವುದು 'ಯಾರಿಗೂ' ಬೇಕಿಲ್ಲ; ಸಚಿವರು, ಶಾಸಕರದ್ದೇ ಪ್ರಾಬಲ್ಯ

• ಆರ್. ಮಂಜುನಾಥ್

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಚುನಾವಣೆಯ ವೇದಿಕೆ ಸಿದ್ಧವಾಗುತ್ತಿದೆ ಎಂಬ ಸಂದರ್ಭದಲ್ಲೇ ಮತ್ತೆ ವಿಭಜನೆಯ ಮಾತು ಕೇಳಿಬರುತ್ತಿದೆ. ಇದರಿಂದ ಚುನಾವಣೆ ಮತ್ತಷ್ಟು ತಿಂಗಳು ಮುಂದಕ್ಕೆ ಹೋಗುವುದೆಂಬ ಸಂಶಯ ದಟ್ಟವಾಗುತ್ತಿದೆ.

ಬಿಜೆಪಿ, ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳು ತಮ್ಮ ಕಾರ್ಯಕರ್ತರಿಗೆ ವಿಧಾನಸಭೆ, ಲೋಕಸಭೆ ಚುನಾವಣೆ ಮುಗಿಯಲಿ ಎಂಬ 'ದೂರದ ಬೆಟ್ಟ' ತೋರಿಸುತ್ತಲೇ, ಬಿಬಿಎಂಪಿ ಚುನಾವಣೆಯನ್ನು ಮುಂದೂಡುತ್ತಲೇ ಬಂದಿವೆ. ವಿಧಾನಸಭೆ ಚುನಾವಣೆ ಮುಗಿಯಿತು, ಲೋಕಸಭೆ ಚುನಾವಣೆಯೂ ಅಂತ್ಯಗೊಂಡಿದೆ. ಆದರೆ ಬಿಬಿಎಂಪಿ ಚುನಾವಣೆ ಬಗ್ಗೆ ಮಾತ್ರ ಇನ್ನೂ ಸ್ಪಷ್ಟ ನಿರ್ಧಾರವಾಗಿಲ್ಲ.

ಲೋಕಸಭೆ ಚುನಾವಣೆ ಮುಗಿದ ಮೇಲೆ ಈ ಬಾರಿ ಇನ್ನೇನು ಚುನಾವಣೆ ನಡೆದೇ ಹೋಗುತ್ತದೆ ಎಂಬ ಮಾತಿತ್ತು. ಆದರೆ, 'ವಿಭಜನೆ ತಂತ್ರದ' ಮಾತು ಮತ್ತೆ ಮುನ್ನೆಲೆಗೆ ಬಂದಿದೆ. 2014ರಲ್ಲೂ ಲೋಕಸಭೆ ಚುನಾವಣೆ ನಡೆದ ಮೇಲೆ ಚುನಾವಣೆ ನಡೆಯುತ್ತದೆ ಎಂದು ಹೇಳಲಾಗುತ್ತಿತ್ತು. ಆಡಳಿತದಲ್ಲಿದ್ದ ಕಾಂಗ್ರೆಸ್ ರಾಜ್ಯದಲ್ಲಿ 9 ಕ್ಷೇತ್ರದಲ್ಲಿ ಗೆಲುವು ಸಾಧಿಸಿದ್ದರಿಂದ ಬಿಬಿಎಂಪಿ ಚುನಾವಣೆಯನ್ನು ನಡೆಸುವ ಗೋಜಿಗೇ ಹೋಗಲಿಲ್ಲ.

ಚುನಾವಣೆ ಮುಂದೂಡಿಕೆಗಾಗಿ ಬಿಬಿಎಂಪಿಯನ್ನು ಮೂರು ಭಾಗ ಮಾಡುವುದಾಗಿ ಹೇಳಿತ್ತು. ಅದನ್ನು ವಿಧಾನಮಂಡಲದಲ್ಲಿ ಮಂಡಿಸಿ, ಮೂರು ದಿನ ವಾದ–ವಿವಾದಗಳ ನಡುವೆ ಸಮ್ಮತಿಯನ್ನೂ ಪಡೆಯಲಾಗಿತ್ತು. ರಾಜ್ಯಪಾಲರ ಅಂಕಿತಕ್ಕೆ ಹೋದ ಮಸೂದೆ ವಾಪಸ್ ಬರಲಿಲ್ಲ. ವಿಭಜನೆಗೆ ಸ್ಥಳೀಯವಾಗಿ ವಿರೋಧ ವ್ಯಕ್ತವಾಗಿದ್ದರಿಂದ ಅದು ತಣ್ಣಗಾಯಿತು. ನ್ಯಾಯಾಲಯದ ಆದೇಶದಿಂದ 2015ರಲ್ಲಿ ಚುನಾವಣೆ ನಡೆಸಬೇಕಾಯಿತು. ಜೆಡಿಎಸ್ ಜೊತೆಗೂಡಿ ಕಾಂಗ್ರೆಸ್ ಅಧಿಕಾರಕ್ಕೂ ಬಂತು.

2020ರ ಸೆಪ್ಟೆಂಬರ್‌ನಲ್ಲಿ ಬಿಬಿಎಂಪಿ ಕೌನ್ಸಿಲ್ ಅವಧಿ ಅಂತ್ಯಗೊಂಡಿದೆ. ಬಹುತೇಕ ನಾಲ್ಕು ವರ್ಷವಾಗುತ್ತಿದ್ದರೂ ಇನ್ನೂ ಚುನಾವಣೆ ನಡೆಸುವ ಆಲೋಚನೆ ಮಾತ್ರ ಕೇಳಿಬರುತ್ತಿದೆ. ಬಿಜೆಪಿ ಸರ್ಕಾರ ನಡೆಸಬೇಕಾದ ಪ್ರಕ್ರಿಯೆಗಳು ನಡೆದರೂ ಅವೆಲ್ಲವೂ ಚುನಾವಣೆಯನ್ನು ಮುಂದೂಡುವಂತಹವೇ ಆಗಿದ್ದವು. ಚುನಾವಣೆ ನಡೆಸಬೇಕಿದ್ದ ಬಿಜೆಪಿ ಸರ್ಕಾರ ವಾರ್ಡ್‌ಗಳನ್ನು ಹೆಚ್ಚಿಸುವ ಬಗ್ಗೆ ಪ್ರಕ್ರಿಯೆ ಆರಂಭಿಸಿತು. ಇದಕ್ಕಾಗಿ ಒಂದು ವರ್ಷಕ್ಕೂ ಹೆಚ್ಚು ಸಮಯ ತೆಗೆದುಕೊಂಡಿತು. 198ರಿಂದ 243 ವಾರ್ಡ್‌ಗಳನ್ನಾಗಿ ಪುನರ್ ವಿಂಗಡಿಸಲಾಯಿತು.

ವಾರ್ಡ್ ವಿಂಗಡಣೆ ಬೇಕಾಬಿಟ್ಟಿಯಾಗಿದ್ದು, ಜನಸಂಖ್ಯೆಗೆ ಅನುಗುಣವಾಗಿ ನಡೆದಿಲ್ಲ ಎಂಬ ಆರೋಪ ಕೇಳಿಬಂತು. ಮಾಜಿ ಕಾರ್ಪೊರೇಟರ್‌ಗಳು ನ್ಯಾಯಾಲಯಕ್ಕೂ ಹೋದರು. 243 ವಾರ್ಡ್‌ಗೆ ಮೀಸಲಾತಿಯನ್ನೂ ಬಿಜೆಪಿ ಸರ್ಕಾರ ಪ್ರಕಟಿಸಿತು. ಇದೂ ಸರಿಯಲ್ಲ ಎಂಬ ನ್ಯಾಯಾಲಯದ ಮೊರೆ ಹೋಗಲಾಯಿತು. ತೆರೆಯ ಹಿಂದೆ ಎಲ್ಲ ಪಕ್ಷಗಳ ಶಾಸಕರೂ ಇದ್ದರು. ಚುನಾವಣೆ ಮುಂದಕ್ಕೆ ಹೋಗುವ ಎಲ್ಲ ತಂತ್ರ–ಮಂತ್ರಗಳನ್ನೂ ಮಾಡಿದ್ದರು.

ಕಾಂಗ್ರೆಸ್ ಸರ್ಕಾರ 2023ರಲ್ಲಿ ಅಧಿಕಾರಕ್ಕೆ ಬಂದ ಮೇಲೆ ಹಿಂದಿನ ವಾರ್ಡ್ ಪುನರ್‌ವಿಂಗಡಣೆಯನ್ನೇ ರದ್ದುಪಡಿಸಿ, ಕ್ಷಿಪ್ರಗತಿಯಲ್ಲಿ 225 ವಾರ್ಡ್‌ಗಳನ್ನು ರಚಿಸಿತು. ಚುನಾವಣೆ ನಡೆದೇ ಬಿಡುತ್ತದೇನೋ ಎಂದು ಆಲೋಚಿಸುವ ಸಂದರ್ಭದಲ್ಲೇ, ಮೀಸಲಾತಿ ಪ್ರಕಟಿಸಲು 'ಜಾತಿ ಗಣತಿ' ವರದಿ ಬರಬೇಕು ಎಂದು ಸಬೂಬು ಹೇಳಿತು. ಫೆಬ್ರುವರಿ ಅಂತ್ಯದಲ್ಲಿ ಆ ವರದಿ ಸಂದಾಯವಾದಾಗ ಲೋಕಸಭೆ ಚುನಾವಣೆ ಹತ್ತಿರವಿರುವ ಸಂದರ್ಭದಲ್ಲಿ ಬಿಬಿಎಂಪಿ ಚುನಾವಣೆ ಸಾಧ್ಯವಿಲ್ಲ ಎಂದು ಹೇಳಲಾಯಿತು.

ಲೋಕಸಭೆ ಚುನಾವಣೆ ಮುಗಿದ ಮೇಲೆ ಇದೀಗ ಮತ್ತೆ 2014ರ ಪರಿಸ್ಥಿತಿಯಲ್ಲೇ ಕಾಂಗ್ರೆಸ್ ಸರ್ಕಾರವಿದೆ. ಬಿಬಿಎಂಪಿಯ ಮೂರು ಕ್ಷೇತ್ರಗಳು ಸೇರಿದಂತೆ ಅಕ್ಕಪಕ್ಕದ ಎರಡೂ ಕ್ಷೇತ್ರಗಳು ಬಿಜೆಪಿ ಪಾಲಾಗಿವೆ. ಹೀಗಾಗಿ ಚುನಾವಣೆ ಮುಂದೂಡಲು 'ವಿಭಜನೆ' ಎಂಬ ಅಸ್ತ್ರ ಪ್ರಯೋಗಿಸಿದೆ ಎಂಬ ಆರೋಪ ಎದುರಾಗಿದೆ.

ಎರಡೂ ಬಾರಿ ಕೋರ್ಟ್ ಆದೇಶ!

ಬೆಂಗಳೂರು ಮಹಾನಗರ ಪಾಲಿಕೆಯಿಂದ (ಬಿಎಂಪಿ) 2007ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾದ ಮೇಲೆ ನ್ಯಾಯಾಲಯದ ಆದೇಶದಿಂದಲೇ ಎರಡೂ ಚುನಾವಣೆ ನಡೆದಿತ್ತು.

100 ವಾರ್ಡ್‌ನಿಂದ 198 ವಾರ್ಡ್‌ಗಳ ಮರು ವಿಂಗಡಣೆಯ ನೆಪವೊಡ್ಡಿ ಅಂದಿನ ಬಿಜೆಪಿ ಸರ್ಕಾರ 2008ರಲ್ಲಿ ನಡೆಯಬೇಕಿದ್ದ ಚುನಾವಣೆಯನ್ನು ಮುಂದೂಡುತ್ತಾ ಬಂದಿತ್ತು. 2011ರ ಜನಗಣತಿ ಆಧಾರದಲ್ಲಿ ಚುನಾವಣೆ ನಡೆಸುತ್ತೇವೆ ಎಂದು ಸರ್ಕಾರ ವಾದಿಸಿತ್ತು. ಆದರೆ, ನ್ಯಾಯಾಲಯ ಆದೇಶ ನೀಡಿ, ಚುನಾವಣೆ ನಡೆಸಲು ಕಟ್ಟಪ್ಪಣೆ ಮಾಡಿತು. ಇದರಿಂದ 2010ರಲ್ಲಿ ಚುನಾವಣೆ ನಡೆದಿತ್ತು.

2014ರಲ್ಲಿ ಬಿಬಿಎಂಪಿ ಕೌನ್ಸಿಲ್ ಅವಧಿ ಮುಗಿದ ಮೇಲೆ ಮತ್ತೆ ಚುನಾವಣೆ ನಡೆಯಬೇಕಿತ್ತು. ಆಗಲೂ ಕಾಂಗ್ರೆಸ್ ಸರ್ಕಾರ ಬಿಬಿಎಂಪಿಯನ್ನು ಮೂರು ಭಾಗವನ್ನಾಗಿ ವಿಭಜಿಸಲಾಗುತ್ತದೆ ಎಂದು ಹೇಳಿ ನ್ಯಾಯಾಲಯದಲ್ಲಿ ಮುಂದೂಡಲು ಪ್ರಯತ್ನಿಸಿತು. ಆಗ ನ್ಯಾಯಾಲಯದ ಮಧ್ಯ ಪ್ರವೇಶದಿಂದ 2015ರಲ್ಲಿ ಚುನಾವಣೆ ನಡೆಯಿತು.

'ಜಾತಿ ಗಣತಿ ವರದಿ' ಒಪ್ಪಿಲ್ಲ, ಆದರೂ...

'ನ್ಯಾಯಾಲಯದ ಆದೇಶವಿದೆ, ಚುನಾವಣೆ ನಡೆಸಲೇಬೇಕಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳುತ್ತಿದ್ದಾರೆ. ಆದರೆ, 225 ವಾರ್ಡ್‌ಗಳಿಗೆ ಮೀಸಲಾತಿ ನಿಗದಿಪಡಿಸಬೇಕಾದರೆ 'ಜಾತಿಗಣತಿ ವರದಿ'ಯನ್ನು ಸರ್ಕಾರ ಒಪ್ಪಬೇಕು. ಅದರಂತೆ ಅಧಿಸೂಚನೆಯಾಗಬೇಕು. ನಂತರ ವಾರ್ಡ್ ಮೀಸಲಾಗಬೇಕು. ಯುದ್ಧೋಪಾದಿಯಲ್ಲಿ ಇದೆಲ್ಲ ಪ್ರಕ್ರಿಯೆ ಮುಗಿದರೂ, ವಾರ್ಡ್ ಮೀಸಲಾತಿ ಪ್ರಕ್ರಿಯೆ ಮುಗಿಯಲು ನಾಲ್ಕು ತಿಂಗಳು ಬೇಕು. ಆ ಮೀಸಲಾತಿಯೂ ಸರಿ ಇಲ್ಲ ಎಂದು ನ್ಯಾಯಾಲಯಕ್ಕೆ ಯಾರಾದರೂ ಹೋದರೆ, ಮತ್ತೆ ಎಲ್ಲವೂ ತಡೆಯಾಗುತ್ತದೆ. ಎಲ್ಲ ಪಕ್ಷಗಳ ಶಾಸಕರು, ಸಚಿವರಿಗೂ ಬೇಕಾಗಿರುವುದು ಇದೇ, ತೆರೆಮರೆಯಲ್ಲಿ ಮಾಡುವುದೂ ಅದನ್ನೇ ಎನ್ನಲಾಗುತ್ತಿದೆ.



FARNAZ

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/12/2024
ದಿನಾಂಕ : 07-06-2024
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಹೊಸ ವಸತಿಗೃಹ ವಿಧ–2 (ಹುಬ್ಬಳ್ಳಿಯಲ್ಲಿ 10 ಯೂನಿಟ್‌ಗಳು, ಕುಂದಗೋಳದಲ್ಲಿ 4, ಸಂಶಿಯಲ್ಲಿ 4 ಯೂನಿಟ್‌ಗಳು, ಗುಡಗೇರಿಯಲ್ಲಿ 4 ಯೂನಿಟ್‌ಗಳು, ಯಲವಿಗಿಯಲ್ಲಿ 2 ಯೂನಿಟ್‌ಗಳು, ಒಟ್ಟು 24 ಯೂನಿಟ್‌ಗಳು ಜಿ+2) ವಿಧ–3 (ಹುಬ್ಬಳ್ಳಿಯಲ್ಲಿ 4 ಯೂನಿಟ್‌ಗಳು ಜಿ+2), ವಿಧ–4 (ಹುಬ್ಬಳ್ಳಿಯಲ್ಲಿ 4 ಯೂನಿಟ್‌ಗಳು ಜಿ+2) ಮತ್ತು ವಿಧ–5 (ಹುಬ್ಬಳ್ಳಿಯಲ್ಲಿ 2 ಯೂನಿಟ್‌ಗಳು) ಹುಬ್ಬಳ್ಳಿಯಲ್ಲಿ ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / 1 ರವರ ಕಛೇರಿ, ಪಿಡಬ್ಲ್ಯು/ಐಒಡಬ್ಲ್ಯು/ಎಸ್ಎಸ್ಇ ವಿದ್ಯುತ್/ಸಿಎಸ್ಇ/ಸ್ಟೋರ್ ಮತ್ತು (ಕುಂದಗೋಳ, ಸಂಶಿ, ಗುಡಗೇರಿ, ಯಲವಿಗಿ ನಿಲ್ದಾಣ) ಇಲ್ಲಿ ವಿವಿಧ ಕಛೇರಿ ಉದ್ದೇಶಿತ ನಿರ್ಮಾಣ. (ಟೆಂಡರ್ ಉಲ್ಲೇಖ ಸಂ.: ಯುಬಿಎಲ್–66)	ರೂ. 21,28,39,620/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 27-06-2024 ರಂದು 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು ಬೆಂಗಳೂರು ದಂಡು
ಪಿಯುಬಿ/151/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024-25
South Western Railway - SWR SWRRLY SWRRLY

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/ಇಪಿಸಿ/11/2024
ದಿನಾಂಕ : 06-06-2024
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
02 ಹೊಸ ಯಾರ್ಡ್‌ಗಳನ್ನು (ಚಲಿವೆಂದಲ ಮತ್ತು ಪಾಲಸಮುದ್ರಂ) ಒಳಗೊಂಡು ಮಲುಗೂರು (ಚೈನೇಜ್ (–) 831.6 (ಯಲಹಂಕ – ಪೆನುಕೊಂಡದ ಚೈನೇಜ್: 109200) ದಿಂದ ಪಾಲಸಮುದ್ರಂವರೆಗೆ (ಚೈನೇಜ್ 17/150) ಹೊಸ ಬ್ರಾಡ್‌ಗೇಜ್ ರೈಲ್ವೆ ಮಾರ್ಗದ ನಿರ್ಮಾಣ ಮತ್ತು ಸಿಗ್ನಲ್ ಮತ್ತು ಟೆಲಿಕಮ್ಯುನಿಕೇಶನ್, ವಿದ್ಯುದೀಕರಣ ಮತ್ತು ವಿದ್ಯುತ್ ಸಾಮಾನ್ಯ ಸೇವಾ ಕಾಮಗಾರಿಗಳನ್ನು ಒಳಗೊಂಡು 17.981 ಕಿಮೀ. ಉದ್ದದ ಮಾರ್ಗದೊಂದಿಗೆ ಹಾಲಿ ಇರುವ ಮಲುಗೂರು ಯಾರ್ಡ್ ಮಾರ್ಪಾಡು. (ಟೆಂಡರ್ ಉಲ್ಲೇಖ ಸಂ. ಎಂಎಲ್‌ಯು–ಪಾಲಸಮುದ್ರಂ–ಇಪಿಸಿ–01ಆರ್)	ರೂ. 283,20,51,034/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 04-10-2024 ರಂದು 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು ಬೆಂಗಳೂರು ದಂಡು
ಪಿಯುಬಿ/150/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024-25
South Western Railway - SWR SWRRLY SWRRLY

PUBLIC NOTICE

This is to notify the general public that our client is negotiating to purchase the properties described in the schedule below from Sri. Sha Bra Chandramouleshwara Shivacharya Mahaswamigalu, Mataadipati of Sri Ramalingeshwara Mutt, Haranahalli, Shivamogga Taluk and District.

If any persons, financial institution, partnership firm or body corporate has any claims or objections for the sale, they may notify the same to the undersigned herein, together with supporting documents within **ten days** from the date of publication of this notice.

If no claims are received, our client will treat that the properties are free from claims of any nature and proceed to complete the sale transaction.

Schedule

1. All that piece and parcel of land bearing Sy. No.102, situated at Singapura Village, Hessarghatta Hobli, Yelahanka Taluk, measuring 9 acres out of 66 acres and 18 guntas.
2. All that piece and parcel of land bearing Sy. No. 294, situated at Gunjur Village, Varthur Hobli, Bengaluru East Taluk, measuring 6 acres 26 guntas.
3. All that piece and parcel of land bearing Sy. Nos.8/1 & 8/3, situated at Nagasandra Village, Yeshwanthpur Hobli, Bengaluru North Taluk, Tumkur Road, measuring 6 Acres 38 guntas and 2 Acres 03 Guntas respectively.

M/s Chalapathy & Srinivas, Advocates
No. 21/22, 2nd and 3rd floors, Krishna Towers, 3rd main road, Gandhinagar, Bangalore- 560 009.

ಅಪಘಾತ: ತನಿಖೆಗೆ ತಜ್ಞರ ನೆರವು

ಪುಣೆ (ಪಿಟಿಐ): ಪೋಶೆ ಕಾರು ಅಪಘಾತ ಪ್ರಕರಣದ ತನಿಖೆ ನಡೆಸಿರುವ ಪೊಲೀಸರು ಸೇನೆಯ ವಿಧಿವಿಜ್ಞಾನ ಪರಿಣತರ ನೆರವನ್ನು ಪಡೆದಿದ್ದಾರೆ. ಕಾರು ಯಾವ ರೀತಿಯಲ್ಲಿ ದ್ವಿಚಕ್ರ ವಾಹನಕ್ಕೆ ಗುದ್ದಿತ್ತು ಎಂಬ ವಿಶ್ಲೇಷಣಾ ವರದಿಯನ್ನು ಸಿದ್ಧಪಡಿಸಿದ್ದಾರೆ.

ನೀಟ್–ಯುಜಿ ಪರೀಕ್ಷೆ: ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೀಟ್ -ಯುಜಿ ಪರೀಕ್ಷೆ ಮತ್ತು ಫಲಿತಾಂಶದಲ್ಲಿನ ಲೋಪಗಳನ್ನು ಖಂಡಿಸಿ, ನಿಷ್ಪಕ್ಷಪಾತ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ನೀಡುವಂತೆ ಆಗ್ರಹಿಸಿ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ ಆರ್ಗನೈಸೇಷನ್‌ನ (ಎಐಡಿಎಸ್‌ಒ) ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

'ಕೋಚಿಂಗ್ ಮಾಫಿಯಾ ಶಿಕ್ಷಣದ ಮೂಲ ಆಶಯಕ್ಕೆ ಪೆಟ್ಟು ನೀಡುತ್ತಿದೆ. ಇದರಿಂದ, ಬಡವರ್ಗದ ವಿದ್ಯಾರ್ಥಿಗಳು ಶಿಕ್ಷಣ ಪಡೆದುಕೊಳ್ಳುವುದಕ್ಕೆ ಹರಸಾಹಸ ಪಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಮೌಲ್ಯಾಧಾರಿತ ಶಿಕ್ಷಣದ ಕೊರತೆಯಿಂದ ಇಂದು ನೂರಾರು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ, ನೀಟ್–ಯುಜಿ ಪ್ರವೇಶ ಪರೀಕ್ಷೆ ಹಾಗೂ ಫಲಿತಾಂಶದ ಬಗ್ಗೆ ಸೂಕ್ತ ತನಿಖೆ ನಡೆಸಿ ಆರೋಪಿಗಳನ್ನು ಬಂಧಿಸಬೇಕು' ಎಂದು ಒತ್ತಾಯಿಸಿದರು.

ಎಐಡಿಎಸ್‌ಒ ಬೆಂಗಳೂರು ನಗರ ಘಟಕದ ಅಧ್ಯಕ್ಷೆ ಅಪೂರ್ವ, 'ದೇಶದಾದ್ಯಂತ 24 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ನೀಟ್ ಪರೀಕ್ಷೆ ಬರೆದಿದ್ದಾರೆ. ಪರೀಕ್ಷೆಗೂ ಮುಂಚಿತವಾಗಿ ಪ್ರಶ್ನೆಪತ್ರಿಕೆ ಸೋರಿಕೆಯಾಗಿದ್ದು, ಈಗಾಗಲೇ 13 ಮಂದಿಯನ್ನು ಬಂಧಿಸಲಾಗಿದೆ. ಪರೀಕ್ಷೆಯ ಇತಿಹಾಸದಲ್ಲಿಯೇ ಒಂದೇ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಬರೆದ ಆರು ವಿದ್ಯಾರ್ಥಿಗಳು 720ಕ್ಕೆ 720 ಅಂಕ ಪಡೆದಿದ್ದು, ಅನುಮಾನಕ್ಕೆ ಹೆಚ್ಚಾಗುತ್ತಿದೆ' ಎಂದು ದೂರಿದರು.

ತಡವಾಗಿ ಪ್ರಶ್ನೆಪತ್ರಿಕೆಯನ್ನು ನೀಡಿದ್ದ ವಿದ್ಯಾರ್ಥಿಗಳಿಗೆ ಕೃಪಾಂಕ ನೀಡಲಾಗಿದೆ. ಆದರೆ, ಯಾವ ವೈಜ್ಞಾನಿಕ ಆಧಾರದ ಮೇಲೆ ಈ ಅಂಕಗಳನ್ನು ನೀಡಲಾಗಿದೆ ಎಂಬುದಕ್ಕೆ ಉತ್ತರವಿಲ್ಲ. ಪರೀಕ್ಷಾ ಫಲಿತಾಂಶವನ್ನು ಜೂನ್ 14ರಂದು ಘೋಷಿಸುವ ಬದಲಿಗೆ ಹತ್ತು ದಿನಗಳು ಮುಂಚಿತವಾಗಿ (ಜೂನ್ 4ರಂದು), ಘೋಷಿಸಿರುವುದು ಹಲವು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ ಎಂದರು.

ಎಐಡಿಎಸ್ ಜಿಲ್ಲಾ ಕಾರ್ಯದರ್ಶಿ ಕಲ್ಯಾಣ್, ಸದಸ್ಯರಾದ ನವಾಜ್, ಕಿರಣ್, ಯಶ್ವಂತ್, ತುಳಸಿ, ಹಂಸ ಭಾಗವಹಿಸಿದ್ದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ನಡೆದ ಪ್ರತಿಭಟನೆಯಲ್ಲಿ ಎಐಡಿಎಸ್‌ಒ ಸದಸ್ಯರು ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ರಾಷ್ಟ್ರೀಯ ವಿದ್ಯುತ್ ತರಬೇತಿ ಸಂಸ್ಥೆ

ವಿದ್ಯುತ್ ಸಚಿವಾಲಯ, ಭಾರತ ಸರ್ಕಾರ
ನವದೆಹಲಿ–110044

ಬಿಎಸ್‌ಇಎಸ್ – ಎನ್‌ಪಿಟಿಐ ನವದೆಹಲಿ ಇವರ ಸಹಭಾಗಿತ್ವದಲ್ಲಿ ವಿದ್ಯುತ್ ವಿತರಣೆ ಮತ್ತು ಆವಿಷ್ಕಾರಿ ತಂತ್ರಜ್ಞಾನಗಳಲ್ಲಿ ಒಂದು ವರ್ಷದ ಪೋಸ್ಟ್ ಗ್ರಾಜುಯೇಶನ್ ಕೋರ್ಸ್

ಪಠ್ಯಕ್ರಮ
ಬೇಸಿಕ್ ಇಲೆಕ್ಟ್ರಿಕಲ್, ವಿದ್ಯುತ್ ಉತ್ಪಾದನೆ – ಥರ್ಮಲ್, ಹೈಡ್ರೊ, ನ್ಯೂಕ್ಲಿಯರ್ ಮತ್ತು ಗ್ಯಾಸ್, ಡಿಸ್ಟ್ರಿಬ್ಯೂಷನ್ ಲೈನ್ಸ್, ಸಬ್‌ಸ್ಟೇಷನ್, ಟ್ರಾನ್ಸ್‌ಫಾರ್ಮರ್, ಮೀಟರಿಂಗ್, ಎಎಂಐ, ಕೇಬಲಿಂಗ್, ಕಮ್ಯುನಿಕೇಶನ್, ಪ್ರೊಟೆಕ್ಷನ್, ಒ&ಎಂ, ಸೈಬರ್ ಸೆಕ್ಯೂರಿಟಿ ಮತ್ತು ಆವಿಷ್ಕಾರಿ ತಂತ್ರಜ್ಞಾನಗಳು, ನವೀಕರಿಸಬಲ್ಲ ಇಂಧನ ಸಂಪನ್ಮೂಲಗಳು, ಟ್ರಾನ್ಸ್‌ಮಿಷನ್, ಸೇಫ್ಟಿ ಮತ್ತು ರೆಗ್ಯುಲೇಶನ್ಸ್, ಗುತ್ತಿಗೆ ನಿರ್ವಹಣೆ, ಸಾಫ್ಟ್ ಸ್ಕಿಲ್ಸ್

ಅರ್ಹತೆ ಮತ್ತು ಶುಲ್ಕ
ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಕಡ್ಡಾಯವಾಗಿ ಕನಿಷ್ಠ 60% ಅಂಕಗಳೊಂದಿಗೆ ಯಾವುದೇ ವಿಭಾಗದಲ್ಲಿ ಬಿ.ಟೆಕ್ / ಬಿ.ಇ ಅಥವಾ ತತ್ಸಮಾನ ಪದವಿ ಪಡೆದಿರಬೇಕು. ಅರ್ಜಿ ಲಿಂಕ್: https://forms.gle/DcQNLoK8GYGEpHHt9
ಪುರುಷ ಅಭ್ಯರ್ಥಿಗಳಿಗೆ: ರೂ. 1,80,000/- + ಜಿಎಸ್‌ಟಿ
ಮಹಿಳಾ ಅಭ್ಯರ್ಥಿಗಳಿಗೆ: ರೂ. 1,62,000/- + ಜಿಎಸ್‌ಟಿ
ಅರ್ಜಿ ಶುಲ್ಕ: ರೂ. 500/-
ಅರ್ಜಿ ಸಲ್ಲಿಸಲು ಸ್ಕ್ಯಾನ್ ಮಾಡಿರಿ

ಹಿಂದಿನ ಪ್ಲೇಸ್‌ಮೆಂಟ್‌ಗಳು RELIANCE tcqo Azure Power vedanta ESSAR
06 ತಿಂಗಳ ತರಬೇತಿ @ ಎನ್‌ಪಿಟಿಐ
06 ತಿಂಗಳ ವೇತನಸಹಿತ ಇಂಟರ್ನ್‌ಶಿಪ್ @ ಬಿಎಸ್‌ಇಎಸ್
ಎಲ್ಲಾ ಅರ್ಹ ಯಶಸ್ವಿ ಅಭ್ಯರ್ಥಿಗಳಿಗೆ ಬಿಎಸ್‌ಇಎಸ್ ರಾಜಧಾನಿ ಪವರ್ ಲಿ., ನವದೆಹಲಿ ಇವರಲ್ಲಿ ಪ್ಲೇಸ್‌ಮೆಂಟ್ ಲಭಿಸುತ್ತದೆ BSES

ಪ್ರವೇಶಾತಿ ಕುರಿತ ವಿಚಾರಣೆಗಳಿಗಾಗಿ ಸಂಪರ್ಕಿಸಿ:
ಎಂ.ಕೆ.ಶರ್ಮಾ, ಡೆಪ್ಯೂಟಿ ಡೈರೆಕ್ಟರ್, ಎನ್‌ಪಿಟಿಐ, ನವದೆಹಲಿ | 9555529991 | pgdc.powerdistribution@gmail.com
ವಿಜಯ್ ರತನ್: 8285606088

CBC 34107/12/0005/2425

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ವಿಶೇಷ ಭೂಸ್ವಾಧೀನಾಧಿಕಾರಿಗಳು–1, ನಂ.39, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕಟ್ಟಡ, "ಶಾಂತಿ ಗೃಹ", 4ನೇ ಮಹಡಿ, ಅರಮನೆ ರಸ್ತೆ, ಬೆಂಗಳೂರು–560001.
ಸಂಖ್ಯೆ:ಕೆಐಎಡಿಬಿ/ಎಲ್‌ಎಕ್ಯೂ/479/2024–25 ದಿನಾಂಕ:11.06.2024

ಸಾರ್ವಜನಿಕ ನೋಟೀಸ್

ಕೋಲಾರ ಜಿಲ್ಲೆ, ಕೋಲಾರ ತಾಲ್ಲೂಕು, ವೇಮಗಲ್ ಹೋಬಳಿ, ಮಡಿವಾಳ, ಚಂದ್ರಶೇಖರ ಪುರ, ಮಲ್ಲಿಯಪ್ಪನಹಳ್ಳಿ, ಮಂಚಂಡಹಳ್ಳಿ ಮತ್ತು ಕುರುಗಲ್ ಗ್ರಾಮಗಳಲ್ಲಿ ಈ ಕೆಳಕಂಡ ಖಾತೆದಾರರು / ಅನುಭವದಾರರಿಗೆ ತಿಳಿಯ ಪಡಿಸುವುದೇನೆಂದರೆ, ಇದರಡಿ ವಿವರಿಸಿರತಕ್ಕ ಸ್ವತ್ತು ಕೈಗಾರಿಕಾ ಅಭಿವೃದ್ಧಿಗೋಸ್ಕರ ಬೇಕಾಗಿರುವುದರಿಂದ ಸದರಿ ಸ್ವತ್ತನ್ನು ಭೂಸ್ವಾಧೀನಕ್ಕೆ ಒಳಪಡಿಸಿ ಘನ ಸರ್ಕಾರದವರು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ವಿಧಿ 28(1)ರಂತೆ ಸಂಖ್ಯೆ:ಸಿಐ 207 ಎಸ್‌ಪಿಕ್ಯೂ(ಇ) 2022 ದಿನಾಂಕ:02.02.2023 ರಂದು ಕರ್ನಾಟಕ ರಾಜ್ಯ ಪತ್ರದ ದಿನಾಂಕ: 09.02.2023 ರಂದು ಪುಟ ಸಂಖ್ಯೆ:1926 ರಿಂದ 2050 ರಲ್ಲಿ ಪ್ರಕಟಗೊಳಿಸಿರುತ್ತಾರೆ. ಸದರಿ ಸ್ವತ್ತನ್ನು ಕೈಗಾರಿಕಾ ಪ್ರದೇಶಾಭಿವೃದ್ಧಿಗೋಸ್ಕರ ಏತಕ್ಕೆ ಸ್ವಾಧೀನಪಡಿಸಿಕೊಳ್ಳಬಾರದೆಂಬುದರ ಬಗ್ಗೆ ಏನಾದರೂ ಆಕ್ಷೇಪಣೆ ಇದ್ದರೆ ಸದರಿ ಆಕ್ಷೇಪಣೆಗಳನ್ನು ಲಿಖಿತ ಮೂಲಕ ಈ ನೋಟೀಸ್ ತಲುಪಿದ 30 ದಿನಗಳೊಳಗಾಗಿ ಈ ಕೆಳಕಂಡ ಅಧಿಕಾರಿಯವರಿಗೆ ಖುದ್ದಾಗಿ ಅಥವಾ ಅಂಚೆ ಮುಖಾಂತರ ಕಳುಹಿಸತಕ್ಕದ್ದು. 30 ದಿನಗಳಾದ ನಂತರ ಬಂದ ಆಕ್ಷೇಪಣೆಗಳನ್ನು ಸ್ವೀಕೃತ ಮಾಡಲಾಗುವುದಿಲ್ಲ ಮತ್ತು ಪರಿಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲವೆಂದು ತಿಳಿಸುತ್ತಾ, ಸದರಿ ಆಕ್ಷೇಪಣೆಗಳನ್ನು ವಿಧಿ 28(3)ರ ವಿಚಾರಣೆಯನ್ನು **ವೇಮಗಲ್ ಪ್ರವಾಸಿ ಮಂದಿರ, ವೇಮಗಲ್ ಹೋಬಳಿ, ಕೋಲಾರ ತಾಲ್ಲೂಕು / ಜಿಲ್ಲೆ ಇಲ್ಲಿ ವಿಚಾರಣೆಯನ್ನು ದಿನಾಂಕ:12.06.2024ರಂದು ಬೆಳಿಗ್ಗೆ 11.00 ಗಂಟೆಗೆ ಮಲ್ಲಿಯಪ್ಪನ ಹಳ್ಳಿ ಗ್ರಾಮ, ದಿನಾಂಕ:13.06.2024 ರಂದು ಬೆಳಿಗ್ಗೆ 11.00 ಗಂಟೆಗೆ ಮಡಿವಾಳ ಗ್ರಾಮ ಮತ್ತು ದಿನಾಂಕ:14.06.2024 ರಂದು ಬೆಳಿಗ್ಗೆ 11.00 ಗಂಟೆಗೆ ಚಂದ್ರಶೇಖರಪುರ, ಮಂಚಂಡಹಳ್ಳಿ ಮತ್ತು ಕುರುಗಲ್ ಗ್ರಾಮಗಳಲ್ಲಿ ನಡೆಸಲಾಗುವುದೆಂದು** ಸಾರ್ವಜನಿಕ ಪ್ರಕಟಣೆಯನ್ನು ಹೊರಡಿಸಲಾಗಿತ್ತು. ಆದರೆ ಕಾರಣಾಂತರಗಳಿಂದ ವಿಧಿ 28(3)ರ ವಿಚಾರಣೆಯನ್ನು ಮುಂದೂಡಲಾಗಿರುತ್ತದೆ. ಮುಂದಿನ ವಿಚಾರಣೆಯ ದಿನಾಂಕವನ್ನು ತಿಳಿಸಲಾಗುವುದು.

ಸಹಿ/– ವಿಶೇಷ ಭೂಸ್ವಾಧೀನಾಧಿಕಾರಿ–1, ಕೆ.ಐ.ಎ.ಡಿ.ಬಿ., ಅರಮನೆ ರಸ್ತೆ, ಬೆಂಗಳೂರು.

ಕರ್ನಾಟಕ ಸರ್ಕಾರ – ಸಹಕಾರ ಇಲಾಖೆ

ಶ್ರೀ ಆಂಜನೇಯ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ನಂ.38, ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ರಸ್ತೆ, (ಲಿಂಕ್ ರಸ್ತೆ), ಮಲ್ಲೇಶ್ವರಂ, ಬೆಂಗಳೂರು–560 003.

ಸ್ಥಿರಾಸ್ತಿಯ ಬಹಿರಂಗ ಹರಾಜು ಇಸ್ತಿಹಾರು

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ
ಶ್ರೀಮತಿ ಎನ್. ಗೌರಮ್ಮ (ಅ.ನಂ. 13259) ಮನೆ ನ. 15 (ಹಳೇ ನಂ.87), ಖಾತಾ ನಂ.24/3. ಹೊಸಕೆರೆಹಳ್ಳಿ, 11 ನೇ ಮೈನ್ ರೋಡ್, ಪಿಐಡಿ ನಂ.55–263–15. ಉತ್ತರಹಳ್ಳಿ ಹೋಬಳಿ, ಬನಶಂಕರಿ 3ನೇ ಹಂತ, ಬೆಂಗಳೂರು–560085. ಇವರು ಮೇಲ್ಕಂಡ ಶ್ರೀ ಆಂಜನೇಯ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ನ ಕೇಂದ್ರ ಕಛೇರಿಯಲ್ಲಿ ತಮ್ಮ ಸ್ಥಿರಾಸ್ತಿಯನ್ನು ಬ್ಯಾಂಕಿಗೆ ಈಡು ಮಾಡಿ ಸಾಲವನ್ನು ಪಡೆದಿದ್ದರು. ಸದರಿ ಸಾಲಗಾರರು ಸಾಲದ ಕರಾರಿನ ರೀತ್ಯಾ ಸಕಾಲದಲ್ಲಿ ಸಾಲ ಮರುಪಾವತಿ ಮಾಡದೆ ಸುಸ್ತಿದಾರರಾಗಿದ್ದರಿಂದ ಇವರ ವಿರುದ್ಧ ಸಾಲದ ಹಣ ವಸೂಲಾತಿಗಾಗಿ ಸಹಕಾರ ಸಂಘಗಳ ಕಾಯ್ದೆ ಕಲಂ 70(1) ರ ಅಡಿಯಲ್ಲಿ ಸಾಲ ವಸೂಲಾತಿಗಾಗಿ ದಾವಾವನ್ನು ಹೂಡಲಾಗಿತ್ತು. ಈ ದಾವಾದ ಪ್ರಕಾರ ವ್ಯಾಜ್ಯ ಸಂಖ್ಯೆ: ಎಆರ್‌ಡಿ/ಯುಬಿಎಫ್/250/2021–2022 ದಿನಾಂಕ:16–03–2022 ರಲ್ಲಿದ್ದಂತೆ ಸಾಲಗಾರರ ಸ್ಥಿರಾಸ್ತಿಯನ್ನು ಬಹಿರಂಗ ಹರಾಜು ಮಾಡುವ ಮೂಲಕ ಸ್ಥಿರ ಸ್ವತ್ತನ್ನು ಮಾರಾಟ ಮಾಡಿ ಸಾಲದ ಮೊಬಲಗಿಗೆ ಶೇ 14 ರಂತೆ ಸರಳ ಬಡ್ಡಿ, ಶೇ 2 ರಂತೆ ದಂಡದ ಬಡ್ಡಿ, ದಾವಾ ಫೀ, ಅಮಲ್ಜಾರಿ ಫೀ ಮತ್ತು ಇತ್ಯಾದಿಗಳನ್ನು ವಸೂಲಿ ಮಾಡಿಕೊಳ್ಳುವಂತೆ ಆದೇಶ ನೀಡಲಾಗಿದೆ. ಈ ಆದೇಶ ರೀತ್ಯಾ ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿ–441) ಹಾಗೂ ವಸೂಲಾಧಿಕಾರಿಗಳು ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ನಂ.132. ಕೆ. ಹೆಚ್. ರಸ್ತೆ, ಬೆಂಗಳೂರು–560 027. ರವರು ತಮ್ಮ ಹುಕುಂ ಸಿ.ಇ.ಪಿ.ನಂ.ಎಆರ್‌ಇ/ಯುಬಿಎಫ್/312/2021–2022 ದಿನಾಂಕ:29–03–2022 ರ ಪ್ರಕಾರ ಬ್ಯಾಂಕಿನ ಮಾರಾಟಾಧಿಕಾರಿಯವರಿಗೆ ಅಮಲ್ಜಾರಿ ಕ್ರಮ ನಡೆಸುವಂತೆ ಅಧಿಕಾರ ನೀಡಿರುತ್ತಾರೆ. ಈ ಆದೇಶದ ಪ್ರಕಾರ **ಈ ಕೆಳಕಂಡ ಸ್ವತ್ತಿನ ಬಹಿರಂಗ ಹರಾಜನ್ನು ಸ್ವತ್ತಿನ ಸ್ಥಳದಲ್ಲಿಯೇ ದಿನಾಂಕ : 27–06–2024 ರಂದು ಗುರುವಾರ ಬೆಳಿಗ್ಗೆ 11.00 ಘಂಟೆಗೆ** ಸಹಕಾರ ಸಂಘಗಳ ನಿಯಮಾನುಸಾರ ಮಾರಾಟ ಷರತ್ತಿಗೆ ಒಳಪಟ್ಟು ಹರಾಜನ್ನು ನಡೆಸಲಾಗುತ್ತದೆ. ಹರಾಜಿನಲ್ಲಿ ಪಾಲ್ಗೊಳ್ಳುವವರು ಷರತ್ತಿಗೆ ಒಳಪಟ್ಟಂತೆ ಪಾಲ್ಗೊಳ್ಳಬಹುದು.

ಕ್ರಮ ಸಂಖ್ಯೆ	ಸಾಲ ಪಡೆದವರ ಹೆಸರು	ಸಿ.ಇ.ಪಿ.ನಂ ಮತ್ತು ದಿನಾಂಕ	ಹರಾಜು ಮಾಡುವ ಆಸ್ತಿಯ ವಿವರ	ಹರಾಜು ಮಾಡುವ ದಿನಾಂಕ ಮತ್ತು ಸಮಯ	ಹರಾಜು ಮಾಡುವ ಸ್ಥಳ	ಸುಸ್ತಿದಾರರಿಂದ ವಸೂಲಾಗ ಬೇಕಾಗಿರುವ ಮೊಬಲಗು
1.	ಶ್ರೀಮತಿ ಎನ್. ಗೌರಮ್ಮ 	ಸಿ.ಇ.ಪಿ.ನಂ ಎ ಆರ್‌ಇ/ ಯುಬಿಎಫ್/ 312/ 2021–2022 ದಿನಾಂಕ : 29–03–2022	ಮನೆ ನಂ. 15 (ಹಳೇ ನಂ.87), ಖಾತಾ ನಂ.24/3. ಹೊಸಕೆರೆಹಳ್ಳಿ, 11 ನೇ ಮೈನ್ ರೋಡ್, ಪಿಐಡಿ ನಂ.55–263–15. ಉತ್ತರಹಳ್ಳಿ ಹೋಬಳಿ, ಬನಶಂಕರಿ 3ನೇ ಹಂತ, ಬೆಂಗಳೂರು–560085. ಚಕ್ಕು ಬಂಧಿ : ಪೂರ್ವಕ್ಕೆ : ಸ್ವತ್ತಿನ ಸಂಖ್ಯೆ 94 ಪಶ್ಚಿಮಕ್ಕೆ : ರಸ್ತೆ ಉತ್ತರಕ್ಕೆ : ಸ್ವತ್ತಿನ ಸಂಖ್ಯೆ 88 ದಕ್ಷಿಣಕ್ಕೆ : ಸ್ವತ್ತಿನ ಸಂಖ್ಯೆ 86 ಪೂರ್ವದಿಂದ ಪಶ್ಚಿಮ 40–00 ಅಡಿಗಳು, ಉತ್ತರದಿಂದ ದಕ್ಷಿಣ 30–00 ಅಡಿಗಳು ಒಟ್ಟು 1200 ಚದರ ಅಡಿಗಳು. ನಿವೇಶನ ನೆಲಮಹಡಿ ಮೊದಲನೇ ಮಹಡಿ ಹೊಂದಿರುವ ವಸತಿ ಕಟ್ಟಡದ ಬಿಲ್ಟ್ ಅಪ್ ಪ್ರದೇಶ ಸರಿ ಸುಮಾರು 2000 ಚದರ ಅಡಿಗಳು.	27–06–2024 ಗುರುವಾರ ಬೆಳಿಗ್ಗೆ 11.00 ಘಂಟೆಗೆ	ಆಸ್ತಿ ಇರುವ ಸ್ಥಳದಲ್ಲಿ ಮನೆ ನಂ15 (ಹಳೇ ನಂ.87) ಖಾತಾ ನಂ.24/3. ಹೊಸಕೆರೆಹಳ್ಳಿ, 11 ನೇ ಮೈನ್ ರೋಡ್, ಪಿಐಡಿ ನಂ. 55–263–15. ಉತ್ತರಹಳ್ಳಿ ಹೋಬಳಿ, ಬನಶಂಕರಿ 3ನೇ ಹಂತ, ಬೆಂಗಳೂರು–560085	ರೂ 43,34,434/- (ಅಸಲು ಮತ್ತು ಬಡ್ಡಿ ಸೇರಿ ದಿನಾಂಕ; 30–04–2024 ರವರೆಗೆ) ಮತ್ತು ಮುಂದುವರೆದ ಬಡ್ಡಿ ಹಾಗೂ ಮುಂದುವರೆದ ಇತರೆ ವೆಚ್ಚಗಳು.

ಹೆಚ್ಚಿನ ವಿವರಗಳನ್ನು ಮೇಲ್ಕಂಡ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರು ಅಥವಾ ಮಾರಾಟಾಧಿಕಾರಿ ರವರುಗಳಿಂದ ಪಡೆಯಬಹುದು ಹಾಗೂ ಡಿಕ್ರಿ ಅವಾರ್ಡಿನ ತಾರೀಖಿನಿಂದ ಹರಾಜು ತಾರೀಖಿನವರೆಗೆ ಡಿಕ್ರಿ ಮೊಬಲಗು ಹಾಗೂ ಬಡ್ಡಿ ಮತ್ತು ಇತರೆ ಖರ್ಚುಗಳು ಸುಸ್ತಿದಾರರಿಂದ ಬರಬೇಕಾಗಿರುತ್ತದೆ. (ಅಂದಿನಿಂದ ಅವರು ಪಾವತಿ ಮಾಡಿರುವುದನ್ನು ಕಳೆದು) ಸದರಿ ಹರಾಜನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು. (ನಿ.441) ಹಾಗೂ ವಸೂಲಾಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ನಂ. 132.ಕೆ.ಹೆಚ್.ರಸ್ತೆ. ಬೆಂಗಳೂರು–27 ಇವರ ಹುಕುಂ ಮೇರೆಗೆ ಹೊರಡಿಸಲಾಗಿದೆ. ದೂರವಾಣಿ : 080 23564151 080 23563302 ಮೊಬೈಲ್ ನಂ.6363581188.

ಹರಾಜಿನ ಷರತ್ತುಗಳು

1. ಹರಾಜಿನಲ್ಲಿ ಭಾಗವಹಿಸಲಿಚ್ಚಿಸುವವರು ಹರಾಜಿನ ಮುನ್ನ ಇ.ಎಂ.ಡಿ.ಯಾಗಿ ರೂ.25,000/–ಗಳನ್ನು ಮಾರಾಟಾಧಿಕಾರಿಯವರಲ್ಲಾಗಲೀ ಅಥವಾ ಬ್ಯಾಂಕಿನಲ್ಲಾಗಲೀ ನಗದು/ಡಿಡಿ ಮೂಲಕ ಪಾವತಿಸಿ ರಸೀದಿ ಪಡೆದು ಹರಾಜಿನಲ್ಲಿ ಭಾಗವಹಿಸತಕ್ಕದ್ದು. (ಕೆ.ವೈ.ಸಿ ದಾಖಲೆಗಳಾದ ಆಧಾರ್ ಕಾರ್ಡ್, ಪಾನ್ ಕಾರ್ಡ್, ಅಸಲು ಪ್ರತಿ ಮತ್ತು ಜೆರಾಕ್ಸ್ ಪ್ರತಿಗಳನ್ನು ಕಡ್ಡಾಯವಾಗಿ ತರುವುದು)
2. ಹರಾಜಿನಲ್ಲಿ ಹೆಚ್ಚಿನ ಬಿಡ್ ನಿಂತವರು (Higher Bidder) ಹರಾಜು ಮೊಬಲಗಿನ ಶೇ.15% ರಷ್ಟು ಹಣವನ್ನು ಸ್ಥಳದಲ್ಲಿಯೇ ನಗದು /ಡಿಡಿ ಮೂಲಕ ಪಾವತಿಸಿ ರಸೀತಿಯನ್ನು ಪಡೆಯತಕ್ಕದ್ದು. ಉಳಿದ ಮೊಬಲಗನ್ನು ಮತ್ತು ಇದಕ್ಕೆ ತಗಲುವ ಸ್ಟ್ಯಾಂಪ್ ಪೇಪರ್ ಹಾಗೂ ಇತರೆ ವೆಚ್ಚಗಳ ಮೊಬಲಗನ್ನು ಬಿಡ್ ಮಾಡಿದ 45 ದಿವಸಗಳೊಳಗಾಗಿ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಬಿಡ್ ದಿವಸ ಪಾವತಿಯಾಗಿರುವ ಮೊಬಲಗನ್ನು ವಾಪಸ್ಸು ಕೊಡಲಾಗುವುದಿಲ್ಲ. ಇದನ್ನು ಬ್ಯಾಂಕಿಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
3. ಹರಾಜಿನ ಇತರೆ ಷರತ್ತುಗಳನ್ನು ಫಾರಂ.8 ರಲ್ಲಿ ಪ್ರಕಟಿಸಿ ಬಹಿರಂಗ ಪಡಿಸಿರುತ್ತೆ.
4. ನಿವೇಶನ ಮತ್ತು ಕಟ್ಟಡದ ವಿಸ್ತೀರ್ಣದ ವಿಷಯದಲ್ಲಿ ಏನಾದರೂ ವ್ಯತ್ಯಾಸಗಳಿದ್ದರೆ ಬ್ಯಾಂಕಿನವರು ಜವಾಬ್ದಾರರಲ್ಲವೆಂಬುದನ್ನು ತಿಳಿದಿರತಕ್ಕದ್ದು.
5. ಮೇಲ್ಕಂಡ ಸ್ವತ್ತನ್ನು ಯಾವ ಸ್ಥಿತಿಯಲ್ಲಿದೆಯೋ ಹಾಗೆಯೇ ಹರಾಜು ಮಾಡಲಾಗುವುದು. ಇದನ್ನು ಬಿಡ್ದುದಾರರು ತಿಳಿದಿರತಕ್ಕದ್ದು.
6. ಸರ್ಕಾರಿ ಮಾರ್ಗದರ್ಶಿ ದರಕ್ಕಿಂತ ಕಡಿಮೆ ಮೊಬಲಗಿಗೆ ಬಿಡ್ (ಸವಾಲು) ಮಾಡಿದರೆ ಆ ಆಸ್ತಿಯನ್ನು ಬಿಡ್‌ದಾರರಿಗೆ ಬಿಡುವುದು ಅಥವಾ ಬಿಡದಿರುವುದು ಕೆ.ಸಿ.ಎಸ್.ರೂಲ್ಸ್ 38(6)ರ ಪ್ರಕಾರ ಮಾರಾಟಾಧಿಕಾರಿಯವರ ವಿವೇಚನೆಗೆ ಬಿಟ್ಟಿರುತ್ತದೆ.
7. ಹರಾಜು ಒಪ್ಪುವುದು ಅಥವಾ ತಿರಸ್ಕರಿಸುವ ಸಂಪೂರ್ಣ ಅಧಿಕಾರ ಮಾರಾಟಾಧಿಕಾರಿಯವರಿಗೆ ಸೇರಿರುತ್ತದೆ.
8. ಸುಸ್ತಿದಾರರು ಹರಾಜಿಗೆ ಮುನ್ನ ಪೂರ್ಣ ಸಾಲ ಮತ್ತು ಸಾಲದ ಬಡ್ಡಿ ಇತರೆ ಮೊಬಲಗನ್ನು ಮರು ಪಾವತಿ ಮಾಡಿದರೆ ಬಹಿರಂಗ ಹರಾಜನ್ನು ರದ್ದುಗೊಳಿಸಲಾಗುವುದು.

ಸಹಿ/– ಮಾರಾಟಾಧಿಕಾರಿ
ಶ್ರೀ ಆಂಜನೇಯ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ನಂ.38, ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ರಸ್ತೆ, (ಲಿಂಕ್ ರಸ್ತೆ), ಮಲ್ಲೇಶ್ವರಂ, ಬೆಂಗಳೂರು–560003
ದೂ : 080 23564151 / 23563302. ಮೊ : 6363581188.
ದಿನಾಂಕ : 12–06–2024
ಸ್ಥಳ : ಬೆಂಗಳೂರು

POLICE HEADQUARTER, M. P., BHOPAL

No. PHQ/15/GPC/ 3154-1/2024 Bhopal Dated 10/06/2024

"ONLINE TENDER NOTICE"

Online tender are invited by Police Head Quarter, Bhopal on website https://mptenders.gov.in/nicgep/app

LED T.V. For Police Units

S.No	Item	Qty.	EMD Paid Online Through mptenders.gov.in	Tender Fees (Rs.)
1	LED T.V.	25 Nos.	37,500/-	2,000/-

1. Cost of tender document (Tender Fee) is non refundable and cannot be exempted in any condition & must submit online through website ttps://mptenders.gov.in/nicgep/app.
2. Tender document can be download from the website of MP Police (www.mppolice.gov.in).
3. Bids shall be submitted online only at MP Tenders website: https://mptenders.gov.in/nicgep/app
4. Critical Date Sheet:

Published Date	10/06/2024 Time 18:30 PM
Bid Document Download Start Date	11/06/2024 Time 12:00 PM
Pre Bid Meeting Date	18/06/2024 Time 12:30 PM
Bid Submission Start Date	24/06/2024 Time 12:00 AM
Bid Submission End Date	01/07/2024 Time 14:00 PM
Bid Opening Date	02/07/2024 Time 16:00 PM

5. Intending Bidders are advised to visit this website regularly till closing date of submission to keep themselves updated as any change/ modification in the tender will be intimated through this website only by corrigendum/addendum/ amendment.
6. Bids will be opened as per date/time as mentioned in the Tender Critical Date Sheet. After online opening of Technical-Bid the results of their qualification as well Price-Bid opening will be intimated later.

(Sandeep Dixit)
A.I.G. (Provisioning)
For: Director General of Police M.P.
G-11576/24

ನಗರದಲ್ಲಿ ಇಂದು

'ವಿಶ್ವ ಹೋಮಿಯೋಪಥಿ' ದಿನಾಚರಣೆ, ವಿಚಾರಸಂಕಿರಣ: ಉದ್ಘಾಟನೆ: ಸಿದ್ದರಾಮಯ್ಯ, ಅತಿಥಿ: ಯು.ಟಿ. ಖಾದರ್, ದಿನೇಶ್ ಗುಂಡೂರಾವ್, ಡಾ. ಶರಣ ಪ್ರಕಾಶ ಪಾಟೀಲ, ರಿಜ್ವಾನ್ ಅರ್ಷದ್, ಉಪಸ್ಥಿತಿ: ಶಿವಶೈಲಂ, ಡಾ. ರಮೇಶ್ ಎಂ.ಕೆ., ಡಾ. ಆನಂದ್.ಎ ಕುಲಕರ್ಣಿ, ಅಧ್ಯಕ್ಷತೆ: ವಿನೋದ್ ದೊಡ್ಡಣ್ಣನವರ್, ಆಯೋಜನೆ: ಕರ್ನಾಟಕ ಖಾಸಗಿ ಹೋಮಿಯೋಪಥಿಕ್ ವೈದ್ಯಕೀಯ ಮಹಾವಿದ್ಯಾಲಯಗಳ ಆಡಳಿತ ಸಂಘ, ಸ್ಥಳ: ಡಾ.ಬಿ. ಆರ್. ಅಂಬೇಡ್ಕರ್ ಭವನ, ವಸಂತನಗರ, ಬೆಳಿಗ್ಗೆ 11

ಡಾ ಬಿ.ಆರ್. ಅಂಬೇಡ್ಕರ್ ಜಯಂತಿ, ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಉದ್ಘಾಟನೆ: ಎನ್. ಶ್ರೀನಿವಾಸ್, ಉಪಸ್ಥಿತಿ: ಎಲ್. ಹನುಮಂತಯ್ಯ, ನಾಗಲಕ್ಷ್ಮಿ ಚೌಧರಿ, ಸುಭಾಷಿಣಿ, ಅಧ್ಯಕ್ಷತೆ: ಲಕ್ಷ್ಮಮ್ಮ, ಅತಿಥಿಗಳು: ಎಚ್.ಜಿ. ಚೈತ್ರ, ರೇಖಾ ಜೋಯಪ್ಪ, ಕಾಂತರಾಜು ಡಿ.ಕೆ., ಆಯೋಜನೆ: ಭೀಮಾಬಾಯಿ ಜನ ಸೇವಾ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 11

ಮಾಸದ ಮಾತು 'ಕನ್ನಡದ ಚಂಪು ಕಾವ್ಯಗಳು' ಕುರಿತು ಉಪನ್ಯಾಸ: ಟಿ.ಎನ್. ವಾಸುದೇವಮೂರ್ತಿ, ಅತಿಥಿಗಳು: ಎನ್. ಧರಣೀಕುಮಾರ್, ಮಹೇಶ್ ಅಂಗಡಿ, ಕುಸುಮ ರಾಜಶೇಖರ್, ಬಿ.ಎನ್. ಶಿವಲಿಂಗ, ಎಸ್. ರಾಜುಹಾಸನ್, ಆಯೋಜನೆ: ಎಚ್‌ಎಎಲ್ ಕೇಂದ್ರೀಯ ಕನ್ನಡ ಸಂಘ, ಸ್ಥಳ: ಬಿ. ವಿಜಯಕುಮಾರ್ ಸಭಾಂಗಣ, ಎಚ್‌ಎಎಲ್, ವಿಮಾನಪುರ, ಮಧ್ಯಾಹ್ನ 3.30

ಯುವ ಸಂಗೀತೋತ್ಸವ: ಗಾಯನ: ಸ್ಮೃತಿ ಭಾಸ್ಕರ್, ಪಿಟೀಲು: ಸಿ.ವಿ. ಶ್ರುತಿ, ಮೃದಂಗ: ಪ್ರಜ್ವಲ್ ಭಾರದ್ವಾಜ್, ಮೋರ್ಸಿಂಗ್: ಎನ್. ಕಾರ್ತಿಕ್ ಪ್ರಣವ್, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 6

ಡಾ.ಎಚ್. ನರಸಿಂಹಯ್ಯ ನೆನಪಿನ ಸಾಂಸ್ಕೃತಿಕ ಉತ್ಸವ: ಉದ್ಘಾಟನೆ: ರೇಣುಕಾ ಬಾಲಿ ಉದಯಕುಮಾರ್, 'ಶ್ರೀಕೃಷ್ಣ ಸಂಧಾನ' ನಾಟಕ ಪ್ರದರ್ಶನ: ನಿರ್ದೇಶನ: ಜಿ.ವಿ. ಪ್ರಸನ್ನ ಕುಮಾರ್, ರಚನೆ: ಅಶ್ವತ್ಥ.ವಿ.ಎಸ್., ಪ್ರಸ್ತುತಿ: ಐಶ್ವರ್ಯ ಕಲಾನಿಕೇತನ, ಆಯೋಜನೆ: ಬೆಂಗಳೂರು ಲಲಿತಕಲಾ ಪರಿಷತ್ತು, ಸ್ಥಳ: ನ್ಯಾಷನಲ್ ಕಾಲೇಜು ಆವರಣ, ಜಯನಗರ, ಸಂಜೆ 5.30

'ನಟರಾಜ' ನಾಟಕ ಪ್ರದರ್ಶನ: ಉದ್ಘಾಟನೆ: ಪುಟ್ಟಣ್ಣ, ಅಧ್ಯಕ್ಷತೆ: ಟಿ.ಎನ್.ಸೀತಾರಾಂ, ರಚನೆ ಹಾಗೂ ನಿರ್ದೇಶನ: ಆರ್. ವೆಂಕಟರಾಜು, ಆಯೋಜನೆ: ಪಂಪ ಸಾಂಸ್ಕೃತಿಕ ಮತ್ತು ಸಾಮಾಜಿಕ ಕೇಂದ್ರ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7

'ಮಿಸ್. ಸದಾರಮೆ'ನಾಟಕ ಪ್ರದರ್ಶನ: ನಿರ್ದೇಶನ: ಮಂಜುನಾಥ್. ಎಲ್. ಬಡಿಗೇರ್, ಆಯೋಜನೆ: ಸಮಷ್ಟಿ ತಂಡ, ಸ್ಥಳ: ರಂಗಶಂಕರ, ಸಂಜೆ 7.30ಕ್ಕೆ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ)ಕಳುಹಿಸಿ.
nagaradalli_indu@prajavani.co.in

ಸಂಸ್ಕೃತ ವಿ.ವಿ ಘಟಿಕೋತ್ಸವ 14ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 10 ಮತ್ತು 11ನೇ ಘಟಿಕೋತ್ಸವ ನಗರದ ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ ನಡೆಯಲಿದ್ದು, 1,004 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುವುದು' ಎಂದು ವಿಶ್ವವಿದ್ಯಾಲಯದ ಕುಲಪತಿ ಅಹಲ್ಯಾ ಎಸ್. ಹೇಳಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಘಟಿಕೋತ್ಸವದಲ್ಲಿ ನಾಲ್ಕು ವಿದ್ವಾಂಸರಿಗೆ ವಿದ್ಯಾವಾಚಸ್ಪತಿ (ಡಿ.ಲಿಟ್) ಪದವಿ ಹಾಗೂ 44 ಸಂಶೋಧನಾ ವಿದ್ಯಾರ್ಥಿಗಳಿಗೆ ವಿದ್ಯಾವಾರಿಧಿ (ಪಿಎಚ್.ಡಿ) ಪದವಿ ಪ್ರದಾನ ಮಾಡಲಾಗುವುದು. ಸಂಶೋಧನಾ ವಿದ್ಯಾರ್ಥಿಯೊಬ್ಬರಿಗೆ ಸ್ವರ್ಣ ಪದಕ ಪ್ರದಾನ ಮಾಡಲಾಗುವುದು' ಎಂದು ಮಾಹಿತಿ ನೀಡಿದರು.

'2021–22ನೇ ಶೈಕ್ಷಣಿಕ ಸಾಲಿನಲ್ಲಿ ಆಚಾರ್ಯ (ಎಂ.ಎ) 20, ಶಾಸ್ತ್ರಿ (ಬಿ.ಎ) ಮೂರು ವಿದ್ಯಾರ್ಥಿಗಳು ಸೇರಿದಂತೆ 20 ವಿದ್ಯಾರ್ಥಿಗಳಿಗೆ ಸ್ವರ್ಣ ಪದಕಗಳನ್ನು ಪ್ರದಾನ ಮಾಡಲಾಗುತ್ತದೆ. ಒಟ್ಟು 450 ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣಪತ್ರ ವಿತರಿಸಲಾಗುವುದು' ಎಂದರು.

'2022–23ನೇ ಶೈಕ್ಷಣಿಕ ಸಾಲಿನಲ್ಲಿ ಆಚಾರ್ಯ (ಎಂ.ಎ) 20, ಶಾಸ್ತ್ರಿ (ಬಿ.ಎ) 3, ಪಿ.ಜಿ. ಡಿಪ್ಲೊಮಾ ಯೋಗ 2 ಹಾಗೂ ಒಬ್ಬ ಪಿಎಚ್.ಡಿ. ವಿದ್ಯಾರ್ಥಿ ಸೇರಿದಂತೆ 26 ಜನರಿಗೆ ಸ್ವರ್ಣ ಪದಕ ನೀಡಲಾಗುವುದು.ಒಟ್ಟು554ವಿದ್ಯಾರ್ಥಿಗಳಿಗೆಪದವಿಪ್ರಮಾಣಪತ್ರ ಪ್ರದಾನ ಮಾಡಲಾಗುವುದು' ಎಂದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಮತ್ತು ವಿದ್ವಾಂಸ ಎಚ್.ವಿ. ನಾಗರಾಜರಾವ್ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.

ವಿಶ್ವವಿದ್ಯಾಲಯದ ಕುಲಸಚಿವ (ಆಡಳಿತ) ವಿ. ಗಿರೀಶ್ ಚಂದ್ರ, ಕುಲಸಚಿವ (ಮೌಲ್ಯಮಾಪನ) ಕೆ.ರಾಮಕೃಷ್ಣ ಭಟ್ ಭಾಗವಹಿಸಿದ್ದರು.

‘ನ್ಯಾಯಾಧೀಶರು ಕಾನೂನು ಮೀರಿ ವರ್ತಿಸಬಾರದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾವೆಲ್ಲಾ ಕೇವಲ, ಕೇವಲ ನ್ಯಾಯಾಧೀಶರು, ನ್ಯಾಯಮೂರ್ತಿಗಳು ಮಾತ್ರ ಎಂಬುದನ್ನು ಸದಾ ಗಮನದಲ್ಲಿಟ್ಟುಕೊಂಡಿರಬೇಕು. ಕಾನೂನಿನ ಚೌಕಟ್ಟನ್ನು ಮೀರಿ ನಡೆಯಬಾರದು’ ಎಂದು ಹೈಕೋರ್ಟ್ ಖಡಕ್ ಅಭಿಪ್ರಾಯ ವ್ಯಕ್ತಪಡಿಸಿದೆ.

ಅಂಗವಿಕಲ ವ್ಯಕ್ತಿಯೊಬ್ಬರಿಗೆ ನೀಡಲಾಗಿದ್ದ ಮಳಿಗೆಯ ಗುತ್ತಿಗೆ ಅವಧಿ ವಿಸ್ತರಣೆಯನ್ನು ಪ್ರಶ್ನಿಸಿ ಚನ್ನಪಟ್ಟಣ ನಗರಸಭೆ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಹಾಗೂ ನ್ಯಾಯಮೂರ್ತಿ ರಾಮಚಂದ್ರ ಡಿ. ಹುದ್ದಾರ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಮಾತನ್ನು ತನ್ನ ಆದೇಶದಲ್ಲಿ ಉಲ್ಲೇಖಿಸಿದೆ.

‘ಅಂಗವಿಕಲರಿಗೆ ನೀಡಲಾದ ಗುತ್ತಿಗೆಯನ್ನು ಅವರ ನಿಧನದ ನಂತರವೂ ಆನುವಂಶೀಯವಾಗಿ ಪರಿಗಣಿಸಲಾಗುವುದಿಲ್ಲ. ಹಂಚಿಕೆದಾರನ ಮರಣದ ನಂತರ ಗುತ್ತಿಗೆ ಕೊನೆಗೊಳ್ಳುತ್ತದೆ. ಹಾಗಾಗಿ, ಪತ್ನಿ ಹಾಗೂ ಮಕ್ಕಳು ಯಾವುದೇ ರೀತಿ ಆನುವಂಶಿಯವಾಗಿ ಏನನ್ನೂ ಪಡೆಯಲಾಗುವುದಿಲ್ಲ’ ಎಂದು ವಿಭಾಗೀಯ ನ್ಯಾಯಪೀಠ ಹೇಳಿದೆ.

ಕಾನೂನು ಅಡಿಯಲ್ಲಿ 12 ವರ್ಷ ಮಾತ್ರವೇ ಗುತ್ತಿಗೆ ನವೀಕರಿಸಲು ಅವಕಾಶವಿದೆ. ಆದರೂ ಹೈಕೋರ್ಟ್‌ನ ಏಕಸದಸ್ಯ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ವಿನೀತ್ ಕೊಠಾರಿ ಅವರು ಅದನ್ನು 20 ವರ್ಷಕ್ಕೆ ವಿಸ್ತರಿಸಲು ನಿರ್ಧರಿಸಿ ಆದೇಶಿಸಿರುವುದು ಸೂಕ್ತವಲ್ಲ’ ಎಂದು ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ನೇತೃತ್ವದ ವಿಭಾಗೀಯ ನ್ಯಾಯಪೀಠ, ಈ ಕ್ರಮವನ್ನು ತನ್ನ ಆದೇಶದಲ್ಲಿ ತೀವ್ರವಾಗಿ ಖಂಡಿಸಿದೆ. ‘ನ್ಯಾಯಮೂರ್ತಿಗಳು ಕಾನೂನು ಮೀರಿ ವರ್ತಿಸಬಾರದು’ ಎಂದು ಹೇಳಿದೆ. ಅಂತೆಯೇ, ಏಕಸದಸ್ಯ ನ್ಯಾಯಪೀಠದ ಆದೇಶವನ್ನು ತಳ್ಳಿ ಹಾಕಿದೆ.

ಏನಿದು ಪ್ರಕರಣ?

‘ಹರಾಜಿನ ಮೂಲಕ ಕೆಲವು ಶಾಪಿಂಗ್ ಮಳಿಗೆಗಳನ್ನು ಗುತ್ತಿಗೆ ನೀಡಲು ರಾಜ್ಯ ಸರ್ಕಾರ 2009ರ ಸೆಪ್ಟೆಂಬರ್‌ನಲ್ಲಿ ಅಧಿಸೂಚನೆ ಹೊರಡಿಸಿತ್ತು. ಈ ನಿಟ್ಟಿನಲ್ಲಿ ಶೇ 80ರಷ್ಟು ಅಂಗವೈಕಲ್ಯ ಹೊಂದಿದ್ದ ಚನ್ನಪಟ್ಟಣದ ನಿವಾಸಿ ಸಿದ್ದರಾಮು ಅವರಿಗೆ ಒಂದು ಮಳಿಗೆಯನ್ನು 12 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿತ್ತು. ಏತನ್ಮಧ್ಯೆ ಅವರು, ಗುತ್ತಿಗೆ ಅವಧಿಯನ್ನು 20 ವರ್ಷಗಳವರೆಗೆ ವಿಸ್ತರಿಸುವಂತೆ ಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಸಿದ್ದರಾಮು ಪರ ವಾದ ಮಂಡಿಸಿದ್ದ ಹಿರಿಯ ವಕೀಲೆ ಜಯ್ನಾ ಕೊಠಾರಿ ಅವರ ವಾದವನ್ನು ಮನ್ನಿಸಿದ್ದ ಏಕಸದಸ್ಯ ನ್ಯಾಯಪೀಠ ಗುತ್ತಿಗೆ ಅವಧಿ ವಿಸ್ತರಿಸಿ ಆದೇಶಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ಚನ್ನಪಟ್ಟಣ ನಗರಸಭೆ ಮೇಲ್ಮನವಿ ಸಲ್ಲಿಸಿತ್ತು. ಮೇಲ್ಮನವಿ ವಿಚಾರಣಾ ಹಂತದಲ್ಲಿ ಇರುವಾಗಲೇ ಸಿದ್ದರಾಮು ನಿಧನರಾಗಿದ್ದರು. ಬಳಿಕ ಅವರ ಪತ್ನಿ ವ್ಯಾಜ್ಯ ಮುಂದುವರಿಸಿದ್ದರು.

‘ಮದುವೆ ಆಗುವ ಭರವಸೆ ಉಲ್ಲಂಘನೆ ಅತ್ಯಾಚಾರ ಆರೋಪ ಆಗದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮದುವೆ ಆಗುವುದಾಗಿ ನೀಡಿದ್ದ ಭರವಸೆ ಉಲ್ಲಂಘಿಸಲಾಗಿದೆ ಎಂದ ಪ್ರಕರಣವನ್ನು ಅತ್ಯಾಚಾರ ಆರೋಪದಲ್ಲಿ ವಿಚಾರಣೆಗೆ ಒಳಪಡಿಸುವುದು ಅವಿವೇಕತನ’ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಸದ್ಯ ಅಮೆರಿಕದಲ್ಲಿ ನೆಲೆಸಿರುವ ಕುಂದಾಪುರ ತಾಲ್ಲೂಕಿನ ಹಕ್ಲಾಡಿ ಗ್ರಾಮದ ಸಂತೋಷ್ ಶೆಟ್ಟಿ ವಿರುದ್ಧ ಅತ್ಯಾಚಾರ ಮತ್ತು ಅವರ ಕುಟುಂಬದವರ ವಿರುದ್ಧದ ವಂಚನೆ ಆರೋಪಕ್ಕೆ ಸಂಬಂಧಿಸಿದಂತೆ ಕುಂದಾಪುರ ಪೊಲೀಸರು ಸಲ್ಲಿಸಿರುವ ದೋಷಾರೋಪ ಪಟ್ಟಿಯನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ವಿವಾಹ ಆಗುವುದಾಗಿ ಸುಳ್ಳು ಭರವಸೆ ನೀಡುವುದು ಅತ್ಯಾಚಾರದ ಅಡಿಯಲ್ಲಿ ಅಪರಾಧ ಎನಿಸಿಕೊಳ್ಳುವುದಿಲ್ಲ’ ಎಂದು ಹೇಳಿದೆ.

ವಿಚಾರಣೆ ವೇಳೆ ದಾಖಲೆಗಳನ್ನು ಪರಿಶೀಲಿಸಿದ ನ್ಯಾಯಪೀಠ, ‘ಸಂತೋಷ್ ಶೆಟ್ಟಿ ವಿದೇಶಕ್ಕೆ ತೆರಳಿದ ನಂತರ ದೂರುದಾರ ಮಹಿಳೆಯೊಂದಿಗೆ ಹಲವು ದಿನಗಳ ಕಾಲ ವಾಟ್ಸ್ ಆ್ಯಪ್ ಸಂಭಾಷಣೆ ನಡೆಸಿರುವುದೇನೊ ನಿಜ. ಆದರೆ, ಎಲ್ಲಿಯೂ ಲೈಂಗಿಕ ಕ್ರಿಯೆಗೆ ಸಂಬಂಧಿಸಿದಂತೆ ಚರ್ಚಿಸಿರುವುದು ಕಂಡು ಬಂದಿಲ್ಲ. ಆದರೆ, ನಿಶ್ಚಿತಾರ್ಥ ಮುರಿದುಬಿದ್ದಿದೆ’ ಎಂದು ನ್ಯಾಯಪೀಠ ಹೇಳಿದೆ.

‘ಈ ಪ್ರಕರಣದಲ್ಲಿ ಅರ್ಜಿದಾರ ಮದುವೆಯಾಗುವುದಾಗಿ ಸುಳ್ಳು ಭರವಸೆ ನೀಡಿಲ್ಲ. ಮದುವೆಯಾಗುವುದಾಗಿ ತಿಳಿಸಿ ಮುಂದಿನ ಪ್ರಕ್ರಿಯೆಗಳನ್ನು ಮುಂದುವರೆಸಿದ್ದಾರೆ. ವಿವಾಹ ಮುರಿದು ಬಿದ್ದಿದೆ. ಈ ಪ್ರಕರಣದಲ್ಲಿ ಎಲ್ಲಿಯೂ ವಂಚನೆ ಆರೋಪ ಕಂಡುಬರುವುದಿಲ್ಲ’ ಎಂದು ತಿಳಿಸಿರುವ ನ್ಯಾಯಪೀಠ ಅರ್ಜಿಯನ್ನು ಪುರಸ್ಕರಿಸಿದೆ. ಅರ್ಜಿದಾರರ ವಿರುದ್ಧದ ಪ್ರಕರಣ ರದ್ದುಪಡಿಸಿ ಆದೇಶಿಸಿದೆ.

‘ಮೆಟ್ರೊದಲ್ಲಿ ಮಹಿಳಾ ಬೋಗಿ ಹೆಚ್ಚಿಸಿ‘

ಬೆಂಗಳೂರು: ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಅವರು ಮಂಗಳವಾರ ವಿಜಯನಗರ ಮೆಟ್ರೊ ನಿಲ್ದಾಣಕ್ಕೆ ಭೇಟಿ ನೀಡಿ, ಮಹಿಳಾ ಉದ್ಯೋಗಿಗಳಿಗೆ ಬಿಎಂಆರ್‌ಸಿಎಲ್ ಒದಗಿಸಿರುವ ಸೌಲಭ್ಯಗಳ ಬಗ್ಗೆ ಚರ್ಚಿಸಿದರು.

ಕೃಷ್ಣರಾಜಪುರ ಮೆಟ್ರೊ ನಿಲ್ದಾಣದವರೆಗೆ ಮೆಟ್ರೊ ರೈಲಿನಲ್ಲಿ ಪ್ರಯಾಣಿಸಿ, ಮಹಿಳಾ ಪ್ರಯಾಣಿಕರೊಂದಿಗೆ ಸಂವಾದ ನಡೆಸಿದರು. ಮೆಟ್ರೊ ರೈಲಿನ ಕೋಚ್‌ಗಳನ್ನು ಹೆಚ್ಚಿಸುವುದರ ಜೊತೆಗೆ ಮಹಿಳಾ ಬೋಗಿಗಳನ್ನು ಹೆಚ್ಚಿಸಬೇಕು’ ಎಂದು ನಾಗಲಕ್ಷ್ಮಿ, ಬಿಎಂಆರ್‌ಸಿಎಲ್ ಅಧಿಕಾರಿಗಳಿಗೆ ಸಲಹೆ ನೀಡಿದರು.

ಅಗ್ನಿಶಾಮಕರ ನಿರ್ಗಮನ ಪಥಸಂಚಲನದಲ್ಲಿ ಗೃಹ ಸಚಿವರ ಹೇಳಿಕೆ

‘ಬರಲಿದೆ ಏರಿಯಲ್ ಲ್ಯಾಡರ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅವಘಡಗಳಲ್ಲಿ ಬೆಂಕಿ ನಂದಿಸಲು 90 ಮೀಟರ್‌ವರೆಗೆ ನೀರು ಚಿಮ್ಮುವಂತೆ ಮಾಡಬಹುದಾದ ಏರಿಯಲ್ ಲ್ಯಾಡರ್ ಸೌಲಭ್ಯವನ್ನು ಅಗ್ನಿಶಾಮಕ ದಳದ ವಾಹನಗಳಲ್ಲಿ ಅಳವಡಿಕೆ ಮಾಡಿಕೊಳ್ಳಲಾಗಿದೆ’ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ನಗರದಲ್ಲಿ ಮಂಗಳವಾರ ನಡೆದ ಮುಖ್ಯಮಂತ್ರಿ ಪದಕ ಪ್ರದಾನ ಸಮಾರಂಭ ಹಾಗೂ ಅಗ್ನಿಶಾಮಕರ ನಿರ್ಗಮನ ಪಥಸಂಚಲನದಲ್ಲಿ ಅವರು ಮಾತನಾಡಿದರು.

‘ಬಹುತೇಕ ರಾಜ್ಯಗಳಲ್ಲಿ ಏರಿಯಲ್ ಲ್ಯಾಡರ್ ಸೌಲಭ್ಯ ಇಲ್ಲ. ಮೊದಲ ಬಾರಿಗೆ ರಾಜ್ಯದಲ್ಲಿ ಅಳವಡಿಸಲಾಗಿದೆ. ಅಲ್ಲದೇ ಮೊದಲ ಬಾರಿಗೆ ಇಲಾಖೆಯ ವಾಹನಗಳಿಗೆ ಪೆಟ್ರೋಲ್ ಕಾರ್ಡ್ ಸವಲತ್ತು ಕಲ್ಪಿಸಲಾಗಿದೆ’ ಎಂದರು.

‘ಪ್ರತಿ ಜಿಲ್ಲೆಯಲ್ಲೂ ಅಗ್ನಿಶಾಮಕದ ದಳದ ಕಚೇರಿ ಇರಬೇಕು ಎಂಬ ನಿಯಮ ವಿದೆ. ಆದರೆ, ಸರ್ಕಾರ ಪ್ರತಿ ತಾಲ್ಲೂಕಿನಲ್ಲೂ ಕಚೇರಿ ತೆರೆದಿದೆ’ ಎಂದರು.

‘ರಾಜ್ಯದ ಅಗ್ನಿಶಾಮಕ ದಳ ರಾಷ್ಟ್ರ ಮಟ್ಟದಲ್ಲಿ ಮೆಚ್ಚುಗೆ ಪಡೆದಿದೆ. ಹೊಸದಾಗಿ ಇಲಾಖೆಗೆ ನೇಮಕವಾಗಿರುವ ಸಿಬ್ಬಂದಿಗೆ ತರಬೇತಿ ನೀಡಲಾಗಿದೆ’ ಎಂದು ಹೇಳಿದರು.

‘ದೇಶದಲ್ಲಿ ಎಲ್ಲರಿಗೂ ಒಂದೇ ಕಾನೂನು. ಯಾವುದೇ ಧರ್ಮ, ರಾಜಕೀಯ, ವ್ಯಕ್ತಿಗೆ ಕೆಲಸ ಮಾಡುವುದಿಲ್ಲ. ದೇಶಕ್ಕಾಗಿ ಕೆಲಸ ಮಾಡುತ್ತೇನೆ ಎಂದು ನಿಮಗೆ ಪ್ರಮಾಣ ಬೋಧನೆ ಮಾಡಲಾಗಿದೆ. ಅದೇ ನಿಟ್ಟಿನಲ್ಲಿ ತರಬೇತಿ ನೀಡಲಾಗಿದೆ’ ಎಂದು ಹೇಳಿದರು.

ಆಧುನಿಕ ಜಗತ್ತು ತಾಂತ್ರಿಕವಾಗಿ ಸಾಕಷ್ಟು ಬದಲಾವಣೆ ಕಂಡಿದೆ. ಅಗ್ನಿಶಾಮಕ ದಳ ಮತ್ತು ತುರ್ತುಸೇವೆಯ ಐವತ್ತು ವರ್ಷಗಳ ಹಿಂದೆ ಸಿಬ್ಬಂದಿ ಕಾರ್ಯವೈಖರಿ ಬೇರೆ ಇತ್ತು; ಈಗ ಬದಲಾಗಿದೆ. ನಗರಗಳಲ್ಲಿ ದೊಡ್ಡ ಕಟ್ಟಡಗಳು ನಿರ್ಮಾಣವಾಗಿವೆ. ಅವಘಡಗಳು ಸಂಭವಿಸಿದಾಗ ಹೇಗೆ ನಿಭಾಯಿಸಬೇಕು ಎಂದು ತರಬೇತಿ ನೀಡಲಾಗಿದೆ. ತಾಂತ್ರಿಕ ಉಪಕರಣಗಳನ್ನು ಅಳವಡಿಸಿಕೊಳ್ಳಲಾಗುತ್ತಿದೆ’ ಎಂದು ತಿಳಿಸಿದರು.

ಬೆಂಗಳೂರಿನಲ್ಲಿ ಮಂಗಳವಾರ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು, ಗೃಹರಕ್ಷಕ ದಳ, ಪೌರ ರಕ್ಷಣೆ ಹಾಗೂ ರಾಜ್ಯ ವಿಪತ್ತು ಸ್ಪಂದನಾ ಪಡೆ ಆಯೋಜಿಸಿದ್ದ ಮುಖ್ಯಮಂತ್ರಿ ಪದಕ ಪ್ರದಾನ ಹಾಗೂ ಅಗ್ನಿಶಾಮಕರ ನಿರ್ಗಮನ ಪಥಸಂಚಲನ ಸಮಾರಂಭದಲ್ಲಿ ಹಾವೇರಿ ಜಿಲ್ಲೆಯ ರಾಣೇಬೆನ್ನೂರು ತಾಲ್ಲೂಕಿನ ವಿನಾಯಕ ಹುಣಸಿಕಟ್ಟಿ ಅವರಿಗೆ ಗೃಹ ಸಚಿವ ಜಿ.ಪರಮೇಶ್ವರ ಅವರು ಸರ್ವೋತ್ತಮ ಪ್ರಶಸ್ತಿ ಪ್ರದಾನ ಮಾಡಿದರು ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ರಷ್ಯಾ–ಉಕ್ರೇನ್ ಸಂಘರ್ಷ: ಇಬ್ಬರು ಭಾರತೀಯರ ಸಾವು

ನವದೆಹಲಿ (ಪಿಟಿಐ): ರಷ್ಯಾ ಸೇನೆಗೆ ನೇಮಕಗೊಂಡಿದ್ದ ಇಬ್ಬರು ಭಾರತೀಯ ಪ್ರಜೆಗಳು ರಷ್ಯಾ ಮತ್ತು ಉಕ್ರೇನ್ ನಡುವಿನ ಸಂಘರ್ಷದಲ್ಲಿ ಮೃತಪಟ್ಟಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಮಂಗಳವಾರ ತಿಳಿಸಿದೆ.

ಈ ವಿಷಯವನ್ನು ಭಾರತ ಗಂಭೀರವಾಗಿ ಪರಿಗಣಿಸಿದೆ. ಸೇನೆಗೆ ನಿಯೋಜಿಸಿಕೊಂಡಿರುವ ಎಲ್ಲ ಭಾರತೀಯ ಪ್ರಜೆಗಳನ್ನು ತಕ್ಷಣ ಬಿಡುಗಡೆಗೊಳಿಸಬೇಕು ಹಾಗೂ ಭಾರತಕ್ಕೆ ವಾಪಸು ಕಳುಹಿಸಬೇಕು ಎಂದು ಆಗ್ರಹಪಡಿಸಿದೆ ಎಂದು ಸಚಿವಾಲಯ ತಿಳಿಸಿದೆ.

‘ಮೃತರ ಕುಟುಂಬಗಳಿಗೆ ತೀವ್ರ ಸಂತಾಪ ಸಲ್ಲಿಸುತ್ತೇವೆ. ಮಾಸ್ಕೊದಲ್ಲಿನ ಭಾರತದ ರಾಯಭಾರ ಕಚೇರಿಯು ರಷ್ಯಾದ ಸರ್ಕಾರದ ಜೊತೆಗೆ ಸಂಪರ್ಕದಲ್ಲಿದ್ದು, ತ್ವರಿತಗತಿಯಲ್ಲಿ ಪಾರ್ಥಿವ ಶರೀರ ಪಡೆಯಲು ಒತ್ತು ನೀಡಲಾಗಿದೆ’ ಎಂದೂ ಸಚಿವಾಲಯವು ವಿವರಿಸಿದೆ.

ರಷ್ಯಾದ ಸೇನೆಯಲ್ಲಿ ಅನೇಕ ಭಾರತೀಯರು ರಕ್ಷಣಾ ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ರಷ್ಯಾದ ಸೈನಿಕರ ಜೊತೆಗೂಡಿ ಉಕ್ರೇನ್‌ನ ಗಡಿಯಲ್ಲಿ ಯುದ್ಧದಲ್ಲಿ ಭಾಗಿಯಾಗುವಂತೆ ಇವರಿಗೆ ಒತ್ತಡ ಹೇರಲಾಗುತ್ತಿದೆ ಎಂದು ವರದಿಗಳು ತಿಳಿಸಿವೆ.

ನಾರಾಯಣ ಸಂಸ್ಥೆ ವಿದ್ಯಾರ್ಥಿಗಳ ಸಾಧನೆ

ಜೆಇಇ–ಅಡ್ವಾನ್ಸ್ಡ್: ಅಗ್ರ 20ರಲ್ಲಿ ಸಂಸ್ಥೆಯ 7 ಪ್ರತಿಭಾವಂತರು

ಪ್ರಜಾವಾಣಿ ವಾರ್ತೆ



ಸಂದೇಶ್ ಭೋಗಪಲ್ಲಿ

ರಾಘವ್ ಶರ್ಮಾ



ಆರ್ಯನ್ ಪ್ರಕಾಶ್

ಅಮೋಘ ಅಗರ್ವಾಲ್

ರಾಜದೀಪ್ ಮಿಶ್ರಾ

ಬಿಸ್ಮಿತ್ ಸಾಹೊ

ಬಾಲಾದಿತ್ಯ

ಬೆಂಗಳೂರು: ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ನಡೆಸುವ ಜಂಟಿ ಪ್ರವೇಶ ಪರೀಕ್ಷೆ–ಅಡ್ವಾನ್ಸ್ಡ್‌ನಲ್ಲಿ (ಜೆಇಇ–ಅಡ್ವಾನ್ಸ್ಡ್) ನಾರಾಯಣ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ.

ಅಗ್ರ 20 ರ‍್ಯಾಂಕ್‌ಗಳಲ್ಲಿ ಸಂಸ್ಥೆಯ ಏಳು ವಿದ್ಯಾರ್ಥಿಗಳು ಸ್ಥಾನ ಪಡೆದಿದ್ದಾರೆ. ಅಗ್ರ 50 ರ‍್ಯಾಂಕ್‌ಗಳಲ್ಲಿ 14 ಹಾಗೂ 100 ರ‍್ಯಾಂಕ್‌ಗಳಲ್ಲಿ 31 ವಿದ್ಯಾರ್ಥಿಗಳು ರ‍್ಯಾಂಕ್ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಸಂದೇಶ್ ಭೋಗಲಪಲ್ಲಿ ಅಖಿಲ ಭಾರತ ಮಟ್ಟದಲ್ಲಿ (ಎಐಆರ್) ಮೂರನೇ ರ‍್ಯಾಂಕ್ ಪಡೆದಿದ್ದು, ಇದು ದಕ್ಷಿಣ ಭಾರತದಲ್ಲಿ ಮೊದಲ ರ‍್ಯಾಂಕ್ ಆಗಿದೆ. ರಾಜದೀಪ್ ಮಿಶ್ರಾ (6), ಬಾಲಾದಿತ್ಯ (11) ರಾಘವ್ ಶರ್ಮಾ (12), ಬಿಸ್ಮಿತ್ ಸಾಹೊ (16), ಆರ್ಯನ್ ಪ್ರಕಾಶ್ (17), ಅಮೋಘ್ ಅಗರ್‌ವಾಲ್ (20) ಅಗ್ರ 20 ರ‍್ಯಾಂಕ್‌ಗಳಲ್ಲಿ ಸ್ಥಾನ ಪಡೆದ ವಿದ್ಯಾರ್ಥಿಗಳಾಗಿದ್ದಾರೆ.

ನಾರಾಯಣ ಶಿಕ್ಷಣ ಸಂಸ್ಥೆಗಳ ನಿರ್ದೇಶಕರಾದ ಪಿ. ಸಿಂಧೂರ ಹಾಗೂ ಪಿ. ಶರಣಿ ಅವರು ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

‘ಬಿಜೆಪಿಯಿಂದ ದಲಿತ, ಹಿಂದುಳಿದವರ ತಿರಸ್ಕಾರ’

ಬೆಂಗಳೂರು: ‘ರಾಜ್ಯದಲ್ಲಿ ದಲಿತ ಸಮುದಾಯವರು ಶೇ 30ರಷ್ಟಿದ್ದಾರೆ. ಕೇಂದ್ರ ಸಚಿವ ಸಂಪುಟಕ್ಕೆ ದಲಿತರು ಮತ್ತು ಹಿಂದುಳಿದ ಸಮುದಾಯದವರನ್ನು ಸೇರಿಸಿಕೊಳ್ಳದಿರುವುದು, ಈ ಸಮಾಜಗಳ ಬಗ್ಗೆ ಬಿಜೆಪಿಗೆ ಇರುವ ತಿರಸ್ಕಾರವನ್ನು ಎತ್ತಿ ತೋರಿಸುತ್ತಿದೆ’ ಎಂದು ಬಹುಜನ ಸಮಾಜ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಮಾರಸಂದ್ರ ಮುನಿಯಪ್ಪ ಹೇಳಿದ್ದಾರೆ.

‘ಈ ಎರಡೂ ಸಮುದಾಯಗಳನ್ನು ಬಿಜೆಪಿಯು ಕೇವಲ ಮತ ಬ್ಯಾಂಕ್ ಆಗಿ ಬಳಸಿಕೊಂಡಿದೆ. ಅಲ್ಲದೆ, ದೇಶದಲ್ಲಿ ಶೇ 15ರಷ್ಟಿರುವ ಮುಸ್ಲಿಂ ಸಮುದಾಯವರಿಗೂ ಕೇಂದ್ರ ಸಚಿವ ಸಂಪುಟದಲ್ಲಿ ಅವಕಾಶ ಸಿಕ್ಕಿಲ್ಲ. ಬಿಜೆಪಿಯ ಈ ನಡೆ ಖಂಡನೀಯ’ ಎಂದೂ ಅವರು ಹೇಳಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

WANTED ENGLISH MEDIUM TRAINED GRADUATES to teach English/ Social Science for Primary P.E.T/ N.T.T. trained/ Computer Science graduates. Lady graduates interested in teaching can also apply. Age limit- not above 40 years. Salary with P.F & E.S.I Facilities. Contact in Person (10.00 a.m -3.00 p.m on all working days). Secretary, Deccan Educational Society, No. 95, 3rd cross, Srirampuram, Bengaluru- 560021 (near sampige Theatre, Malleswaram). Mob: 7094390262.

WANTED ENGLISH MEDIUM Experienced Masters to teach English/ Social Science for VIII & IX Standards. Timings: 6.00 p.m to 9.00 p.m. Part-time Yoga/ Carnatic instrumental music/ Dance. Age limit: 30-35 years. Contact in person between 5.00 p.m to 6.00 p.m (Monday to Friday)- Secretary, Deccan Educational Society, No. 95, 3rd Cross, Srirampuram, Bengaluru- 560021 (near sampige Theatre, Malleswaram). Mob: 7094390262.

FEMALE SCIENCE TEACHER Wanted for a Primary English School in Vyalikaval, Bangalore. 8884128882 (WhatsApp only)

PANCHAJANYA VIDHYA PEETHA WELFARE TRUST
Dr. AIT Campus, Outer Ring Road, Mallathahalli, Bengaluru-560056
PVPWT/ 86 /2024-25 Date: 10.06.2024

PVP Welfare Trust invites eligible candidates for a walk-in interview for the following posts at various Schools/Colleges of the trust. The candidates may attend the **walk-in-interview on 21.06.2024 at 10 AM** in the Board Room, PVPWT, Dr. AIT Campus, Outer Ring Road, Mallathahalli, Bengaluru-560056 and submit the written application on white paper along with xerox copies of certificates. They should bring the original documents for verification.

APPOINTMENTS FOR UNAIDED POSTS

1. PVP POLYTECHNIC :
Lecturer in Electronics Instrumentation & Control Engineering – 01 post.

2. PVP ITC :
1. J.T.O – Mechanic Motor Vehicle (Automobile) – 01 post
2. J.T.O – Allied Trade– 01 post

3. PVP PRE- UNIVERSITY COLLEGE :
PART-TIME LECTURERS -Commerce, English, Economics & Computer Science - 01 Post each

4. PVP HIGH SCHOOLS :
TEACHERS (FULL-TIME)-Hindi, English, Science (CBZ), Computer Science, Social Science, - 01 Post each and Physical Education – 02 posts.

5. PVP PRIMARY SCHOOLS : (English and Kannada Medium)
TEACHERS (FULL-TIME)- Hindi, English, Science, Social Science, Physical Education- 02 posts each and Kannada – 01 Post.

Qualification, Experience and Age as per C&R rules of Government of Karnataka and salary is negotiable.
Managing Trustee/Secretary

HOLY ANGEL'S High School, Hampinagar, Vijayanagar, Bengaluru-560104. Phone: 23404465/23202042 holyangels.highschoolrpclayout@gmail.com Requires Experienced Trained Teachers for the Academic year 2024-2025 for Nursery, Primary, High-School, Music Teacher & P.E.Teacher. STATE & ICSE. Qualification: B.A./B.Sc.,B.Ed. M.A/M.Sc.,M.Ed, N.T.T, CP.Ed. Only English medium candidates need to apply.

BRILLIANCE ENGLISH-SCHOOL Jayanagar 3rd-Block Bangalore-11 Required B.Ed Teachers For High School: Science & Social Science Good Salary Offered Call:9480003004 9845178331

WANTED LECTURERS in English, Hindi, History and Librarian for VIDYAVANA PU College, Thirumalashettyhalli, Whitefield, Bengaluru. Contact 9663389388 on WhatsApp

SVN ENGLISH High School, Thanisandra Main Road, Nagawara, Bangalore-77, (opposite elements mall), Requires Qualified TEACHERS Maths & Social for High School Call: 9611807494/ 080-25446756 Mail: svnschool@gmail.com

JNANAVAHINI PUBLIC school Opp Dr. Rajkumar Punya Bhoomi Nandini Layout, Wanted Teachers Trained and Qualified Primary English Teacher Required Handsome Salary is Offered Contact: 6364241555/ 9611061071

WANTED BE/DIPLOMA/ITI in Electrical, Mechanical, Computers, Electronics English M.A, B.A, B.Sc, B.Ed, Clerk Computer Operator Attender to take part time / Full time Diploma Day & Evening classes, High school classes, ITI, Paramedical Classes.Contact personally with resume, original documents.Nadgir Institute Near Modi Hospital Rajajinagar Bangalore – 560010. Ph:23387333, 8867065525, 9731721446.

MATHEMATICS TEACHER for Part-time/Full-time. Contact: ABDUL BARI'S HIGH SCHOOL, Near Coles Park Whatsapp-9353111888

DH Classifieds More value, more impact ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
*Conditions apply
CLASSIFIED DISPLAY @550/-* PER SQCM
SINGLE / DOUBLE / MULTIPLE COLUMN
www.dhclassifieds.com
BOOK NOW
For more details contact:
9901641752
9845114560
9900428036
9731810277

GOLDEN VALLEY EDUCATIONAL TRUST
Dr. T. THIMMAIAH INSTITUTE OF TECHNOLOGY
(Affiliated to Visvesvaraya Technological University)
Oorgaum, KGF - 563 120 | www.drttit.edu.in
Accredited by
NAAC with “A” Grade and NBA (CSE, MINING & ECE)

CAREER OPPORTUNITIES

Applications are invited from qualified and experienced candidates for Professors, Associate Professors and Asst. Professors in

Computer Science & Engineering
CSE-Artificial Intelligence & Machine Learning

Salary and Qualifications as per AICTE norms. Interested candidates may send their applications along with detailed **CV to the Principal** at the above address or mail to **careers@drttit.edu.in** within 8 days from the date of advertisement.

Ph: 9448574037 Principal Dr.TTIT

Accounts & Finance

A Large FMCG Mfg Co. is HIRING

FINANCE & ACCOUNTS (CA)
- **MANAGER** : 8+ Years of Relevant Experience
- **EXECUTIVE** : 3 to 5yrs of Experience

Industrial and SAP experience would be an added advantage, Qualification : Qualified CA is a must.

SENIOR EXECUTIVE-LOGISTICS
5+ Years of Relevant Experience in handling a large fleet of vehicles, Driver Management and excellent leadership skills. SAP Knowledge would be an added advantage.

Location: Srirangapatna
Email : fmcgmys@workmail.com

REQD. EXPERIENCED or Fresher Accountant & Data Entry for Apparel Industry. Walk in for interview between 1pm to 6 pm, 39, 9th Cross H.Siddaiah Rd Blr-27

WANTED ACCOUNTS ASST (Male) Tally & GST work Salary: Negotiable Ph:9980140661 Mail: starsilks@gmail.com

"REQUIRED 2-3YEARS Experienced ACCOUNTANT" for`Shekar Hospital`-Bull temple`Road, Bangalore-19. Attractive Salary`offered. 080-22421144/ 9901927970/ 9740095750, Email: shekharhospitalbtr@gmail.com

WANTED ACCOUNTANT B.Com with minimum 03 Years experience,working knowledge of Tally and MS Office for immediate appointment at The Auro School (Managed by Sri Aurobindo Complex Trust), Kanakapura Main Road. Contact:The Secretary, Mob: 9880295312, or send your resume to E-mail: sactmsf@gmail.com

EDUCATION
To Place your Classified Ads Contact:
9845114560

Drivers

"WANTED EXPERIENCED- CAR DRIVER in Bangalore City for 9 Hours Duty, Salary: Rs.18,000/-. Contact: 8088174438"

DRIVERS
Wanted Drivers with more than 5 years experience for a Software Tech Park at Bangalore
Walk-in Interview will be conducted at Safina Towers Pvt. Ltd,
No.3, Ali Asker Road, Bangalore- 560 052
Telephone: 080-22264088/ 89
Timings: Monday to Friday:
10:00 am to 1:00pm Evening 4:00pm to 6:00pm
Saturday: 10:00 am to 1:00pm

Wanted

REQUIRED SHOWROOM and Field MALE SALES EXECUTIVE. Age Limit 25-45 Years. For Swastik Ceramics Co. Jayanagar 5th Block. Contact: 9741040290

General

EMPLOYEE NEEDED! Business Development Office for property developer company No investment, age above 30 years experienced required. Earning Rs. 50,000/- per month Retired persons are eligible. Contact:- 9845334751.

Engg/ Production Technical

REQUIRED ANY Graduate for Marketing. Diploma in Electricals for Technical Support. Contact: The Industrial & Laboratory Equipment Co., 9448039931 or ilebgl123@gmail.com

REAL ESTATE SELLING

Home Finance

General

BEST INVESTMENT OPPORTUNITY For Middle Income Group. Buy Sites in Pre-Launch Cost to Cost Bank Loans/ Installments: 9952936298

Sites

Magadi Road

7020 SFT North Facing for Sale at Gollarahatti, Magadi Main Road, Contact: 8884157013/ 9880503458

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

PERSONAL

Change of Name

I MANJANNA B.N. R/a #67, Mathrushree Nilaya, R Gowdappa Layout, Harokyathanahalli, Dasanapura hobli, Bengaluru North Taluk -562162 Have Changed Our Minor Daughter Name from YASHASWINI B.M to MONISHA B.M Vide Affidavit Dated 11/06/2024 before Notary Chandrakala Bangalore.

CHANGE OF NAME
I, Mrs. **SHUBHA DEVANHALLI** Residing at No.SOQ-11, HAL, Senior Officers Enclave, Old Madras Road, CV Raman Nagar, Bengaluru-560093 have changed my name to **Mrs. SHUBHA SUNIL** vide affidavit dated 11.6.2024 before Notary Sreedharan Nair P.N Bengaluru. Henceforth I shall be known as **Mrs. SHUBHA SUNIL** only.

CHANGE OF NAME
I, **S.M. Ramesh** R/at. #251, 6th Cross, 1st Main Road, Kamalanagar, Bangalore- 560079 in post office records mentioned my Daughter's name as **NAVYASHRI** instead of **NAVYASHRI R MANAGULI**. Hereby declaring that correct name is **NAVYASHRI R MANAGULI** only vide affidavit dated 10/06/2024 before notary B. Prasanna, Bengaluru.

I, MUNIRAJA Residing at No.26, 4thCross, Virupakshapura,Bengaluru-560097. Have Changed my Name as MMUNIRAJU vide affidavit Dated: 08.06.2024 before Notary B.ANJANEYALU,Bangalore

I, NANDISH H S S/O Shivarudraiah R/a#219, 5th cross Muneshwara badavane, Bharath-Nagar, Vishwaneedam Bangalore- 560091 have changed my Name from NANDEESHA H S to NANDISH H S vide`affidavit dated:10.06.2024 Sworn before Notary Bharati Patil Bangalore.

CHANGE OF NAME
We, Raghunath Reddy Karthanaparthi and Radhika Goturu R/a Ambiance Orion, Flat #D4, 4th floor, Hadosiddapura (V), Carmelaram (P), Bengaluru-560035 have changed **our minor Son's** Name from **DHANUSH REDDY K** to **DHANUSH REDDY KARTHANAPARTHI** (DOB: 13.7.2009) vide affidavit dated: 25.5.2024 sworn before Notary Yankoba, Bengaluru.

PUBLIC NOTICE

V.S. DENTAL COLLEGE & HOSPITAL
K.R.ROAD, V.V.PURAM, BENGALURU-04. Ph. No. 080-26618066, Fax: 08022426705
E-Mail: vsdchbangalore@gmail.com /www.vsdc.rvsangha.org

INVITATION FOR TENDER

Terms & Conditions of the Tender for the supply of Equipment's and Instruments
Ref: Tender notification No. VSDCH/1268/2023 -24 **Dated: 05/03/2024**

1. The Principal VSDCH Bengaluru hereby invite tenders from PRIMARY MANUFACTURERS or IMPORT LICENSE HOLDERS (IN CASE OF IMPORTED Drugs or AUTHORSED DEALER for the supply of Equipment's and Instruments & as detailed in Annexure VI of this Tender, on Staggered supply Basis for one year. For Primary Manufacturers / import license Holders whose annual sales turnover is at least Rs. 68 Lakhs per year in previous 3 years i.e for 2021-22, 2022-23 and 2023-24 and for AUTHORIZED DEALER whose annual sales turnover is Rs. 34 lakhs every year in previous 3 year i.e for 2021-22, 2022-23 and 2023-24.
2. The Tender forms are not transferable.
3. It may be noted that, Telegraphic / Fax quotation offer will not be accepted.
4. The tender form may be purchased from VSDCH stores section on payment of Rs.2,500/- + 18% GST. Total amount Rs.2,950/-(Rupees Two Thousand Nine Hundred Four Fifty only) through a DD in favour of The Principal, V.S.Dental College & Hospital, “Payable at Bengaluru” (Non-refundable).
5. Sale of tender form from 24/06/2024 to 04/07/2024 during office hours.
6. Last date for submission of quoted tender documents before 4.00 pm on 16/07/2024.
7. Tender should be quoted in hard copy duly signed on all pages in excel format and the same on non-erasable CD.
8. Tenders should be submitted only in the prescribed format issued by the VSDCH.

Store Officer VSDCH PRINCIPAL VSDCH Chairman VSDCH

INTRA LABS
44 Years Successfully, WHO-GMP Certified Company
Pharma Franchise
BUSINESS Opportunity
in Bangalore, all Karnataka
More Than 800 Pharmaceuticals Products Latest Molecules
We Offer : Wide Range of Products, Best Quality Assurance, Affordable Prices, Assured High Returns, Promotional Support
Mob. : 09353077057/09901333611/09342990032
No.39, 1st Floor, New Timberyard Layout, Byatarayanpura, Mysore Road, Bangalore-560 026.
E-mail : feedbackintralabs@gmail.com,salesintralabs3637@gmail.com

ALGOS Multispeciality Pain Clinic 'Freedom from Pain'
ಹೆಪ್ಪುಗಟ್ಟಿದ ಭುಜದಿಂದ ನಿಮಗೆ ತೊಂದರೆಯಾಗುತ್ತಿದೆಯೇ?
ಇದನ್ನು ನಿರ್ಲಕ್ಷಿಸಬೇಡಿ
ಇದೀಗ ನಮ್ಮ ತಜ್ಞರೊಂದಿಗೆ ಸಂಪರ್ಕ ಸಾಧಿಸಿ!
ನೋವುರಹಿತ ಜೀವನದ ಕಡೆಗೆ ಮೊದಲ ಹೆಜ್ಜೆ ಇಡಿ!
ಅಪಾಯಿಂಟ್‌ಮೆಂಟ್ ಇಂದೇ ಬುಕ್ ಮಾಡಿ!

ಬೆನ್ನು ಮತ್ತು ಕುತ್ತಿಗೆ ನೋವು, ಕೀಲು ನೋವು, ನರ ನೋವು, ದೈಹಿಕ ಮತ್ತು ಪುನರ್ವಸತಿ
ವಿಳಾಸ : ನಂ.G–211, ನೆಲ ಮಹಡಿ, ಪ್ರೆಸ್ಟೀಜ್ ವೆಸ್ಟ್‌ಮಿನಿಸ್ಟರ್ ಕಮರ್ಷಿಯಲ್ ಕಾಂಪ್ಲೆಕ್ಸ್, ಕನ್ನಿಂಗ್ಹ್ಯಾಮ್ ರಸ್ತೆ, ವಸಂತ ನಗರ, ಬೆಂಗಳೂರು ಕರ್ನಾಟಕ 560052
+91 7975896550
www.algospainclinic.com

ZOR Malam & Lotion
For Faster Relief from
Eczema, Ringworm, Itches, Cold Cracks and Pimples!

BIOPHARM GROUP
Representatives & Managers Required
For more Informations Call / Whatsapp
8217312776

ಕಾನೂನುಬಾಹಿರ ಚಟುವಟಿಕೆ: ಪೊಲೀಸರ ಕ್ರಮಗಳ ಅಂಕಿ–ಅಂಶ ಬಿಡುಗಡೆ

‘218 ಪ್ರಕರಣ; ಬಂಧಿತರು 431’

ಪ್ರಜಾವಾಣಿ ವಾರ್ತೆ

ಬಿ. ದಯಾನಂದ

ಬೆಂಗಳೂರು: ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ಮೇ ತಿಂಗಳಲ್ಲಿ ಮಾದಕ ವಸ್ತುಗಳು ಹಾಗೂ ಅಮಲು ಪದಾರ್ಥಗಳ ನಿಯಂತ್ರಣ ಕಾಯ್ದೆ (ಎನ್‌ಡಿಪಿಎಸ್)ಗೆ ಸಂಬಂಧಿಸಿದ 26 ಪ್ರಕರಣಗಳು ಸೇರಿದಂತೆ ಒಟ್ಟು 218 ಪ್ರಕರಣಗಳು ದಾಖಲಾಗಿದ್ದು, 431 ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ಬೆಂಗಳೂರು ನಗರ ಕಮಿಷನರ್ ಬಿ. ದಯಾನಂದ ಹೇಳಿದರು.

ಮೇ ತಿಂಗಳಲ್ಲಿ ಕಾನೂನುಬಾಹಿರ ಚಟುವಟಿಕೆಗಳ ವಿರುದ್ಧ ಪೊಲೀಸ್ ಇಲಾಖೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಅಂಕಿ–ಅಂಶಗಳನ್ನು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

‘ಮೇ ತಿಂಗಳಲ್ಲಿ ದಾಖಲಾದ ಎನ್‌ಡಿಪಿಎಸ್ ಪ್ರಕರಣಗಳಲ್ಲಿ, ವಿದೇಶಿ ಪ್ರಜೆಗಳೂ ಸೇರಿದಂತೆ ಒಟ್ಟು 40 ವ್ಯಕ್ತಿಗಳನ್ನು ಬಂಧಿಸಲಾಗಿದೆ. 52 ಕೆ.ಜಿ. ಗಾಂಜಾ, 2 ಕೆ.ಜಿ. ಆಶೀಷ್ ಆಯಿಲ್, 741 ಗ್ರಾಂ ಚರಸ್, 5 ಗ್ರಾಂ ಕೊಕೇನ್, ಎಂಡಿಎಂಎ 1 ಕೆ.ಜಿ. 922 ಗ್ರಾಂ ಹಾಗೂ ಎಲ್.ಎಸ್.ಡಿ–07 ಸ್ಟ್ರಿಪ್ಸ್ ಮಾದಕ ವಸ್ತುಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ’ ಎಂದು ಮಾಹಿತಿ ನೀಡಿದರು.

‘ಮುಂಜಾಗ್ರತಾ ಕ್ರಮವಾಗಿ ರೌಡಿಗಳ ವಿರುದ್ಧ ಒಟ್ಟು 59 ಪಿಎಆರ್ ಪ್ರಕರಣಗಳನ್ನು ದಾಖಲಿಸಿ, 229ಎ ಐಪಿಸಿ ಕಾಯ್ದೆಯಡಿ ಮೂರು ಪ್ರಕರಣಗಳನ್ನು ಹಾಗೂ 174ಎ ಐಪಿಸಿ ಅಡಿಯಲ್ಲಿ ಒಂದು ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ತಲೆ ಮರೆಸಿಕೊಂಡಿದ್ದ 10 ರೌಡಿಗಳನ್ನು ಪತ್ತೆ ಮಾಡಿ, ಕಾನೂನು ಕ್ರಮ ಕೈಗೊಳ್ಳಲಾಗಿದೆ. ಐದು ಜನ ರೌಡಿಗಳನ್ನು ಗಡಿಪಾರು ಮಾಡಲಾಗಿದೆ’ ಎಂದು ಹೇಳಿದರು.

‘ನ್ಯಾಯಾಲಯದಲ್ಲಿ ಒಟ್ಟು 637 ಪ್ರಕರಣಗಳ ವಿಚಾರಣೆ ನಡೆದಿದ್ದು, 426 ಪ್ರಕರಣಗಳಲ್ಲಿ ನ್ಯಾಯಾಲಯ ಶಿಕ್ಷೆ ಪ್ರಕಟಿಸಿದೆ. ಜೆ.ಜೆ. ನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಕೊಲೆ ಪ್ರಕರಣದಲ್ಲಿ ಒಬ್ಬ ಅಪರಾಧಿಗೆ ಜೀವಾವಧಿ ಶಿಕ್ಷೆಯಾಗಿದೆ. 424 ಪ್ರಕರಣಗಳಲ್ಲಿ 501 ಆರೋಪಿಗಳಿಗೆ ದಂಡ ಶುಲ್ಕ ವಿಧಿಸಲಾಗಿದೆ’ ಎಂದು ಹೇಳಿದರು.

‘ಜೆ.ಪಿ. ನಗರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ನಡೆದಿದ್ದ ಮನೆಗಳ್ಳತನ ಪ್ರಕರಣದಲ್ಲಿ ಆರೋಪಿಯನ್ನು ಬಂಧಿಸಿ, ₹35 ಲಕ್ಷ ಮೌಲ್ಯದ ವಜ್ರ ಹಾಗೂ ಚಿನ್ನದ ಆಭರಣಗಳು ಸೇರಿದಂತೆ ₹1 ಲಕ್ಷ ನಗದು ಜಪ್ತಿ ಮಾಡಿಕೊಳ್ಳಲಾಗಿದೆ. ₹95 ಲಕ್ಷದ ಮೌಲ್ಯದ ವಿವಿಧ ಕಂಪನಿಗಳ ವಸ್ತುಗಳನ್ನು ಸಿಸಿಬಿ ಪೊಲೀಸರು ಜಪ್ತಿ ಮಾಡಿಕೊಂಡಿದ್ದಾರೆ’ ಎಂದು ಹೇಳಿದರು.

‘₹22.40 ಲಕ್ಷ ಮೌಲ್ಯದ 176 ಮೊಬೈಲ್‌ಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಇಬ್ಬರು ಆರೋಪಿಗಳನ್ನು ಉಪ್ಪಾರಪೇಟೆ ಠಾಣೆಯ ಪೊಲೀಸರು ಬಂಧಿಸಿದ್ದಾರೆ’ ಎಂದು ತಿಳಿಸಿದರು.

ಮುಖ್ಯಾಂಶಗಳು

- 424 ಪ್ರಕರಣಗಳಲ್ಲಿ 501 ಆರೋಪಿಗಳಿಗೆ ದಂಡ ಶುಲ್ಕ
- ತಲೆ ಮರೆಸಿಕೊಂಡಿದ್ದ 10 ರೌಡಿಗಳ ಪತ್ತೆ
- ₹22.40 ಲಕ್ಷ ಮೌಲ್ಯದ 176 ಮೊಬೈಲ್‌ಗಳು ವಶಕ್ಕೆ

2024ರ ಮೇ ತಿಂಗಳಲ್ಲಿ ದಾಖಲಾದ ಪ್ರಕರಣಗಳ ಅಂಕಿ–ಅಂಶ

ಕಾನೂನು ಬಾಹಿರ ಚಟುವಟಿಕೆಗಳು	ದಾಖಲಾದ ಪ್ರಕರಣಗಳು	ಬಂಧಿಸಿದ ಆರೋಪಿಗಳು
ಮಟ್ಕಾ	02	04
ಜೂಜು	24	182
ಕ್ರಿಕೆಟ್ ಬೆಟ್ಟಿಂಗ್	34	69
ಇತರೆ ಬೆಟ್ಟಿಂಗ್	02	07
ಅಕ್ರಮ ಮದ್ಯಮರಾಟ	06	06
ಮಾನವ ಕಳ್ಳಸಾಗಣೆ	23	28
ಅಕ್ರಮ ಶಸ್ತ್ರಾಸ್ತ್ರ ಪ್ರಕರಣ	01	0
ಬಡ್ಡಿ ವ್ಯವಹಾರ	02	02
ಇಸಿ ಆಕ್ಟ್	06	06
ಕಾಪಿ ರೈಟ್ ಆ್ಯಕ್ಟ್	13	08
ಎನ್‌ಡಿಪಿಎಸ್	26	40
ಕೋಟ್ಪಾ	76	79
ಒಟ್ಟು	218	431

ಪರಿಸರ ದಿನಾಚರಣೆ

ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ನೆರವು ಟ್ರಸ್ಟ್ ವತಿಯಿಂದ ಇತ್ತೀಚೆಗೆ ಮತ್ತೀಕೆರೆಯ ಜೆ.ಪಿ. ಪಾರ್ಕ್‌ನಲ್ಲಿ ಸಸಿಗಳನ್ನು ನೆಡಲಾಯಿತು. ಸಾಲುಮರದ ತಿಮ್ಮಕ್ಕ, ಆರ್.ಜಿ. ಪ್ರದೀಪ್, ಟ್ರಸ್ಟ್ ಸಹಸಂಸ್ಥಾಪಕ ವಿಷ್ಣು, ಗಂಧದ ಗುಡಿ ಫೌಂಡೇಷನ್‌ನ ಸಿದ್ಧೇಶ್ವರಪ್ರಸಾದ್ ಎಂ.ಆರ್., ಭಾಗವಹಿಸಿದ್ದರು.

‘ಅಲ್ಪಸಂಖ್ಯಾತರಿಗೆ ₹72.78 ಕೋಟಿ ಶಿಕ್ಷಣ ಸಾಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಸಾಲಿನಲ್ಲಿ ವೃತ್ತಿಪರ ಶಿಕ್ಷಣದ ವ್ಯಾಸಂಗಕ್ಕಾಗಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ₹72.78 ಕೋಟಿ ಸಾಲ ನೀಡಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಮೀರ್ ಅಹಮದ್ ಖಾನ್ ಅವರು ಹೇಳಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ವೈದ್ಯಕೀಯ, ದಂತ ವೈದ್ಯಕೀಯ ಸೇರಿದಂತೆ ವೃತ್ತಿಪರ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುವ ಅಲ್ಪಸಂಖ್ಯಾತ ಸಮುದಾಯದ ಬಡ ವಿದ್ಯಾರ್ಥಿಗಳಿಗೆ ಗರಿಷ್ಠ ₹5 ಲಕ್ಷ, ವಿದೇಶದಲ್ಲಿ ವ್ಯಾಸಂಗ ಮಾಡಲು 88 ವಿದ್ಯಾರ್ಥಿಗಳಿಗೆ ಗರಿಷ್ಠ ₹10 ಲಕ್ಷ ನೀಡಲಾಗುತ್ತದೆ ಎಂದರು.

ಇದೇ ಮೊದಲ ಬಾರಿಗೆ ಸಣ್ಣ ವ್ಯಾಪಾರ ಮಾಡುವ 961 ಮಹಿಳೆಯರಿಗೆ ₹4.8 ಕೋಟಿ ಸಾಲ ನೀಡಲಾಗಿದೆ. ಶೇ 50ರಷ್ಟು ಸಹಾಯಧನ, ಉಳಿದ ಶೇ 50 ರಷ್ಟು ಸಾಲದ ರೂಪದಲ್ಲಿ ನೀಡಲಾಗಿದೆ. ವೃತ್ತಿ ಪ್ರೋತ್ಸಾಹ ಯೋಜನೆಯಡಿ 973 ಜನರಿಗೆ ₹9.73 ಕೋಟಿ, ಶ್ರಮ ಶಕ್ತಿ ಯೋಜನೆಯಡಿ ಒಂದು ಸಾವಿರ ಜನರಿಗೆ ₹5 ಕೋಟಿ ಸಾಲ ಒದಗಿಸಲಾಗಿದೆ ಎಂದರು.

ಈ ವರ್ಷ 666 ಕಾರು ಹಾಗೂ 500 ಆಟೊ ಖರೀದಿಗಾಗಿ ಫಲಾನುಭವಿಗಳಿಗೆ ₹23.75 ಕೋಟಿ ನೆರವು ನೀಡಲಾಗುವುದು. ಈ ವರ್ಷ ₹200.60 ಕೋಟಿ ಸಾಲ ವಸೂಲಾತಿ ಮಾಡಿದ್ದು, ಕಳೆದ ವರ್ಷಕ್ಕಿಂತ 50 ಲಕ್ಷ ಹೆಚ್ಚು ವಸೂಲಾತಿಯಾಗಿದೆ ಎಂದರು.

ಕೆಎಂಡಿಸಿ ಅಧ್ಯಕ್ಷ ಬಿ.ಕೆ. ಅಲ್ತಾಫ್ ಖಾನ್, ವ್ಯವಸ್ಥಾಪಕ ನಿರ್ದೇಶಕ ಮೊಹಮದ್ ನಜೀರ್ ಉಪಸ್ಥಿತರಿದ್ದರು.

ಆಸ್ತಿ ತೆರಿಗೆ ಪಾವತಿಗೆ ಜುಲೈ 31ರ ಗಡುವು

ಒಂದನೇ ಪುಟದಿಂದ...

‘20 ಲಕ್ಷ ಕಟ್ಟಡಗಳು ಆಸ್ತಿ ತೆರಿಗೆ ವ್ಯಾಪ್ತಿಯಲ್ಲಿದ್ದು, ಅನೇಕರು ಹೊರಗಿದ್ದಾರೆ. ತೆರಿಗೆ ಪಾವತಿಸಲು ಅವರಿಗೂ ಅವಕಾಶ ಕಲ್ಪಿಸಲಾಗಿದೆ. ಅವರು ತೆರಿಗೆ ಪಾವತಿಸಿ 90 ದಿನಗಳ ಒಳಗೆ ಸೂಕ್ತ ದಾಖಲೆ ನೀಡಿದರೆ ಸೂಕ್ತ ಖಾತೆ ನೀಡಲಾಗುವುದು. ಇನ್ನೂ 4 ಲಕ್ಷ ಮಂದಿ ಆಸ್ತಿ ತೆರಿಗೆ ಪಾವತಿಸಿಲ್ಲ. ಒಟಿಎಸ್ ಅವಕಾಶ ಬಳಸಿಕೊಂಡು ಈಗಾಗಲೇ 50 ಸಾವಿರ ಮಂದಿ ಆಸ್ತಿ ತೆರಿಗೆ ಪಾವತಿಸಿದ್ದಾರೆ’ ಎಂದು ಹೇಳಿದರು.

‘ಸದ್ಯದ ಲೆಕ್ಕಾಚಾರದ ಪ್ರಕಾರ ₹5,200 ಕೋಟಿಯಷ್ಟು ತೆರಿಗೆ ಸಂಗ್ರಹ ಆಗಬೇಕಿತ್ತು. ಆದರೆ, ₹1,300 ಕೋಟಿ ಮಾತ್ರ ಸಂಗ್ರಹವಾಗಿದೆ. ತೆರಿಗೆ ಪಾವತಿಸದವರು ಆಗಸ್ಟ್ 10ರಂದ ಸುಸ್ತಿದಾರರ ಪಟ್ಟಿಗೆ ಸೇರುತ್ತಾರೆ’ ಎಂದೂ ಹೇಳಿದರು.

ಮೂರು ತಿಂಗಳಲ್ಲಿ ಆಸ್ತಿ ದಾಖಲೆ ಡಿಜಿಟಲೀಕರಣ ಪೂರ್ಣ: ‘20 ಲಕ್ಷ ಆಸ್ತಿಗಳ ಪೈಕಿ 8 ಲಕ್ಷ ಆಸ್ತಿಗಳ ದಾಖಲೆಗಳ ಡಿಜಿಟಲೀಕರಣ ಪ್ರಕ್ರಿಯೆ ಪೂರ್ಣವಾಗಿದೆ. ಮುಂದಿನ ಮೂರು ತಿಂಗಳಲ್ಲಿ ಉಳಿದ ಆಸ್ತಿಗಳ ದಾಖಲೆಗಳನ್ನು ಡಿಜಿಟಲೀಕರಣ ಮಾಡಲಾಗುವುದು’ ಎಂದು ಹೇಳಿದರು.

‘ವಿಶ್ವ ಪರಿಸರ ದಿನ ಕಾರ್ಯಕ್ರಮವನ್ನು ಜೂನ್ 5ರಂದು ಮಾಡಬೇಕಿತ್ತು. ಚುನಾವಣಾ ನೀತಿಸಂಹಿತೆ ಕಾರಣ ಮಾಡಲು ಆಗಲಿಲ್ಲ. ಹೀಗಾಗಿ, ಜೂನ್ 14ರಂದು ಬಾಲಭವನದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ’ ಎಂದರು.

‘ಹವಾಮಾನ ವೈಪರೀತ್ಯ ವಿಚಾರವಾಗಿ ಜಾಗತಿಕ ಮಟ್ಟದಲ್ಲಿ ಬೆಂಗಳೂರು 40 ವಿಭಾಗದಲ್ಲಿ ಸ್ಥಾನ ಪಡೆದಿತ್ತು. ಬಿಬಿಎಂಪಿ ಕಳೆದ ವರ್ಷ ನವೆಂಬರ್ 27ರಂದು ಮೊದಲ ಹವಾಮಾನ ವೈಪರೀತ್ಯ ಕಾರ್ಯ ಯೋಜನೆಯನ್ನು ಅನಾವರಣಗೊಳಿಸಿತ್ತು’ ಎಂದೂ ಮಾಹಿತಿ ನೀಡಿದರು.

‘ಬ್ಲೂ ಗ್ರೀನ್ ಊರು ಅಭಿಯಾನ’

‘ಬೆಂಗಳೂರು ನಗರವನ್ನು ಹಸಿರಾಗಿಸಲು ‘ಬ್ಲೂ ಗ್ರೀನ್ ಊರು’ ಎಂಬ ಅಭಿಯಾನ ಆರಂಭಿಸಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಮರಗಳನ್ನು ನೆಡಲು ಸಿದ್ಧತೆ ಮಾಡಲಾಗಿದೆ. ಜೊತೆಗೆ, ಕ್ಲೈಮೆಟ್ ಆಕ್ಷನ್ ಸೆಲ್ ಕೂಡ ರಚಿಸಲಾಗಿದೆ. ಇದರಲ್ಲಿ ಜಲ ಮಂಡಳಿ, ಬೆಸ್ಕಾಂ, ಬಿಎಂಟಿಸಿ, ಬಿಡಿಎ, ಬಿಎಂಆರ್‌ಸಿಎಲ್, ಡಲ್ಟ್, ಘನತ್ಯಾಜ್ಯ ನಿರ್ವಹಣೆ, ಮಾಲಿನ್ಯ ನಿಯಂತ್ರಣ ಮಂಡಳಿ, ಅರಣ್ಯ, ಕೃಷಿ, ಗಣಿಗಾರಿಗೆ ಸೇರಿದಂತೆ ಎಲ್ಲ ಇಲಾಖೆಗಳನ್ನು ಸೇರಿಸಲಾಗಿದೆ. ಈ ಮಾಹಿತಿ ಬಿಬಿಎಂಪಿ ಜಾಲತಾಣದಲ್ಲಿ ಲಭ್ಯವಿದೆ’ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ನಗರದ ಹೊರವಲಯದ ನಾಲ್ಕು ಕಡೆಗಳಲ್ಲಿ ತ್ಯಾಜ್ಯ ವಿಲೇವಾರಿ ಘಟಕ ಸ್ಥಾಪಿಸಲು ಸದ್ಯದಲ್ಲೇ ಟೆಂಡರ್ ಕರೆಯಲಾಗುವುದು. ಈ ವಿಚಾರವಾಗಿ ತಮಿಳುನಾಡಿಗೆ ಭೇಟಿ ನೀಡಿ ಪರಿಶೀಲನೆ ಮಾಡಲಾಗುವುದು
ಡಿ.ಕೆ. ಶಿವಕುಮಾರ್
ಬೆಂಗಳೂರು ನಗರಾಭಿವೃದ್ಧಿ ಸಚಿವ

‘ಬೆಳಿಗ್ಗೆ 5ರಿಂದ ರಾತ್ರಿ 10ರವರೆಗೆ ಎಲ್ಲಾ ಮುಕ್ತ ಉದ್ಯಾನಗಳು’

‘ನಗರದ ಎಲ್ಲ ಉದ್ಯಾನಗಳನ್ನು ಬೆಳಿಗ್ಗೆ 5 ಗಂಟೆಯಿಂದ ರಾತ್ರಿ 10ರವರೆಗೆ ತೆರೆಯಲು ನಿರ್ಧರಿಸಲಾಗಿದೆ. ಕಬ್ಬನ್ ಪಾರ್ಕ್ ತೋಟಗಾರಿಕಾ ಇಲಾಖೆ ವ್ಯಾಪ್ತಿಯಲ್ಲಿದೆ. ಅಲ್ಲಿಗೆ ಈ ಸಮಯ ಅನ್ವಯವಾಗುವುದಿಲ್ಲ. ಉದ್ಯಾನಗಳಲ್ಲಿ ಕಾನೂನುಬಾಹಿರ ಚಟುವಟಿಕೆ ನಿಯಂತ್ರಿಸಲು ಪೊಲೀಸರ ಗಸ್ತು, ಮಾರ್ಷಲ್‌ಗಳನ್ನು ನಿಯೋಜಿಸಲಾಗುವುದು. ಅಲ್ಲದೆ, ಪಾಲಿಕೆಯ ದೂರವಾಣಿ ಸಂಖ್ಯೆಗೆ (22660000, 22221188) ಕರೆ ಮಾಡಿ ದೂರು ನೀಡಬಹುದು. ವಾಟ್ಸ್‌ಆ್ಯಪ್ ಮೂಲಕವೂ (9480685700) ಮಾಹಿತಿ ನೀಡಬಹುದು’ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

‘ಅನಧಿಕೃತ ಫ್ಲೆಕ್ಸ್–ಎಲ್ಇಡಿ ವಿರುದ್ಧವೂ ಪ್ರಕರಣ’: ‘ಪಾಲಿಕೆ ವತಿಯಿಂದ ಅನಧಿಕೃತ ಫ್ಲೆಕ್ಸ್‌ಗಳನ್ನು ನಿಷೇಧಿಸಿದ್ದರೂ, ಎಲ್ಲ ರಾಜಕೀಯ ಪಕ್ಷಗಳ ವತಿಯಿಂದ ಫ್ಲೆಕ್ಸ್ ಹಾಕಲಾಗುತ್ತಿದೆ. ಅದನ್ನು ನಿಯಂತ್ರಿಸುವುದು ಸಹಾಯಕ ಕಂದಾಯ ಅಧಿಕಾರಿಯ (ಎಆರ್‌ಒ) ಜವಾಬ್ದಾರಿ. ಇನ್ನು ಮುಂದೆ ಅನಧಿಕೃತ ಫ್ಲೆಕ್ಸ್ ಅಳವಡಿಸಿದರೆ, ಅಳವಡಿಸಿದವರ ಜೊತೆಗೆ ಎಆರ್‌ಒಗಳ ಮೇಲೆಯೂ ಕ್ರಮ ತೆಗೆದುಕೊಳ್ಳಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಅನಧಿಕೃತ ಫ್ಲೆಕ್ಸ್‌ಗಳ ಬಗ್ಗೆಯೂ ಸಾರ್ವಜನಿಕರು ಸಹಾಯವಾಣಿ (1533) ಮೂಲಕ ದೂರು ನೀಡಬಹುದು. ವಾಟ್ಸ್‌ಆ್ಯಪ್ (9480683939) ಮೂಲಕವೂ ಅನಧಿಕೃತ ಫ್ಲೆಕ್ಸ್‌ಗಳ ಛಾಯಾಚಿತ್ರ ಮತ್ತು ವಿಳಾಸವನ್ನು ಕಳುಹಿಸಬಹುದು’ ಎಂದು ಹೇಳಿದರು.

‘2 ಲಕ್ಷ ಸಸಿ ನೆಡುವ ಗುರಿ’

‘ಶಾಲಾ ಮಕ್ಕಳು ತಮ್ಮ ಪ್ರದೇಶದಲ್ಲಿ ಗಿಡ ನೆಟ್ಟು ಬೆಳೆಸುವ ‘ಹಸಿರು ರಕ್ಷಕ’ ಕಾರ್ಯಕ್ರಮವನ್ನು ಕಳೆದ ವರ್ಷ ಅನಾವರಣ ಮಾಡಲಾಗಿತ್ತು. 250 ಶಾಲೆಗಳ ಸಹಯೋಗದಲ್ಲಿ ಈಗಾಗಲೇ 52 ಸಾವಿರ ಗಿಡಗಳನ್ನು ನೆಡಲಾಗಿದೆ. ಈ ಪೈಕಿ, ಶೇ 80ರಷ್ಟು ಗಿಡಗಳು ಉಳಿದುಕೊಂಡಿವೆ. ಶೇ 20ರಷ್ಟು ಬದಲಿ ಗಿಡ ನೆಡಲಾಗುವುದು. ಈ ಕಾರ್ಯಕ್ರಮದ ಭಾಗವಾಗಿ ಈ ವರ್ಷ ಹೆಚ್ಚಿನ ಶಾಲೆಗಳನ್ನು ಸೇರಿಸಿಕೊಂಡು 2 ಲಕ್ಷ ಗಿಡಗಳನ್ನು ನೆಡುವ ಗುರಿ ಹೊಂದಲಾಗಿದೆ’ ಎಂದು ಸಚಿವರು ಹೇಳಿದರು.

‘ಶಾಲೆಗಳು ಪಾಲಿಕೆ ಜತೆ ಒಡಂಬಡಿಕೆ ಮಾಡಿಕೊಂಡಿದ್ದು, ಈ ಗಿಡಗಳು ಆರೋಗ್ಯಕರವಾಗಿ ಬೆಳೆಯುತ್ತಿವೆಯೇ ಎಂದು ಪರಿಶೀಲಿಸಲು ಮೊಬೈಲ್ ತಂತ್ರಾಂಶ ಸಿದ್ಧಪಡಿಸಲಾಗಿದೆ’ ಎಂದರು.

‘ಬಿಬಿಎಂಪಿ ವತಿಯಿಂದ ವಲಯವಾರು ಮರಗಣತಿ ಮಾಡಲು ಟೆಂಡರ್ ಕರೆಯಲಾಗಿದೆ. ಬೊಮ್ಮನಹಳ್ಳಿ ವಲಯದ ವಿದ್ಯಾಪೀಠ, ಕತ್ರಿಗುಪ್ಪೆ ವಾರ್ಡ್‌ಗಳಲ್ಲಿ ಈಗಾಗಲೇ 94 ಸಾವಿರ ಮರಗಳ ಸರ್ವೆಯಾದ ಬಳಿಕ ಬೆಳವಣಿಗೆಗೆ ಕ್ರಮ ಕೈಗೊಳ್ಳಲಾಗಿದೆ. ಅಂತರ್ಜಲ ಮಟ್ಟ ಕುಸಿಯುತ್ತಿರುವ ಹಿನ್ನೆಲೆಯಲ್ಲಿ ನಗರದಲ್ಲಿರುವ ತೆರೆದ ಬಾವಿಗಳ ಮಾಹಿತಿ ಪಡೆದು ಅಭಿವೃದ್ಧಿಪಡಿಸಲಾಗುವುದು. ನಗರದಲ್ಲಿ ಏಳು ಸಾವಿರ ಕೊಳವೆ ಬಾವಿಗಳು ಬತ್ತಿದ್ದವು. ಅವುಗಳ ಪುನಶ್ಚೇತನಕ್ಕಾಗಿ ಕೆರೆಗಳಿಗೆ ಸಂಸ್ಕರಿಸಿದ ನೀರು ತುಂಬಿಸಲು ನಿರ್ಧರಿಸಲಾಗಿದೆ’ ಎಂದರು.

₹300 ಒಡವೆ ₹6 ಕೋಟಿಗೆ ಮಾರಿ ವಂಚನೆ

ಪ್ರಜಾವಾಣಿ ವಾರ್ತೆ

ಜೈಪುರ: ಆಭರಣ ವ್ಯಾಪಾರಿಯೊಬ್ಬರು ₹300 ಮೌಲ್ಯದ ಕೃತಕ ರತ್ನದ ಹರಳುಗಳಿಗೆ ತಗ್ಗಿಂದ ₹6 ಕೋಟಿ ಪಡೆದು ವಂಚಿಸಿದ್ದಾರೆ ಎಂದು ಅಮೆರಿಕ ಮೂಲದ ಮಹಿಳೆಯೊಬ್ಬರು ಪೊಲೀಸರಿಗೆ ದೂರು ನೀಡಿದ್ದಾರೆ.

ಚೆರಿಶ್ ಎನ್ನುವ ಮಹಿಳೆ ಗೋಪಾಲ್‌ಜೀ ರಸ್ತೆಯ ರಾಮ ರೋಡಿಯಂ ಅಂಗಡಿಗೆ ಭೇಟಿ ನೀಡಿದ್ದರು. ಅವರಿಗೆ ಅಂಗಡಿಯವರು ಹಾಲ್‌ಮಾರ್ಕ್ ಆಭರಣ ಮತ್ತು ಹಾಲ್‌ಮಾರ್ಕ್ ಪ್ರಮಾಣಪತ್ರವನ್ನು ತೋರಿಸಿದ್ದರು. ಅದನ್ನು ನೋಡಿ ನಂಬಿದ ಆಕೆ ಬಂಗಾರದ ಲೇಪನ ಇರುವ ಬೆಳ್ಳಿಯ ಆಭರಣಗಳನ್ನು ಕೊಂಡಿದ್ದಾರೆ ಎಂದು ಜೈಪುರದ ಡಿಸಿಪಿ ಭವರಲಾಲ್ ಸಿಂಗ್ ಶೇಖಾವತ್ ಹೇಳಿದ್ದಾರೆ.

ಅಮೆರಿಕದಲ್ಲಿ ಅದನ್ನು ಪ್ರದರ್ಶನಕ್ಕಿಟ್ಟಾಗ ಅವು ನಕಲಿ ಎನ್ನುವುದು ಆಕೆಗೆ ಗೊತ್ತಾಗಿದೆ. ನಂತರ ಜೈಪುರಕ್ಕೆ ಬಂದ ಆಕೆ, ಅಂಗಡಿ ಮಾಲೀಕ ರಾಜೇಂದ್ರ ಮತ್ತು ಅವರ ಮಗ ಗೌರವ್ ಸೋನಿ ವಿರುದ್ಧ ಅಮೆರಿಕ ರಾಯಭಾರ ಕಚೇರಿಗೆ ದೂರು ನೀಡಿದರು. ಇದಲ್ಲದೇ ಇದೇ ಮೇ ತಿಂಗಳಲ್ಲಿ ಆಕೆ ಅಂಗಡಿ ಮಾಲೀಕರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ.

10 ದಿನಗಳ ಯೋಗೋತ್ಸವಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಯೋಗೋತ್ಸವಕ್ಕೆ ಚಾಲನೆ ನೀಡಿದರು. ಆಯುಷ್ ಇಲಾಖೆ ಆಯುಕ್ತ ಶ್ರೀನಿವಾಸುಲು, ಟ್ರಾನ್ಸ್‌ಡಿಸಿಪ್ಲಿನರಿ ವಿಶ್ವವಿದ್ಯಾಲಯದ ಕುಲಪತಿ ದರ್ಶನ್ ಶಂಕರ್ ಇದ್ದರು.

ಬೆಂಗಳೂರು: 10ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸುವ ನಿಟ್ಟಿನಲ್ಲಿ 10 ದಿನಗಳ ಯೋಗೋತ್ಸವ ಕಾರ್ಯಕ್ರಮಕ್ಕೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಮಂಗಳವಾರ ಚಾಲನೆ ನೀಡಿದರು.

‘ಯೋಗ ದಿನಾಚರಣೆ ಕೇವಲ ಒಂದು ದಿನಕ್ಕೆ ಸೀಮಿತವಾಗದೇ ಜನರು ಪ್ರತಿನಿತ್ಯ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು’ ಎಂದು ಅವರು ಹೇಳಿದರು.

‘ಅಂಗನವಾಡಿ ಮತ್ತು ಶಾಲಾ ಮಕ್ಕಳಿಗೆ 10 ದಿನಗಳಲ್ಲಿ ಯೋಗವನ್ನು ಹೇಳಿಕೊಡಲಾಗುತ್ತದೆ. ಅಲ್ಲದೇ, ಆಯುರ್ವೇದ ಚಿಕಿತ್ಸಾ ಪದ್ಧತಿಗಳ ಮಾಹಿತಿಯನ್ನು ಸಾರ್ವಜನಿಕರಿಗೆ ತಲುಪಿಸುವ ಕೆಲಸವೂ ಆಗಲಿದೆ. ಉತ್ತಮ ಆರೋಗ್ಯ ಕಾಪಾಡಿಕೊಳ್ಳುವಲ್ಲಿ ಯೋಗ ಹಾಗೂ ಆಯುರ್ವೇದದ ಮಹತ್ವ ಸಾಮಾನ್ಯ ಜನರಿಗೆ ತಲುಪಿಸುವುದು ನಮ್ಮ ಉದ್ದೇಶ’ ಎಂದು ಸಚಿವರು ಹೇಳಿದರು.

ಈ ಕಾರ್ಯಕ್ರಮದಲ್ಲಿ ವಿವಿಧ ಸಂಘ–ಸಂಸ್ಥೆಗಳು, ಇಲಾಖೆಗಳು ಭಾಗವಹಿಸಲಿವೆ. ಒಟ್ಟು ನಾಲ್ಕು ಲಕ್ಷ ಮಂದಿ ಯೋಗ ಪ್ರದರ್ಶನದ ಮೂಲಕ ಯೋಗೋತ್ಸವದಲ್ಲಿ ಭಾಗವಹಿಸಲಿದ್ದಾರೆ. ಬೆಂಗಳೂರಿನಲ್ಲಿ ಬೆಂಗಳೂರು ಅಪಾರ್ಟ್‌ಮೆಂಟ್ ಅಸೋಸಿಯೇಷನ್, ಪ್ರಜಾಪಿತ ಬ್ರಹ್ಮಕುಮಾರಿ ಸಂಸ್ಥೆ, ಜೈನ್ ವಿಶ್ವವಿದ್ಯಾಲಯ, ಲುಲು ಮಾಲ್ ಹಾಗೂ ಮಾಲ್ ಆಫ್ ಏಷ್ಯಾ ಮತ್ತಿತರ ಕಡೆಗಳಲ್ಲಿ ಯೋಗ ತರಬೇತಿ, ಆಯುಷ್ ಪದ್ಧತಿಗಳ ಕುರಿತು ಅರಿವು ಮತ್ತು ಆರೋಗ್ಯ ತಪಾಸಣಾ ಶಿಬಿರಗಳನ್ನು ಆಯುಷ್ ಇಲಾಖಾ ವತಿಯಿಂದ ನಡೆಸಲಾಗುತ್ತಿದೆ.

ವಿದ್ಯುತ್ ಸ್ಥಗಿತ: ದೆಹಲಿ ಜನರು ಹೈರಾಣ

ಪ್ರಜಾವಾಣಿ ವಾರ್ತೆ

ನವದೆಹಲಿ: ಉತ್ತರ ಪ್ರದೇಶದ ಮಂಡೋಲಾದಲ್ಲಿ ವಿದ್ಯುತ್ ಗ್ರಿಡ್‌ನ ಸಬ್‌ಸ್ಟೇಷನ್‌ಗೆ ಬೆಂಕಿ ತಗುಲಿದ ಪರಿಣಾಮ ದೇಶದ ರಾಜಧಾನಿ ದೆಹಲಿಯಲ್ಲಿ ಲೈಟಿನೆಂಟ್ ಜನರಲ್ ಮತ್ತು ಮುಖ್ಯಮಂತ್ರಿ ಅವರ ನಿವಾಸದ ಪ್ರದೇಶ ಸೇರಿದಂತೆ ಹಲವೆಡೆ ವಿದ್ಯುತ್ ಪೂರೈಕೆ ಸ್ಥಗಿತಗೊಂಡಿತು.

ಕೇಂದ್ರ ಮತ್ತು ಪೂರ್ವ ದಹಲಿಯ ಹಲವೆಡೆ ಹಾಗೂ ಉತ್ತರ ದೆಹಲಿ ಕೆಲ ಪ್ರದೇಶಗಳಲ್ಲಿ ವಿದ್ಯುತ್ ಕಡಿತವಾಗಿತ್ತು.

ಮಂಡೋಲಾ ಸಬ್‌ಸ್ಟೇಷನ್‌ನಿಂದ ದೆಹಲಿ 1,200 ಮೆಗಾವಾಟ್ ವಿದ್ಯುತ್ ಪಡೆಯುತ್ತದೆ. ಇಲ್ಲಿ ಬೆಂಕಿ ತಗುಲಿದ್ದರಿಂದ ದೆಹಲಿಯ ವಿವಿಧೆಡೆ ಸುಮಾರು ಒಂದು ಗಂಟೆ ಕಾಲ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಿತ್ತು. ಬಳಿಕ ಪೂರೈಕೆ ಪುನರಾರಂಭವಾಯಿತು ಎಂದು ಡಿಸ್ಕಾಂ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ದೆಹಲಿಯ ಅನೇಕ ಸ್ಥಳಗಳು ಉಷ್ಣಾಂಶದ ಪ್ರಕೋಪಕ್ಕೆ ತುತ್ತಾಗಿವೆ. ಸಫ್ದರ್‌ಜಂಗ್ ಅಬ್ಸರ್ವೇಟರಿಯಲ್ಲಿ ಮಂಗಳವಾರ 43.8 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ದಾಖಲಾಗಿದೆ. ಇದರ ಜತೆಗೆ ವಿದ್ಯುತ್ ಕಡಿತವು ಜನರನ್ನು ಹೈರಾಣಾಗಿಸಿದೆ.

ದೆಹಲಿ ಇಂಧನ ಸಚಿವೆ ಆತಿಶಿ, ‘ಮಂಡೋಲಾದಲ್ಲಿನ ಸಬ್‌ಸ್ಟೇಷನ್‌ನಲ್ಲಿ ಬೆಂಕಿ ಬಿದ್ದಿದ್ದರಿಂದ ದೆಹಲಿಯ ಹಲವು ಭಾಗಗಳಲ್ಲಿ ವಿದ್ಯುತ್ ಕಡಿತವಾಗಿತ್ತು. ಇದು ಕಳವಳಕಾರಿ ವಿಷಯವಾಗಿದ್ದು, ಅಂತಹ ಪರಿಸ್ಥಿತಿಯನ್ನು ತಡೆಗಟ್ಟಲು ಕ್ರಮ ತೆಗೆದುಕೊಳ್ಳುವಂತೆ ಕೇಂದ್ರ ಇಂಧನ ಸಚಿವರು ಮತ್ತು ಪವರ್ ಗ್ರಿಡ್ ಕಾರ್ಪೊರೇಷನ್ ಅಧ್ಯಕ್ಷರನ್ನು ಭೇಟಿ ಮಾಡಿ ಮನವಿ ಮಾಡಿದ್ದಾರೆ’ ಎಂದು ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.

ಸರ್ಕಾರದಿಂದ ಇನ್ನೂ ಅಧಿಸೂಚನೆಯಾಗಿಲ್ಲ: ಡಾ. ಎಸ್.ಎಂ. ಜಯಕರ

‘ಸಿದ್ಧಲಿಂಗಯ್ಯ ಅಧ್ಯಯನ ಕೇಂದ್ರದ ಮಾಹಿತಿ ಇಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಿದ್ಧಲಿಂಗಯ್ಯ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಬಗ್ಗೆ ರಾಜ್ಯದ ಬಜೆಟ್‌ನಲ್ಲಿ ಉಲ್ಲೇಖವಾಗಿದ್ದರೂ, ಮಾಧ್ಯಮಗಳಲ್ಲಿ ಓದಿದ್ದುವನ್ನು ಬಿಟ್ಟರೆ ಸರ್ಕಾರದಿಂದ ನಮಗೆ ಯಾವುದೇ ಮಾಹಿತಿ ಬಂದಿಲ್ಲ’ ಎಂದು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಡಾ. ಎಸ್.ಎಂ. ಜಯಕರ ತಿಳಿಸಿದರು.

‘ನಾಡೋಜ ಡಾ. ಸಿದ್ಧಲಿಂಗಯ್ಯ ಸ್ಮಾರಕ ಪ್ರತಿಷ್ಠಾನ’ದ ವತಿಯಿಂದ ಮಂಗಳವಾರ ಆಯೋಜಿಸಿದ್ದ ‘ನಾಡೋಜ ಸಿದ್ಧಲಿಂಗಯ್ಯ ಅವರ ಮೂರನೇ ವರ್ಷದ ಪರಿನಿಬ್ಬಾಣ ಸ್ಮರಣಾ ಕಾರ್ಯಕ್ರಮ ಹಾಗೂ ಒಂದು ದಿನದ ರಾಷ್ಟ್ರೀಯ ವಿಚಾರಸಂಕಿರಣ’ದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಸಿದ್ಧಲಿಂಗಯ್ಯ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ವಿಷಯ ಎಲ್ಲಿಗೆ ಬಂದಿದೆ ಎಂದು ನನ್ನನ್ನು ವಿಚಾರಿಸಿದರು. ಆದರೆ, ಸರ್ಕಾರದಿಂದ ಈ ಬಗ್ಗೆ ಅಧಿಸೂಚನೆಯಾದ ಹೊರತು ನಾವೇನೂ ಮಾಡಲು ಸಾಧ್ಯವಿಲ್ಲ. ದಲಿತ ಸಂಘರ್ಷ ಸಮಿತಿ ರಾಜ್ಯ ಘಟಕದ ಅಧ್ಯಕ್ಷ ಮಾವಳ್ಳಿ ಶಂಕರ್ ಅವರು, ಇನ್ನು 15 ದಿನಗಳಲ್ಲಿ ಅಧಿಸೂಚನೆ ಹೊರಡಿಸಲಿದೆ ಎಂದು ಮುಖ್ಯ ಕಾರ್ಯದರ್ಶಿ ಹೇಳಿರುವುದಾಗಿ ತಿಳಿಸಿದ್ದಾರೆ. ಅದು ಬಂದಮೇಲೆ ನಾವು ಕಾರ್ಯಗತಗೊಳಿಸುತ್ತೇವೆ’ ಎಂದರು.

ಮುಖ್ಯಾಂಶಗಳು

- ಸಿದ್ಧಲಿಂಗಯ್ಯ ಅವರ 3ನೇ ವರ್ಷದ ಪರಿನಿಬ್ಬಾಣ ಕಾರ್ಯಕ್ರಮ
- ದಬ್ಬಾಳಿಕೆ ತಡೆದ ದಲಿತ ಚಳವಳಿ: ಮಾವಳ್ಳಿ ಶಂಕರ್

‘ಸಿದ್ಧಲಿಂಗಯ್ಯ ಅವರ ಬರಹಗಳ ನಂತರ ಲೇಖಕರು, ಹೋರಾಟಗಾರರಿಗೆ ಹೊಸ ಸಮಾಜ ನೋಡಲು ಸಾಧ್ಯವಾಯಿತು’ ಎಂದು ಕವಿ–ಗಾಯಕ ಗೊಲ್ಲಹಳ್ಳಿ ಶಿವಪ್ರಸಾದ್ ಅವರು ಹೇಳಿದರು.

ಮುದಲ್ ವಿಜಯ್ ಅವರು ರಚಿಸಿರುವ ‘ಡಾ. ಸಿದ್ಧಲಿಂಗಯ್ಯ ಮಧುರ ಮೈತ್ರಿ’ ಪುಸ್ತಕವನ್ನು ಬಿಡುಗಡೆ ಮಾಡಿದ ಬಿಎಂಶ್ರೀ ಪ್ರತಿಷ್ಠಾನದ ಅಧ್ಯಕ್ಷ ಡಾ. ಬೈರಮಂಗಲ ರಾಮೇಗೌಡ ಅವರು, ವಿಜಯ್ ಹಾಗೂ ಸಿದ್ಧಲಿಂಗಯ್ಯ ಅವರ ಆತ್ಮೀಯ ಪ್ರಸಂಗಗಳನ್ನು ನೆನಪಿಸಿಕೊಂಡರು.

‘ದಲಿತ ಚಳವಳಿ ಏನು ಮಾಡಿತು ಎಂದು ಇಂದಿನ ಜನ ಕೇಳುತ್ತಿದ್ದಾರೆ. ಈ ಚಳವಳಿಯು ನಮ್ಮ ಮೇಲೆ ನಡೆಯುತ್ತಿದ್ದ ದಬ್ಬಾಳಿಕೆಯನ್ನು ಅದು ಅಹಿಂಸಾತ್ಮಕವಾಗಿ ತಡೆಹಿಡಿದು ನಿಲ್ಲಿಸಿತು. ಕವಿ ಸಿದ್ಧಲಿಂಗಯ್ಯ ಅವರು ಕಟ್ಟಿದ ಕವಿತೆಗಳ ಶಕ್ತಿ ಅಂತಹದ್ದು. ಅವರ ಸರಳತೆಯನ್ನು ನಾವೆಲ್ಲ ಅಳವಡಿಸಿಕೊಳ್ಳಬೇಕು’ ಎಂದು ಮಾವಳ್ಳಿ ಶಂಕರ್ ತಿಳಿಸಿದರು.

ಸಿದ್ಧಲಿಂಗಯ್ಯ ಅವರ 3ನೇ ವರ್ಷದ ಪರಿನಿಬ್ಬಾಣ ಸ್ಮರಣಾ ಕಾರ್ಯಕ್ರಮದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯೆ ಡಾ. ಕಾವಲಮ್ಮ, ಬಿಎಂಶ್ರೀ ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ, ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಅಧ್ಯಕ್ಷ ಮಾವಳ್ಳಿ ಶಂಕರ್, ದಲಿತ ಮುಖಂಡ ಎನ್. ವೆಂಕಟೇಶ್ ಮತ್ತು ಕವಿ ಗೊಲ್ಲಹಳ್ಳಿ ಶಿವಪ್ರಸಾದ್ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

‘ದಲಿತ ಚಳವಳಿಯನ್ನು ಪುನಶ್ಚೇತನಗೊಳಿಸಿ ನಾವೆಲ್ಲ ಮುಂದುವರಿಸಿದರೆ, 30 ವರ್ಷಗಳ ಸಿದ್ಧಲಿಂಗಯ್ಯ ಅವರ ಹೋರಾಟಕ್ಕೆ ನೀಡುವ ಗೌರವವಾಗಲಿದೆ. ಸಿದ್ಧಲಿಂಗಯ್ಯ ಅವರ ಪ್ರಾರಂಭದ ಹೋರಾಟ ನಮಗೆ ಆದರ್ಶವಾಗಿದೆ. ನಮ್ಮ ಆತ್ಮಕ್ಕೆ ಉಳಿಸಿಕೊಳ್ಳಲು ಹೋರಾಟ ಮಾಡಬೇಕು. ಅದಕ್ಕೆ ಸಿದ್ಧಲಿಂಗಯ್ಯ ದಾರಿದೀಪವಾಗಲಿ’ ಎಂದು ಹಿರಿಯ ದಲಿತ ಮುಖಂಡ ಎನ್. ವೆಂಕಟೇಶ್ ಆಶಿಸಿದರು.

ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯೆ ಡಾ. ಕಾವಲಮ್ಮ, ಸಿ. ರಾಮಕುಮಾರಿ ಸಿದ್ಧಲಿಂಗಯ್ಯ, ನಾಡೋಜ ಡಾ. ಸಿದ್ಧಲಿಂಗಯ್ಯ ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷೆ ಡಾ. ಮಾನಸ ಸಿದ್ಧಲಿಂಗಯ್ಯ, ರಾಜ್ಯ ಸರ್ಕಾರದ ಎಸ್‌ಸಿ, ಎಸ್‌ಟಿ ನೌಕರರ ಸಮನ್ವಯ ಸಮಿತಿ ಅಧ್ಯಕ್ಷ ಡಿ. ಶಿವಶಂಕರ್ ಅವರು ಭಾಗವಹಿಸಿದ್ದರು.

ವಿಚಾರಗೋಷ್ಠಿಯಲ್ಲಿ ಬೆಂಗಳೂರು ವಿವಿ ಕನ್ನಡ ಅಧ್ಯಯನ ಕೇಂದ್ರದ ಡಿ. ಡೊಮಿನಿಕ್, ಗಾಂಧಿ ಅಧ್ಯಯನ ಕೇಂದ್ರದ ಪ್ರಾಧ್ಯಾಪಕರಾದ ಶ್ರೀಕಂಠ, ಕವಿ ಕುಮಾರ ಇಂದ್ರಬೆಟ್ಟ, ತುಮಕೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕ ಡಾ. ಶಿವಣ್ಣ ತಿಮ್ಮಲಾಪುರ ಪಾಲ್ಗೊಂಡಿದ್ದರು.

ಕರ್ನಾಟಕ ಸರ್ಕಾರ
ಕಾರ್ಮಿಕ ಇಲಾಖೆ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ
ಕರ್ನಾಟಕ ರಾಜ್ಯ ಬಾಲಕಾರ್ಮಿಕ ನಿರ್ಮೂಲನಾ ಯೋಜನಾ ಸೊಸೈಟಿ(ರಿ)

‘ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನ’
Let's act on our commitments: End Child Labour!
“Let's act on our commitments: End Child Labour”
“ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ : ನಾವೆಲ್ಲರೂ ಬದ್ಧತೆಯಿಂದ ಕಾರ್ಯನಿರ್ವಹಿಸೋಣ”

ಮಕ್ಕಳನ್ನು ಶಾಲೆಗೆ ಕಳುಹಿಸಿ, ಕೆಲಸಕ್ಕಲ್ಲ

ಬಾಲ ಕಾರ್ಮಿಕ ನಿರ್ಮೂಲನೆಗೆ ಕಾರ್ಮಿಕ ಇಲಾಖೆಯ ವತಿಯಿಂದ ಕೈಗೊಳ್ಳಲಾಗುತ್ತಿರುವ ಕ್ರಮಗಳು

- ಬಾಲ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ರ ಅನ್ವಯ 14 ವರ್ಷದೊಳಗಿನ ಮಕ್ಕಳನ್ನು ಕೆಲಸಕ್ಕೆ ನಿಯೋಜಿಸಿಕೊಳ್ಳುವುದು ಹಾಗೂ 18 ವರ್ಷದೊಳಗಿನ ಕಿಶೋರರನ್ನು ಅಪಾಯಕಾರಿ ಉದ್ದಿಮೆಗಳಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳುವುದು ಶಿಕ್ಷಾರ್ಹ ಅಪರಾಧವಾಗಿದೆ.
- ಬಾಲ ಹಾಗೂ ಕಿಶೋರ ಕಾರ್ಮಿಕರನ್ನು ಕೆಲಸಕ್ಕೆ ನಿಯೋಜಿಸಿಕೊಂಡಲ್ಲಿ ಅಂತಹ ಮೊದಲ ಅಪರಾಧಕ್ಕೆ ಮಾಲೀಕರಿಗೆ 06 ತಿಂಗಳಿಂದ 02 ವರ್ಷಗಳವರೆಗೆ ಜೈಲು ಶಿಕ್ಷೆ ಅಥವಾ ರೂ. 20,000/– ರಿಂದ ರೂ. 50,000/– ಗಳವರೆಗೆ ದಂಡ ಅಥವಾ ಎರಡೂ ಹಾಗೂ ಪುನರಾವರ್ತಿತ ಅಪರಾಧಕ್ಕೆ 01 ವರ್ಷದಿಂದ 03 ವರ್ಷಗಳವರೆಗೆ ಜೈಲು ಶಿಕ್ಷೆ.
- ಮಕ್ಕಳನ್ನು ಕೆಲಸಕ್ಕೆ ದೂಡುವ ಪೋಷಕರಿಗೂ ಸಹ ಶಿಕ್ಷಾ ಪ್ರಾವಧಾನವಿದ್ದು, ಪುನರಾವರ್ತಿತ ಅಪರಾಧಕ್ಕೆ ರೂ. 10,000/–ಗಳ ದಂಡ.
- ಬಾಲ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ರ ಪರಿಣಾಮಕಾರಿ ಅನುಷ್ಠಾನ.
- ಪ್ರತಿ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಗಳನ್ನು ಸ್ಥಾಪಿಸಲಾಗಿದೆ.
- ಕಟ್ಟಡ ನಿರ್ಮಾಣ ಸ್ಥಳಗಳಲ್ಲಿ ಬಾಲ ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಳ್ಳದಂತೆ ಕ್ರಮ ಕೈಗೊಳ್ಳಲಾಗಿದ್ದು ನಿರಂತರ ಪರಿಶೀಲನೆಯನ್ನು ನಡೆಸಲಾಗುತ್ತಿದೆ.
- ಬಾಲ ಕಾರ್ಮಿಕ ನಿರ್ಮೂಲನೆಯ ಉದ್ದೇಶದಿಂದ ಕಟ್ಟಡ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕಾಗಿ ವಿದ್ಯಾರ್ಥಿವೇತನವನ್ನು ನೀಡಲಾಗುತ್ತಿದೆ.
- ತಪ್ಪಿತಸ್ಥ ಮಾಲೀಕರು ತಾವು ನಿಯೋಜಿಸಿಕೊಂಡ ಪ್ರತಿ ಮಗುವಿಗೆ ರೂ. 20,000/– ಗಳಂತೆ ಮಕ್ಕಳ ಪುನರ್ವಸತಿಗೆ ರಚಿಸಲಾದ ಕಲ್ಯಾಣ ನಿಧಿಗೆ ಪಾವತಿಸಬೇಕಾಗುತ್ತದೆ. ಸರ್ಕಾರದ ವತಿಯಿಂದ ಪ್ರತಿ ಮಗುವಿಗೆ ರೂ. 15,000/–ಗಳ ಸಮಾನಾಂತರ ವಂತಿಕೆಯನ್ನು ನಿಧಿಗೆ ಪಾವತಿಸಲಾಗುತ್ತದೆ.

ಮಕ್ಕಳ ದುಡಿಮೆ ತಡೆಯೋಣ– ಸದೃಢ ಭವಿಷ್ಯ ರೂಪಿಸೋಣ

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಹಾಗೂ ಮಾನ್ಯ ಕಾರ್ಮಿಕ ಸಚಿವರು ಮತ್ತು ಮಂಡಳಿಯ ಅಧ್ಯಕ್ಷರಾದ ಶ್ರೀ ಸಂತೋಷ್ ಎಸ್. ಲಾಡ್ ರವರು ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆಯ ಸಂದರ್ಭದಲ್ಲಿ ಮಕ್ಕಳೊಂದಿಗಿರುವ ಸಾಂದರ್ಭಿಕ ಚಿತ್ರ.

ಜಾಥಾ ಕಾರ್ಯಕ್ರಮ
ದಿನಾಂಕ : 12ನೇ ಜೂನ್ 2024, ಬೆಳಗ್ಗೆ 8.30 ಗಂಟೆಗೆ
ಸ್ಥಳ : ಎಂ. ಜಿ. ರಸ್ತೆಯ ಗಾಂಧಿ ಪ್ರತಿಮೆಯಿಂದ ಕೆ.ಆರ್. ವೃತ್ತದವರೆಗೆ

ಜಾಥಾಗೆ ಚಾಲನೆ
ಶ್ರೀ ಸಂತೋಷ್ ಎಸ್. ಲಾಡ್
ಮಾನ್ಯ ಕಾರ್ಮಿಕ ಸಚಿವರು ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರು ಕರ್ನಾಟಕ ಸರ್ಕಾರ

ಘನ ಉಪಸ್ಥಿತಿ
ಶ್ರೀ ಪಿ.ಸಿ. ಮೋಹನ್
ಮಾನ್ಯ ಸಂಸದರು, ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರ
ಶ್ರೀ ಎನ್. ಎ. ಹ್ಯಾರಿಸ್
ಮಾನ್ಯ ಶಾಸಕರು, ಶಾಂತಿನಗರ ವಿಧಾನಸಭಾ ಕ್ಷೇತ್ರ

ವಿಶೇಷ ಆಹ್ವಾನಿತರು
ರಾಗಿಣಿ ದ್ವಿವೇದಿ
ಖ್ಯಾತ ಚಲನಚಿತ್ರ ನಟಿ

ಅಂತರ್ಜಾಲ ವ್ಯವಸ್ಥೆ: https://pencil.gov.in/
https://ncpcr.gov.in/user.complaints.php / ksclep@gmail.com

ಸಹಾಯ ವಾಣಿಗಳು:
ಮಕ್ಕಳ ಸಹಾಯವಾಣಿ–1098
ಕಾರ್ಮಿಕರ ಸಹಾಯವಾಣಿ–155214
ಪೊಲೀಸ್ ಸಹಾಯವಾಣಿ–112

ಡಾ. ಹೆಚ್.ಎನ್. ಗೋಪಾಲಕೃಷ್ಣ ಭಾ.ಆ.ಸೇ ಆಯುಕ್ತರು, ಕಾರ್ಮಿಕ ಇಲಾಖೆ
ಶ್ರೀಮತಿ ಭಾರತಿ ಡಿ. ಭಾ.ಆ.ಸೇ ಸಿಇಒ, ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ
ಶ್ರೀ ಮೊಹಮ್ಮದ್ ಮೊಹಸಿನ್ ಭಾ.ಆ.ಸೇ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಕಾರ್ಮಿಕ ಇಲಾಖೆ

ಎಲ್ಲ ವ್ಯಕ್ತಿಗಳ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ಉನ್ನತಿಯನ್ನು ಸಾಧಿಸಲು ನಿರಂತರ ‘ಪ್ರಯತ್ನಿಸಿ ಶ್ರಮಿಸುವುದು’ – ಪ್ರತಿಯೊಬ್ಬ ಭಾರತೀಯನ ಸಂವಿಧಾನದ ಮೂಲಭೂತ ಕರ್ತವ್ಯ.

ಎಐ- ಬಿ.ಟೆಕ್ ಕೋರ್ಸ್ ಆರಂಭ

ನವದೆಹಲಿ (ಪಿಟಿಐ): ಮದ್ರಾಸ್ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ) 2024-25ರ ಶೈಕ್ಷಣಿಕ ವರ್ಷದಿಂದ ಕೃತಕ ಬುದ್ಧಿಮತ್ತೆ (ಎಐ) ಮತ್ತು ದತ್ತಾಂಶ ವಿಶ್ಲೇಷಣೆ ಕುರಿತ ಬಿ.ಟೆಕ್ ಕೋರ್ಸ್ ಅನ್ನು ಪ್ರಾರಂಭಿಸಿದೆ. ಈ ಕೋರ್ಸ್‌ನಲ್ಲಿ 50 ಸೀಟುಗಳು ಲಭ್ಯವಿದ್ದು, ಜಂಟಿ ಪ್ರವೇಶ ಪರೀಕ್ಷೆ (ಜೆಇಇ) ಮೂಲಕ ಪ್ರವೇಶ ಒದಗಿಸಲಾಗುವುದು ಎಂದು ಐಐಟಿ ಮದ್ರಾಸ್ ನಿರ್ದೇಶಕ ವಿ. ಕಾಮಕೋಟಿ ತಿಳಿಸಿದ್ದಾರೆ.

टीआईएफआर–अनुप्रयुक्त गणित केन्द्र, बैंगलुरु–560065, भारत
TIFR CENTRE FOR APPLICABLE MATHEMATICS, Bengaluru-560065, India
टाटा मूलभूत अनुसंधान संस्थान
TATA INSTITUTE OF FUNDAMENTAL RESEARCH
(भारत सरकार के परमाणु ऊर्जा विभाग की स्वायत्त संस्थान एवं सम विश्वविद्यालय)
(An Autonomous Institution under the Department of Atomic Energy, Government of India and Deemed-to-be-University)

Advt. No. 1/2024

TIFR Center for Applicable Mathematics, Bangalore, one of the units of Tata Institute of Fundamental Research, an autonomous organization under the Department of Atomic Energy, Govt. Of India and a Deemed University, invites **online applications** from Indian Nationals for the following positions on regular basis.

a. Scientific Assistant B - One post Unreserved
b. Administrative Assistant B - One post Reserved for PwBD
c. Work Assistant - One post Reserved for PwBD
d. Work Assistant - One post Reserved for OBC

Relaxation in upper age limit will be as per rules. For further details with regard to educational qualification, experience, relaxation of age, general information etc., please visit **https://math.tifrbng.res.in.** Last date for submission of application on line is **15th July 2024**

ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ದಿಮೆ)
4ನೇ ಮಹಡಿ, ಟಿಟಿಎಂಸಿ ಕಟ್ಟಡ, "ಎ"ಬ್ಲಾಕ್, ಬಿಎಂಟಿಸಿ ಕಟ್ಟಡ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು – 560 027. ಫೋನ್: 22483636/38/39

ಸಂಖ್ಯೆ. ಕ.ರಾ.ಪಾ.ನಿ.ನಿ/ಇ–6552/ಆಡಳಿತ/ಡಿ.ಜಿ/2024–25 ದಿನಾಂಕ: 11.06.2024

ಇ–ಟೆಂಡರ್ ಪ್ರಕಟಣೆ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತವು (ಕೆ.ಎಸ್.ಬಿ.ಸಿ.ಎಲ್) **ಡಿಸೇಲ್ ಜನರೇಟರ್ ಗಳ ಉತ್ಪಾದಕರು/ಅಧಿಕೃತ ಮಾರಾಟದಾರರಿಂದ ಕರ್ನಾಟಕದಾದ್ಯಂತ 21 ಮದ್ಯಮಳಿಗೆಗಳಿಗೆ 5 ಕೆವಿಎ/7.5 ಕೆವಿಎ/10 ಕೆವಿಎ ಡಿಸೇಲ್ ಜನರೇಟರ್ ಗಳನ್ನು ಬೈ–ಬ್ಯಾಕ್ ಆಧಾರದ ಮೇಲೆ ಖರೀದಿಸಲು** ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ ಕಾಯ್ದೆ 1999 ನಿಯಮ 2000 ರಡಿ ಕೆಪಿಪಿ ಪೋರ್ಟಲ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಿದೆ. ಇ–ಟೆಂಡರ್ ವೇಳಾಪಟ್ಟಿ ಈ ಕೆಳಗಿನಂತಿರುತ್ತದೆ.

1) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ ಮತ್ತು ಸಮಯ: 24.06.2024ರ ಸಂಜೆ 5:30 ಗಂಟೆಯವರೆಗೆ.** 2) ತಾಂತ್ರಿಕ ಬಿಡ್ ತೆರೆಯವ **ದಿನಾಂಕ ಮತ್ತು ಸಮಯ: 26.06.2024ರ ಬೆಳಿಗ್ಗೆ 11:30 ಗಂಟೆಗೆ.** 3) ಆರ್ಥಿಕ ಬಿಡ್ ತೆರೆಯವ **ದಿನಾಂಕ ಮತ್ತು ಸಮಯ: 27.06.2024ರ ಬೆಳಿಗ್ಗೆ 11:30 ಗಂಟೆಗೆ.**

ಹೆಚ್ಚಿನ ಮಾಹಿತಿಗೆ ವೆಬ್‌ಸೈಟ್ : www.kppp.karnataka.gov.in or **www.ksbcl.com** ಭೇಟಿ ನೀಡಿ ಪಡೆಯಬಹುದು.

ಸಹಿ/–
ವಾಸಾಸಂಇ/ವಾಪ್ರ/ಜಿಎ/264/2024–25 ಕಾರ್ಯನಿರ್ವಾಹಕ ನಿರ್ದೇಶಕರು (ಹ & ಆ)

ಕರ್ನಾಟಕ ಗೃಹ ಮಂಡಳಿ
Karnataka Housing Board Building Communities
ಹಂಚಿಕೆ ವಿಭಾಗ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560 009.

ಸಂಖ್ಯೆ: ಕಗೃಮಂ/ಕಾ/ಹಂಚಿಕೆ/ಪ.ಪ್ರ/2024–25 ದಿನಾಂಕ: 10–06–2024

ಕಾಲಾವಕಾಶ ವಿಸ್ತರಣೆ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು ಕಲಬುರಗಿ ಜಿಲ್ಲೆ, ಕಲಬುರಗಿ ತಾಲ್ಲೂಕು ಮತ್ತು ಹೋಬಳಿ, ತಾವರಗೆರೆ ಗ್ರಾಮದ ಸರ್ವೆ ನಂ.106/5, 105/7, 106/10 ಮತ್ತು ಇತರೆ ಸರ್ವೆ ನಂಬರ್‌ಗಳ ಜಮೀನುಗಳ ಸುಮಾರು 286 ಎಕರೆ 28 ಗುಂಟೆ ಜಮೀನಿನಲ್ಲಿ 50:50/60:40ರ ಅನುಪಾತದಲ್ಲಿ ಎಲ್ಲಾ ಮೂಲಭೂತ ಸೌಲಭ್ಯಗಳನ್ನೊಳಗೊಂಡ ವಸತಿ ಯೋಜನೆಯನ್ನು ಹಮ್ಮಿಕೊಳ್ಳಲು ಉದ್ದೇಶಿಸಿ **ದಿನಾಂಕ: 07–03–2024** ರಂದು ಪ್ರಜಾವಾಣಿ ಮತ್ತು ಕನ್ನಡಪ್ರಭ ದಿನಪತ್ರಿಕೆಗಳಲ್ಲಿ ಬೇಡಿಕೆ ಸಮೀಕ್ಷೆಯಡಿ ಅರ್ಜಿಗಳನ್ನು ಆಹ್ವಾನಿಸಿದ್ದು, ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 10–04–2024** ರಂದು ನಿಗಧಿಪಡಿಸಲಾಗಿತ್ತು. 2024ರ ಲೋಕಸಭಾ ಚುನಾವಣೆ ನಿಮಿತ್ತ ನೀತಿ ಸಂಹಿತೆ ಜಾರಿಯಲ್ಲಿದ್ದ ಕಾರಣ, ಸಾರ್ವಜನಿಕರ ಹಿತದೃಷ್ಟಿಯಿಂದ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕವನ್ನು 15–06–2024** ರವರೆಗೆ ವಿಸ್ತರಿಸಲಾಗಿರುತ್ತದೆ. ಉಳಿದಂತೆ **ದಿನಾಂಕ 07–03–2024** ರಂದು ಮಂಡಳಿಯಿಂದ ನೀಡಿರುವ ಪತ್ರಿಕಾ ಪ್ರಕಟಣೆಯಲ್ಲಿ ನಮೂದಿಸಿರುವ ನಿಯಮ ಮತ್ತು ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/– ಗೃಹ ಆಯುಕ್ತರು,
DIPR/CP/RO271/AAPL/2024-25 ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.

ಕೆ.ಎಂ.ಎಫ್ **ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ**
ಕಹಾಮ ಸಂಕೀರ್ಣ, ಡಾ: ಎಂ.ಹೆಚ್. ಮರೀಗೌಡ ರಸ್ತೆ ಬೆಂಗಳೂರು–560 029
ಫೋನ್: 26096832/26096910 ಇ–ಮೇಲ್: purchase@kmf.coop

ಅಧಿಸೂಚನೆ ಸಂಖ್ಯೆ: ಕಹಾಮ/ಖರೀದಿ/ಟೆಂಡರ್–639/2023–24/CALL-2 ದಿನಾಂಕ: 12.06.2024

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ಸಹಕಾರ ಹಾಲು ಮಹಾಮಂಡಳ, ಬೆಂಗಳೂರು ಈ ಕೆಳಕಂಡ ವಿವರಗಳನ್ವಯ ಸೇವಾದಾರರನ್ನು ಗುರುತಿಸಲು ಆಸಕ್ತಿಯುಳ್ಳ ಸಂಸ್ಥೆದಾರರಿಂದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್‌ಜಾಲದ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ http://kppp.karnataka.gov.inಗೆ ಬೇಟಿ ನೀಡಿ ಪಡೆಯಬಹುದಾಗಿದೆ.

Sl. No.	Name of the Item	Quantity	EMD (Rs.)
1	Manufacturing and supply of Dosa & Idli Batter under Nandini brand including storage, Marketing, distribution till retailers for a period of two years.	As detailed in tender document	1,41,000/-

ಟೆಂಡರ್ ಪ್ರಾರಂಭವಾಗುವ ದಿನಾಂಕ: 12.06.2024 ರಿಂದ. ಟೆಂಡರ್ ಪೂರ್ವಭಾವಿ ಸಭೆ ದಿನಾಂಕ : 19.06.2024 ರಂದು ಬೆಳಿಗ್ಗೆ 11.00 ಗಂಟೆಗೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 26.06.2024 ರ ಸಂಜೆ 5.00 ಗಂಟೆ ಒಳಗಾಗಿ. ತಾಂತ್ರಿಕ ಟೆಂಡರ್ ತೆರಯುವ ದಿನಾಂಕ : 28.06.2024 ರಂದು ಬೆಳಿಗ್ಗೆ 11.00 ಗಂಟೆಗೆ. ವಾಣಿಜ್ಯ ಟೆಂಡರ್ ತೆರಯುವ ದಿನಾಂಕ : ತಾಂತ್ರಿಕ ದಾಖಲಾತಿಗಳ ಪರಿಶೀಲನೆಯ ನಂತರ. ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಖರೀದಿ)

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ದಾವಣಗೆರೆ ವಿಭಾಗ, ದಾವಣಗೆರೆ

ಸಂ: ಕರಾಸಾ/ದಾವಿ/ಸಂಚಾರ/ವಾಣಿಜ್ಯ/694/2024–25 ದಿನಾಂಕ:10.06.2024

ಇ–ಟೆಂಡರ್/ಸಂಧಾನ ಪ್ರಕಟಣೆ ಸಂಖ್ಯೆ:02/2024–25
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ದಾವಣಗೆರೆ ವಿಭಾಗದ ವ್ಯಾಪ್ತಿಗೆ ಬರುವ ಸ್ಮಾರ್ಟ್ ಸಿಟಿ ಅಡಿಯಲ್ಲಿ ನೂತನವಾಗಿ ನಿರ್ಮಾಣವಾಗಿರುವ ಬಸ್ ನಿಲ್ದಾಣದ Xerox ಮಳಿಗೆ ಸಂಖ್ಯೆ–12ಎ(ಅಂಗವಿಕಲರಿಗೆ), ಔಷಧಿ ಮಳಿಗೆ ಸಂಖ್ಯೆ–15, Pizza Burger Corner ಮಳಿಗೆ ಸಂಖ್ಯೆ–16, ಮತ್ತು two and four wheeler parking ಮಳಿಗೆ ಸಂಖ್ಯೆ–20 (Part-C) ಹಾಗೂ ಬೇತೂರು ರಸ್ತೆಯಲ್ಲಿರುವ ಬಸ್ ನಿಲ್ದಾಣದ ಜನರಲ್ ಮಳಿಗೆ ಸಂಖ್ಯೆ–2, ಉಪಹಾರ ಗೃಹ ಮಳಿಗೆ ಸಂಖ್ಯೆ–7, ಜನರಲ್ ಮಳಿಗೆ ಸಂಖ್ಯೆ–9 ಮತ್ತು ದ್ವಿಚಕ್ರ ವಾಹನ ಮತ್ತು ನಾಲ್ಕು ಚಕ್ರ ನಿಲ್ದಾಣ ಮಳಿಗೆ ಸಂಖ್ಯೆ–11 ಇವುಗಳಿಗೆ ಪರವಾನಗಿದಾರರನ್ನು ಆಯ್ಕೆ ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಮಲೆಬೆನ್ನೂರು ಬಸ್ ನಿಲ್ದಾಣದ ಜನರಲ್ ಮಳಿಗೆ ಸಂಖ್ಯೆ–1 ಕ್ಕೆ ಪರವಾನಗಿದಾರರನ್ನು ಆಯ್ಕೆ ಮಾಡಲು ಸಂಧಾನ ಮೂಲಕ (ಮಾತುಕತೆ ಮೂಲಕ) ಅರ್ಜಿ ಆಹ್ವಾನಿಸಲಾಗಿದೆ.

ಸದರಿ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in** ಹಾಗೂ ನಿಗಮದ ವೆಬ್‌ಸೈಟ್ **https://ksrtc.karnataka.gov.in** ನಲ್ಲಿ ದಿನಾಂಕ **10.06.2024** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : **29.06.2024 ರ ಸಂಜೆ 5.00** ಗಂಟೆಯುವರೆಗೆ. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ದಾವಣಗೆರೆ ವಿಭಾಗ – 577002 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಂಪರ್ಕಿಸುವ ದೂರವಾಣಿ ಸಂಖ್ಯೆ :
ವಿಭಾಗೀಯ ಸಂಚಾರ ಅಧಿಕಾರಿ : **7760990452.**
ಸಹಾಯಕ ಸಂಚಾರ ಅಧೀಕ್ಷಕರು : **7022030183.**

ಸಹಿ/–
ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ
ವಾಸಾಸಂಇ/ವಾಪ್ರ/ಜಿಎ/246/2024–25 ಕ.ರಾ.ರ.ಸಾ. ನಿಗಮ, ದಾವಣಗೆರೆ ವಿಭಾಗ

ಸಹಕಾರ ಸಚಿವ ಕೆ.ಎನ್.ರಾಜಣ್ಣ ಒತ್ತಾಯ

'ಮೂವರು ಡಿಸಿಎಂ ಬೇಕು'

ಪ್ರಜಾವಾಣಿ ವಾರ್ತೆ

ತುಮಕೂರು: ಈವರೆಗೆ ತಣ್ಣಗಾಗಿದ್ದ ಮೂವರು ಉಪ ಮುಖ್ಯಮಂತ್ರಿಗಳ ನೇಮಕ ವಿಚಾರ ಲೋಕಸಭೆ ಚುನಾವಣೆ ನಂತರ ಮತ್ತೆ ಮುನ್ನೆಲೆಗೆ ಬಂದಿದೆ. ಮೂವರು ಡಿಸಿಎಂ ನೇಮಕ ಮಾಡುವಂತೆ ಸಹಕಾರ ಸಚಿವ ಕೆ.ಎನ್. ರಾಜಣ್ಣ ಮಂಗಳವಾರ ಮತ್ತೊಮ್ಮೆ ಒತ್ತಾಯಿಸಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮುಂದಿನ ದಿನಗಳಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ಬರಲಿದೆ. ಮೂವರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಿದರೆ ಪಕ್ಷಕ್ಕೆ ಅನುಕೂಲವಾಗಲಿದೆ' ಎಂದು ತಮ್ಮ ಬೇಡಿಕೆಗೆ ಸಮರ್ಥನೆ ನೀಡಿದರು.

ಲೋಕಸಭೆ ಚುನಾವಣೆ ಮುಗಿಯುವವರೆಗೂ ಉಪ ಮುಖ್ಯಮಂತ್ರಿ ವಿಚಾರ ಮಾತನಾಡದೆ ಸುಮ್ಮನಿರುವಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದರು.

ಹಾಗಾಗಿ ಸುಮ್ಮನಿದ್ದೆ. ಖರ್ಗೆ ಅವರನ್ನು ಖುದ್ದಾಗಿ ಭೇಟಿ ಮಾಡಿ ಈ ವಿಚಾರ ಚರ್ಚಿಸಲಾಗುವುದು ಎಂದರು.

'ಮಲ್ಲಿಕಾರ್ಜುನ ಖರ್ಗೆ ರಾಜ್ಯ ರಾಜಕಾರಣಕ್ಕೆ ಮರಳಲಿದ್ದು ಮುಂದಿನ ದಿನಗಳಲ್ಲಿ ಮುಖ್ಯಮಂತ್ರಿ ಆಗಲಿದ್ದಾರೆ' ಎಂಬ ಸುದ್ದಿಗೆ ಪ್ರತಿಕ್ರಿಯಿಸಿದ ಅವರು, 'ಮುಖ್ಯಮಂತ್ರಿ ಆಗುವುದಿದ್ದರೆ ಬಹಳ ಹಿಂದೆಯೇ ಆಗಬೇಕಿತ್ತು. ಈಗ ಅಂತಹ ಸಾಧ್ಯತೆಗಳಿಲ್ಲ. ಡಿ.ಕೆ.ಶಿವಕುಮಾರ್ ಸಹ ಮುಖ್ಯಮಂತ್ರಿಯಾಗಲು ಕುರ್ಚಿ ಖಾಲಿ ಇಲ್ಲ. ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದಾರೆ' ಎಂದರು.

'ಹಾಸನ ಜಿಲ್ಲಾ ಉಸ್ತುವಾರಿ ಸಚಿವ ಸ್ಥಾನದಿಂದ ಬದಲಾವಣೆ ಮಾಡಿದರೆ ಅಭ್ಯಂತರವಿಲ್ಲ. ಉಸ್ತುವಾರಿ ಮಾಡುವಂತೆ ನಾನು ಕೇಳಿರಲಿಲ್ಲ. ಬೇಕಿದ್ದರೆ ಬದಲಾವಣೆ ಮಾಡಿಕೊಳ್ಳಲಿ' ಎಂದರು.

ಗ್ಯಾರಂಟಿ ಯೋಜನೆ ನಿಲ್ಲಲ್ಲ: ಪೊನ್ನಣ್ಣ

ವಿರಾಜಪೇಟೆ: 'ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಪಡೆದಿರುವ ಮತದ ಪ್ರಮಾಣ ಶೇ44.6ಕ್ಕೆ ಏರಿಕೆಯಾಗಿದ್ದು, ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು ಯಶಸ್ವಿಯಾಗಿವೆ ಎಂಬುದಕ್ಕೆ ಇದೇ ಸಾಕ್ಷಿ. ಯಾವುದೇ ಕಾರಣಕ್ಕೂ ಯೋಜನೆಗಳು ಸ್ಥಗಿತಗೊಳಿಸುವುದಿಲ್ಲ' ಎಂದು ಮುಖ್ಯಮಂತ್ರಿ ಕಾನೂನು ಸಲಹೆಗಾರ ಹಾಗೂ ಶಾಸಕ ಎ.ಎಸ್. ಪೊನ್ನಣ್ಣ ಭರವಸೆ ನೀಡಿದರು. ಪಟ್ಟಣದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಹಿಂದಿನ ಚುನಾವಣೆಯಲ್ಲಿ ಶೇ 32ರಷ್ಟು ಮತಗಳು ಬಂದಿದ್ದವು. ಈಗ ಹೆಚ್ಚಾಗಿದೆ. ಹೀಗಾಗಿ ಲೋಪದೋಷವಿದ್ದರೆ ಸರಿಪಡಿಸಿ ಯೋಜನೆಗಳನ್ನು ಮುಂದುವರಿಸಲಾಗುವುದು' ಎಂದರು.

ವೀರಶೈವ ಮಹಾಸಭಾಕ್ಕೆ ಚುನಾವಣೆ ನಿಗದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ಸ್ಥಾನಕ್ಕೆ ಆ.29ಕ್ಕೆ ಚುನಾವಣೆ ನಡೆಯಲಿದ್ದು, ವೇಳಾಪಟ್ಟಿ ಪ್ರಕಟಿಸಲಾಗಿದೆ.

ಜುಲೈ 21ರಂದು ತಾಲ್ಲೂಕು, ಮಹಾನಗರ, ಜಿಲ್ಲಾ ಘಟಕಗಳ ಅಧ್ಯಕ್ಷರು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರ ಚುನಾವಣೆ, ಆ.25ರಂದು ರಾಜ್ಯ ಘಟಕಗಳ ಅಧ್ಯಕ್ಷರು, ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಮಹಾಸಭಾದ ಕಾರ್ಯಕಾರಿ ಸಮಿತಿ ಸದಸ್ಯರ ಆಯ್ಕೆಗೆ ಚುನಾವಣೆ ನಡೆಯಲಿದೆ.

ಮತದಾರರ ಪಟ್ಟಿಯನ್ನು ಜೂನ್ 20ರಂದು ಪ್ರಕಟಿಸಲಾಗುತ್ತದೆ. ಮೂರು ಹಂತಗಳಲ್ಲಿ ನಡೆಯುವ ಚುನಾವಣೆಗೆ ಮೊದಲ ಹಂತದ ನಾಮಪತ್ರ ಸಲ್ಲಿಸುವ ಪ್ರಕ್ರಿಯೆ ಜೂನ್ 27ರಿಂದ ಆರಂಭವಾಗಲಿದೆ.

ಸೆ.29ರಂದು ಎಲ್ಲ ಪ್ರಕ್ರಿಯೆಗಳು ಪೂರ್ಣಗೊಳ್ಳಲಿವೆ. ಆಯ್ಕೆಯಾಗುವ ಹೊಸ ಸಮಿತಿಗಳು 2024-2025ನೇ ಸಾಲಿನಿಂದ 2028-2029ರ ಅವಧಿಗೆ ಕಾರ್ಯನಿರ್ವಹಿಸಲಿವೆ ಎಂದು ಚುನಾವಣಾಧಿಕಾರಿಯಾಗಿ ನೇಮಕಗೊಂಡಿರುವ ನಿವೃತ್ತ ಐಎಎಸ್ ಅಧಿಕಾರಿ ಎಂ.ಬಿ. ದ್ಯಾಬೇರಿ ಅವರು ತಿಳಿಸಿದ್ದಾರೆ.

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
An ISO-9001:2015 & 14001:2015 Company
ಶ್ರೀಗಂಧ ನಗರ: ಅಂಚೆ ಪೆಟ್ಟಿಗೆ ಸಂಖ್ಯೆ: 5531, ಬೆಂಗಳೂರು–ಪುಣೆ ಹೆದ್ದಾರಿ, ಬೆಂಗಳೂರು–560 055,
ದೂರವಾಣಿ ಸಂಖ್ಯೆ: 080–22164879, 22164886 ಜಾಲತಾಣ: www.mysoresandal.org ಇ–ಮೇಲ್: ksdl.dgmmtls@gmail.com
ದಿನಾಂಕ: 11.06.2024

ಟೆಂಡರ್ ಪ್ರಕಟಣೆ

ಕೆಎಸ್&ಡಿಎಲ್ ಸಂಸ್ಥೆಗೆ ಈ ಕೆಳಕಂಡ ಸರಕು/ಸೇವೆ/ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಖರೀದಿಗಳ ಪೋರ್ಟಲ್ ಜಾಲತಾಣ (**https://kppp.karnataka.gov.in**) ದ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಟೆಂಡರ್ ಸಂಖ್ಯೆ	ಟೆಂಡರ್ ಹೆಸರು	ಸಂಖ್ಯೆ	ಪ್ರಕಟಣೆ ದಿನಾಂಕ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ
1	KSDL/2024-25/IND0401	ಮೆಟಾ ಪ್ಯಾರಾ ಕ್ರೆಸೋಲ್ (Meta Para Cresol) ನ ಖರೀದಿ	1000 ಕೆ.ಜಿ.	07.06.2024	21.06.2024
2	KSDL/2024-25/IND0400	ಸ್ಟ್ಯಾಂಪಿಂಗ್ ಯಂತ್ರದ ಬಿಡಿಭಾಗಗಳ ಖರೀದಿ (ಲೈನ್ ನಂ. 02 ರಿಂದ 09)	ಸರಕು	08.06.2024	24.06.2024
3	KSDL/2024-25/SE0082	ಶ್ರೀಗಂಧದೆಣ್ಣೆ ವಿಭಾಗ, ಮೈಸೂರು ಕಾರ್ಖಾನೆ ಆವರಣದಲ್ಲಿ 1 ವರ್ಷದ ಅವಧಿಗೆ ಸಂಪೂರ್ಣವಾಗಿ ಜಾಬ್ ವರ್ಕ್ ಆಧಾರದ ಮೇಲೆ ಮೈಸೂರು ಸ್ಯಾಂಡಲ್/ಜಾಸ್ಮಿನ್ ಧೂಪ್ ಕೋನ್‌ಗಳ ಪ್ಯಾಕಿಂಗ್	ಸೇವೆಗಳು	10.06.2024	27.06.2024

ಯಾವುದೇ ಹೆಚ್ಚಿನ ವಿಚಾರಣೆ/ಸ್ಪಷ್ಟೀಕರಣಕ್ಕೆ ಕೆಳಕಂಡ ಸಹಿದಾರರನ್ನು ಸಂಪರ್ಕಿಸಬಹುದು.

ಸಹಿ/- ಸ.ಪ್ರ.ವ್ಯ.(ಸಾಮಗ್ರಿ)

ಮಹಾನಗರ ಪಾಲಿಕೆ, ಕಲಬುರಗಿ
ದೂ.: 08472/ 278675 ಫ್ಯಾಕ್ಸ್ : 08472 / 260776 ಇ ಮೇಲ್– itstaff_ulb_gulbarga@yahoo.com

No: KMP/EE/TS-02/NMPC/15th FC/05/2024-25 ದಿನಾಂಕ: 11.06.2024

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಅಲ್ಪಾವಧಿ ಟೆಂಡರ್ ಪ್ರಕಟಣೆ

1) ಕಾಮಗಾರಿಯ ವಿವರ : ಕಲಬುರಗಿ ಮಹಾನಗರ ಪಾಲಿಕೆಯಿಂದ 2021–22ನೇ ಸಾಲಿನ Million Plus city (BBMP) ಗೆ ಹಂಚಿಕೆಯಾದ 15ನೇ ಹಣಕಾಸು ಆಯೋಗದ ಅನುದಾನವನ್ನು Non-Million Plus city ಗಳಿಗೆ ಮರು ಹಂಚಿಕೆ ಮಾಡಿ ಬಿಡುಗಡೆಗೊಳಿಸಿರುವ ಅನುದಾನದಲ್ಲಿ ಹಾಗೂ 2023–24ನೇ ಸಾಲಿನ 15ನೇ ಹಣಕಾಸು ಅನುಮೋದನೆಗೊಂಡ ಒಟ್ಟು (05) ಕಾಮಗಾರಿಗಳಿಗೆ ಕೆ.ಪಿ.ಪಿ. ಪ್ರೋರ್ಟಲ್–2.0 ನಲ್ಲಿ ಕೆ.ಟಿ.ಪಿ.ಪಿ ರ ಪ್ರಕಾರ ಕೆ.ಡಬ್ಲ್ಯೂ–1 & 2 ರ ಮೂಲಕ 7 ದಿನಗಳ ಅಲ್ಪಾವಧಿ ಟೆಂಡರ್‌ನ್ನು ದ್ವಿ ಲಕೋಟೆಯಲ್ಲಿ (Two Cover) ಟೆಂಡರವನ್ನು ಕರೆಯಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಅಥವಾ ಯಾವುದೇ ತರಹದ ಬದಲಾವಣೆಯನ್ನು www.kppp.karnataka.gov.in ಮುಖಾಂತರ ಪಡೆದುಕೊಳ್ಳಬಹುದು. 2) ಪ್ರತಿ ಕಾಮಗಾರಿ ಅಂದಾಜು ಕನಿಷ್ಠ ಮೊತ್ತ **ರೂ. 10.00 ಲಕ್ಷಗಳು ಹಾಗೂ ಗರಿಷ್ಠ ಮೊತ್ತ ರೂ. 79.10 ಲಕ್ಷಗಳು.** 3) ಗುತ್ತಿಗೆದಾರರ ಅರ್ಹತೆ ವಿವರಃ 4ನೇ ದರ್ಜೆ ಹಾಗೂ 3ನೇ ದರ್ಜೆ ಗಿಂತ ಹೆಚ್ಚು, 4) ಟೆಂಡರ ಅರ್ಜಿಯ ಬೆಲೆ ರೂ. ಕೆ.ಪಿ.ಪಿ.ಪಿ ಪ್ರೋರ್ಟಲ್–2.0 ನ ಪ್ರತಿ ಕಾಮಗಾರಿಗೆ ಮತ್ತು ಇ.ಎಂ.ಡಿ. ಕನಿಷ್ಠ ರೂ. 25,000.00 ಗಳು ಹಾಗೂ ಗರಿಷ್ಠ ರೂ. 1,03,000.00 ಗಳು. 5) ಪೂರ್ವಭಾವಿ ಸಭೆ ದಿನಾಂಕ: **19.06.2024 ರಂದು ಬೆಳಿಗ್ಗೆ 11:00 ಗಂಟೆಗೆ.** 6) ಬಿಡ್ ಸಲ್ಲಿಸುವ ಕೊನೆಯ ದಿನಾಂಕ: **19.06.2024 ರಂದು ಸಾಯಂಕಾಲ 4:30 ಗಂಟೆಗೆ.** 7) ತಾಂತ್ರಿಕ ಬಿಡ್ ತೆರೆಯುವ ಕೊನೆಯ ದಿನಾಂಕ: **20.06.2024 ರಂದು ಸಾಯಂಕಾಲ 04:35 ಗಂಟೆಗೆ.** 8) ಆರ್ಥಿಕ ಬಿಡ್ ತೆರೆಯುವ ದಿನಾಂಕ: **21.06.2024 ರಂದು ಬೆಳಿಗ್ಗೆ 11:30 ಗಂಟೆಗೆ** ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ www.kppp.karnataka.gov.in ಮುಖಾಂತರ ಪಡೆದುಕೊಳ್ಳಬಹುದು. 9) ಹೆಚ್ಚಿನ ವಿವರಗಳಿಗೆ : ಕಾರ್ಯಾಪಾಲಕ ಅಭಿಯಂತರರು, ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿರವರನ್ನು ಸಂಪರ್ಕಿಸಬಹುದಾಗಿದೆ. 10) ಹೆಚ್ಚಿನ ಮಾಹಿತಿಯು ಪಾಲಿಕೆಯ ವೆಬ್ ಸೈಟ್‌ನಲ್ಲಿ ಲಭ್ಯವಿರುತ್ತದೆ http://www.kalaburagicity.mrc.gov.in/

Note: All subsequent corrigendum/amendment shall be published only on website and not in press. Hence, tenderers are advoised to always be in touch with our said website until the tender is finally opened.

ಸಹಿ/– ಕಾರ್ಯಪಾಲಕ ಅಭಿಯಂತರರು,
ವಾ.ಸಾ.ಸಂ.ಇ/ಕಲಬುರಗಿ/76/ಕೆ.ಎಸ್.ಎಂ.ಸಿ.&ಎ/2024–25 ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ.

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.

ಸಂಖ್ಯೆ: ಅಭಿ(6)ಉಖಾಯೋ/ಹೊಸಿನೇ/16/2024–25 ದಿನಾಂಕ: 07–06–2024

ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಹೊರಗುತ್ತಿಗೆ ಆಧಾರದ ಮೇರೆಗೆ ವಿವಿಧ ಹುದ್ದೆಗಳಿಗೆ ನೇಮಕಾತಿ ಪ್ರಕಟಣೆ

ಮುಖ್ಯ ಕಾರ್ಯಾಚರಣೆ ಅಧಿಕಾರಿ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಪತ್ರ ಸಂಖ್ಯೆ: ಆರ್‌ಡಿಸಿ–ಇಜಿಎಸ್/50/2021(ಇ–442252) ದಿನಾಂಕ: 11–11–2021 ಮತ್ತು ಆಯುಕ್ತರು ಗ್ರಾಮೀಣಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಪತ್ರ ಸಂಖ್ಯೆ: ಆರ್‌ಡಿಸಿ–ಇಜಿಎಸ್/874/2022 (ಇ–931951) ದಿನಾಂಕ: 01–12–2022 ರವರ ಪತ್ರದಲ್ಲಿ ಸೂಚಿಸಿರುವಂತೆ ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಡಿ ಮಹಾತ್ಮಗಾಂಧಿ ನರೇಗಾ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಖಾಲಿ ಇರುವ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇರೆಗೆ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳಲು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ: **080–26716169** ಸಂಪರ್ಕಿಸಬಹುದಾಗಿದೆ. ಅರ್ಜಿಯನ್ನು ವೆಬ್‌ಸೈಟ್: **https://zpbengaluruurban.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಂಡು ನಿಗಧಿತ ನಮೂನೆಯಲ್ಲಿ ಭರ್ತಿ ಮಾಡಿದ ಅರ್ಜಿಯನ್ನು ದಿನಾಂಕ: **02–07–2024 ರಂದು ಸಂಜೆ 5.30 ಗಂಟೆಯೊಳಗೆ ಈ ಕಛೇರಿಯ ಟಪಾಲು ಶಾಖೆಗೆ ಖುದ್ದಾಗಿ ಸಲ್ಲಿಸುವುದು.**

ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ವಿವಿಧ ಹುದ್ದೆಗಳಿಗೆ ಈ ಕೆಳಗಿನಂತೆ ವಿದ್ಯಾರ್ಹತೆ, ವಯೋಮಿತಿ ಮತ್ತು ಮಾಸಿಕ ಸಂಭಾವನೆಯನ್ನು ನಿಗಧಿಪಡಿಸಲಾಗಿದೆ.

ಕ್ರ. ಸಂ.	ಹುದ್ದೆಯ ಹೆಸರು	ಸಂಖ್ಯೆ	ಕನಿಷ್ಠ ವಿದ್ಯಾರ್ಹತೆ	ವಯೋಮಿತಿ	ಮಾಸಿಕ ಸಂಭಾವನೆ
1	ಜಿಲ್ಲಾ ಎಂ.ಐ.ಎಸ್ ಕೋ–ಆರ್ಡಿನೇಟರ್	01	BE / B.Tech MCA (Computer Science)	21–40	34,000/–
2	ತಾಂತ್ರಿಕ ಸಹಾಯಕರು	02	BE / B.Tech Civil Engineering with Basic Computer Knowledge including use of Internet. Diploma in Civil with Basic Computer Proficiency and Knowledge including use of internet.	21–40	28,000/– 26,000/–
3	ತಾಂತ್ರಿಕ ಸಹಾಯಕರು (ಅರಣ್ಯ)	01	B.Sc (Forestry)	21–40	28,000/–
4	ತಾಂತ್ರಿಕ ಸಹಾಯಕರು (ರೇಷ್ಮೆ)	01	B.Sc (Sericulture)	21–40	28,000/–
	ಒಟ್ಟು ಹುದ್ದೆಗಳ ಸಂಖ್ಯೆ	05			

ಅರ್ಜಿ ಸಲ್ಲಿಸುವ ವಿಳಾಸ: ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ, ಬನಶಂಕರಿ ದೇವಸ್ಥಾನದ ಹತ್ತಿರ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.

ಸಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ವಾಸಾಸಂಇ/ವಾ.ಪ್ರ/272/ಅಡ್ವರ್ಟೋರ್/2024–25 ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ, ಬೆಂಗಳೂರು.

'ಗ್ಯಾರಂಟಿ ಬಗ್ಗೆ ಬಿಜೆಪಿಗೆ ಯಾಕಿಷ್ಟು ಸಿಟ್ಟು, ಮತ್ಸರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಶೋಕ ಅವರೇ, ನಿಮಗೆ ಮತ್ತು ನಿಮ್ಮ ಪಕ್ಷಕ್ಕೆ ನಮ್ಮ ಸರ್ಕಾರದ ಗ್ಯಾರಂಟಿ ಯೋಜನೆಗಳ ಬಗ್ಗೆ ಯಾಕೆ ಇಷ್ಟೊಂದು ಸಿಟ್ಟು, ಮತ್ಸರ. ಅದರ ಫಲಾನುಭವಿಗಳಾದ ಬಡವರು, ಮಹಿಳೆಯರು, ಯುವಜನರ ಬಗ್ಗೆ ಯಾಕೆ ಇಷ್ಟೊಂದು ದ್ವೇಷ, ಅಸಹನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಅಶೋಕ ಅವರ ಹೇಳಿಕೆಗೆ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ, 'ಅಶೋಕ ಅವರು ಆಗಾಗ ತಮ್ಮ ಅಜ್ಞಾನದ ಪ್ರದರ್ಶನ ಮಾಡುತ್ತಾ ಮನರಂಜನೆ ನೀಡುತ್ತಿರುತ್ತಾರೆ' ಎಂದು ಗೇಲಿ ಮಾಡಿದ್ದಾರೆ.

'ರಾಜ್ಯದ ಜನತೆಯ ಜೊತೆಗೆ ದೇಶದ ಜನತೆ ಸೋಲಿಸಿದ್ದು ಮೋದಿ ಗ್ಯಾರಂಟಿಗಳನ್ನೇ, ಹೊರತು ಕಾಂಗ್ರೆಸ್ ಪಕ್ಷದ ಗ್ಯಾರಂಟಿಗಳನ್ನಲ್ಲ. ಕಳೆದ ಲೋಕಸಭಾ ಚುನಾವಣೆಗಿಂತ ಶೇ 13ರಷ್ಟು ಹೆಚ್ಚು ಮತಗಳನ್ನು ರಾಜ್ಯದ ಮತದಾರರು ಈ ಬಾರಿ ನಮಗೆ ನೀಡಿದ್ದಾರೆ. ಪ್ರಸಕ್ತ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳ ನಡುವಿನ ಮತ ಪ್ರಮಾಣದ ಅಂತರ ಕೇವಲ 0.63. ಈಗ ಹೇಳಿ ಗೆದ್ದವರು ಯಾರು. ಸೋತವರು ಯಾರು' ಎಂದೂ ಕೇಳಿದ್ದಾರೆ.

'ಜೆಡಿಎಸ್ ಪಕ್ಷದ ಪಾದಕ್ಕೆ ಬಿದ್ದರೂ, 26 ಸ್ಥಾನಗಳಿಂದ 17 ಸ್ಥಾನಕ್ಕೆ ಬಿಜೆಪಿ ಕುಸಿಯುವುದನ್ನು ತಪ್ಪಿಸಲು ನಿಮಗೆ ಆಗಲಿಲ್ಲ. ಒಂದು ಸ್ಥಾನದಿಂದ ಒಂಬತ್ತು ಸ್ಥಾನಕ್ಕೆ ನಾವು ಏರುವುದನ್ನೂ ತಪ್ಪಿಸಲಾಗಲಿಲ್ಲ. ಮೊದಲು ನಿಮ್ಮ ಸೋಲಿಗೆ ಆತ್ಮಾವಲೋಕನ ಮಾಡಿಕೊಳ್ಳಿ. ಆ ಮೇಲೆ ಕಾಂಗ್ರೆಸ್ ಪಕ್ಷದ ಚುನಾವಣಾ ಫಲಿತಾಂಶದ ವಿಶ್ಲೇಷಣೆ ನಡೆಸಿ' ಎಂದೂ ಕುಟುಕಿದ್ದಾರೆ.

ಕೊಚ್ಚಿ ಹೋಗಿದ್ದ ವ್ಯಕ್ತಿ ಶವವಾಗಿ ಪತ್ತೆ

ಮೂಡಲಗಿ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಅವರಾದಿ ಸೇತುವೆಯಿಂದ ಘಟಪ್ರಭಾ ನದಿಯಲ್ಲಿ ಭಾನುವಾರ ಟ್ರ್ಯಾಕ್ಟರ್ ಬಿದ್ದು ನೀರಿನಲ್ಲಿ ಕೊಚ್ಚಿ ಹೋಗಿದ್ದ ಪಶ್ಚಿಮ ಬಂಗಾಳದ ಚುರಕಾ ಸುರೇನ್ ಶವವಾಗಿ ಮಂಗಳವಾರ ಪತ್ತೆ ಆಗಿದ್ದಾರೆ. 'ಘಟನೆ ನಡೆದ ದಿನದಿಂದೇ ರಾಷ್ಟ್ರೀಯ, ರಾಜ್ಯ ವಿಪತ್ತು ನಿರ್ವಹಣಾ ಪಡೆಯ ಸಹಯೋಗದಲ್ಲಿ ಸುರೇನ್‌ಗಾಗಿ ಶೋಧ ನಡೆಸಿದ್ದೆವು. ಸೇತುವೆಯಿಂದ 1 ಕಿ.ಮೀ. ಅಂತರದಲ್ಲಿ ನದಿ ದಡದ ಪೊದೆಯಲ್ಲಿ ಶವ ಪತ್ತೆಯಾಗಿದೆ' ಎಂದು ಕುಲಗೋಡ ಠಾಣೆ ಪೊಲೀಸರು ತಿಳಿಸಿದ್ದಾರೆ.

ವಿಚ್ಛೇದನ ಕೋರಿ ನಟ ಯುವ ರಾಜ್‌ಕುಮಾರ್ ಅರ್ಜಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಮಾನಸಿಕ ಮತ್ತು ದೈಹಿಕ ಕ್ರೌರ್ಯ, ಕುಟುಂಬದ ಹೆಸರನ್ನು ದುರ್ಬಳಕೆ ಮಾಡಿಕೊಂಡು ಅಕ್ರಮ ಚಟುವಟಿಕೆ ಹೀಗೆ ಹಲವು ಕಾರಣಗಳನ್ನು ಉಲ್ಲೇಖಿಸಿ ನಟ ಯುವ(ಗುರು) ಅವರು ಪತ್ನಿ ಶ್ರೀದೇವಿ ಬೈರಪ್ಪ ಅವರಿಂದ ವಿಚ್ಛೇದನ ಬಯಸಿದ್ದಾರೆ ಎಂದು ಯುವ ಪರ ವಕೀಲ ಸಿರಿಲ್ ಪ್ರಸಾದ್ ಹೇಳಿದ್ದಾರೆ.

'ವಿಚ್ಛೇದನ ಅರ್ಜಿ ದಾಖಲು ಮಾಡುವ ಮೊದಲು ಶ್ರೀದೇವಿ ಅವರಿಗೆ ಮೇ ತಿಂಗಳಲ್ಲಿ ಲೀಗಲ್ ನೋಟಿಸ್ ನೀಡಿದ್ದೆವು. ಅದರಲ್ಲಿ ವಿಚ್ಛೇದನಕ್ಕೆ ಕಾರಣಗಳನ್ನು ಉಲ್ಲೇಖಿಸಿದ್ದೆವು. 2018ರಲ್ಲಿ ಅವರ ಮದುವೆ ನಡೆದಿತ್ತು. ಅವರಿಬ್ಬರ ನಡುವೆ ಹಲವು ವರ್ಷಗಳ ವಯಸ್ಸಿನ ಅಂತರವಿದೆ. ಕುಟುಂಬದ ಮೇಲೆ ನಿಯಂತ್ರಣಕ್ಕೂ ಶ್ರೀದೇವಿ ಅವರು ಪ್ರಯತ್ನಿಸಿದ್ದರು. ಆರಂಭದಲ್ಲಿ ಯುವ ಅವರಿಗೆ ಇದು ಅರಿವಿಗೆ ಬಂದಿರಲಿಲ್ಲ. ಹಲವು ವ್ಯವಹಾರಗಳಲ್ಲಿ ಹೂಡಿಕೆ ಮಾಡುವಂತೆ ಶ್ರೀದೇವಿ ಅವರು ಯುವ ಅವರಿಗೆ ಒತ್ತಾಯ ಮಾಡುತ್ತಿದ್ದರು. ಇದರಿಂದ ಯುವ ಅವರಿಗೆ ನಷ್ಟವಾಗಿತ್ತು. ಆಕೆಗೆ ಐಎಎಸ್ ಮಾಡುವ ಇಚ್ಛೆಯಿತ್ತು. ಯುವ ಅವರೇ ಇದಕ್ಕೆ ಆರ್ಥಿಕ ಸಹಾಯ ಮಾಡಿದ್ದರು. ದೆಹಲಿಯಲ್ಲಿ ಎರಡು ದಿನವಷ್ಟೇ ಕ್ಲಾಸ್‌ಗೆ ಹೋಗಿದ್ದರು. ಯುವ ಜೊತೆ ಜಗಳ ಮಾಡಿಕೊಂಡಿದ್ದರು. ಈ ಎಲ್ಲ ಕಾರಣಗಳಿಂದ 54 ಪುಟಗಳ ವಿಸ್ತೃತವಾದ ವಿಚ್ಛೇದನ ಅರ್ಜಿ ಸಲ್ಲಿಸಿದ್ದೆವು' ಎಂದು ಸಿರಿಲ್ ಹೇಳಿದ್ದಾರೆ.

'ಯುವ ಅವರಿಗೆ ಶ್ರೀದೇವಿ ಮಾನಸಿಕ ಕಿರುಕುಳ ನೀಡುತ್ತಿದ್ದರು, ಅವಮಾನ ಮಾಡುತ್ತಿದ್ದರು. ಡಾ. ರಾಜ್‌ಕುಮಾರ್ ಅಕಾಡೆಮಿಯಿಂದ ಸುಮಾರು ₹3 ಕೋಟಿಗೂ ಅಧಿಕ ಹಣವನ್ನು ತಮ್ಮ ವೈಯಕ್ತಿಕ ಖಾತೆಗೆ ಹಾಕಿಕೊಂಡಿದ್ದಾರೆ. ರಾಜ್‌ಕುಮಾರ್ ಲರ್ನಿಂಗ್ ಆ್ಯಪ್‌ನಿಂದಲೂ ಅಕ್ರಮವಾಗಿ ತಮ್ಮ ಖಾತೆಗೆ ಹಣ ಹಾಕಿಕೊಂಡಿದ್ದಾರೆ. ಇದರಿಂದ ಇಪ್ಪತ್ತು ನಿವೇಶನಗಳನ್ನು ಮೈಸೂರಿನಲ್ಲಿ ಖರೀದಿಸಿದ್ದಾರೆ. ನಮ್ಮ ನೋಟಿಸ್‌ಗೆ ಮೈಸೂರಿನ ವಕೀಲರ ಮುಖಾಂತರ ಅವರು ಉತ್ತರಿಸಿದ್ದು, 'ತನ್ನ ಸದ್ಯದ ಮಾನಸಿಕ ಸ್ಥಿತಿ ಸರಿ ಇಲ್ಲ. ಮೂರು ತಿಂಗಳ ಅವಕಾಶ ನೀಡಿ' ಎಂದು ಕೇಳಿಕೊಂಡಿದ್ದರು. ಇದಾಗಿ ನಾವು ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಲು ಎರಡು ದಿನ ಇರುವಾಗ, ವಿಸ್ತೃತವಾದ ನೋಟಿಸ್ ಒಂದನ್ನು ನಮಗೆ ಶ್ರೀದೇವಿ ಅವರು ಕಳುಹಿಸುತ್ತಾರೆ. ಅದರಲ್ಲಿ ಯುವ ವಿರುದ್ಧ ಆರೋಪಗಳಿದ್ದವು' ಎಂದರು.

'ಸತ್ಯ, ನ್ಯಾಯ ಮೇಲುಗೈ ಸಾಧಿಸುತ್ತದೆ'

ಯುವ ಪರ ವಕೀಲ ಸುದ್ದಿಗೋಷ್ಠಿ ನಡೆಸಿದ ಬೆನ್ನಲ್ಲೇ ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಪೋಸ್ಟ್ ಮಾಡಿರುವ ಶ್ರೀದೇವಿ ಬೈರಪ್ಪ 'ವೃತ್ತಿಪರ ಸೌಹಾರ್ದತೆಯನ್ನು ಕಾಯ್ದುಕೊಳ್ಳಬೇಕಾದ ವ್ಯಕ್ತಿಯೇ ಸಾರ್ವಜನಿಕವಾಗಿ ಒಬ್ಬ ಹೆಣ್ಣಿನ ಚಾರಿತ್ರ್ಯದ ಬಗ್ಗೆ ಕೀಳುಮಟ್ಟದ ಸುಳ್ಳು ಆರೋಪಗಳನ್ನು ಮಾಡುತ್ತಿರುವುದು ಅತ್ಯಂತ ದುರದೃಷ್ಟಕರ ಹಾಗೂ ಬಹಳ ನೋವುಂಟು ಮಾಡಿದೆ. ಕಳೆದ ಕೆಲವು ತಿಂಗಳಿಂದ ಆದ ಅನೇಕ ನೋವುಗಳ ಹೊರತಾಗಿಯೂ, ನಾನು ಕುಟುಂಬದ ಗೌರವ ಕಾಪಾಡಿಕೊಳ್ಳಲು ಮೌನವಾಗಿದ್ದೆ. ಆದರೆ ನನ್ನ ಸಭ್ಯತೆ ಹಾಗೂ ಮಾನವೀಯತೆಯನ್ನು ಗೌರವಿಸದೆ, ಕೀಳು ಮಟ್ಟದ ಆರೋಪಗಳನ್ನು ಮಾಡುತ್ತಿರುವುದು ದುರದೃಷ್ಟಕರ. ಸತ್ಯ ಮತ್ತು ನ್ಯಾಯವು ಖಂಡಿತ ಮೇಲುಗೈ ಸಾಧಿಸುತ್ತದೆ ಎಂದು ನಾನು ನಂಬಿದ್ದೇನೆ' ಎಂದು ಉಲ್ಲೇಖಿಸಿದ್ದಾರೆ.

'ಪಠ್ಯಪುಸ್ತಕ ತಲುಪಿಸಲು ಕ್ರಮ'

ಬಾಗಲಕೋಟೆ: ಪಠ್ಯಪುಸ್ತಕಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯಿಂದ ಶಾಲೆಗೆ ತಲುಪಿಸಲು ಕ್ರಮ ಕೈಗೊಳ್ಳಲಾಗಿದೆ.

'ಪಠ್ಯಪುಸ್ತಕಗಳ ಗೋದಾಮಿನಲ್ಲಿರುವ ಪುಸ್ತಕಗಳನ್ನು ಚೀಲದಲ್ಲಿ ತುಂಬಿಡಿ. ಅವುಗಳನ್ನು ಶಾಲೆಗೆ ತಲುಪಿಸಲಾಗುವುದು' ಎಂಬ ಸಂದೇಶವನ್ನು ಬಾದಾಮಿ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಯವರು ಶಿಕ್ಷಕರಿಗೆ ನೀಡಿದ್ದಾರೆ. 'ಪಠ್ಯಪುಸ್ತಕಗಳನ್ನು ಶಿಕ್ಷಕರೇ ತರಬೇಕು' ಎಂಬ ವಿಶೇಷ ವರದಿ ಜೂನ್ 1ರ 'ಪ್ರಜಾವಾಣಿ' ಸಂಚಿಕೆಯಲ್ಲಿ ಪ್ರಕಟವಾಗಿತ್ತು.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ
Email: ee_pwdbellary@yahoo.com ದೂರವಾಣಿ ಸಂ: 08392 266123

ಸಂ:ಕಾನಿಇ/ಲೋಇ/ಬವಿ/ಟಿ.ಎಸ್–1/2024–25/779 ದಿನಾಂಕ: 07–06–2024.

ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ದ್ವಿ ಲಕೋಟೆ ಪದ್ಧತಿಯಂತೆ ಟೆಂಡರುಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ **https://kppp.karnataka.gov.in/** ವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1)	PWD/2024-25/RD/WORK_INDENT10966	120.00

ಸೂಚನೆ : ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಬದಲಾವಣೆಗಳಾದಲ್ಲಿ ಮತ್ತು ಮರು ಟೆಂಡರ್ ಆಹ್ವಾನಿಸಿದಲ್ಲಿ ಗುತ್ತಿಗೆದಾರರು ಕೆಪಿಪಿ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕವಾಗಿ ಜಾಹಿರಾತು ಹೊರಡಿಸಲಾಗುವುದಿಲ್ಲ.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ) ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ **15–06–2024** ರಂದು **12.00** ಗಂಟೆಯ ವರೆಗೆ. ಆ) ಇ–ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ. **20–06–2024** ರಂದು **16.00** ಗಂಟೆಯ ವರೆಗೆ. ಇ) ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ. **21–06–2024** ರಂದು **16.30** ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರ್,
ಡಿಐಪಿಆರ್/ಬಳ್ಳಾರಿ/44/ಕೆಎಸ್‌ಎಂಸಿಎ/2024–25 ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಚಾವಿಸನಿನಿ, ಮೈಸೂರು–570017,
ದೂರವಾಣಿ: 0821–2343384 ಇ–ಮೇಲ್: gmhrd@cescmysore.org ವೆಬ್‌ಸೈಟ್:www.cescmysore.org

ಸಂಖ್ಯೆ:ಚಾವಿಸನಿನಿ/ಪ್ರ.ವ್ಯ/ಉ.ಪ್ರ.ವ್ಯ(ಖ)/ಸ.ಪ್ರ.ವ್ಯ(ಖ)–2/2024–25/4815–18 ದಿನಾಂಕ: 10.06.2024

ಅಲ್ಪಾವಧಿ ಟೆಂಡರ್ ಪ್ರಕಟಣೆ (ವಿದ್ಯುನ್ಮಾನ ಸಂಗ್ರಹಣಾ ವೇದಿಕೆ)

ಚಾ.ವಿ.ಸ.ನಿ.ನಿ ವತಿಯಿಂದ ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಸಾಮಗ್ರಿಗಳಿಗೆ ಮತ್ತು ಸೇವೆಗಳಿಗೆ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಿದೆ.

ಕ್ರ.ಸಂ	ಸೇವೆಗಳು & ಸಾಮಗ್ರಿಗಳು	ವಿಚಾರಣೆ ಸಂಖ್ಯೆ/ದಿನಾಂಕ
1	ಕಾ ಮತ್ತು ಪಾ ಚಾಮರಾಜನಗರ–ಕೊಡಗು ವೃತ್ತ, ಚಾವಿಸನಿನಿ., ಮಡಿಕೇರಿ ವಿಭಾಗ ವ್ಯಾಪ್ತಿಯಲ್ಲಿ ಮಾಸಿಕ ಬಾಡಿಗೆ ಆಧಾರದಲ್ಲಿ ನಾಲ್ಕು ತಿಂಗಳ ಅವಧಿಗೆ 14 ಸಂಖ್ಯೆ 4–ವ್ಹೀಲ್ ವಾಹನಗಳ ಸೌಲಭ್ಯ ಒದಗಿಸುವುದು.	ಸಿ2-5695/ ದಿನಾಂಕ:03-06-2024
2	ಮಂಡ್ಯ ಕಾ ಮತ್ತು ಪಾ ವೃತ್ತ ವ್ಯಾಪ್ತಿಯಲ್ಲಿ 2 ತಿಂಗಳ ಅವಧಿಗೆ 50 ಜನ ತಾತ್ಕಾಲಿಕ ಗ್ಯಾಂಗ್‌ಮನ್ರನ್ನು ಒದಗಿಸಲು	ಸಿ2 -5696/ ದಿನಾಂಕ:03-06-2024
3	ಕಾರ್ಯ ಮತ್ತು ಪಾಲನಾ ವೃತ್ತ ಮೈಸೂರು ವ್ಯಾಪ್ತಿಯಲ್ಲಿ ಮಾಸಿಕ ಬಾಡಿಗೆ ಆಧಾರದಲ್ಲಿ ಒಂದು ವರ್ಷದ ಅವಧಿಗೆ ಚಾಲಕ ಸಹಿತ 2500CC ಸಾಮರ್ಥ್ಯಕ್ಕೆ ಮೇಲ್ಪಟ್ಟ ಗೂಡ್ಸ್ (ಬೊಲೆರೊ ಪಿಕ್‌ಅಪ್ ಅಥವಾ ಸಮನಾದ) ವಾಹನ ಸೇವೆಯನ್ನು ಒದಗಿಸುವುದು	ಸಿ2 –5608/Call-2/ ದಿನಾಂಕ: 23-01-2024
4	ಕಾರ್ಯ ಮತ್ತು ಪಾಲನಾ ವೃತ್ತ ಚಾಮರಾಜ ನಗರ–ಕೊಡಗು ವ್ಯಾಪ್ತಿಯಲ್ಲಿ ಮಾಸಿಕ ಬಾಡಿಗೆ ಆಧಾರದಲ್ಲಿ ಒಂದು ವರ್ಷದ ಅವಧಿಗೆ ಚಾಲಕ ಸಹಿತ 2500CC ಸಾಮರ್ಥ್ಯಕ್ಕೆ ಮೇಲ್ಪಟ್ಟ ಗೂಡ್ಸ್ (ಬೊಲೆರೊ ಪಿಕ್ ಅಪ್ ಅಥವಾ ಸಮನಾದ) ವಾಹನ ಸೇವೆಯನ್ನು ಒದಗಿಸುವುದು	ಸಿ2–5609/Call-2/ ದಿನಾಂಕ: 23-01-2024
5	ಕಾರ್ಯ ಮತ್ತು ಪಾಲನಾ ವೃತ್ತ ಮಂಡ್ಯ ವ್ಯಾಪ್ತಿಯಲ್ಲಿ ಮಾಸಿಕ ಬಾಡಿಗೆ ಆಧಾರದಲ್ಲಿ ಒಂದು ವರ್ಷದ ಅವಧಿಗೆ ಚಾಲಕ ಸಹಿತ 2500CC ಸಾಮರ್ಥ್ಯಕ್ಕೆ ಮೇಲ್ಪಟ್ಟ ಗೂಡ್ಸ್ (ಬೊಲೆರೊ ಪಿಕ್‌ಅಪ್ ಅಥವಾ ಸಮನಾದ) ವಾಹನ ಸೇವೆಯನ್ನು ಒದಗಿಸುವುದು	ಸಿ2 –5610/Call-2/ ದಿನಾಂಕ: 23-01-2024
6	ಕಾರ್ಯ ಮತ್ತು ಪಾಲನಾ ವೃತ್ತ ಹಾಸನ ವ್ಯಾಪ್ತಿಯಲ್ಲಿ ಮಾಸಿಕ ಬಾಡಿಗೆ ಆಧಾರದಲ್ಲಿ ಒಂದು ವರ್ಷದ ಅವಧಿಗೆ ಚಾಲಕ ಸಹಿತ 2500CC ಸಾಮರ್ಥ್ಯಕ್ಕೆ ಮೇಲ್ಪಟ್ಟ ಗೂಡ್ಸ್ (ಬೊಲೆರೊ ಪಿಕ್‌ಅಪ್ ಅಥವಾ ಸಮನಾದ) ವಾಹನ ಸೇವೆಯನ್ನು ಒದಗಿಸುವುದು	ಸಿ2 –5697/ ದಿನಾಂಕ: 03-06-2024
7	ಚಾವಿಸನಿನಿಗೆ 11ಕೆವಿ ಸೆರಾಮಿಕ್ ಪಿನ ಇನ್ಸುಲೇಟರ್ (Shell Only)ಗಳ ಸರಬರಾಜು	ಸಿ2–5698/ ದಿನಾಂಕ: 03-06-2024

ಟೆಂಡರ್‌ನಲ್ಲಿ ಭಾಗವಹಿಸುವ ಮತ್ತು ಸ್ಪೆಸಿಫಿಕೇಷನ್ ಬಗ್ಗೆ ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **https://kppp.karnataka.gov.in** ನಲ್ಲಿ **ದಿನಾಂಕ: 11–06–2024ರ** ನಂತರ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ **ಹೆಲ್ಪ್‌ಲೈನ್ +91–8046010000, +91–8068948777** ಅಥವಾ ಇ–ಮೇಲ್ ವಿಳಾಸ **support@eprochelpdesk.com** ವ್ಯವಹರಿಸಲು ಕೋರಲಾಗಿದೆ.

ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ : 1912

ಸಹಿ/–
ಪ್ರಧಾನ ವ್ಯವಸ್ಥಾಪಕರು(ಖರೀದಿ)
DIPR/MYS/KAVITA/61/2024-25 ಚಾ.ವಿ.ಸ.ನಿ.ನಿ, ಮೈಸೂರು

KLE SOCIETY

Tyagaveer Sirasangi Lingaraj College Road, Belagavi

A Resplendent Legacy of 107+ years of Education, Healthcare and Research.

Since 1916

• 310 Institutions • 1,38,000+ Students • 18,000+ Faculty • 4,000+ Healthcare Beds

www.klesociety.org

Congratulations!!

NEET TOPPERS

Proud of your accomplishments, keep shining.

690 Ashutosh S Porwal
Independent PU College, Jakkeri Honda, Belagavi

690 Biresh C Hanakanahalli
Independent PU College, Hanagal

680 Akshay Khandekar
R L PU College of Science, Belagavi

Score	Name	College
671	Rakshita Ramagouda Walake	Independent PU College, Chikodi
670	Rachana S Devasur	Prerana Residential PU College Hubballi - Kotgondhunshi
670	Shrishti Havaldar	Independent PU College Jakkeri Honda, Belagavi
667	Akshata Vagarali	Independent PU College, Jakkeri Honda, Belagavi
666	Vishal Bahubali Boke	Independent PU College Chikodi
665	Naveen S Haluvad	Prerana PU College, BVB Campus Hubballi
661	Dayanand Kokkari	C S Angadi PU College Gokak
660	Disha Kadapatti	Prerana Residential PU College Hubballi - Kotgondhunshi
655	Yashika S	Independent PU College Nagarbhavi
653	Varsha Kumbar	Prerana Residential PU College Hubballi - Kotgondhunshi

Score	Name	College
647	Pradeep Hallur	R L PU College of Science Belagavi
646	Rakshita C Ekbote	Prerana PU College BVB Campus, Hubballi
646	Ummehani Abdulkhadar Inamdar	Independent PU College Jakkeri Honda, Belagavi
644	Rooman Harobidi	Prerana Residential PU College Hubballi - Kotgondhunshi
642	Ashlesha A. Powar	G I Bagewadi PU College Nipani
641	Prathamesh Chidanand Mangaj	Independent PU College Chikodi
636	Zainab Dharwad	P C Jabin PU College of Science Hubballi
636	Shristy Roy	Independent PU College Jakkeri Honda, Belagavi
633	Harish Hanamanth Bhoomannavar	Prerana PU College, BVB Campus Hubballi
630	Kanisha Umesh	Independent PU College Jakkeri Honda, Belagavi



Score	Name	College
629	Vinit S Goudar	C S Angadi PU College, Gokak
628	Rushda Bagwan	Independent PU College Jakkeri Honda, Belagavi
625	Vinay Kumar	Prerana PU College, BVB Campus Hubballi
618	Shreya S Narappanavar	Prerana Residential PU College Hubballi - Kotgondhunshi
617	Shreeaunsh Thombare	Prerana PU College, BVB Campus Hubballi
616	Varun Koujalgi	R L PU College of Science Belagavi
612	Srujan S Narappanavar	Prerana Residential PU College Hubballi - Kotgondhunshi
611	Vaishnavi M Patil	C S Angadi PU College Gokak
609	Lavanya Umesh Chatrad	Prerana PU College, BVB Campus Hubballi
606	Shivaraj N Gavade	G I Bagewadi PU College Nipani

Score	Name	College
606	Vinayakumar Yavagal	Prerana Residential PU College Hubballi - Kotgondhunshi
605	Sanjana S Mudaraddi	Prerana Residential PU College Hubballi - Kotgondhunshi
605	Abhishek Satyappa Hugar	Independent PU College, Chikodi
596	Zaiba C Attar	International School, Kuvempu Nagar, Belagavi
594	Kruti Kotinatot	R L PU College of Science Belagavi
591	Sumati Kamaraddi	P C Jabin PU College of Science Hubballi
588	Sheetal Basavaraj Khot	Independent PU College Chikodi
587	Laxmi Mantur	SCP PU College Mahalingpur
587	Samarth S Aravind	International School, Kuvempu Nagar, Belagavi
579	Sushant Dareppa Bilage	Prerana PU College, BVB Campus Hubballi

Score	Name	College
567	Soumya	Prerana Residential PU College Hubballi - Kotgondhunshi
564	Vinuta K Phadnis	Prerana PU College, BVB Campus Hubballi
564	Keerti Shivappa Somaraddi	Prerana PU College, BVB Campus Hubballi
563	Riya Siddannavar	R L PU College of Science Belagavi
563	B Indira	Independent PU College Jakkeri Honda, Belagavi
560	Khushi A Kadam	Prerana Residential PU College Hubballi - Kotgondhunshi
560	Pranav Patil	R L PU College of Science Belagavi
556	Bibiayeesha M Andagi	C S Angadi PU College Gokak
556	Vibhav Pattanshetti	P C Jabin PU College of Science Hubballi
550	Tejashwini R Patil	Prerana Residential PU College Hubballi - Kotgondhunshi



Score	Name	College
572	Sharat S Shet	Prerana Residential PU College Hubballi - Kotgondhunshi
572	Spoorti	Prerana PU College BVB Campus, Hubballi
550	Pragnashri V	S Nijalingappa / Independent PU College, Rajajinagar Bengaluru
546	Mohith S D Gowda	S Nijalingappa / Independent PU College, Rajajinagar, Bengaluru
545	Sujal Kiran Chikkorade	Independent PU College Jakkeri Honda, Belagavi
545	Anchal M Bhandari	International School Kuvempu Nagar, Belagavi
542	Disha M S	Independent PU College Jakkeri Honda, Belagavi
540	Suhail Abdulmunaf Mujawar	Independent PU College, Chikodi
537	Adivesh Bangennavar	Prerana Residential PU College Hubballi - Kotgondhunshi
531	Priyanka Gangavati	Prerana Residential PU College Hubballi - Kotgondhunshi

Score	Name	College
531	Karthik Hallikeri	Prerana PU College, BVB Campus Hubballi
529	S Divya	Independent PU College Jakkeri Honda, Belagavi
525	Saideep Sanjay Kavatagimath	Independent PU College, Chikodi
521	Amruta Haibatti	R L PU College of Science Belagavi
518	Ananya V	Independent PU College Nagarbhavi
517	Adarsh K Santoji	Prerana Residential PU College Hubballi - Kotgondhunshi
515	Naziya Rajaksab Peerjade	Prerana PU College, BVB Campus Hubballi
513	Rohini Malwad	C S Angadi PU College Gokak
513	Aishwarya Vaidyamath	Prerana PU College, BVB Campus Hubballi
512	Priya Shivappayyanamath	P C Jabin PU College of Science Hubballi

Score	Name	College
512	Gayatri Nagappa Ketannavar	Prerana PU College, BVB Campus, Hubballi
510	Aishwaraya S Talawar	G H PU College, Haveri
509	Priya S Hallad	Prerana PU College, BVB Campus Hubballi
508	Swapnali Sahadev Rogi	SSMS PU College, Athani
508	Suma Bamane	R L PU College of Science Belagavi
503	Anusha S Chillal	Prerana PU College, BVB Campus Hubballi
503	Bhumika Girish Bhat	Independent PU College Jakkeri Honda, Belagavi
503	Arnav S. Konkani	Independent PU College Jakkeri Honda, Belagavi
503	Abuhurera Mulla	R L PU College of Science Belagavi
502	Gurupadagouda I Patil	Prerana Residential PU College Hubballi - Kotgondhunshi

Score	Name	College
501	Adarsh Kumbar	Prerana Residential PU College Hubballi - Kotgondhunshi
500	Vikas Hiremath	Prerana Residential PU College Hubballi - Kotgondhunshi
500	Misbah Bagewadi	R L PU College of Science Belagavi

Your stupendous achievement has made your teachers, mentors, the KLE institutions and your parents mighty proud. You have raised the bar and a few eyebrows too. It's your moment in the sun. Keep shining. Keep smiling. And fly the KLE flag at high mast!

KLE FAMILY

Dr Prabhakar Kore
Chairman, KLE Society, Belagavi

Pre-primary & School Education | Collegiate Education | Engineering & Technical Education | Agricultural Institutions | Health Sciences & Healthcare | Management Education | Education in Law



ಕಿಸಾನ್ ಕವಚ: ರೈತರನ್ನು ಕಾಯುವ ಬಟ್ಟೆಯ ಗುರಾಣಿ

ಕೊಳ್ಳೇಗಾಲ ಶರ್ಮ



ಡಿಸೆಂಬರ್ ಕಾಲಿಡುತ್ತಿದ್ದ ಹಾಗೆಯೇ ಹುಣಸೂರು ತಾಲೂಕಿನ ಬನ್ನಿಕುಪ್ಪೆಯ ಹೆದ್ದಾರಿಯ ಎರಡೂ ಬದಿಯಲ್ಲಿ, ಸೀಸನ್ನಿನ ಬೆಳೆ ಅವರೆಕಾಯಿ ಮೂಟೆಗಳು ಗುಡ್ಡೆ, ಗುಡ್ಡೆಯಾಗಿ ಬಿದ್ದಿರುತ್ತವೆ. ಹತ್ತು ವರ್ಷಗಳ ಹಿಂದ ಅವರೆಕಾಯಿಯ ಸೊನೆದಕ್ಕಿಂತಲೂ ಕೀಟನಾಶಕದ ಘಾಟು ಮೂಗಿಗೆ ಅಡರುತ್ತಿತ್ತು. ಈಗ ಹಾಗಿಲ್ಲ. ಕಾರಣ, ಹತ್ತು ವರ್ಷದ ಹಿಂದೆ ಕೀಟನಾಶಕವನ್ನು ಸಿಂಪಡಿಸಿದ ಹಲವು ಕೃಷಿಕಾರ್ಮಿಕರು ಆಸ್ಪತ್ರೆ ಸೇರಿದ್ದರು. ಅವರಲ್ಲಿ ಒಬ್ಬ ಮರಣಿಸಿದ್ದ. ಅಂದಿನಿಂದ ಕೀಟನಾಶಕಗಳ ಸಿಂಪರಣೆಯನ್ನು ನಿಷೇಧಿಸಲಾಗಿದೆ.

ಕೀಟನಾಶಕಗಳಿಂದ ರೈತರಿಗೆ ಅಪಾಯ ಒದಗುವುದು ಹೊಸತೇನಲ್ಲ. ಒಂದು ಅಧ್ಯಯನದ ಪ್ರಕಾರ ಪ್ರತಿವರ್ಷವೂ ಆಂಧ್ರಪ್ರದೇಶ ಒಂದರಲ್ಲಿಯೇ ನೂರ ಅರವತ್ತು ಮಂದಿ ಕೀಟನಾಶಕದ ವಿಷದಿಂದಾಗಿ ಸಾಯುತ್ತಾರಂತೆ. ಭತ್ತ, ಗೋಧಿ, ಬೇಳೆಗಳನ್ನು ಬೆಳೆಯುವ ಆಂಧ್ರಪ್ರದೇಶ, ಕರ್ನಾಟಕ, ಪಂಜಾಬ್, ಒಡಿಶಾಗಳಲ್ಲಿ ಕೀಟನಾಶಕದ ದುಷ್ಪರಿಣಾಮದಿಂದ ಸಾವನ್ನಪ್ಪುವವರು ಹೆಚ್ಚು. ಇದೀಗ ಈ ಸಂಕಟವನ್ನು ದೂರಮಾಡುವ ರಕ್ಷಾಕವಚ ಸಿದ್ಧವಾಗಿದೆ. ಬೆಂಗಳೂರಿನ 'ಐಸ್ಟೆಮ್' ಅಥವಾ 'ಇನ್‌ಸ್ಟಿಟ್ಯೂಟ್ ಫಾರ್ ಸ್ಟೆಮ್ ಸೆಲ್ ಥೆರಪಿ ಅಂಡ್ ರೀಜನರೇಟಿವ್ ಮೆಡಿಸಿನ್' ಸಂಸ್ಥೆಯ ವಿಜ್ಞಾನಿಗಳು, ಕೀಟನಾಶಕ ಮೈಯನ್ನು ತಗುಲಿದರೂ ಅಪಾಯವಾಗದಂತೆ ತಡೆಯುವ ಬಟ್ಟೆಯನ್ನು ಸಿದ್ಧಪಡಿಸಿದ್ದಾರೆ.

ಕೀಟನಾಶಕಗಳು ನರವಿಷಗಳು. ದೇಹದೊಳಗೆ ಹೊಕ್ಕಾಗ ಅವು ನರಮಂಡಲದ ಚಟುವಟಿಕೆಗೆ ಅವಶ್ಯಕವಾದ 'ಅಸಿಟೈಲ್ಕೋಲಿನ್ ಎಸ್ಟರೇಸ್' (ಎಸಿಇ) ಎನ್ನುವ ರಾಸಾಯನಿಕವನ್ನು ನಾಶ ಮಾಡುತ್ತವೆ. ತಲೆನೋವು, ವಾಂತಿಯಿಂದ ಆರಂಭಿಸಿ, ಪಾರ್ಶ್ವವಾಯು, ಹೃದಯದ ಬಡಿತ ನಿಲ್ಲುವುದು ಮೊದಲಾದ ಗಂಭೀರ ಸಮಸ್ಯೆಗಳೂ ತೋರಬಹುದು. ಕೀಟನಾಶಕದ ಪ್ರಮಾಣ ಹೆಚ್ಚಿದ್ದಲ್ಲಿ ಸಾವು ಕೂಡ ಸಂಭವಿಸಬಹುದು. ವಿದೇಶಗಳಲ್ಲಿ ಕೀಟನಾಶಕಗಳನ್ನು ಸಿಂಪಡಿಸುವಾಗ ಸೈನಿಕರು ಯುದ್ಧದಲ್ಲಿ ಬಳಸುವಂತಹ ದಿರಿಸು, ಮುಖಗವಸುಗಳನ್ನು ಧರಿಸುವುದುಂಟು. ಆದರೆ ಬೇಗೆಯ ನಾಡಿನಲ್ಲಿ ಈ ದಿರಿಸುಗಳು ಭಾರಿ ಎನ್ನಿಸುತ್ತವೆ; ಜೊತೆಗೆ ದುಬಾರಿ ಕೂಡ.

'ಉನ್ನತ ವಿಜ್ಞಾನವನ್ನು ಬಳಸಿಕೊಂಡು ರೈತರ ಆರೋಗ್ಯವನ್ನು ಕಾಯುವ ಉಪಾಯಗಳು ಸಾಧ್ಯವೇ?' ಎನ್ನುವುದು ನಮ್ಮ ಪ್ರಯತ್ನ ಎನ್ನುತ್ತಾರೆ, ಕಿಸಾನ್ ಕವಚ್ ಎಂಬ ಹೆಸರಿನ ಬಟ್ಟೆಯನ್ನು ಸಿದ್ಧಪಡಿಸಿರುವ ವಿಜ್ಞಾನಿಗಳ ನೇತಾರ ಪ್ರವೀಣ್ ಕುಮಾರ್ ವೇಮುಲ.

ಐಸ್ಟೆಮ್ ಸಂಸ್ಥೆಯ ಜೈವಿಕ ತಂತ್ರಜ್ಞಾನದಲ್ಲಿ ಅಸೋಸಿಯೇಟ್ ಪ್ರೊಫೆಸರ್ ಆಗಿರುವ ಪ್ರವೀಣ್ ಈ ಹಿಂದೆ ಕೀಟನಾಶಕ ಸೋಂಕಿದಾಗ ಅದನ್ನು ತೆಗೆದು ಹಾಕುವ ಮುಲಾಮನ್ನು ಸಿದ್ಧಪಡಿಸಿದ್ದರು. ಆದರೆ ಪ್ರತಿಬಾರಿ ಗದ್ದೆಗೆ ಹೋಗುವಾಗಲೂ ಇದನ್ನು ಮೈಗೆಲ್ಲ ಲೇಪಿಸಿಕೊಳ್ಳುವ ತಾಪತ್ರಯವಿತ್ತು. ದುಬಾರಿ, ಭಾರಿ ದಿರಿಸು ಧರಿಸುವ ಹಾಗೂ ನಿತ್ಯ ಲೇಪನದ ಕಷ್ಟವನ್ನು ಈ 'ಕವಚ' ನಿವಾರಿಸಲಿದೆಯಂತೆ.

ಹತ್ತಿ ಬಟ್ಟೆಗೆ ಕೀಟನಾಶಕಗಳನ್ನು ನಾಶಪಡಿಸುವ ಶಕ್ತಿಯನ್ನು ವಿಶೇಷ ರಾಸಾಯನಿಕ ತಂತ್ರಗಳಿಂದ ಒದಗಿಸಿದ್ದಾರೆ. 'ಕೀಟನಾಶಕಗಳ ಜಟಿಲ ರಚನೆಯನ್ನು ಒಡೆದರೆ ಅವು ವಿಷವೆನ್ನಿಸುವುದಿಲ್ಲ. ಈ ಕೆಲಸ ಮಾಡುವ ರಾಸಾಯನಿಕಗಳನ್ನು ಹತ್ತಿ ಬಟ್ಟೆಗೆ ಅಂಟಿಸಿದರೆ, ಬಟ್ಟೆ ಕೀಟನಾಶಕಗಳನ್ನು ನಿರ್ವಿಷವಾಗಬಹುದು ಎಂಬುದು ನಮ್ಮ ಆಲೋಚನೆ' ಎನ್ನುತ್ತಾರೆ, ವೇಮುಲ. ಈ ನಿಟ್ಟಿನಲ್ಲಿ ಇವರು ಆಕ್ಸೈಮುಗಳೆಂದ ರಾಸಾಯನಿಕಗಳನ್ನು ಆಯ್ದುಕೊಂಡರು. ಅವನ್ನು ಹತ್ತಿಯಲ್ಲಿರುವ ಸೆಲ್ಯುಲೋಸು ನಾರಿಗೆ ಅಂಟಿಸಲೆಂದು ಸಿಲೈಲು ಆಕ್ಸೈಮು ರೂಪಕ್ಕೆ ಪರಿವರ್ತಿಸಿದ್ದಾರೆ. ಸ್ವಚ್ಛವಾಗಿ ಒಗೆದು, ಒಣಗಿಸಿದ ಬಟ್ಟೆಯನ್ನು ಸಿಲೈಲು ಆಕ್ಸೈಮು ದ್ರಾವಣದಲ್ಲಿ ಅದ್ದಿ ತೆಗೆದು, ಇಸ್ತ್ರಿ ಮಾಡುವಂತೆ ಅತಿ ಹೆಚ್ಚಿನ ಉಷ್ಣತೆಯಲ್ಲಿ ಬಿಸಿ ಮಾಡಿ ಒಣಗಿಸಿದ್ದಾರೆ. ಹೀಗೆ ಹತ್ತಿ ನಾರಿಗೆ ಆಕ್ಸೈಮು ಧಾರಣೆಯಾಗಿದೆ.

ಆಕ್ಸೈಮು ನಿಜಕ್ಕೂ ಹತ್ತಿಗೆ ಅಂಟಿಕೊಂಡಿರುವುದನ್ನು ಖಚಿತ ಪಡಿಸಿಕೊಂಡ ನಂತರ ಬಟ್ಟೆ ಕೀಟನಾಶಕಗಳಿಂದ ರಕ್ಷಿಸುತ್ತದೆಯೇ ಎಂದು ಪ್ರಯೋಗಗಳನ್ನು ಮಾಡಿದ್ದಾರೆ. ಈ ಬಟ್ಟೆಯನ್ನು ಹೊದ್ದ ಇಲಿಗಳ ಮೇಲೆ ಕೊಲ್ಲುವಷ್ಟು ಪ್ರಬಲವಾದ ಕೀಟನಾಶಕಗಳನ್ನು ಸಿಂಪಡಿಸಿ, ಪರೀಕ್ಷಿಸಿದ್ದಾರೆ. ಹಾಗೆಯೇ ಸಾಮಾನ್ಯ ಹತ್ತಿಬಟ್ಟೆಯನ್ನು ಹೊದಿಸಿಯೂ ಪ್ರಯೋಗ ಮಾಡಿದ್ದಾರೆ. ಸಾಮಾನ್ಯವಾಗಿ ಕೀಟನಾಶಕ ಸಿಂಪಡಿಸಿದ ನಂತರ ಕಾಣುವ ಅಡ್ಡಾದಿಡ್ಡಿ ವಾಲು ನಡೆ, ಸ್ನಾಯುಗಳ ಸೆಟೆತ ಮುಂತಾದ ಲಕ್ಷಣಗಳು 'ಕವಚ' ಹೊದ್ದ ಇಲಿಗಳಲ್ಲಿ ಹತ್ತಿಬಟ್ಟೆ ಹೊದ್ದವುಗಳಿಗಿಂತಲೂ ಕಡಿಮೆ ಇತ್ತೆಂದು ಕಂಡಿದ್ದಾರೆ. ಅಷ್ಟೇ ಅಲ್ಲ, ಕವಚ ಹೊದ್ದ ಇಲಿಗಳಲ್ಲಿ ಸತ್ತವುಗಳ ಸಂಖ್ಯೆಯೂ ಗುರುತರವಾಗಿ ಕಡಿಮೆಯಾಗಿತ್ತು. ಇಲಿಗಳ ರಕ್ತ, ಮಿದುಳು, ಹೃದಯ ಹಾಗೂ ಶ್ವಾಸಕೋಶಗಳಲ್ಲಿ 'ಎಸಿಇ' ಕಿಣ್ವದ ಚಟುವಟಿಕೆಯನ್ನು ಅಳೆದಾಗ, ಕವಚವನ್ನು ಹೊದ್ದ ಇಲಿಗಳಲ್ಲಿ ಇದು ಉಳಿದೆರಡು ತಂಡಗಳ ಇಲಿಗಳಲ್ಲಿ ಇರುವುದಕ್ಕಿಂತ ಹೆಚ್ಚು ಇತ್ತು. ಬರೇ ಬಟ್ಟೆಯ ಮೂಲಕ ಕೀಟನಾಶಕವಿರುವ ಗಾಳಿಯನ್ನು ಹಾಯಿಸಿಯೂ ಪರೀಕ್ಷೆ ಮಾಡಲಾಗಿದೆ. ಬಟ್ಟೆ ಕೀಟನಾಶಕಗಳನ್ನು ಸೋಸಿ ಗಾಳಿಯನ್ನು ಸ್ವಚ್ಛಗೊಳಿಸಿತ್ತು. ಈ ಗಾಳಿಯನ್ನು ಉಸಿರಾಡಿದ ಇಲಿಗಳಲ್ಲಿ ಎಸಿಇ ಕಿಣ್ವದ ಚಟುವಟಿಕೆಗೆ ಹೆಚ್ಚು ಬಾಧೆ ಆಗಿರಲಿಲ್ಲ ಎಂದೂ ಇವರು ಕಂಡುಕೊಂಡಿದ್ದಾರೆ. ಹೀಗೆ ಕವಚ ಪರಿಣಾಮಕಾರಿಯಾಗಿ ಕೀಟನಾಶಕಗಳ ಕೆಟ್ಟ ಪರಿಣಾಮಗಳನ್ನು ತಡೆಗಟ್ಟುತ್ತದೆ ಎಂದು ನಿರೂಪಿಸಿದ್ದಾರೆ. 'ಕಿಸಾನ್ ಕವಚ್' ಎಂಬ ಹೆಸರಿನಲ್ಲಿ ಈ ಬಟ್ಟೆಯನ್ನು ಪೇಟೆಂಟು ಮಾಡಲಾಗಿದೆ.

ಹತ್ತಿಬಟ್ಟೆಯಾದ್ದರಿಂದ ಸಾಮಾನ್ಯವಾಗಿ ದಿರಿಸನ್ನು ಹೊಲಿಯುವಂತೆಯೇ ಇದನ್ನೂ ಹೊಲಿದುಕೊಳ್ಳಬಹುದು. ಅವರವರಿಗೆ ಬೇಕಾದಂತೆ ದಿರಿಸನ್ನು ಸಿದ್ಧ ಮಾಡಿಕೊಳ್ಳಬಹುದು. ಅಷ್ಟೇ ಅಲ್ಲ. ಒಗೆದಾಗ ಕವಚದ ಸಾಮರ್ಥ್ಯ ಕುಂದುತ್ತದೆಯೋ ಎಂದೂ ಪರಿಶೀಲಿಸಲಾಗಿದೆ. ಐವತ್ತು ಬಾರಿ ಒಗೆದು ಮರುಬಳಸಿದಾಗಲೂ ಬಟ್ಟೆಗೆ ಅಂಟಿದ್ದ ಆಕ್ಸೈಮುಗಳ ತೊಳೆದು ಹೋಗಿರಲಿಲ್ಲ. 'ಎಂದರೆ ಈ ಬಟ್ಟೆಯಿಂದ ಹೊಲಿದ ದಿರಿಸನ್ನು ಧರಿಸಿ ಎಂದಿನಂತೆ ಕೃಷಿ ಕೆಲಸದಲ್ಲಿ ತೊಡಗಿಕೊಳ್ಳಬಹುದು. ಮುಖಗವುಸನ್ನು ಮಾಡಿ, ಕೀಟನಾಶಕಗಳಿರುವ ಗಾಳಿಯಿಂದ ಅಪಾಯವಾಗದಂತೆ ಕಾಪಾಡಬಹುದು' ಎನ್ನುತ್ತಾರೆ, ಇದನ್ನು ತಯಾರಿಸಿ, ಮಾರಾಟ ಮಾಡಲು ಸಿದ್ಧವಾಗಿರುವ 'ಸೆಪಿಯೋ ಹೆಲ್ತ್ ಪ್ರೈ ಲಿ.' ಎನ್ನುವ ಕಂಪೆನಿಯ ನಿರ್ದೇಶಕ ಓಂಪ್ರಕಾಶ್ ಸುಣ್ಣಾಪು. ಈ ಬಟ್ಟೆಯನ್ನು ಕೀಟನಾಶಕ ಸೋಂಕಿರುವ ನೀರನ್ನು ಶುಚಿಗೊಳಿಸಲೂ ಬಳಸಬಹುದೋ? ಗೊತ್ತಿಲ್ಲ. ಸದ್ಯಕ್ಕೆ ಕೀಟನಾಶಕ ಸಿಂಪಡಿಸಿದಮೇಲೆ ಆಸ್ಪತ್ರೆಗೆ ಹೋಗುವವರ ಸಂಖ್ಯೆಯನ್ನು ಕಡಿಮೆ ಮಾಡಬಹುದು ಅಷ್ಟೆ.

ವೇಮುಲ ತಂಡದ ಈ ಸಾಧನೆಯ ವಿವರಗಳನ್ನು 'ನೇಚರ್ ಕಮ್ಯೂನಿಕೇಷನ್ಸ್ ಪತ್ರಿಕೆ' ಇತ್ತೀಚಿನ ಸಂಚಿಕೆಯಲ್ಲಿ ಪ್ರಕಟಿಸಿದೆ.

❖

BHISHM ಸಂಚಾರಿ ಆಸ್ಪತ್ರೆ

ಅಮೃತೇಶ್ವರಿ ಬಿ.

ಮೊಬೈಲ್ ಕ್ಲಿನಿಕ್ ಅನ್ನು ತಾವೆಲ್ಲರೂ ನೋಡಿರುತ್ತೀರಿ. ಒಂದಷ್ಟು ಜನ ಅದರ ಸೇವೆಗಳನ್ನೂ ಪಡೆದುಕೊಂಡಿರುತ್ತೀರಿ. ಇದೊಂದು ಮೂಲಭೂತ ಆರೋಗ್ಯಸೇವೆಗಳಿಂದ ವಂಚಿತರಾದ ಗ್ರಾಮೀಣ ಜನರಿಗೆ ತುರ್ತು ವೈದ್ಯಕೀಯ ಸಹಾಯವನ್ನು ನೀಡುವಂತಹ ವಿಶೇಷವಾಗಿ ವಿನ್ಯಾಸಗೊಳಿಸುವ ಸಂಚಾರಿ ತುರ್ತು ವೈದ್ಯಕೀಯ ವ್ಯವಸ್ಥೆ. ತುರ್ತು ಸಂದರ್ಭಗಳಲ್ಲಿ, ಅವಶ್ಯಕವಾದ ಪ್ರಥಮ ಚಿಕಿತ್ಸೆ, ಮಕ್ಕಳ ನಿಗಾ, ವೃದ್ಧರ ಶುಶ್ರೂಷೆ, ನಡವಳಿಕೆಗೆ ಸಂಬಂಧಿಸಿದ ಆರೋಗ್ಯ ಸೇವೆಗಳು. ಹೀಗೆ ಸಾಕಷ್ಟು ಸೇವೆಗಳನ್ನು ಒದಗಿಸುತ್ತವೆ ಈ ಮೊಬೈಲ್ ಕ್ಲಿನಿಕ್ಕುಗಳು. ಎಂತಹುದೇ ರಸ್ತೆಮಾರ್ಗಗಳಿದ್ದರೂ ಅದನ್ನು ದಾಟಿಹೋಗಿ ಅಪಾಯದಲ್ಲಿರುವವರಿಗೆ ಚಿಕಿತ್ಸೆ ನೀಡಲೆಂದೇ ವಿಶೇಷವಾಗಿ ವಿನ್ಯಾಸಗೊಳಿಸಿರುವ ವಾಹನಗಳಿವು. ಇವುಗಳನ್ನು ರೂಪಿಸಿರುವುದೇ ಹಾಗೆ. ಇದು ಕೂಡ ನಮ್ಮ ತಂತ್ರಜ್ಞಾನ ಕಾಲದ ಮತ್ತೊಂದು ವಿಶೇಷ ಕಲ್ಪನೆ ಎನ್ನಬಹುದು. ಆದರೆ ಇದರಲ್ಲೇನು ವಿಶೇಷ? ಈ ತಂತ್ರಜ್ಞಾನ ಬಂದು ಬಹಳ ವರ್ಷಗಳೇ ಕಳೆದಿವೆಯಲ್ಲ ಎನ್ನುವುದು ನಿಮ್ಮ ಕುತೂಹಲವಾದರೆ, ಅದರಲ್ಲಿಯೂ ಹೊಸತಿದೆ ಎನ್ನುವುದು ಭಾರತೀಯ ವಾಯುಸೇನಾ ಪಡೆಯ ಉತ್ತರ.

ಹೌದು. ಭಾರತೀಯ ವಾಯುಸೇನಾ ಪಡೆಯು 'BHISHM' ಹೆಸರಿನ ಸಂಚಾರಿ ಆಸ್ಪತ್ರೆಗಳನ್ನು ಸ್ಥಳೀಯವಾಗಿ ಸಿದ್ಧಪಡಿಸಿದೆಯಂತೆ. 'BHISHM' ಎಂದರೆ 'ಭಾರತ್ ಹೆಲ್ತ್ ಇನಿಶಿಯೇಟಿವ್ ಫಾರ್ ಸಹಯೋಗ್, ಹಿತಾ ಅಂಡ್ ಮೈತ್ರಿ'. ಇದುವರೆಗೂ ನಾವು ನೀವು ನೋಡಿದ್ದು ಕೇಳಿದ್ದು ನಮ್ಮ ಹಾಗೆ ರಸ್ತೆಯಲ್ಲಿ ಚಲಿಸುವ ಸಂಚಾರಿ ಕ್ಲಿನಿಕ್ಕುಗಳು. ಆದರೆ ವಾಯುಸೇನೆಯ ಕೆಲಸ ವಾಯುಮಂಡಲದಲ್ಲಿ, ಅಲ್ಲವೆ? ಇದೂ ಒಂದು ಮೊಬೈಲ್ ಕ್ಲಿನಿಕ್ ಎನ್ನುವುದಾದರೆ ಇದರಲ್ಲೇನು ಹೊಸತು ಎಂದಿರಾ? ಇಲ್ಲಿದೆ ಉತ್ತರ. ಇವು ಹೆಲಿಕ್ಯಾಪ್ಟರುಗಳ ಮೂಲಕ ಹಾರಿಬಿಟ್ಟು ಕೆಳಕ್ಕೆ ಕಳುಹಿಸಬಹುದಾದ ಮೊಬೈಲ್ ಕ್ಲಿನಿಕ್ಕುಗಳು. ಪ್ಯಾರಾಚೂಟಿನಂತೆ ಇವು ಹಾರುವುದಿಲ್ಲ. ವಿಮಾನದಿಂದ ಕೆಳಕ್ಕೆ ಬಿಟ್ಟಾಗ ಗಾಳಿಯಲ್ಲಿ ಚಲಿಸಿ ನಿರ್ದಿಷ್ಟ ಪ್ರದೇಶಗಳಿಗೆ ತಲುಪಬಲ್ಲ ಕ್ಲಿನಿಕ್ಕುಗಳಿವು. ಹೌದು. ಭಾರತೀಯ ವಾಯುಸೇನಾಪಡೆ ಮೊನ್ನೆ ಆಗ್ರಾದ ಬಳಿ ಈ BHISHM ಘಟಕಗಳನ್ನು ಹಾರಿಬಿಟ್ಟು ಪರೀಕ್ಷಿಸಿದೆಯಂತೆ.

ಇಂದು ಎಲ್ಲೆಡೆ ಜನಪ್ರಿಯವಾಗಿರುವ 'ಆರ್ಟಿಫಿಶಿಯಲ್ ಇಂಟೆಲಿಜೆನ್ಸ್' ಮತ್ತು 'ಡಾಟಾ ಅನಲಿಟಿಕ್ಸ್'ನ ಅತ್ಯಾಧುನಿಕ ಈ ತಂತ್ರಜ್ಞಾನಗಳನ್ನೂ ಈ ಮೊಬೈಲ್ ಕ್ಲಿನಿಕ್ಕುಗಳಲ್ಲಿ ಅಳವಡಿಸಿರುವುದು ವಿಶೇಷ. BHISHM ಘಟಕಗಳಲ್ಲಿ ಒಂದು ಆಸ್ಪತ್ರೆಯಲ್ಲಿರಬಹುದಾದ ಆಪರೇಷನ್ ಥಿಯೇಟರ್, ಮಿನಿ-ಐಸಿಯು, ವೆಂಟಿಲೇಟರ್, ರಕ್ತಪರೀಕ್ಷಾ ಸಾಧನಗಳು, ಎಕ್ಸ್-ರೇ ಯಂತ್ರಗಳು, ಕುಕಿಂಗ್ ಸ್ಟೇಷನ್ ಮುಂತಾದ ಎಲ್ಲ ಅವಶ್ಯಕ ಮತ್ತು ಪ್ರಮುಖ ಆಧುನಿಕ ವ್ಯವಸ್ಥೆಗಳನ್ನು ಅಳವಡಿಸಲಾಗಿದೆ.

ಇವು ಯಾವುದೇ ನಿರ್ಜನ ಪ್ರದೇಶಗಳಲ್ಲಿ ಬೆಟ್ಟಗುಡ್ಡ, ಅರಣ್ಯಪ್ರದೇಶಗಳಲ್ಲಿಯೂ ಕಾರ್ಯನಿರ್ವಹಿಸಬಲ್ಲವಂತೆ. ಇದರಿಂದಾಗಿ ಪ್ರವಾಹ, ಭೂಕಂಪ, ಸುನಾಮಿ, ಬೆಂಕಿಯ ಅಪಘಾತಗಳು, ವಿಮಾನ ಅಪಘಾತಗಳಂತಹ ವಿಪತ್ತು ಸಂದರ್ಭಗಳಲ್ಲಿ ಇವು ಬಹಳ ಅನುಕೂಲಿ. ಜೊತೆಗೆ ಇವನ್ನು ವಿಮಾನಗಳಿಂದ ಹಾರಿಬಿಟ್ಟಾಗ ಆರ್ಟಿಫಿಶಿಯಲ್ ತಂತ್ರಜ್ಞಾನದ ಸಹಾಯದಿಂದ ಅಪಾಯ ಸಂಭವಿಸಿರುವ ಸ್ಥಳವನ್ನು ಗುರುತಿಸುತ್ತವೆಯಂತೆ; ಬೆಟ್ಟಗುಡ್ಡ ಅಥವಾ ಅರಣ್ಯಪ್ರದೇಶಗಳಲ್ಲಿ ಕಾರ್ಯನಿರ್ವಹಿಸಬೇಕಾದಾಗಲೂ ವೇಗವಾಗಿ ಚಲಿಸಿ, ತಕ್ಷಣ ಗ್ರಹಿಸಿ, ತುರ್ತಾಗಿ ವೈದ್ಯಕೀಯ ಸೇವೆಗಳನ್ನು ಇವು ನೀಡಬಲ್ಲವಂತೆ. ಏಕಕಾಲದಲ್ಲಿ ಸುಮಾರು 200 ಜನರಿಗೆ ಚಿಕಿತ್ಸೆ ಮಾಡಬಲ್ಲ ವ್ಯವಸ್ಥೆಯನ್ನು ಅಳವಡಿಸಲಾಗಿದೆ.

ಇದರ ತಂತ್ರಜ್ಞಾನದ ಕಾರಣದಿಂದಾಗಿ ಜನರನ್ನು ಸರಿಯಾದ ಸಮಯದಲ್ಲಿ ರಕ್ಷಿಸಬಹುದು. ಪರಿಸ್ಥಿತಿಗಳಿಗೆ ಅನುಗುಣವಾಗಿ ಪೂರ್ವತಯಾರಿಗಳನ್ನೂ ಮಾಡಿಕೊಳ್ಳಲೂ ಇದು ನೆರವಾಗುತ್ತದೆ. ವೈದ್ಯಕೀಯ ತಂಡಗಳು ಸಹಕಾರ, ಸಂವಹನ ಮತ್ತು ಸಂಪರ್ಕಗಳನ್ನು ಸುಲಭವಾಗಿಸುತ್ತದೆ. ತನ್ಮೂಲಕ ಕಾರ್ಯಾಚರಣೆಯನ್ನೂ ಸಫಲಗೊಳಿಸುತ್ತದೆ.

BHISHM ಘಟಕಗಳನ್ನು 72 ಹಗುರವಾದ, ಸದೃಢವಾದ ಹಾಗೂ ಜಲನಿರೋಧಕ ಭಾಗಗಳಿಂದ ಮಾಡಲಾಗಿದೆ. ಆಕಾಶದಲ್ಲಿ ಚಲಿಸಿ ಮೇಲಿಂದ ಕೆಳಕ್ಕೆ ಬೀಳಬೇಕೆಂದರೆ ಅವು ಹಗುರವಾಗಿಯೂ ಇರಬೇಕು. ಸದೃಢವಾಗಿಯೂ ಇರಬೇಕು. ಹಾಗಾದಲ್ಲಿ ಮಾತ್ರವೇ ಇವನ್ನು ತ್ವರಿತವಾಗಿ ಮತ್ತು ವಿವಿಧ ರೀತಿಗಳಲ್ಲಿ ಆರೋಗ್ಯಸೇವಾ ಕಾರ್ಯಕ್ಕೆ ನಿಯೋಜಿಸುವುದು ಸುಲಭ. ಅಂತೆಯೇ BHISHM ಘಟಕಗಳನ್ನು ವಿನ್ಯಾಸ ಮಾಡಲಾಗಿದೆ. ಇವುಗಳನ್ನು ಮೊದಲಿಗೆ ಬಿಡಿಭಾಗಗಳಾಗಿ ವ್ಯವಸ್ಥಿತವಾಗಿಟ್ಟುಕೊಂಡಿದ್ದು, ಅಗತ್ಯಬಿದ್ದಾಗ ಕೇವಲ 12 ನಿಮಿಷಗಳಲ್ಲಿ ಕ್ಲಿನಿಕ್ಕನ್ನು ರೂಪಿಸಿಬಿಡಬಹುದಂತೆ. ಬೈಸಿಕಲ್, ಬೈಕ್, ಡ್ರೋನ್, ವಿಮಾನ – ಹೀಗೇ ಯಾವುದೇ ರೀತಿಯಲ್ಲಾದರೂ ಕೊಂಡೊಯ್ದು ಬಳಸಿಕೊಳ್ಳಬಹು. ಇವು ರಸ್ತೆಮಾರ್ಗಗಳಿಂದ ಹಿಡಿದು ವಿಮಾನದಿಂದ ಕೆಳಕ್ಕೆ ಹಾರಿಸುವುದರವರೆಗೆ ಎಲ್ಲ ರೀತಿಯಲ್ಲೂ, ಎಲ್ಲ ಪರಿಸ್ಥಿತಿಗಳಲ್ಲಿಯೂ ಸುಲಭವಾಗಿ ಕೆಲಸ ಮಾಡುತ್ತವೆ. ಹೀಗಾಗಿ ವಿಪತ್ತಿನಂತಹ ಮಾರಣಾಂತಿಕ ಸಂದರ್ಭಗಳಲ್ಲಿ ಇಂತಹ ಸೇವೆಗಳು ಬಹಳ ಉಪಯುಕ್ತವೆನಿಸುತ್ತವೆ.

❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ವಿಜ್ಞಾನ

ಜೀವ ಕ್ರಿಯೆಗಳು

27) **ದುಗ್ಧರಸದ ಕಾರ್ಯವೇನು?**

ಉತ್ತರ: ದುಗ್ದರಸವು ಜೀರ್ಣವಾದ ಮತ್ತು ಕರುಳಿನಿಂದ ಹೀರಲ್ಪಟ್ಟ ಕೊಬ್ಬನ್ನು ಸಾಗಿಸುತ್ತದೆ ಮತ್ತು ಜೀವಕೋಶದ ಹೊರಗಿರುವ ಅಧಿಕ ದ್ರವ ಪದಾರ್ಥವನ್ನು ಮರಳಿ ರಕ್ತಕ್ಕೆ ಹರಿಯುವಂತೆ ಮಾಡುತ್ತದೆ.

28) **'ಹೃದಯವು ಒಂದು ಪಂಪ್' ಈ ಹೇಳಿಕೆಯನ್ನು ಸಮರ್ಥಿಸಿ**

ಉತ್ತರ:– ಹೃದಯವು ಸ್ನಾಯುವಿನಿಂದಾದ ಒಂದು ಅಂಗವಾಗಿದ್ದು ನಮ್ಮ ಮುಷ್ಟಿಯಷ್ಟು ದೊಡ್ಡದಿದೆ. ಆಕ್ಸಿಜನ್ ಮತ್ತು ಕಾರ್ಬನ್ ಡೈಆಕ್ಸೈಡ್ ಎರಡನ್ನೂ ರಕ್ತದ ಮೂಲಕ ಸಾಗಾಣಿಕೆ ಮಾಡಬೇಕಿರುವುದರಿಂದ, ಹೃದಯವು ಆಕ್ಸಿಜನ್ ಸಮೃದ್ಧ ರಕ್ತವನ್ನು ಕಾರ್ಬನ್ ಡೈಆಕ್ಸೈಡ್‌ಯುಕ್ತ ರಕ್ತದೊಂದಿಗೆ ಮಿಶ್ರಣವಾಗದಂತೆ ತಡೆಯಲು ವಿಭಿನ್ನ ಕೋಣೆಗಳನ್ನು ಹೊಂದಿದೆ.



ಕಾರ್ಬನ್ ಡೈಆಕ್ಸೈಡ್ ಅನ್ನು ತೆಗೆದುಹಾಕಲು ಕಾರ್ಬನ್ ಡೈಆಕ್ಸೈಡ್ ಸಮೃದ್ಧ ರಕ್ತವು ಶ್ವಾಸಕೋಶವನ್ನು ತಲುಪಬೇಕು ಮತ್ತು ಆಕ್ಸಿಜನ್‌ಪೂರಿತ ರಕ್ತವನ್ನು ಶ್ವಾಸಕೋಶಗಳಿಂದ ಮರಳಿ ಹೃದಯಕ್ಕೆ ತರಬೇಕು. ಈ ಆಕ್ಸಿಜನ್‌ಸಮೃದ್ಧ ರಕ್ತವನ್ನು ನಂತರ ದೇಹದ ಉಳಿದ ಭಾಗಗಳಿಗೆ ಪಂಪ್ ಮಾಡಲಾಗುತ್ತದೆ. (ಅಭಿಧಮನಿ ಅಪಧಮನಿ ಚಿತ್ರ ನೋಡಿ)

ಆಕ್ಸಿಜನ್ ಸಮೃದ್ಧ ರಕ್ತವು ಶ್ವಾಸಕೋಶಗಳಿಂದ ತೆಳುವಾದ ಭಿತ್ತಿಯಿರುವ ಹೃದಯದ ಮೇಲಿನ ಕೋಣೆ, ಎಡ ಹೃತ್ಕರ್ಣಕ್ಕೆ ಬರುತ್ತದೆ. ಈ ರಕ್ತವನ್ನು ಪಡೆದಾಗ ಎಡ ಹೃತ್ಕರ್ಣವು ಸಡಿಲಗೊಳ್ಳುತ್ತದೆ ನಂತರ ಇದು ಸಂಕುಚಿಸುತ್ತದೆ. ಆಗ ಪಕ್ಕದ ಕೋಣೆ, ಎಡ ಹೃತ್ಕುಕ್ಷಿ ಹಿಗ್ಗುತ್ತದೆ. ಇದರಿಂದಾಗಿ ರಕ್ತವು ಇದಕ್ಕೆ ವರ್ಗಾವಣೆಗೊಳ್ಳುತ್ತದೆ. ಯಾವಾಗ ಸ್ನಾಯುವಿನಿಂದಾದ ಎಡ ಹೃತ್ಕುಕ್ಷಿಯು ಸಂಕುಚಿಸುತ್ತದೆಯೋ, ರಕ್ತವು ದೇಹದೊಳಗೆ ಪಂಪ್ ಮಾಡಲ್ಪಡುತ್ತದೆ. ಬಲಭಾಗದ ಮೇಲಿನ ಕೋಣೆ, ಬಲಹೃತ್ಕರ್ಣವು ಹಿಗ್ಗಿದಾಗ ಆಕ್ಸಿಜನ್‌ರಹಿತ ರಕ್ತವು ದೇಹದಿಂದ ಅದಕ್ಕೆ ಬರುತ್ತದೆ. ಬಲ ಹೃತ್ಕರ್ಣವು ಸಂಕುಚಿಸಿದಂತೆ ಅದಕ್ಕನುಗುಣವಾಗಿ ಕೆಳಗಿನ ಕೋಣೆ, ಬಲ ಹೃತ್ಕುಕ್ಷಿಯು ಹಿಗ್ಗುತ್ತದೆ. ಇದು ಬಲಹೃತ್ಕುಕ್ಷಿಗೆ ರಕ್ತವನ್ನು ವರ್ಗಾಯಿಸುತ್ತದೆ. ಅದು ಈ ರಕ್ತವನ್ನು ಆಕ್ಸಿಜನ್‌ಪೂರಿತಗೊಳಿಸಲು ಶ್ವಾಸಕೋಶಗಳಿಗೆ ಪಂಪ್ ಮಾಡುತ್ತದೆ. ಹೃತ್ಕುಕ್ಷಿಗಳು ರಕ್ತವನ್ನು ಹಲವಾರು ಅಂಗಗಳಿಗೆ ಪಂಪ್ ಮಾಡಬೇಕಿರುವುದರಿಂದ ಅವು ಹೃತ್ಕರ್ಣಗಳಿಗಿಂತ ದಪ್ಪವಾದ ಸ್ನಾಯುವಿನ ಭಿತ್ತಿಗಳನ್ನು ಹೊಂದಿವೆ. ಹೃತ್ಕರ್ಣಗಳು ಅಥವಾ ಹೃತ್ಕುಕ್ಷಿಗಳು ಸಂಕುಚಿಸಿದಾಗ ರಕ್ತವು ಹಿಮ್ಮುಖವಾಗಿ ಹರಿಯದಂತೆ ಕವಾಟಗಳು ನಿಯಂತ್ರಿಸುತ್ತವೆ.

ಹೀಗಾಗಿಯೇ ಹೃದಯ ಒಂದು ಪಂಪ್ ಎಂದು ಹೇಳಬಹುದು

29) **ಸಸ್ಯಗಳಲ್ಲಿ ಸಾಗಾಣಿಕೆಗಳ ಬಗ್ಗೆ ಬರೆಯಿರಿ**

ಉತ್ತರ:– ಸಸ್ಯಗಳ ದೇಹ ನಿರ್ಮಾಣಕ್ಕೆ ಅಗತ್ಯವಾದ ಇತರ ಕಚ್ಚಾವಸ್ತುಗಳನ್ನೂ ಕೂಡಾ ಪ್ರತ್ಯೇಕವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಸಸ್ಯಗಳಿಗೆ ಮಣ್ಣು, ನೈಟ್ರೋಜನ್, ಫಾಸ್ಫರಸ್ ಮತ್ತು ಇತರ ಖನಿಜಗಳಂಥ ಕಚ್ಚಾವಸ್ತುಗಳ ಹತ್ತಿರದ ಮತ್ತು ಶ್ರೀಮಂತ ಆಕರವಾಗಿದೆ. ಆದ್ದರಿಂದ, ಈ ವಸ್ತುಗಳ ಹೀರುವಿಕೆಯು ಮಣ್ಣಿನೊಂದಿಗೆ ಸಂಪರ್ಕದಲ್ಲಿರುವ ಭಾಗವಾದ ಬೇರಿನ ಮೂಲಕ ನಡೆಯುತ್ತದೆ. ಮಣ್ಣಿನೊಂದಿಗೆ ಸಂಪರ್ಕದಲ್ಲಿರುವ ಅಂಗಗಳು ಮತ್ತು ಕ್ಲೋರೋಫಿಲ್ ಹೊಂದಿರುವ ಅಂಗಗಳ ನಡುವಿನ ಅಂತರವು ಕಡಿಮೆ ಇದ್ದರೆ ಶಕ್ತಿ ಮತ್ತು ಕಚ್ಚಾವಸ್ತುಗಳು ಸಸ್ಯ ದೇಹದ ಎಲ್ಲಾ ಭಾಗಗಳಿಗೆ ಸುಲಭವಾಗಿ ವಿಸರಣೆಗೊಳ್ಳುತ್ತವೆ. ಆದರೆ ಸಸ್ಯ ದೇಹದ ವಿನ್ಯಾಸದಲ್ಲಿನ ಬದಲಾವಣೆಯಿಂದಾಗಿ ಈ ಅಂತರವು ಹೆಚ್ಚಾದರೆ ಎಲೆಗಳಿಗೆ ಕಚ್ಚಾಪದಾರ್ಥಗಳನ್ನು ಮತ್ತು ಬೇರುಗಳಿಗೆ ಶಕ್ತಿಯನ್ನು ಒದಗಿಸಲು ವಿಸರಣ ಪ್ರಕ್ರಿಯೆಯು ಸಾಲುವುದಿಲ್ಲ. ಆದ್ದರಿಂದ, ಇಂತಹ ಸಂದರ್ಭಗಳಲ್ಲಿ ಒಂದು ಸಮರ್ಪಕ ಸಾಗಾಣಿಕಾ ವ್ಯವಸ್ಥೆಯು ಅಗತ್ಯವಾಗುತ್ತದೆ. ವಿಭಿನ್ನ ದೇಹ ವಿನ್ಯಾಸಗಳ ನಡುವೆ ಶಕ್ತಿ ಅವಶ್ಯಕತೆಯು ಭಿನ್ನವಾಗಿರುತ್ತದೆ. ಸಸ್ಯಗಳು ಚಲಿಸುವುದಿಲ್ಲ ಮತ್ತು ಸಸ್ಯ ದೇಹವು ಅನೇಕ ಅಂಗಾಂಶಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನಿರ್ಜೀವ ಜೀವಕೋಶಗಳನ್ನು ಹೊಂದಿವೆ. ಇದರ ಪರಿಣಾಮವಾಗಿ ಸಸ್ಯಗಳ ಶಕ್ತಿ ಅವಶ್ಯಕತೆ ಕಡಿಮೆ ಮತ್ತು ಅವು ನಿಧಾನ ಗತಿಯ ಸಾಗಾಣಿಕಾ ವ್ಯವಸ್ಥೆಯನ್ನು ಬಳಸುತ್ತವೆ. ಆದರೆ ಅತ್ಯಂತ ಎತ್ತರದ ಮರಗಳಲ್ಲಿ ಸಾಗಾಣಿಕಾ ವ್ಯವಸ್ಥೆಯು ಮಾಡಬೇಕಾದ ಕೆಲಸವು ಅತಿ ಹೆಚ್ಚಿನದಾಗಿರುತ್ತದೆ. ಸಸ್ಯ ಸಾಗಾಣಿಕಾ ವ್ಯವಸ್ಥೆಗಳು ಸಂಗ್ರಾಹಕ ಶಕ್ತಿಯನ್ನು ಎಲೆಗಳಿಂದ ಮತ್ತು ಕಚ್ಚಾ ಪದಾರ್ಥಗಳನ್ನು ಬೇರುಗಳಿಂದ ಸಂಗ್ರಹಿಸುತ್ತವೆ. ಈ ಎರಡೂ ಮಾರ್ಗಗಳು ಸ್ವತಂತ್ರವಾಗಿ ಸಂಘಟಿಸಿದ ಸಾಗಾಣಿಕಾ ಕೊಳವೆಗಳಂತೆ ನಿರ್ಮಿಸಲ್ಪಟ್ಟಿವೆ. ಮೊದಲನೆಯದು ಕ್ಸೈಲಂ, ಮಣ್ಣಿನಿಂದ ಪಡೆದ ನೀರು ಮತ್ತು ಲವಣಗಳನ್ನು ಸಾಗಿಸುತ್ತದೆ. ಇನ್ನೊಂದು ಫ್ಲೋಯಂ, ಎಲೆಗಳಲ್ಲಿ ಸಂಶ್ಲೇಷಿಸಲ್ಪಟ್ಟ ದ್ಯುತಿಸಂಶ್ಲೇಷಣೆಯ ಉತ್ಪನ್ನಗಳನ್ನು ಸಸ್ಯದ ಉಳಿದ ಭಾಗಗಳಿಗೆ ಸಾಗಿಸುತ್ತದೆ. ನೀರಿನ ಸಾಗಾಣಿಕೆ ಸಸ್ಯದ ಎಲ್ಲಾ ಭಾಗಗಳನ್ನು ತಲುಪುವ ನೀರು ಸಾಗಿಸುವ ಕಾಲುವೆಗಳ ನಿರಂತರ ವ್ಯವಸ್ಥೆಯನ್ನು ನಿರ್ಮಿಸಲು ಕ್ಸೈಲಂ ಅಂಗಾಂಶದಲ್ಲಿ ಬೇರು, ಕಾಂಡ ಮತ್ತು ಎಲೆಗಳ ನಳಿಕೆಗಳು ಮತ್ತು ಟ್ರೇಕಿಡ್‌ಗಳು ಪರಸ್ಪರ ಸಂಪರ್ಕ ಹೊಂದಿವೆ. ಬೇರುಗಳಲ್ಲಿ ಮಣ್ಣಿನ ಸಂಪರ್ಕದಲ್ಲಿರುವ ಜೀವ ಕೋಶಗಳು ಸಕ್ರಿಯವಾಗಿ ಅಯಾನುಗಳನ್ನು ಹೀರಿಕೊಳ್ಳುತ್ತವೆ. ಇದು ಬೇರು ಮತ್ತು ಮಣ್ಣಿನ ನಡುವೆ ಈ ಅಯಾನುಗಳ ಸಾರತೆಯಲ್ಲಿ ವ್ಯತ್ಯಾಸವನ್ನು ಉಂಟುಮಾಡುತ್ತದೆ. ಈ ವ್ಯತ್ಯಾಸವನ್ನು ನಿವಾರಿಸಲು ಮಣ್ಣಿನಿಂದ ಬೇರುಗಳಿಗೆ ನೀರು ಚಲಿಸುತ್ತದೆ. ಅಲ್ಲಿ ಬೇರುಗಳ ಕ್ಸೈಲಂನೊಳಕ್ಕೆ ನೀರಿನ ಸ್ಥಿರವಾದ ಚಲನೆಯು ನೀರಿನ ಒಂದು ಸ್ತಂಭವನ್ನು ಉಂಟುಮಾಡಿ ಅದು ನೀರನ್ನು ನಿರಂತರವಾಗಿ ಮೇಲಕ್ಕೆ ತಳ್ಳುತ್ತಿರುತ್ತದೆ. ಆದರೂ, ಸಸ್ಯಗಳಲ್ಲಿ ನಾವು ನೋಡುವಂತೆ ಅತ್ಯಂತ ಎತ್ತರಕ್ಕೆ ನೀರನ್ನು ಚಲಿಸುವಂತೆ ಮಾಡಲು ಈ ಒತ್ತಡವೊಂದಕ್ಕೇ ಆಗುವುದಿಲ್ಲ. ಕ್ಸೈಲಂನೊಳಗಿನ ನೀರನ್ನು ಸಸ್ಯದೇಹದ ಅತ್ಯಂತ ಎತ್ತರದ ಭಾಗಗಳಿಗೆ ಮೇಲಕ್ಕೆ ಹರಿಸಲು ಸಸ್ಯಗಳು ಇನ್ನೊಂದು ತಂತ್ರವನ್ನು ಬಳಸುತ್ತವೆ. (ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC CHEMISTRY

Chapter -3
ELECTROCHEMISTRY

33. Write a note on the function of the Salt Bridge

Ans:- (……….Contd)

It can act both as cathode and anode. When it is to act as anode (oxidation is to take place), molecules of hydrogen gas change to H^+ ions as follows:

$$H_2(g) \rightarrow 2H^+(aq) + 2e^-$$

The ions formed go into the solution. In case, it is to act as cathode (reduction is to take place) then H^+ ions from the solution accept electrons and are reduced to $H_2(g)$ as follows:

$$2H^+(aq) + 2e^- \rightarrow H_2(g)$$

It is also known as reversible electrode as it can act both as cathode and anode. The coating of platinum black over platinum foil absorbs hydrogen and also helps to establish an equilibrium between the molecules of H_2 and the ions formed in solution. A standard hydrogen electrode is represented as Pt, $H_2(g)H^+$ (1M).

As pointed earlier, its standard oxidation as well reduction potentials are taken as zero.

Limitations of SHE

The standard hydrogen electrode or normal hydrogen electrode suffers from following limitations:

(i) It is not so easy to maintain a pressure of 1 atmosphere for hydrogen gas throughout.

(ii) It is quite difficult to the kept the $[H^+]$ as 1 M.

(iii) Platinum which is a part of the electrode, gets easily poisoned even by small traces of impurities present.

Calomel and silver electrodes can also be used as reference electrodes.

Measurement of Standard Electrode Potential (E^o).

A standard hydrogen electrode acts as the reference electrode and it helps in measuring the standard electrode potential of an electrode.

An electrochemical cell is set up in which the metal electrode under consideration is kept in one half cell and the standard hydrogen electrode acts as the other half cell. The potential difference developed as a result of the redox reaction is measured with the help of a high resistance voltmeter (or better by a potentiometer). Since the electrode potential of the hydrogen electrode under standard conditions is taken as zero, the reading of the voltmeter will therefore, give the standard electrode potential of the electrode under consideration.

The deflection of the voltmeter in the cell circuit represents the flow of current. The flow of electrons is towards opposite side. If it is towards the metal electrode, this means that the flow of electrons is towards the standard hydrogen electrode.

Therefore, metal electrode will act as anode and standard hydrogen electrode as cathode. In case, the deflection is towards the hydrogen electrode, this means that the flow of electrons is from hydrogen electrode towards the metal electrode. In such a case, hydrogen electrode will act as anode and the metal electrode as the cathode.

In general, $E^o_{cell} = E^o_{cathode} - E^o_{anode}$

Here, E^o value represents the standard reduction potential of the electrode.

35. When is an electrode said to be under the standard conditions?

Ans:- An electrode is said to be under standard conditions if:

(a) Concentration of electrolyte solution is 1 molar (1 M)

(b) Pressure of gas/gases involved is one atmosphere

(c) Temperature is constant (generally 298K)

36. Mention some of the applications of electrolysis.

Ans:- Some of the applications of electrolysis are –

(a) Determination of equivalent masses of the elements.

That is, the masses of metals collected at the respective electrodes are directly proportional to their equivalent masses.

(b) Used in electrometallurgy - that is in the isolation of reactive metals like sodium, potassium, magnesium, calcium, aluminium etc., by the electrolysis of their fused salts.

(c) In electrorefining of metals - The metals like copper, silver, gold, aluminium, tin etc. are refined or purified by the process of electrorefining.

(d) In electroplating – It is the process of coating a layer of superior metal over the surface of interior metal.

37. What are the main aims of electroplating?

Ans:- The main aims of electroplating are –

a) To check corrosion or rusting of the inferior metal.

b) To impart lustre or brightness to the inferior metal. (Contd….)

ರೇಣುಕಾಸ್ವಾಮಿ ಪತ್ನಿ ಸಹನಾ ಶಪಥ • ತಾಯಿ ಜೊತೆ ಮಾತನಾಡಿದ್ದೇ ಕೊನೆ, ದರ್ಶನ್ ಭೇಟಿ ನೆಪದಲ್ಲಿ ಅಪಹರಣ?

‘ಪತಿ ಕೊಲೆ; ನ್ಯಾಯಕ್ಕಾಗಿ ಹೋರಾಡುವೆ’

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಬೆಂಗಳೂರಿನಲ್ಲಿ ಕೊಲೆಯಾಗಿರುವ ಇಲ್ಲಿಯ ತುರುವನೂರು ರಸ್ತೆ, ವಿಆರ್‌ಎಸ್ ಬಡಾವಣೆ ನಿವಾಸಿ ರೇಣುಕಾಸ್ವಾಮಿ ನಿವಾಸದ ಬಳಿ ಮಂಗಳವಾರ ಬೆಳಿಗ್ಗೆಯಿಂದಲೇ ನೀರವ ಮೌನ ಆವರಿಸಿತ್ತು. ‘ಪತಿ ಆಸ್ಪತ್ರೆಯಲ್ಲಿದ್ದಾರೆ, ಜೀವಂತವಾಗಿ ಬರುತ್ತಾರೆ’ ಎಂದು ನಂಬಿದ್ದ ರೇಣುಕಾಸ್ವಾಮಿ ಪತ್ನಿ ಸಹನಾಗೆ ಮಂಗಳವಾರ ಮಧ್ಯಾಹ್ನ ಪತಿ ಸಾವಿನ ಸುದ್ದಿ ತಿಳಿದ ಕೂಡಲೇ ದುಃಖ ಕಟ್ಟೆಯೊಡೆಯಿತು.

ಪತ್ನಿ ಗರ್ಭಿಣಿ ಎಂಬ ಕಾರಣಕ್ಕೆ ಮಧ್ಯಾಹ್ನದವರೆಗೂ ಮನೆಯವರು ವಿಷಯ ತಿಳಿಸಿರಲಿಲ್ಲ. ಸಂಜೆ ಮೃತದೇಹ ಬರಲಿದೆ ಎಂಬ ಮಾಹಿತಿ ಬಂದ ನಂತರ ಸಂಬಂಧಿಗಳು ರೇಣುಕಾಸ್ವಾಮಿ ಕೊಲೆಯಾಗಿದ್ದನ್ನು ತಿಳಿಸಿದರು.

ಬೆಸ್ಕಾಂ ನಿವೃತ್ತ ನೌಕರ ಕಾಶಿನಾಥ್ ಶಿವಣ್ಣ ಗೌಡರ್– ರತ್ನಪ್ರಭಾ ದಂಪತಿಗೆ ರೇಣುಕಾಸ್ವಾಮಿ (35) ಒಬ್ಬನೇ ಪುತ್ರ. ಕಳೆದ ವರ್ಷವಷ್ಟೇ ರೇಣುಕಾಸ್ವಾಮಿ ಕೈಹಿಡಿದಿದ್ದ ಹರಿಹರದ ಸಹನಾ 3 ತಿಂಗಳ ಗರ್ಭಿಣಿ. ‘ನಾನು ಕೆಲಸಕ್ಕೆ ಹೋಗುತ್ತಿದ್ದೇನೆ, ನೀನು ಮಾತ್ರೆ ನುಂಗುವುದನ್ನು ಮರೆಯಬೇಡ’ ಎಂದು ಹೇಳಿ ಹೋದವರು ಮನೆಗೆ ಶವವಾಗಿ ಬರುತ್ತಿದ್ದಾರೆ’ ಎಂದು ಪತ್ನಿ ಸುದ್ದಿಗಾರರೆದುರು ಗೋಳಿಟ್ಟರು.

‘ನಾನು ತಾಯಿ ಆಗುತ್ತಿದ್ದೇನೆ, ಇಂತಹ ಕಷ್ಟ ಯಾರಿಗೂ ಬರಬಾರದು, ನನ್ನೊಳಗೆ ಒಂದು ಜೀವ ಇದೆ, ಅದಕ್ಕೇ ಸಂಕಟವಾಗುತ್ತಿದೆ. ನನ್ನ ಗಂಡ ತಪ್ಪು ಮಾಡಿದ್ದರೆ ಎಚ್ಚರಿಕೆ ಕೊಡಬಹುದಾಗಿತ್ತು, ಯಾಕೆ ಕೊಲೆ ಮಾಡಿದರು? ನನ್ನ ಗಂಡ ದರ್ಶನ್ ಅಭಿಮಾನಿ ಆಗಿರಲಿಲ್ಲ. ನನ್ನೊಂದಿಗೆ ಜನ ಇದ್ದಾರೆ. ನನ್ನ ಗಂಡನ ಸಾವಿನ ನ್ಯಾಯ ಪಡೆಯಲು ಹೋರಾಟ ಮಾಡುತ್ತೇನೆ’ ಎಂದು ಸಹನಾ ನೋವು ನುಂಗಿಕೊಳ್ಳುತ್ತಲೇ ಹೇಳಿದರು.

ತಾಯಿ ಜೊತೆ ಮಾತನಾಡಿದ್ದೇ ಕೊನೆ: ಖಾಸಗಿ ಫಾರ್ಮಸಿಯಲ್ಲಿ ಕೆಲಸ ಮಾಡುತ್ತಿದ್ದ ರೇಣುಕಾಸ್ವಾಮಿ ಜೂನ್ 8ರಂದು ಮಧ್ಯಾಹ್ನದವರೆಗೂ ಅಲ್ಲಿ ಕೆಲಸ ಮಾಡಿದ್ದರು. ಊಟಕ್ಕೆ ಕರೆಯಲೆಂದೇ ತಾಯಿ ಕರೆ ಮಾಡಿದಾಗ ಸ್ನೇಹಿತರ ಜೊತೆ ಹೊರಗೆ ಹೋಗುತ್ತಿರುವುದಾಗಿ ತಿಳಿಸಿದ್ದರು. ಕುಟುಂಬದಲ್ಲಿ ತಾಯಿ ಜೊತೆ ಮಾತನಾಡಿದ್ದೇ ಕೊನೆ. ಅವತ್ತು ರಾತ್ರಿಯಾದರೂ ಮನೆಗೆ ಬಾರದಿದ್ದ ಕಾರಣಕ್ಕೆ ಪಾಲಕರು ಮಾರನೇ (ಜೂನ್ 9) ದಿನವಿಡೀ ಹುಡುಕಾಟ ನಡೆಸಿದ್ದರು. ಕೆಲಸ ಮಾಡುತ್ತಿದ್ದ ಫಾರ್ಮಸಿಯಿಂದ 100 ಮೀಟರ್ ದೂರದಲ್ಲಿ ರೇಣುಕಾಸ್ವಾಮಿ ಬೈಕ್ ಸಹ ಪತ್ತೆಯಾಗಿತ್ತು. ನಾಪತ್ತೆ ಪ್ರಕರಣ ದಾಖಲು ಮಾಡಲು ಕುಟುಂಬ ಸದಸ್ಯರು ಸಿದ್ಧತೆ ನಡೆಸುತ್ತಿರುವಾಗ ಬೆಂಗಳೂರು ಪೊಲೀಸರು ಕರೆ ಮಾಡಿ ಕರೆಸಿಕೊಂಡಿದ್ದಾರೆ. ಮಂಗಳವಾರ ಬೆಳಿಗ್ಗೆಯಷ್ಟೇ ರೇಣುಕಾಸ್ವಾಮಿ ಸಾವಿನ ಸುದ್ದಿ ಬೆಳಕಿಗೆ ಬಂದಿದೆ.

ಸದಾ ಏಕಾಂಗಿಯಾಗಿ ಇರುತ್ತಿದ್ದ ರೇಣುಕಾಸ್ವಾಮಿ ಮೊಬೈಲ್, ಇಂಟರ್‌ನೆಟ್‌ಗೆ ದಾಸರಾಗಿದ್ದರು, ಅತಿಯಾಗಿ ಗುಟ್ಕಾ ಸೇವನೆ ಮಾಡುತ್ತಿದ್ದರು. ಇದಕ್ಕೂ ಮೊದಲು ಹಲವು ಮಹಿಳೆಯರಿಗೆ ಕೆಟ್ಟದಾಗಿ ಸಂದೇಶ ಕಳುಹಿಸಿದ್ದ ಕಾರಣಕ್ಕೆ ಎಚ್ಚರಿಕೆ ನೀಡಲಾಗಿತ್ತು ಎಂದು ಆಪ್ತ ವಲಯದವರು ಮಾತನಾಡಿಕೊಳ್ಳುತ್ತಿದ್ದಾರೆ. ದರ್ಶನ್ ಅಭಿಮಾನಿಯೂ ಆಗಿದ್ದ ರೇಣುಕಾಸ್ವಾಮಿ, ಅವರ ಗೆಳತಿ ಪವಿತ್ರಾಗೌಡ ಅವರಿಗೆ ಸಾಮಾಜಿಕ ಜಾಲತಾಣಗಳಲ್ಲಿ ಕೆಟ್ಟದಾಗಿ ಸಂದೇಶ ಹಾಕುತ್ತಿದ್ದರು. ಇದೇ ಕಾರಣ ದರ್ಶನ್ ಹಾಗೂ ಅವರ ಅಭಿಮಾನಿಗಳು ಸಿಟ್ಟಾಗಿದ್ದರು ಎಂಬ ಮಾತುಗಳೂ ಕೇಳಿಬಂದಿವೆ.

ಕೊಲೆ ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳೀಯರು, ಸ್ನೇಹಿತರು ರೇಣುಕಾಸ್ವಾಮಿ ನಿವಾಸದತ್ತ ಬೆಳಿಗ್ಗೆಯಿಂದಲೇ ಬರಲಾರಂಭಿಸಿದರು. ‘ಅವನು ಅಂತಹ ಹುಡುಗನಲ್ಲ. ತೀರಾ ಮುಗ್ಧ, ಸೌಮ್ಯ ಸ್ವಭಾವದವನು. ಎಂದೂ ಗಲಾಟೆ, ಗದ್ದಲಗಳಲ್ಲಿ ಭಾಗಿಯಾದವನಲ್ಲ. ಅಂತಹ ಹುಡುಗನನ್ನು ದರ್ಶನ್ ಏಕೆ ಕೊಲೆ ಮಾಡಿಸಿದರು? ದೈಹಿಕವಾಗಿ ತೀರಾ ಕೃಶನಾಗಿದ್ದ ರೇಣುಕಾಸ್ವಾಮಿ ಒಂದೇ ಏಟಿಗೆ ತೀರಿಕೊಂಡಿದ್ದಾನೆ. ದರ್ಶನ್ ಅಣ್ಣನನ್ನು ಭೇಟಿ ಮಾಡಿಸುವ ಆಮಿಷವೊಡ್ಡಿ ರೇಣುಕಾಸ್ವಾಮಿಯನ್ನು ಬೆಂಗಳೂರಿಗೆ ಕರೆದೊಯ್ದು ಕೊಲೆ ಮಾಡಿರಬಹುದು’ ಎಂದು ಸ್ಥಳೀಯರು ಹೇಳಿದರು.

ಮಧ್ಯಾಹ್ನದ ವೇಳೆಗೆ ಪ್ರಕರಣ ಗಂಭೀರ ಸ್ವರೂಪ ಪಡೆದುಕೊಳ್ಳುತ್ತಿದ್ದಂತೆಯೇ ರೇಣುಕಾಸ್ವಾಮಿ ಸ್ನೇಹಿತರು, ಸಂಬಂಧಿಕರು ಮೌನಕ್ಕೆ ಶರಣಾದರು. ಅವರ ಮೊಬೈಲ್ ಫೋನ್‌ಗಳು ಸ್ಥಗಿತಗೊಂಡಿದ್ದವು.

ರೇಣುಕಾಸ್ವಾಮಿ ಆರ್‌ಎಸ್‌ಎಸ್, ಬಜರಂಗದಳದಲ್ಲೂ ಸಕ್ರಿಯರಾಗಿದ್ದರು. ಮೂರು ವರ್ಷಗಳ ಹಿಂದೆ ಬಜರಂಗದಳದಲ್ಲಿ ಸುರಕ್ಷಾ ಪ್ರಮುಖ್ ಜವಾಬ್ದಾರಿ ಇತ್ತು. ನಗರದಲ್ಲಿ ನಡೆಯುವ ಹಿಂದೂ ಮಹಾಗಣಪತಿ ಉತ್ಸವ, ಬಡಾವಣೆಯ ಗಣೇಶೋತ್ಸವ, ಇತ್ತೀಚೆಗೆ ಅಯೋಧ್ಯೆಯಲ್ಲಿ ನಡೆದ ಶ್ರೀರಾಮ ಮಂದಿರದ ಉದ್ಘಾಟನಾ ಕಾರ್ಯಕ್ರಮದ ಅಂಗವಾಗಿ ಸ್ಥಳೀಯವಾಗಿ ನಡೆದ ಸಂಭ್ರಮಾಚರಣೆ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು ಎಂಬ ಮಾಹಿತಿ ಇದೆ.

ಸಂಘದ ಅಧ್ಯಕ್ಷನಿಂದ ಅಪಹರಣ?: ಅಖಿಲ ಕರ್ನಾಟಕ ದರ್ಶನ್ ತೂಗುದೀಪ ಸೇನಾದ ಜಿಲ್ಲಾ ಘಟಕದ ಅಧ್ಯಕ್ಷ ರಘು ಕೂಡ ಪ್ರಕರಣದಲ್ಲಿ ಬಂಧಿತನಾಗಿದ್ದು, ಈತ ಹಾಗೂ ಸಹಚರರು ರೇಣುಕಾಸ್ವಾಮಿಯನ್ನು ಅಪಹರಿಸಿ ಕರೆದೊಯ್ದಿರಬಹುದು ಎಂಬ ಸುದ್ದಿಗಳು ಹರಿದಾಡುತ್ತಿವೆ. ಆದರೆ ಈ ಕುರಿತು ಸ್ಥಳೀಯ ಠಾಣೆಯಲ್ಲಿ ಪ್ರಕರಣ ದಾಖಲಾಗಿಲ್ಲ.

ಸಾಮಾಜಿಕ ಸಂಪರ್ಕ: ಕೊಲೆಗೀಡಾಗಿರುವ ರೇಣುಕಾಸ್ವಾಮಿ ಅವರ ಕುಟುಂಬ ಜನರೊಂದಿಗೆ ನಿಕಟ ಸಂಪರ್ಕದಲ್ಲಿತ್ತು. ಅವರ ತಂದೆ ಅನೇಕ ಧಾರ್ಮಿಕ ಕಾರ್ಯಕ್ರಮಗಳಿಗೆ ತಮ್ಮ ನಿವಾಸದಲ್ಲೇ ಆತಿಥ್ಯ ನೀಡುತ್ತಿದ್ದರು. ನಾಡಿನ ಹಲವಾರು ಮಠಾಧೀಶರು ಇವರ ಮನೆಯಲ್ಲಿ ನಡೆಯುವ ಪೂಜಾ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ಈ ಸಂದರ್ಭ ಚಿತ್ರದುರ್ಗದ ವಿವಿಧ ಸಮುದಾಯಗಳ ಮುಖಂಡರು, ನೆರೆಹೊರೆಯವರು, ಸಂಬಂಧಿಗಳು ಪಾಲ್ಗೊಳ್ಳುತ್ತಿದ್ದರು ಎಂದೂ ಸಂಬಂಧಿಗಳು ತಿಳಿಸಿದರು.

ರಾತ್ರಿ ಅಂತ್ಯಕ್ರಿಯೆ: ರೇಣುಕಾಸ್ವಾಮಿ ಮೃತದೇಹ ರಾತ್ರಿ 8.30ಕ್ಕೆ ನಗರ ತಲುಪಿತು. ಅರ್ಧ ಗಂಟೆ ಮನೆಯ ಬಳಿ ಇರಿಸಿ, ಪೂಜೆ ಸಲ್ಲಿಸಿ 9.45ರ ವೇಳೆಗೆ ಜಟ್‌ಪಟ್‌ನಗರದ ವೀರಶೈವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಮಂಗಳವಾರ ರಾತ್ರಿ ರೇಣುಕಾಸ್ವಾಮಿ ಮೃತದೇಹ ಚಿತ್ರದುರ್ಗಕ್ಕೆ ತಂದಾಗ ಸಹನಾ ಅವರನ್ನು ಕುಟುಂಬ ಸದಸ್ಯರು ಸಂತೈಸಿದರು

ದರ್ಶನ್‌ಗೆ ಆಪ್ತನಾಗಿದ್ದ ರಘು

ರೇಣುಕಾಸ್ವಾಮಿ ಅಪಹರಣ ಮತ್ತು ಕೊಲೆ ಪ್ರಕರಣದ ಆರೋಪ ಹೊತ್ತಿರುವ ಅಖಿಲ ಕರ್ನಾಟಕ ದರ್ಶನ್ ತೂಗುದೀಪ ಸೇನಾ ಅಧ್ಯಕ್ಷ ರಘು ನಟ ದರ್ಶನ್‌ಗೆ ಆಪ್ತನಾಗಿದ್ದ. ರಘು ಮಗಳ ಜನ್ಮದಿನಕ್ಕೆ ದರ್ಶನ್ ಬೆಂಗಳೂರಿಗೆ ಕರೆಸಿಕೊಂಡು ಶುಭಾಶಯ ಕೋರಿದ್ದರು. ಈ ಕುರಿತು ರಘು ತಮ್ಮ ಫೇಸ್‌ಬುಕ್ ಪುಟದಲ್ಲಿ ಚಿತ್ರಗಳನ್ನು ಹಾಕಿಕೊಂಡಿದ್ದರು. ಈ ಚಿತ್ರಗಳು ಈಗ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಪ್ರಕರಣದ ಪ್ರಮುಖ ಪಾತ್ರಧಾರಿ ರಘು ಎನ್ನಲಾಗುತ್ತಿದ್ದು, ಈತನ ವಿಚಾರಣೆ ನಂತರವೇ ಇಡೀ ಪ್ರಕರಣ ಬೆಳಕಿಗೆ ಬಂದಿದೆ ಎನ್ನಲಾಗಿದೆ.

ರಘು, ನಟ ದರ್ಶನ್ ಜೊತೆಗಿರುವುದು (ಸಂಗ್ರಹ ಚಿತ್ರ)

ಮುಖ್ಯಾಂಶಗಳು

- ಜೂನ್ 8ರ ಮಧ್ಯಾಹ್ನದಿಂದ ರೇಣುಕಾಸ್ವಾಮಿ ನಾಪತ್ತೆ
- ಜೂನ್ 9ರಂದು ಮನೆಯವರಿಂದ ಹುಡುಕಾಟ
- ಜೂನ್ 10ರಂದು ಕೊಲೆ ಬಗ್ಗೆ ಮಾಹಿತಿ ನೀಡಿದ ಪೊಲೀಸರು

ಮದುವೆ ಸಂದರ್ಭದಲ್ಲಿ ರೇಣುಕಾಸ್ವಾಮಿ

ಸತತ ಮಳೆ: ಮಾಂಜ್ರಾ ನದಿಗೆ ಜೀವಕಳೆ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ)/ಬೀದರ್: ಹೊಸಪೇಟೆ ಸಹಿತ ವಿಜಯನಗರ ಜಿಲ್ಲೆಯ ಹಲವೆಡೆ ಮಂಗಳವಾರ ಬಿರುಸಿನ ಮಳೆ ಸುರಿದಿದ್ದು, ವಾತಾವರಣ ತಂಪಾಗಿದೆ. ಉತ್ತಮ ಮಳೆ ಆಗಿರುವುದರಿಂದ ಜಿಲ್ಲೆಯಲ್ಲಿ ಕೃಷಿ ಚಟುವಟಿಕೆ ಗರಿಗೆದರಿದೆ.

ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಸಾಯಗಾಂವ್ ಹೋಬಳಿಯಲ್ಲಿ ಮಂಗಳವಾರ ನಸುಕಿನ ಜಾವ ಉತ್ತಮವಾಗಿ ಮಳೆ ಸುರಿದ್ದಿದ್ದು, 5.8 ಸೆಂ.ಮೀ ಮಳೆ ದಾಖಲಾಗಿದೆ.

ಜಿಲ್ಲೆಯ ಬೀದರ್, ಭಾಲ್ಕಿ, ಔರಾದ್, ಬಸವಕಲ್ಯಾಣ, ಹುಮನಾಬಾದ್, ಕಮಲನಗರ, ಹುಲಸೂರಿನಲ್ಲೂ ಉತ್ತಮ ವರ್ಷಧಾರೆಯಾಗಿದೆ. ಮಹಾರಾಷ್ಟ್ರದಲ್ಲಿ ಉತ್ತಮ ಮಳೆಯಾಗುತ್ತಿರುವುದರಿಂದ ಮಾಂಜ್ರಾ ನದಿಗೆ ಅಪಾರ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದೆ.

ತುಂಗಭದ್ರಾ ಜಲಾಶಯಕ್ಕೆ 3,750 ಕ್ಯುಸೆಕ್ ನೀರು ಹರಿದು ಬಂದಿದ್ದು, ಜಲಾಶಯದಲ್ಲಿ ಇದೀಗ 4.92 ಟಿಎಂಸಿ ಅಡಿ ನೀರು ಸಂಗ್ರಹವಾಗಿದೆ.

ಬಾಗಲಕೋಟೆ ವರದಿ: ಮಹಾರಾಷ್ಟ್ರದ ರಾಜಾಪುರ ಜಲಾಶಯದಿಂದ 20 ಸಾವಿರ ಕ್ಯುಸೆಕ್ ನೀರು ಕೃಷ್ಣಾ ನದಿಗೆ ಹರಿದು ಬರುತ್ತಿದ್ದು, ನದಿ ತೀರದ ಜನರಿಗೆ ನದಿ ಬಳಿ ತೆರಳದಂತೆ ಎಚ್ಚರಿಕೆ ನೀಡಲಾಗಿದೆ.

ಬೆಳಗಾವಿ ಜಿಲ್ಲೆಯ ಮಹಿಷವಾಡಗಿ ಸೇತುವೆ ಮೇಲೆ ಕೃಷ್ಣಾ ನದಿ ನೀರು ಹರಿಯುತ್ತಿರುವ ಕಾರಣ ರಬಕವಿ–ಬನಹಟ್ಟಿ ಜನ, ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಗ್ರಾಮಗಳಿಗೆ ಪರ್ಯಾಯ ಮಾರ್ಗದಲ್ಲಿ ಹೋಗಬೇಕಿದೆ.

ಜಿಲ್ಲೆಯ ಬಾಗಲಕೋಟೆ, ಕೆರೂರ, ಬಾದಾಮಿ, ಮುಧೋಳ, ಬೀಳಗಿ, ಮಹಾಲಿಂಗಪುರ, ಕುಳಗೇರಿ ಕ್ರಾಸ್, ಕಲಾದಗಿ, ಅಮೀನಗಡ, ಲೋಕಾಪುರ ಸೇರಿ ವಿವಿಧೆಡೆ ಮಳೆಯಾಗಿದೆ.

ಮಡಿಕೇರಿ ವರದಿ: ನಗರ ಸೇರಿದಂತೆ ಸುತ್ತಮುತ್ತಲ ಪ್ರದೇಶಗಳಲ್ಲಿ ಮಂಗಳವಾರವೂ ಬಿರುಸಿನ ಮಳೆ ಸುರಿದಿದೆ. ಸಂಜೆಯ ನಂತರ ಸುಂಟಿಕೊಪ್ಪ ಸಮೀಪದ ಕೆದಕಲ್ ವ್ಯಾಪ್ತಿಯಲ್ಲಿ ಭಾರಿ ಮಳೆಯಾಗಿದೆ. ಮಡಿಕೇರಿ ನಗರದಲ್ಲೂ ಮಳೆ ಧಾರಾಕಾರವಾಗಿ ಸುರಿದಿದೆ.

ಸೋಮವಾರಪೇಟೆಯಲ್ಲಿ ಸಾಧಾರಣ ಮಳೆಯಾಗಿದ್ದರೆ, ನಾಪೋಕ್ಲು ಭಾಗದಲ್ಲಿ ಆಗಾಗ ರಭಸದ ಮಳೆಯಾಗಿದೆ.

ಮಂಗಳವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಮಡಿಕೇರಿ ತಾಲ್ಲೂಕಿನಲ್ಲಿ 11 ಸೆಂ.ಮೀನಷ್ಟು ಮಳೆಯಾಗಿದೆ. ಸೋಮವಾರಪೇಟೆ ತಾಲ್ಲೂಕು ವ್ಯಾಪ್ತಿಯಲ್ಲಿ 7, ಪೊನ್ನಂಪೇಟೆ ತಾಲ್ಲೂಕಿನಲ್ಲಿ 5, ವಿರಾಜಪೇಟೆ ತಾಲ್ಲೂಕಿನಲ್ಲಿ 3 ಹಾಗೂ ಕುಶಾಲನಗರ ತಾಲ್ಲೂಕು ವ್ಯಾಪ್ತಿಯಲ್ಲಿ 2 ಸೆಂ.ಮೀನಷ್ಟು ಮಳೆಯಾಗಿದೆ.

ಮಂಗಳೂರು ವರದಿ: ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮಂಗಳವಾರ ಆಗಾಗ ಬಿಡುವು ಕೊಟ್ಟು ಬಿರುಸಿನ ಮಳೆ ಸುರಿಯಿತು.

ಬೆಳಗಿನ ಹೊತ್ತು ಬಿಡುವು ಕೊಟ್ಟಿದ್ದ ಮಳೆ, ಮಧ್ಯಾಹ್ನದ ವೇಳೆಗೆ ಚುರುಕುಗೊಂಡಿತು. ಮಂಗಳವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡ 24 ಗಂಟೆ ಅವಧಿಯಲ್ಲಿ ಮೂಲ್ಕಿಯಲ್ಲಿ 5 ಸೆಂ.ಮೀ, ಗುರುಪುರದಲ್ಲಿ 4.7 ಸೆಂ.ಮೀ, ಸುರತ್ಕಲ್‌ನಲ್ಲಿ 4.8 ಸೆಂ.ಮೀ, ಸುಳ್ಯದಲ್ಲಿ 4.6 ಸೆಂ.ಮೀ ಮಳೆ ದಾಖಲಾಗಿದೆ.

ಉಡುಪಿ ಜಿಲ್ಲೆಯಾದ್ಯಂತ ಕಳೆದ ನಾಲ್ಕು ದಿನಗಳಿಂದ ಸುರಿದ ಧಾರಾಕಾರ ಮಳೆ ಮಂಗಳವಾರ ಬೆಳಿಗ್ಗೆಯಿಂದ ಸಂಜೆವರೆಗೆ ಬಿಡುವು ನೀಡಿತು. ಸಂಜೆಯ ಬಳಿಕ ಮತ್ತೆ ಬಿರುಸುಗೊಂಡಿತು. ಕೋಟದಲ್ಲಿ 5.2 ಸೆಂ.ಮೀ, ಕಾಪುವಿನಲ್ಲಿ 5 ಸೆಂ.ಮೀ, ಕಾರ್ಕಳದಲ್ಲಿ 4 ಸೆಂ.ಮೀ, ವಂಡ್ಸೆಯಲ್ಲಿ 4 ಸೆಂ.ಮೀ ಮಳೆ ದಾಖಲಾಗಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಾಧಾರಣ ಮಳೆಯಾಗಿದೆ. ಮೂಡಿಗೆರೆ, ಕಳಸ, ಶೃಂಗೇರಿ ಭಾಗದಲ್ಲಿ ನಿರಂತರವಾಗಿ ಮಳೆಯಾಗುತ್ತಿದ್ದು, ತರೀಕೆರೆ, ಕಡೂರು ಭಾಗದಲ್ಲಿ ಸಾಧಾರಣ ಮಳೆಯಾಗಿದೆ. ಚಿಕ್ಕಮಗಳೂರು ನಗರದ ಸುತ್ತಮುತ್ತ ಮೋಡಕವಿದ ವಾತಾವರಣವಿತ್ತು. ಆಗೊಮ್ಮೆ ಈಗೊಮ್ಮೆ ಮಳೆ ಸುರಿದಿದೆ.

ತೆರಿಗೆ ಸಂಗ್ರಹ: ಗುರಿ ಮುಟ್ಟದಿದ್ದರೆ ಕ್ರಮ

ಒಂದನೇ ಪುಟದಿಂದ ....

ಆರಂಭದಲ್ಲಿ ವಾಣಿಜ್ಯ ತೆರಿಗೆ ಇಲಾಖೆ ಪ್ರಗತಿ ಪರಿಶೀಲನೆ ನಡೆಯಿತು. ಕೆಲವು ಅಧಿಕಾರಿಗಳು ತೆರಿಗೆ ಸಂಗ್ರಹದಲ್ಲಿ ಶೇಕಡ 90ಕ್ಕಿಂತ ಕಡಿಮೆ ಗುರಿ ಸಾಧನೆ ಮಾಡಿರುವುದಕ್ಕೆ ಮುಖ್ಯಮಂತ್ರಿಯವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ತೆರಿಗೆ ಸಂಗ್ರಹದಲ್ಲಿನ ಗುರಿ ಸಾಧನೆ ಕುರಿತು ಪ್ರತಿ ತಿಂಗಳು ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ವಾಣಿಜ್ಯ ತೆರಿಗೆ ಇಲಾಖೆ ಆಯುಕ್ತೆ ಸಿ. ಶಿಖಾ ಅವರಿಗೆ ಸೂಚಿಸಿದರು. ‘ತೆರಿಗೆ ಸಂಗ್ರಹದಲ್ಲಿನ ಕಾರ್ಯಕ್ಷಮತೆಯನ್ನು ಆಧಾರವಾಗಿಟ್ಟುಕೊಂಡೇ ವರ್ಗಾವಣೆ ಮಾಡುತ್ತೇನೆ. ಬೇರೆ ಯಾವುದೇ ಪ್ರಭಾವಕ್ಕೂ ನಾನು ಮಣಿಯುವುದಿಲ್ಲ. ತೆರಿಗೆ ಸಂಗ್ರಹದಲ್ಲಿ ನಿರ್ಲಕ್ಷ್ಯ ತೋರಿದರೆ ವರ್ಗಾವಣೆಗೆ ಸಿದ್ಧರಾಗಿರಬೇಕು’ ಎಂಬ ಎಚ್ಚರಿಕೆಯನ್ನು ಅಧಿಕಾರಿಗಳಿಗೆ ನೀಡಿದರು.

ಕೇಂದ್ರೀಯ ಸರಕು ಮತ್ತು ಸೇವಾ ತೆರಿಗೆ (ಪ್ರಕರಣಗಳಲ್ಲಿ) ಋಣಾತ್ಮಕ ವಿಲೇವಾರಿ ಆಗುತ್ತಿರುವ ಪ್ರಕರಣಗಳನ್ನು ಗುರುತಿಸಿ. ಅಂತಹ ಪ್ರದೇಶಗಳಲ್ಲಿ ತೆರಿಗೆ ಸಂಗ್ರಹ ಹೆಚ್ಚಳಕ್ಕೆ ಆದ್ಯತೆ ನೀಡಬೇಕು. ತೆರಿಗೆಗೆ ಸಂಬಂಧಿಸಿದ ಮೇಲ್ಮನವಿ ಪ್ರಕರಣಗಳನ್ನು ಮೂರು ತಿಂಗಳೊಳಗೆ ವಿಲೇವಾರಿ ಮಾಡಬೇಕು ಎಂದು ಗಡುವು ವಿಧಿಸಿದರು.

ನೇಮಕಾತಿ ಪ್ರಸ್ತಾವ ಸಲ್ಲಿಸಲು ಸೂಚನೆ: ಅಬಕಾರಿ ಇಲಾಖೆಯ ಪ್ರಗತಿ ಪರಿಶೀಲಿಸಿದ ಸಿದ್ದರಾಮಯ್ಯ, ಇಲಾಖೆಗೆ ಅಗತ್ಯವಿರುವ ಅಬಕಾರಿ ಸಬ್ ಇನ್‌ಸ್ಪೆಕ್ಟರ್ ಮತ್ತು ಕಾನ್‌ಸ್ಟೆಬಲ್‌ಗಳ ನೇಮಕಾತಿ ಹಾಗೂ ವಾಹನಗಳ ಖರೀದಿಗೆ ಪ್ರಸ್ತಾವ ಸಲ್ಲಿಸುವಂತೆ ಸೂಚಿಸಿದರು. ನೆರೆಯ ರಾಜ್ಯಗಳಿಂದ ರಾಜ್ಯಕ್ಕೆ ಮದ್ಯ ಕಳ್ಳಸಾಗಣೆ ತಡೆಯಲು ನಿಗಾ ಹೆಚ್ಚಿಸಬೇಕು. ಮದ್ಯ ಮಾರಾಟ ಪರವಾನಗಿದಾರರಿಗೆ ಕಿರುಕುಳ ನೀಡಬಾರದು ಎಂದು ತಾಕೀತು ಮಾಡಿದರು.

ಕಾರ್ಯಾಚರಣೆ ಹೆಚ್ಚಿಸಲು ತಾಕೀತು: ‘ವಾಣಿಜ್ಯ ತೆರಿಗೆ ಸೋರಿಕೆ ತಡೆಗೆ ನಿರಂತರ ಕಾರ್ಯಾಚರಣೆ ನಡೆಸಬೇಕು. ತೆರಿಗೆ ರಹಿತ ವಹಿವಾಟು ನಡೆಸುವವರನ್ನು ಪತ್ತೆಹಚ್ಚಿ, ದಂಡ ವಿಧಿಸಬೇಕು. ಬೆಂಗಳೂರು ನಗರದಲ್ಲಿ ತೆರಿಗೆ ವರಮಾನ ಸಂಗ್ರಹಕ್ಕೆ ಹೆಚ್ಚು ಅವಕಾಶವಿದೆ. ನಗರದಲ್ಲಿ ಹೆಚ್ಚಿನ ತಂಡಗಳನ್ನು ಕಾರ್ಯಾಚರಣೆಗೆ ನಿಯೋಜಿಸಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಾಣಿಜ್ಯ ತೆರಿಗೆ ಇಲಾಖೆ ಆಯುಕ್ತರಿಗೆ ನಿರ್ದೇಶನ ನೀಡಿದರು.

ಅಬಕಾರಿ ಇಲಾಖೆಗೆ ಹೊಸ ತಂತ್ರಾಂಶ

ಅಬಕಾರಿ ಇಲಾಖೆಯ ಎಲ್ಲ ಸೇವೆಗಳನ್ನು ಆನ್‌ಲೈನ್ ಮೂಲಕ ಒದಗಿಸಲು ಅನುಕೂಲವಾಗುವಂತೆ ರೂಪಿಸಿರುವ ತಂತ್ರಾಂಶದ ಎರಡನೇ ಆವೃತ್ತಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರ ನಡೆದ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲೇ ಚಾಲನೆ ನೀಡಿದರು.

ಮದ್ಯದಂಗಡಿಗಳ ಪರವಾನಗಿ ನವೀಕರಣ, ಶುಲ್ಕ ಪಾವತಿ, ಇತರ ಇ–ಸೇವೆಗಳು, ಅಬಕಾರಿ ಕಾಯ್ದೆ ಉಲ್ಲಂಘನೆಯ ಅಪರಾಧ ಪ್ರಕರಣಗಳ ಮಾಹಿತಿ ಒಂದೇ ತಂತ್ರಾಂಶದಲ್ಲಿ ಲಭ್ಯವಾಗಲಿದೆ. ರಾಜ್ಯದ 13,122 ಮದ್ಯದಂಗಡಿಗಳು ಮತ್ತು 68 ಮದ್ಯ ಉತ್ಪಾದನಾ ಘಟಕಗಳಿಗೆ ವಿಶೇಷ ಗುರುತಿನ ಸಂಖ್ಯೆಯನ್ನು ನೀಡಿ, ಈ ತಂತ್ರಾಂಶದಲ್ಲಿ ಜೋಡಿಸಲಾಗಿದೆ.

ಹೊಸ ತಂತ್ರಾಂಶಕ್ಕೆ ಚಾಲನೆ ನೀಡಿದ ಮುಖ್ಯಮಂತ್ರಿ, ನವೀಕರಣಗೊಂಡಿರುವ ಐದು ಪರವಾನಗಿದಾರರಿಗೆ ಪರವಾನಗಿ ಪತ್ರಗಳನ್ನು ಆನ್‌ಲೈನ್ ಮೂಲಕವೇ ವಿತರಿಸಿದರು.

ಹತ್ಯೆ ಪ್ರಕರಣ: ದರ್ಶನ್, ಆಪ್ತೆ ಪವಿತ್ರಾ ಕಸ್ಟಡಿಗೆ

ಒಂದನೇ ಪುಟದಿಂದ

ಪಟ್ಟಣಗೆರೆಯ ಶೆಡ್‌ಗೆ ಕರೆತಂದು ಹಲ್ಲೆ ನಡೆಸಿ ಕೊಲೆ ಮಾಡಲಾಗಿತ್ತು. ಮೃತದೇಹವನ್ನು ಸುಮನಹಳ್ಳಿ ಸೇತುವೆ ಬಳಿಯ ಕಾಲುವೆಗೆ ಎಸೆದು ಆರೋಪಿಗಳು ಪರಾರಿಯಾಗಿದ್ದರು. ಆರೋಪಿಗಳು ಮೃತದೇಹವನ್ನು ಸ್ಕಾರ್ಪಿಯೊದಲ್ಲಿ ಸಾಗಿಸುತ್ತಿರುವ ಹಾಗೂ ಕಾಲುವೆಗೆ ತಂದು ಎಸೆಯುತ್ತಿರುವ ದೃಶ್ಯ ಸಿ.ಸಿ ಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ’ ಎಂದು ಪೊಲೀಸರು ತಿಳಿಸಿದರು.

ಇಬ್ಬರ ನಡುವೆ ಜಗಳ: ಕೆಲವು ತಿಂಗಳ ಹಿಂದೆ ಪವಿತ್ರಾ ಗೌಡ ಅವರು ಸಾಮಾಜಿಕ ಮಾಧ್ಯಮದಲ್ಲಿ ‘ನಮ್ಮ ಸಂಬಂಧಕ್ಕೆ ಹತ್ತು ವರ್ಷ’ ಎಂದು ಪೋಸ್ಟ್ ಹಾಕಿದ್ದರು. ಈ ಪೋಸ್ಟ್‌ಗೆ ದರ್ಶನ್ ಅವರ ಪತ್ನಿ ವಿಜಯಲಕ್ಷ್ಮಿ ರೀಪೋಸ್ಟ್ ಮಾಡಿ ಎಚ್ಚರಿಕೆ ರವಾನಿಸಿದ್ದರು. ವಿಜಯಲಕ್ಷ್ಮಿ ಪರವಾಗಿ ಹಲವು ಮಂದಿ ಪ್ರತಿಕ್ರಿಯಿಸಿದ್ದರು. ಆಗಲೂ ರೇಣುಕಾಸ್ವಾಮಿ ಕಮೆಂಟ್ ಹಾಕಿದ್ದರು. ವಿಜಯಲಕ್ಷ್ಮಿ ಹಾಗೂ ಪವಿತ್ರಾ ಗೌಡ ಮಧ್ಯೆ ಸಾಮಾಜಿಕ ಮಾಧ್ಯಮದಲ್ಲಿ ಪರಸ್ಪರ ಟೀಕೆ, ಆರೋಪಗಳ ವಿನಿಮಯ ನಡೆಯುತ್ತಿತ್ತು ಎಂದು ಹೇಳಲಾಗಿದೆ.

‘ದರ್ಶನ್ ಅಭಿಮಾನಿ ರೇಣುಕಾ’: ‘ರೇಣುಕಾಸ್ವಾಮಿ ದರ್ಶನ್‌ನ ಕಟ್ಟಾ ಅಭಿಮಾನಿ. ‘ಎಕ್ಸ್’ನಲ್ಲಿ ರೆಡ್ಡಿ 2205 ಎಂಬ ಖಾತೆ ತೆರೆದು, ‘ನಮ್ಮ ಡಿ ಬಾಸ್ ಮತ್ತು ಅತ್ತಿಗೆ ವಿಜಯಲಕ್ಷ್ಮಿ ಅವರಿಂದ ದೂರ ಇರಬೇಕು. ಅವರ ಕುಟುಂಬಕ್ಕೆ ತೊಂದರೆ ಕೊಡಬೇಡಿ ಪ್ಲೀಸ್’ ಎಂದು ನಿರಂತರವಾಗಿ ಪವಿತ್ರಾ ಗೌಡ ಜತೆ ಚಾಟ್ ಮಾಡಿದ್ದಾನೆ. ಜತೆಗೆ, ಅಶ್ಲೀಲವಾಗಿಯೂ ಚಾಟ್ ಮಾಡಿದ್ದಾನೆ’ ಎನ್ನಲಾಗಿದೆ.

ಗಾಯ ನೋಡಿ ಕೊಲೆ ಪ್ರಕರಣ ದಾಖಲು: ಸುಮನಹಳ್ಳಿ ಅನುಗ್ರಹ ಅಪಾರ್ಟ್‌ಮೆಂಟ್‌ನ ಸೆಕ್ಯುರಿಟ್ ಆಫೀಸರ್ ಕೇವಲ್ ರಾಮ್‌ಜಿ ಅವರು ಜೂನ್ 9ರಂದು ನೀಡಿದ ದೂರು ಆಧರಿಸಿ ತನಿಖೆ ನಡೆಸಿದ ಪೊಲೀಸರು ಆರೋಪಿಗಳನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ. ಕೇವಲ್ ರಾಮ್‌ಜಿ ಅವರು ಅಂದು ಬೆಳಿಗ್ಗೆ 8ಕ್ಕೆ ಕೆಲಸಕ್ಕೆ ತೆರಳಿದ್ದರು. ಅಪಾರ್ಟ್‌ಮೆಂಟ್ ಎದುರು ಮೋರಿ ಪಕ್ಕದ ಡಾಂಬರ್ ರಸ್ತೆಯಲ್ಲಿ ಗಸ್ತು ಮಾಡುತ್ತಿದ್ದ ವೇಳೆ ಪೇಟೆ ಚನ್ನಪ್ಪ ರಸ್ತೆಯ ಕ್ರಾಸ್‌ನಲ್ಲಿ ಪುರುಷನ ಮೃತದೇಹ ಪತ್ತೆಯಾಗಿತ್ತು. ಅವರು ತಕ್ಷಣವೇ ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಬಂದಿದ್ದ ಪೊಲೀಸರು ಮೃತದೇಹ ಪರಿಶೀಲಿಸಿದ್ದರು. ಅಷ್ಟರಲ್ಲಿ ಮೃತದೇಹವನ್ನು ನಾಯಿಗಳು ಎಳೆದಾಡಿ ಕಾಲುವೆಯಿಂದ ಹೊರಕ್ಕೆ ತಂದಿದ್ದವು.

‘ಮೃತದೇಹದ ಮುಖದ ಮೇಲೆ ಗಾಯದ ಗುರುತು, ಮುಖ, ತಲೆ ಹಾಗೂ ಕಿವಿ ಭಾಗಕ್ಕೆ ಬಲವಾದ ಪೆಟ್ಟು ಬಿದ್ದಿರುವುದನ್ನು ಗಮನಿಸಿ ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಲಾಗಿತ್ತು. ಆರಂಭದಲ್ಲೇ ಕೆಲವು ಪುರಾವೆಗಳು ಲಭಿಸಿದ್ದವು. ಅದನ್ನು ಆಧರಿಸಿ ತನಿಖೆ ಮುಂದುವರಿಸಿದಾಗ ಕೊಲೆ ಪ್ರಕರಣದಲ್ಲಿ ದರ್ಶನ್ ಪಾತ್ರವಿರುವುದು ಪತ್ತೆಯಾಗಿತ್ತು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಕರೆ ಮಾಡಿದ್ದ ಕಾಮಾಕ್ಷಿಪಾಳ್ಯ ಠಾಣೆಯ ಪೊಲೀಸರು ಮೃತದೇಹ ಸಿಕ್ಕಿರುವ ಮಾಹಿತಿಯನ್ನು ಭಾನುವಾರ ಬೆಳಿಗ್ಗೆ ನೀಡಿದ್ದರು. ಕೊಲೆಯ ಶಂಕೆ ವ್ಯಕ್ತಪಡಿಸಿದ್ದರು. ಎಲ್ಲ ಆಯಾಮಗಳಲ್ಲೂ ತನಿಖೆ ನಡೆಸುವಂತೆ ಹಿರಿಯ ಅಧಿಕಾರಿಗಳು ಸೂಚಿಸಿದ್ದರು. ಅದರಂತೆ ತನಿಖೆ ನಡೆಸಿದಾಗ ಕೊಲೆ ರಹಸ್ಯ ಬಯಲಾಯಿತು ಎಂದು ಮೂಲಗಳು ತಿಳಿಸಿವೆ.

ಮರ್ಮಾಂಗಕ್ಕೆ ಒದ್ದು ಹತ್ಯೆ

ಆರೋಪಿ ವಿನಯ್ ಅವರ ಮಾವ ಜಯಣ್ಣ ಅವರಿಗೆ ಸೇರಿದ ಪಟ್ಟಣಗೆರೆಯ ಶೆಡ್‌ನಲ್ಲಿ ಆರೋಪಿಗಳು, ರೇಣುಕಾಸ್ವಾಮಿಗೆ ಚಿತ್ರಹಿಂಸೆ ನೀಡಿ ಕೊಲೆ ಮಾಡಿರುವುದು ಪೊಲೀಸ್ ತನಿಖೆಯಿಂದ ಗೊತ್ತಾಗಿದೆ.

‘ಆರೋಪಿಗಳು ಮರ್ಮಾಂಗಕ್ಕೆ ಒದ್ದಿದ್ದಾರೆ. ಸಿಗರೇಟ್‌ನಿಂದ ಮೈ, ಕೈ ಮತ್ತು ಕಾಲುಗಳಿಗೆ ಸುಟ್ಟಿದ್ದಾರೆ. ನಂತರ, ಬೆಲ್ಟ್, ಮರದ ತುಂಡು ಹಾಗೂ ಆಯುಧಗಳಿಂದ ಹಲ್ಲೆ ನಡೆಸಿದ ಪರಿಣಾಮ ರೇಣುಕಾಸ್ವಾಮಿ ಸ್ಥಳದಲ್ಲೇ ಮೃತಪಟ್ಟಿದ್ದರು’ ಎಂದು ಪೊಲೀಸರು ಹೇಳಿದರು.

‘ಆರೋಪಿಗಳು ಒಂದು ವಾರದಿಂದ ರೇಣುಕಾಸ್ವಾಮಿ ಅವರನ್ನು ನಗರಕ್ಕೆ ಕರೆ ತರುವ ಪ್ರಯತ್ನ ಮಾಡಿದ್ದರು. ಯುವತಿ ಸೋಗಿನಲ್ಲಿ ಸಂಚು ರೂಪಿಸಿ ಸಂದೇಶ ಕಳುಹಿಸುತ್ತಿದ್ದರು. ಅದು ಸಾಧ್ಯವಾಗದಿದ್ದಾಗ ಜೂನ್ 8ರಂದು ಚಿತ್ರದುರ್ಗಕ್ಕೆ ರಾಘವೇಂದ್ರ ನೇತೃತ್ವದಲ್ಲಿ ತೆರಳಿದ್ದ ತಂಡ, ರೇಣುಕಾಸ್ವಾಮಿ ಅವರನ್ನು ನಗರಕ್ಕೆ ಕರೆತಂದಿತ್ತು. ಅದೇ ದಿನ ಮಧ್ಯಾಹ್ನ 3ರ ಸುಮಾರಿಗೆ ಶೆಡ್‌ಗೆ ಕರೆದೊಯ್ದು ಹಲ್ಲೆ ನಡೆಸಲಾಗಿದೆ. ಈ ಸಮಯದಲ್ಲಿ ದರ್ಶನ್ ಅವರಿಗೆ ಸೇರಿದ ಕೆಂಪು ಬಣ್ಣದ ಜೀಪು, ಮತ್ತೊಂದು ಸ್ಕಾರ್ಪಿಯೊ ಶೆಡ್ ಆವರಣಕ್ಕೆ ತೆರಳಿರುವುದು ಸಿ.ಸಿ ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಕೃತ್ಯ ನಡೆಯುತ್ತಿದ್ದ ಸಂದರ್ಭದಲ್ಲಿ ಹಲವು ಕಡೆ ದರ್ಶನ್, ಪವಿತ್ರಾ ಗೌಡ ಇರುವ ದೃಶ್ಯಾವಳಿ ಲಭಿಸಿದೆ’ ಎಂದು ಪೊಲೀಸರು ಹೇಳಿದರು.

ಜಯಣ್ಣ ಅವರು ತಮ್ಮ ಸ್ಥಳವನ್ನು ಬೇರೆಯವರಿಗೆ ಬಾಡಿಗೆಗೆ ನೀಡಿದ್ದರು. ಸಾಲ ಮರುಪಾವತಿಸದ ಮಾಲೀಕರಿಂದ ಜಪ್ತಿ ಮಾಡಿಕೊಂಡ ವಾಹನಗಳನ್ನು ಫೈನಾನ್ಸ್ ಕಂಪನಿಯವರು ಈ ಸ್ಥಳದಲ್ಲಿ ನಿಲುಗಡೆ ಮಾಡುತ್ತಿದ್ದರು. ಈ ಸ್ಥಳಕ್ಕೆ ವಿನಯ್ ಜತೆಗೆ ದರ್ಶನ್ ಆಗಾಗ್ಗೆ ಬರುತ್ತಿದ್ದರು ಎಂದು ಹೇಳಲಾಗಿದೆ.

ಮೊದಲು ನಾಲ್ವರು ಆರೋಪಿಗಳು ಶರಣು: ‘ಮೊಬೈಲ್ ಲೊಕೇಶನ್ ಹಾಗೂ ದೃಶ್ಯಾವಳಿ ಆಧರಿಸಿ ಭಾನುವಾರ ಮಧ್ಯಾಹ್ನ ಕೆಲವರಿಗೆ ಕರೆ ಮಾಡಿ ವಿಚಾರಣೆಗೆ ಬರುವಂತೆ ಸೂಚಿಸಲಾಯಿತು. ಅವರು ನೀಡಿದ ಮಾಹಿತಿ ಆಧರಿಸಿ ಏಳು ಮಂದಿಯನ್ನು ಬಂಧಿಸಲಾಯಿತು. ಅವರು ದರ್ಶನ್ ಹಾಗೂ ಪವಿತ್ರಾ ಗೌಡ ಹೆಸರು ಬಾಯ್ಬಿಟ್ಟಿದ್ದರು. ಎಲ್ಲರೂ ಸೇರಿಕೊಂಡು ಅಪಹರಿಸಿ ಕೊಲೆಗೆ ಸಂಚು ರೂಪಿಸಿದ್ದರು’ ಎಂದು ಪೊಲೀಸರು ಹೇಳಿದರು.

ಬೆಂಗಳೂರಿನ ನೃಪತುಂಗ ರಸ್ತೆಯಲ್ಲಿರುವ ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ಪವಿತ್ರಾಗೌಡ (ಮಧ್ಯದಲ್ಲಿ) ಕರೆದೊಯ್ದ ದೃಶ್ಯ–ಪ್ರಜಾವಾಣಿ ಚಿತ್ರ/ ಎಂ.ಎಸ್.ಮಂಜುನಾಥ್

ಆರೋಪ ಪಟ್ಟಿಯಲ್ಲಿ ಎ1, ಎ2 ಉಲ್ಲೇಖ

‘ಕಾಮಾಕ್ಷಿಪಾಳ್ಯ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ಆಧರಿಸಿಯೇ ತನಿಖೆ ಮುಂದುವರಿಸಲಾಗಿದೆ. ಆ ಎಫ್‌ಐಆರ್‌ನಲ್ಲಿ ಯಾರ ಹೆಸರೂ ಉಲ್ಲೇಖಿಸಿಲ್ಲ. ಪ್ರಾಥಮಿಕ ಮಾಹಿತಿ ಆಧರಿಸಿ, ಸಂಚು ರೂಪಿಸಿದವರ ಹಾಗೂ ಹತ್ಯೆ ನಡೆಸಿದವರನ್ನು ಬಂಧಿಸಲಾಗಿದೆ. ಮುಂದಿನ ತನಿಖೆಯಲ್ಲಿ ಕಂಡುಬಂದ ಅಂಶಗಳನ್ನು ಆಧರಿಸಿ, ಆರೋಪಪಟ್ಟಿಯಲ್ಲಿ ಎ1, ಎ2 ಆರೋಪಿಗಳು ಯಾರು ಎಂದು ಉಲ್ಲೇಖಿಸಿ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು’ ಎಂದು ಪಶ್ಚಿಮ ವಿಭಾಗದ ಡಿಸಿಪಿ ಎಸ್. ಗಿರೀಶ್ ತಿಳಿಸಿದ್ದಾರೆ.

ಬೌರಿಂಗ್ ಆಸ್ಪತ್ರೆ ಸುತ್ತಮುತ್ತ ಸಂಚಾರ ದಟ್ಟಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಲೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿ ಪೊಲೀಸ್ ಕಸ್ಟಡಿಯಲ್ಲಿರುವ ನಟ ದರ್ಶನ್, ಅವರ ಆಪ್ತೆ ಪವಿತ್ರಾಗೌಡ ಸೇರಿ 13 ಮಂದಿಯನ್ನು ಬೌರಿಂಗ್ ಆಸ್ಪತ್ರೆಯಲ್ಲಿ ಮಂಗಳವಾರ ಸಂಜೆ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಯಿತು. ಆಗ ಆಸ್ಪತ್ರೆಯ ಸುತ್ತಮುತ್ತ ಜನರು ಜಮಾಯಿಸಿದ್ದರು. ಇದರಿಂದ ಸಂಚಾರ ದಟ್ಟಣೆ ಉಂಟಾಗಿ ಸಾರ್ವಜನಿಕರು ಸಮಸ್ಯೆ ಎದುರಿಸಿದರು.

ಭದ್ರತೆ ಕಾರಣಕ್ಕೆ ಅನ್ನಪೂರ್ಣೇಶ್ವರಿ ನಗರ ಠಾಣೆಯ ಸೆಲ್‌ನಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲು ಪೊಲೀಸರು ನಿರ್ಧರಿಸಿದ್ದರು. ವೈದ್ಯರನ್ನು ಸ್ಥಳಕ್ಕೆ ಕರೆಸಿಕೊಳ್ಳಲಾಗಿತ್ತು. ನಂತರ ಹಿರಿಯ ಅಧಿಕಾರಿಗಳ ಸೂಚನೆ ಮೇರೆಗೆ ಬೌರಿಂಗ್ ಆಸ್ಪತ್ರೆಗೆ ಸಂಜೆ ಕರೆದೊಯ್ದು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಯಿತು.

ದರ್ಶನ್, ಪವಿತ್ರಾಗೌಡ ಅವರನ್ನು ಪೊಲೀಸ್ ಜೀಪಿನಲ್ಲಿ ಹಾಗೂ ಉಳಿದ ಆರೋಪಿಗಳನ್ನು ಪೊಲೀಸ್ ವ್ಯಾನ್‌ನಲ್ಲಿ ಕರೆದೊಯ್ಯಲಾಯಿತು. ಮಾರ್ಗದ ಉದ್ದಕ್ಕೂ ಬಿಗಿ ಭದ್ರತೆ ಕೈಗೊಳ್ಳಲಾಗಿತ್ತು.

ಕಾಮಾಕ್ಷಿಪಾಳ್ಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದರೂ, ಭದ್ರತೆ ದೃಷ್ಟಿಯಿಂದ ಅನ್ನಪೂರ್ಣೇಶ್ವರಿ ನಗರದಲ್ಲಿ ಆರೋಪಿಗಳ ವಿಚಾರಣೆ ನಡೆಸಲಾಯಿತು. ಠಾಣೆ ಸುತ್ತಮುತ್ತಲೂ ದೊಡ್ಡ ಸಂಖ್ಯೆಯಲ್ಲಿ ಜನರು ಸೇರಿದ್ದರು.

ಮೃತದೇಹ ಚಿತ್ರದುರ್ಗಕ್ಕೆ ರವಾನೆ: ಕೊಲೆಯಾದ ರೇಣುಕಾಸ್ವಾಮಿ ಅವರ ಮೃತದೇಹವನ್ನು ಶವಾಗಾರದಲ್ಲಿ ಇಡಲಾಗಿತ್ತು. ಮೃತದೇಹ ನೋಡಿ ಪೋಷಕರು ಕಣ್ಣೀರಿಟ್ಟರು. ‘ಆರೋಪಿಗಳಿಗೆ ಕಠಿಣ ಶಿಕ್ಷೆ ಆಗಬೇಕು’ ಎಂದು ಆಗ್ರಹಿಸಿದರು.

ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಆಂಬುಲೆನ್ಸ್‌ನಲ್ಲಿ ಮೃತದೇಹವನ್ನು ಚಿತ್ರದುರ್ಗಕ್ಕೆ ರವಾನೆ ಮಾಡಲಾಯಿತು.

ದಸರಾ ಆನೆ ‘ಅಶ್ವತ್ಥಾಮ’ ಸಾವು

ಪ್ರಜಾವಾಣಿ ವಾರ್ತೆ

ಮೈಸೂರು: ದಸರಾ ಮಹೋತ್ಸವದಲ್ಲಿ ಪಾಲ್ಗೊಂಡಿದ್ದ 38 ವರ್ಷದ ಆನೆ ‘ಅಶ್ವತ್ಥಾಮ’ ಮಂಗಳವಾರ ಮೃತಪಟ್ಟಿತು.

‘ಹುಣಸೂರು ತಾಲ್ಲೂಕಿನ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಭೀಮನಕಟ್ಟೆ ಆನೆ ಶಿಬಿರದಲ್ಲಿ ಕಾಡಾನೆಗಳ ದಾಳಿ ತಪ್ಪಿಸಲು ಅಳವಡಿಸಲಾಗಿದ್ದ ಸೋಲಾರ್ ತಂತಿ ಬೇಲಿಯ ವಿದ್ಯುತ್ ಪ್ರವಹಿಸಿ ಮೃತಪಟ್ಟಿದೆಯೆಂದು ಮೇಲ್ನೋಟಕ್ಕೆ ತಿಳಿದು ಬಂದಿದೆ’ ಎಂದು ಅರಣ್ಯ ಇಲಾಖೆ ತಿಳಿಸಿದೆ.

‘ಶಿಬಿರದಲ್ಲಿ ಸೋಮವಾರ ರಾತ್ರಿ ಆನೆಯನ್ನು ಕಟ್ಟಿ ಹಾಕಲಾಗಿತ್ತು. ಬೆಳಿಗ್ಗೆ ಸಿಬ್ಬಂದಿಯು ಮಲಗಿದ್ದ ಆನೆಯನ್ನು ಏಳಿಸಲು ಮುಂದಾದಾಗ ಅದು ಮೃತಪಟ್ಟಿರುವುದು ಗೊತ್ತಾಯಿತು. ಅದರ ಬೆನ್ನಿಗೆ ಸೋಲಾರ್ ತಂತಿ ತಾಗಿತ್ತು. ಮರಣೋತ್ತರ ಪರೀಕ್ಷೆ ನಡೆದಿದ್ದು, ಸಾವಿಗೆ ನಿಖರ ಕಾರಣ ಗೊತ್ತಾಗಲಿದೆ’ ಎಂದು ಡಿಸಿಎಫ್ ಹರ್ಷಕುಮಾರ್ ಚಿಕ್ಕನರಗುಂದ ಹೇಳಿದ್ದಾರೆ.

2017ರಲ್ಲಿ ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನಲ್ಲಿ ಅಶ್ವತ್ಥಾಮನನ್ನು ಸೆರೆ ಹಿಡಿಯಲಾಗಿತ್ತು. ಹುಲಿ ಹಾಗೂ ಕಾಡಾನೆ ಸೆರೆ ಕಾರ್ಯಾಚರಣೆಗಳಲ್ಲಿ ಬಳಸಲಾಗುತ್ತಿತ್ತು. ಶಾಂತ ಹಾಗೂ ಗಂಭೀರ ಸ್ವಭಾವಕ್ಕೆ ಹೆಸರಾಗಿದ್ದ ಅದನ್ನು ನಾಲ್ಕು ವರ್ಷದಲ್ಲಿಯೇ 2021ರ ದಸರೆಗೆ ಕರೆತರಲಾಗಿತ್ತು. ಕೋವಿಡ್ ಕಾರಣ ಅರಮನೆಯೊಳಗೆ ನಡೆದ ಜಂಬೂಸವಾರಿಯಲ್ಲಿ ‘ಸಾಲಾನೆ’ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸಿತ್ತು.

ಅಶ್ವತ್ಥಾಮ

ಜೋರು ಮಳೆಯಾದಾಗಲೆಲ್ಲ ನಡುಗಡ್ಡೆಯಾಗುವ ಲಕ್ಷ್ಮಿನಗರ

ಹರಿಯುವ ಹಳ್ಳ: ಅಕ್ಷರ ಕಲಿಕೆಗೆ ಮಕ್ಕಳ ಹರಸಾಹಸ

• ಚನ್ನಪ್ಪ ಮಾದರ

ರಾಮದುರ್ಗ (ಬೆಳಗಾವಿ ಜಿಲ್ಲೆ): ಮಳೆ ಬಂದರೆ ಎಲ್ಲರಿಗೂ ಸಂಭ್ರಮ. ಆದರೆ, ತಾಲ್ಲೂಕಿನ ಲಕ್ಷ್ಮಿನಗರದ ಗ್ರಾಮದ ಮಕ್ಕಳಿಗೆ ಇದು ಸಂಕಟ. ಪ್ರತಿ ಮಳೆಗಾಲದಲ್ಲೂ ಈ ಗ್ರಾಮ ನಡುಗಡ್ಡೆ ಆಗುತ್ತದೆ.

ಲಕ್ಷ್ಮಿ ನಗರದಲ್ಲಿ ಪ್ರಾಥಮಿಕ ಶಾಲೆ ಇಲ್ಲ. ಹೀಗಾಗಿ ಅಲ್ಲಿನ ಮಕ್ಕಳು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣಕ್ಕೆ 2 ಕಿ.ಮೀ ನಡೆದು ಪಕ್ಕದ ಉಡಚಮ್ಮನಗರ ಗ್ರಾಮಕ್ಕೆ ಹೋಗಬೇಕು. ಮಳೆ ಬಂದಾಗಲೆಲ್ಲ ಹರಿಯುವ ಸತ್ಯಮ್ಮನ ಹಳ್ಳವನ್ನು ಸುರಕ್ಷಿತವಾಗಿ ದಾಟಿಕೊಂಡು, ಮಕ್ಕಳು ಶಾಲೆಗೆ ತಲುಪಬೇಕು. ಇದು ಅನಿವಾರ್ಯ.

‘ಹಳ್ಳದ ಹರಿವು ಹೆಚ್ಚಾದರೆ ಶಾಲೆಗೆ ರಜೆ ಮಾಡಬೇಕು. ಬೆಳಿಗ್ಗೆ ಶಾಲೆಗೆ ಹೋದ ಮಕ್ಕಳು ಮರಳಿ ಮನೆಗೆ ಬರುವವರೆಗೂ ಸಮಾಧಾನ ಇರಲ್ಲ. ಎಷ್ಟೋ ಸಲ ಮಕ್ಕಳು ಹಳ್ಳದ ಆಚೆ ದಡದಲ್ಲಿ ರಾತ್ರಿಯಿಡೀ ಕೂತು, ಹಳ್ಳದಲ್ಲಿ ನೀರು ಹರಿಯುವಿಕೆ ಕಡಿಮೆಯಾದ ಬಳಿಕ ಮನೆಗೆ ಮರಳಿದ್ದಾರೆ. ಹಲವು ಸಲ ಪೋಷಕರೇ, ಮಕ್ಕಳನ್ನು ಎತ್ತಿಕೊಂಡು ಪ್ರಯಾಸದಿಂದ ಹಳ್ಳ ದಾಟಿಸಿದ್ದಾರೆ. ಹಳ್ಳ ಹರಿದಾಗಲೆಲ್ಲ, ಗ್ರಾಮವು ನಡುಗಡ್ಡೆಯಾಗುತ್ತದೆ’ ಎಂದು ಲಕ್ಷ್ಮಿನಗರದ ಗ್ರಾಮಸ್ಥರು ತಿಳಿಸಿದರು.

‘ಕಂದಾಯ ಗ್ರಾಮವಾಗದ ಲಕ್ಷ್ಮಿನಗರದಲ್ಲಿ 40 ಕುಟುಂಬಗಳು ವಾಸ ಇವೆ. 30 ಮಕ್ಕಳು ಶಾಲೆಗೆ ಹೋಗುತ್ತಾರೆ. ಸಂಗಳ ಗ್ರಾಮ ಪಂಚಾಯಿತಿಗೆ ಒಳಪಟ್ಟಿರುವ ಈ ಗ್ರಾಮದಲ್ಲಿ ಪ್ರಾಥಮಿಕ ಶಾಲೆ, ರಸ್ತೆ, ಸೇತುವೆ, ಬಸ್ ಸೌಲಭ್ಯ ಸೇರಿದಂತೆ ಯಾವುದನ್ನೂ ಕಲ್ಪಿಸಲಾಗಿಲ್ಲ’ ಎಂದು ಅವರು ದೂರಿದರು.

‘ಈ ಹಿಂದಿನ ಶಾಸಕ ಮಹಾದೇವಪ್ಪ ಯಾದವಾಡ ಅವರು ಸೇತುವೆ ನಿರ್ಮಿಸಲಿಲ್ಲ. ಹಾಲಿ ಶಾಸಕ ಅಶೋಕ ಪಟ್ಟಣ ಅವರು ನಮ್ಮ ಬೇಡಿಕೆಗೆ ಸ್ಪಂದಿಸಿಲ್ಲ. ಲೋಕಸಭಾ ಚುನಾವಣೆ ವೇಳೆ ಮತದಾನ ಬಹಿಷ್ಕರಿಸಿದ್ದೆವು. ಆದರೆ, ಸೇತುವೆ ನಿರ್ಮಿಸಲಾಗುವುದೆಂದು ಅಧಿಕಾರಿಗಳು ಭರವಸೆ ನೀಡಿದರು. ನಾವು ಮತದಾನ ಮಾಡಿದೆವು. ಆದರೆ, ಮಹತ್ವದ ಬದಲಾವಣೆಗಳೇನೂ ಆಗಿಲ್ಲ’ ಎಂದರು.

ರಾಮದುರ್ಗ ತಾಲ್ಲೂಕಿನ ಲಕ್ಷ್ಮಿನಗರ ಗ್ರಾಮದ ಮಕ್ಕಳನ್ನು ಶಾಲೆಗೆ ಕಳುಹಿಸಲು ಈಚೆಗೆ ಗ್ರಾಮಸ್ಥರು ಮಾಡಿದ ಸಾಹಸ

ಮಳೆ ಬಂದಾಗಲೆಲ್ಲ ನಮ್ಮೂರು ನಡುಗಡ್ಡೆ ಆಗುತ್ತದೆ. ಹೊಲಕ್ಕೆ ಹೋಗಿ ಬರಲು ದಾರಿಯೇ ಇಲ್ಲ. ಇದರಿಂದ ಕೃಷಿ ಚಟುವಟಿಕೆ, ಜೀವನೋಪಾಯಕ್ಕೆ ಸಂಕಷ್ಟವಾಗಿದೆ

ನಾಗಪ್ಪ ಅಡಗಲ್, ಲಕ್ಷ್ಮಿನಗರ ನಿವಾಸಿ

ಸಂಗಳ ಗ್ರಾಮ ಪಂಚಾಯಿತಿಯಲ್ಲಿ ಉದ್ಯೋಗ ಖಾತ್ರಿ ಮೂಲಕ ಹಳ್ಳಕ್ಕೆ ಬಾಂದಾರ ನಿರ್ಮಿಸುವ ಉದ್ದೇಶವಿದೆ. ಶೀಘ್ರ ಕಾಮಗಾರಿ ಆರಂಭಿಸಲಾಗುವುದು

ಬಸವರಾಜ ಐನಾಪುರ, ಕಾರ್ಯನಿರ್ವಹಣಾಧಿಕಾರಿ, ತಾಲ್ಲೂಕು ಪಂಚಾಯಿತಿ, ರಾಮದುರ್ಗ

ಮತ್ತೊಬ್ಬ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಮಂಗಳೂರು: ಕೇಂದ್ರದಲ್ಲಿ ಎನ್‌ಡಿಎ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದ ಸಲುವಾಗಿ ವಿಜಯೋತ್ಸವ ಆಚರಿಸಿ ಮರಳುತ್ತಿದ್ದ ಬಿಜೆಪಿಯ ಇಬ್ಬರು ಕಾರ್ಯಕರ್ತರಿಗೆ ಉಳ್ಳಾಲ ತಾಲ್ಲೂಕಿನ ಬೋಳಿಯಾರ್‌ನಲ್ಲಿ ಭಾನುವಾರ ಚೂರಿ ಇರಿದ ಪ್ರಕರಣದ ಮತ್ತೊಬ್ಬ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಈ ಪ್ರಕರಣದಲ್ಲಿ ಬಂಧಿತರ ಸಂಖ್ಯೆ ಆರಕ್ಕೆ ಏರಿದೆ.

ಬೋಳಿಯಾರ್ ನಿವಾಸಿ ಅಬೂಬಕರ್ ಬಂಧಿತ ಆರೋಪಿ ಎಂದು ಪೊಲೀಸರು ತಿಳಿಸಿದ್ದಾರೆ. ಆರೋಪಿಗಳಾದ ಮೊಹಮ್ಮದ್ ಶಾಕಿರ್, ಅಬ್ದುಲ್ ರಜಾಕ್, ಅಬೂಬಕರ್ ಸಿದ್ಧಿಕ್, ಸವದ್ ಹಾಗೂ ಮೋನು ಅಲಿಯಾಸ್ ಹಫೀಜ್‌ನನ್ನು ಪೊಲೀಸರು ಸೋಮವಾರವೇ ಬಂಧಿಸಿದ್ದರು.

ಇರಿತಕ್ಕೊಳಗಾದ ಬಿಜೆಪಿ ಕಾರ್ಯಕರ್ತ ಹರೀಶ್ (41) ಹಾಗೂ ನಂದ ಕುಮಾರ್ (24) ದೇರಳಕಟ್ಟೆಯ ಕೆ.ಎಸ್.ಹೆಗ್ಡೆ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

‘ಕೃತ್ಯದಲ್ಲಿ ಇನ್ನೂ 14 ಮಂದಿ ಭಾಗಿಯಾಗಿದ್ದು, ಶೋಧ ನಡೆಸುತ್ತಿದ್ದೇವೆ. ಅವರನ್ನು ಬಂಧಿಸಲು ಪೊಲೀಸರ ಮೂರು ತಂಡಗಳನ್ನು ರಚಿಸಲಾಗಿದೆ. ಕೃತ್ಯಕ್ಕೆ ಬಳಸಲಾದ ಆಯುಧವನ್ನು ವಶಕ್ಕೆ ಪಡೆಯಲಾಗಿದೆ. ಪ್ರಮುಖ ಆರೋಪಿ ತಲೆಮರೆಸಿಕೊಂಡಿದ್ದಾನೆ. ಆತನ ಹೆಸರು ರೌಡಿಗಳ ಪಟ್ಟಿಯಲ್ಲಿದೆ’ ಎಂದು ನಗರ ಪೊಲೀಸ್ ಕಮಿಷನರ್ ಅನುಪಮ್ ಅಗರ್ವಾಲ್ ತಿಳಿಸಿದರು.

‘ಬಿಜೆಪಿ ಕಾರ್ಯಕರ್ತರು ವಿಜಯೋತ್ಸವ ಮೆರವಣಿಗೆ ವೇಳೆ ‘ಭಾರತ್ ಮಾತಾಕಿ ಜೈ’ ಎಂಬ ಘೋಷಣೆ ಕೂಗಿದ್ದು ನಿಜ. ಅದಲ್ಲದೆಯೂ ಬೇರೆ ಕೆಲವು ಪ್ರಚೋದನಾಕಾರಿ ಘೋಷಣೆಗಳನ್ನೂ ಕೂಗಿದ್ದಾರೆ. ಇದರಿಂದಾಗಿ ಎರಡು ಗುಂಪುಗಳ ನಡುವೆ ವಾಗ್ವಾದ ನಡೆದಿತ್ತು. ಬೋಳಿಯಾರ್‌ನ ಆಟೊರಿಕ್ಷಾ ನಿಲ್ದಾಣದ ಬಳಿ ಕೂಗಿದ್ದ ಪ್ರಚೋದನಾಕಾರಿ ಘೋಷಣೆಗಳೂ ಸಾಮಾಜಿಕ ಮಾಧ್ಯಮಗಳಲ್ಲೂ ಹರಿದಾಡಿದ್ದವು. ಇರಿತ ಕೃತ್ಯದ ಆರೋಪಿಗಳ ಜೊತೆ, ಪ್ರಚೋದನಾಕಾರಿ ಘೋಷಣೆ ಕೂಗಿದ ಆರೋಪಿಗಳ ವಿರುದ್ಧವೂ ಕ್ರಮ ಕೈಗೊಂಡಿದ್ದೇವೆ’ ಎಂದರು.

‘ಬಿಜೆಪಿ ಕಾರ್ಯಕರ್ತರು ಮೆರವಣಿಗೆ ವೇಳೆ ಘೋಷಣೆ ಕೂಗುವಾಗ ಮುಸ್ಲಿಮರನ್ನು ಪಾಕಿಸ್ತಾನಿಗಳೆಂದು ಕರೆದಿದ್ದಾರೆ. ಅವರ ಭಾವನೆಗಳಿಗೆ ಧಕ್ಕೆ ತರುವಂತಹ ಪದ ಬಳಕೆ ಮಾಡಿದ್ದಾರೆ’ ಎಂದರು.

ತಾರಾನಾಥರ ಸಂಗೀತಯಾನ

1938-42: ತಂದೆ ಪಂಡಿತ ತಾರಾನಾಥರಿಂದ ತಬಲಾ ಹಾಗೂ ಆಯುರ್ವೇದ, ಸಾವನೂರು ಕೃಷ್ಣಚಾರ್ಯ, ವೆಂಕಟರಾವ್ ರಾಮದುರ್ಗಕರ್, ಪಂಚಾಕ್ಷರಿ ಗವಾಯಿ ಅವರಿಂದ ಹಿಂದೂಸ್ಥಾನಿ ಸಂಗೀತ ಕಲಿಕೆ

1942-48: ಗ್ವಾಲಿಯರ್ ಘರಾನಾದ ಶಂಕರರಾವ್ ದೇವಗಿರಿ ಅವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಗಾಯನ ಕಲಿಕೆ

1949: ಸೀನಿಯರ್ ಕೇಂಬ್ರಿಜ್ ಪರೀಕ್ಷೆಯಲ್ಲಿ ಉತ್ತೀರ್ಣ

1950-52: ಬೆಂಗಳೂರಿನ ಸೇಂಟ್ ಜೋಸೆಫ್ ಕಾಲೇಜಿನಲ್ಲಿ ಇಂಟರ್ ಮೀಡಿಯಟ್

1953: ಬೆಂಗಳೂರಿನ ಟೌನ್‌ಹಾಲ್‌ನಲ್ಲಿ ಸರೋದ್ ಗುರು ಉಸ್ತಾದ್ ಅಲಿ ಅಕ್ಬರ್ ಖಾನ್ ಅವರ ಸಂಗೀತ ಕಛೇರಿ ಕೇಳಿ ಸರೋದ್ ಕಲಿಯಲು ನಿರ್ಧಾರ

1955: ಬೆಂಗಳೂರಿನ ಸೆಂಟ್ರಲ್ ಕಾಲೇಜಿನಿಂದ ಬಿ.ಎ ಇಂಗ್ಲಿಷ್ ಆನರ್ಸ್ ಪದವಿ. ಮೊದಲ ರ‍್ಯಾಂಕ್‌ನಲ್ಲಿ ಉತ್ತೀರ್ಣ

1955-60: ಕೋಲ್ಕತ್ತಾದಲ್ಲಿ ಅಲಿ ಅಕ್ಬರ್ ಖಾನ್ ಕಾಲೇಜ್ ಆಫ್ ಮ್ಯೂಸಿಕ್‌ನಲ್ಲಿ ಅನ್ನಪೂರ್ಣ ದೇವಿ ಅವರಿಂದ ಸರೋದ್ ಕಲಿಕೆ. ಅಲಿ ಅಕ್ಬರ್ ಖಾನ್ ಅವರೊಂದಿಗೆ ಹಲವು ಚಿತ್ರಗಳಿಗೆ ಕೆಲಸ

1960-62: ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಚಿನ್ನದ ಪದಕದೊಂದಿಗೆ ಎಂ.ಎ ಪದವಿ

1963: ರಾಯಚೂರಿನಲ್ಲಿ ಉಪನ್ಯಾಸಕರಾಗಿ ಸೇವೆ. ಮಾಧವಿ ಅವರೊಂದಿಗೆ ವಿವಾಹ. ಪುತ್ರ ಚೇತನ್ ಜನನ

1964: ಧಾರವಾಡದ ಕೆಸಿಡಿ ಕಾಲೇಜಿನಲ್ಲಿ ಉಪನ್ಯಾಸಕ

1965-68: ಮೈಸೂರಿನ ರೀಜನಲ್ ಕಾಲೇಜ್ ಆಫ್ ಎಜುಕೇಶನ್‌ನಲ್ಲಿ ಉಪನ್ಯಾಸಕ. ಪ್ರೊ.ಸಿ.ಡಿ.ನರಸಿಂಹಯ್ಯ ಅವರ ಮಾರ್ಗದರ್ಶನದಲ್ಲಿ ಪಿಎಚ್‌ಡಿ ಪದವಿ ಪೂರ್ಣ

1974-81: ಹೈದರಾಬಾದ್‌ನ ಸಿಐಇಎಫ್‌ಎಲ್‌ನಲ್ಲಿ ಪ್ರಾಧ್ಯಾಪಕ

1975; ‘ಪಲ್ಲವಿ’ ಸಿನಿಮಾಕ್ಕೆ ರಾಷ್ಟ್ರೀಯ ಅತ್ಯುತ್ತಮ ಸಂಗೀತ ನಿರ್ದೇಶನ ಪ್ರಶಸ್ತಿ

1980: ಯೆಮನ್‌ನ ಏಡನ್‌ನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕ

1981-82: ಪುಣೆ ಇಂಡಿಯನ್ ಫಿಲ್ಮ್ ಇನ್‌ಸ್ಟಿಟ್ಯೂಟ್‌ನಲ್ಲಿ ಚಿತ್ರ ಸಂಗೀತ ವಿಭಾಗದ ಪ್ರಾಧ್ಯಾಪಕ

1982: ಎಲ್ಲ ಪ್ರಾಧ್ಯಾಪಕ ಹುದ್ದೆಗಳಿಗೆ ರಾಜೀನಾಮೆ ಸಲ್ಲಿಸಿ, ಸರೋದ್ ವಾದನಕ್ಕೆ ಸಂಪೂರ್ಣ ಸಮರ್ಪಣೆ

1995-2005: ಅಮೆರಿಕದ ಲಾಸ್ ಏಂಜಲೀಸ್‌ನ ಕ್ಯಾಲಿಫೋರ್ನಿಯಾ ಇನ್‌ಸ್ಟಿಟ್ಯೂಟ್ ಆಫ್ ದಿ ಪರ್ಫಾರ್ಮಿಂಗ್ ಆರ್ಟ್ಸ್‌ನಲ್ಲಿ ಸಂಗೀತ ಪ್ರಾಧ್ಯಾಪಕ

> ಸಾಹಿತ್ಯದಲ್ಲಿ ಯಾವುದೇ ಮಾನದಂಡ ಇಲ್ಲ. ಆದರೆ ಸಂಗೀತದಲ್ಲಿ ಹಾಗಲ್ಲ. ಇಲ್ಲಿ ಪ್ರಮಾಣವಿದೆ.

> ಬ್ಯಾರೆಯವ್ರ, ಹಿಂದಿನವರ ಸಂಗೀತ ಭಾಳಾ ಕೇಳ್ಬೇಕು... ಇಲ್ಲಿ ಕಿವಿಯಾಗ ಇಟ್ಟುಕೋಬೇಕು, ಕಿವಿಯಿಂದ ಸೋರಿ ಅದು ಮಿದುಳಿಗೆ ಹೋಗಬೇಕು. ಸಂಗೀತದಲ್ಲಿ ನಮ್ಮದು ಅನ್ನೋದು ಇಲ್ವೇ ಇಲ್ಲ, ಎಲ್ಲ ಹಿಂದಿನಿಂದ ಬಂದಿದ್ದು.

> ಒಂದು ನದಿ ಉಗಮವಾಗಬೇಕಿದ್ದರೆ ತುಂಬ ಚಿಕ್ಕದಾಗಿರುತ್ತೆ, ಆದರೆ ಮುಂದೆ ಹರೀತಾ ಹರೀತಾ ದೊಡ್ಡದಾಗುತ್ತದೆ. ಕಾವೇರಿ ಉಗಮ ನೋಡಿ, ಚೊಂಬಿನಷ್ಟು ನೀರು ಇರುತ್ತೆ. ಆದರೆ ಮುಂದೆ ಶ್ರೀರಂಗಂನಲ್ಲಿ ಹ್ಯಾಗೆ ದೊಡ್ಡದಾಗಿದೆ. ಹಾಗೆ ರಾಗ ಸೌಖ್ಯದ ಬೇರೆ ಬೇರೆ ಪಕಳೆಗಳು ಸಿಗುತಾ ಹೋಗುತವೆ.

ತಿಳಿ ನೀಲದಲ್ಲಿ ತಾ ಲೀನವಾಗಿ...

ಒಂದನೇ ಪುಟದಿಂದ...

ಕಾರಣವೇ ಇರಲಿಲ್ಲ. ಜೈಲಿಗೆ ಹಾಕಬೇಡಿ, ಮನೇ ಒಳಗಿಡಿ ಅಂತ ಕೋರ್ಟು ಹೇಳಿತು. ನಮ್ಮಲ್ಲಿ ಇಲ್ಲಿಯವರೆಗೆ ನ್ಯಾಯಸಂಸ್ಥೆಗಳು ಸಂಪೂರ್ಣ ಕೊಳೆಯಾಗಿಲ್ಲ ಅನ್ನೋದೇ ಸಮಾಧಾನ. ತಮ್ಮ ವಿವೇಚನೆಯನ್ನು ಉಪಯೋಗಿಸ್ತವೆ. ಈಗ ಆಗಿರೋದು, ಈ ಜನರ ದಸ್ತಗಿರಿ, ಬಂಧನ ನೋಡಿ ನಂಗೆ ಆಶ್ಚರ್ಯವೇನೂ ಆಗಿಲ್ಲ. ಈಗ ದೇಶವನ್ನೇ ಆಳ್ತಾ ಇರೋದು ತರಹೇವಾರಿ ದ್ವೇಷ. ಪ್ರತಿಯೊಂದು ಮಟ್ಟದಲ್ಲಿಯೂ ದ್ವೇಷ, ಕ್ರೌರ್ಯ. ಸಾಂಘಿಕ ಕ್ರೌರ್ಯ’. ಹೀಗೆ ಜನಸಾಮಾನ್ಯರ ಅಭಿಪ್ರಾಯವನ್ನು ನಿರ್ಭಿಢೆಯಿಂದ ಹೇಳಬಲ್ಲ ಸಾಕ್ಷಿಪ್ರಜ್ಞೆ ಈಗ ನಮ್ಮ ನಡುವೆ ಮತ್ತೊಬ್ಬರು ಯಾರಿದ್ದಾರೆ? ಈ ಸಂಗೀತ ಸಾಮ್ರಾಟ, ಸಂಗೀತ ಕಲಾವಿದ ಮಾತ್ರ ಆಗಿರಲಿಲ್ಲ. ಸಾಂಸ್ಕೃತಿಕ ಚಿಂತಕರಾಗಿ ಕೂಡ ಸೀಮಿತವಾಗಿ ಉಳಿಯಲಿಲ್ಲ. ಇಡೀ ಸಮಾಜದ ಒಳಿತಿಗಾಗಿ ಮಿಡಿಯುತ್ತಿದ್ದ ಸಮಾಜಮುಖಿಯಾಗಿ ಬೆಳೆದಿದ್ದರು. ‘ಸಂಗೀತ, ನೃತ್ಯ, ಚಿತ್ರಕಲೆ ಇತ್ಯಾದಿ ಕಲಾಪ್ರಕಾರಗಳು ಮತ್ತು ಸಾಹಿತ್ಯ ಎಲ್ಲಿ ಜೀವಂತವಾಗಿರುತ್ತದೆಯೋ ಅಲ್ಲಿಯ ಸಮಾಜವೂ ಜೀವಂತವಾಗಿರುತ್ತದೆ’ ಎಂದು ಪದೇ ಪದೇ ಹೇಳುತ್ತಿದ್ದರು.

ತಮ್ಮ ಗುರು ಉಸ್ತಾದ್ ಅಲಿ ಅಕ್ಬರ್ ಖಾನ್ ಅವರ ಬಗೆಗೆ ಅಪಾರವಾದ ಪ್ರೇಮವನ್ನು ಹೊಂದಿದ್ದ ಅವರು, ‘ಗುರು ಎಂದರೆ ಅನುಭವ, ಗುರು ಎಂದರೆ ಅನುಗ್ರಹ’ ಎಂದು ಹನಿಗಣ್ಣಾಗುತ್ತಿದ್ದರು.

‘ಸಂಗೀತದಲ್ಲಿ ಕಲಿಕೆಗಿಂತ ಮೈಗೂಡಿಸಿಕೊಳ್ಳೋದು ಭಾಳ ಇರತದೆ. ಬಾಯಿ ಮಾತಿನಲ್ಲಿ ಎಷ್ಟೂ ಅಂತ ಹೇಳಬಹುದು? ಶಬ್ದಗಳಲ್ಲಿ ಸಂಗೀತವನ್ನು ಹೇಳೋದಕ್ಕೆ ಆಗೋದಿಲ್ಲ. ಗುರುಗಳ ಗಾಯನ ಅಥವಾ ವಾದನ, ಬೇರೆ ದೊಡ್ಡವರ ಸಂಗೀತವನ್ನು ಕೇಳಿಕೇಳಿ ಮೈಗೂಡಿಸಿಕೊಳ್ಳಬೇಕು. ಆ ಸಂಗೀತದೊಳಗೇ ಇದ್ದರೆ, ನೀವು ಮೈಮನಸ್ಸೆಲ್ಲವನ್ನೂ ತೆರೆದುಕೊಂಡಿದ್ದರೆ ಬೇಗ ಬರುತ್ತದೆ. ಇಲ್ಲದಿದ್ದರೆ ಗೋಡೆ ಹಾಯ್ದುಕೊಂಡು ಸಂಗೀತ ನಿಮ್ಮ ತಲುಪೋದು ಕಷ್ಟವಾಗುತ್ತದೆ’ ಎಂಬುದು ಅವರ ಕಿವಿಮಾತು ಆಗಿತ್ತು. ತಮ್ಮ ಗುರುಗಳನ್ನು ನೆನೆಯುವಾಗ ಅವರು ವಿನೀತರಾಗಿಬಿಡುತ್ತಿದ್ದರು. ‘ಗುರುಗಳು ನಮ್ಮ ಮುಂದೆ ದೊಡ್ಡ ಖಜಾನೆಯನ್ನೇ ತೆರೆದು ಇಟ್ಟಿರಬಹುದು. ಆದರೆ ನನ್ನ ಬುಟ್ಟಿ ಆಗ ಸಣ್ಣದಿತ್ತು. ಅದೇ ಬುಟ್ಟಿ ದೊಡ್ಡದಾಗಿದೆ. ಆಗ ಸಮುದ್ರದೆದುರು ನಿಂತಿದ್ದರೂ ನನ್ನ ಬೊಗಸೆ ಚಿಕ್ಕದಿತ್ತು. ಈಗ ಬೊಗಸೆ ದೊಡ್ಡದಾಗಿದೆ. ಕವನವೊಂದನ್ನು ಮತ್ತೆ ಮತ್ತೆ ಓದಿದಾಗ ಬೇರೆ ಅರ್ಥಗಳು ಹೊಳೆಯುತ್ತ ಹೋಗುತ್ತವೆಯಲ್ಲ, ಹಾಗೆಯೇ ಈಗ ರಾಗಗಳ ಬೇರೆ ಬೇರೆ ಅರ್ಥ, ಸಾಧ್ಯತೆಗಳ ಹುಡುಕಾಟ ಮಾಡೋದಕ್ಕೆ ಆಗುತ್ತಿದೆ. ಪ್ರತಿದಿನ ಉಜ್ಜಬೇಕು, ತಿಕ್ಕಬೇಕು. ಸುಮ್ಮನೇ ತಿಕ್ಕೋದಲ್ಲ. ಮೈಮನಸು ಪೂರಾ ರಿಯಾಜಿನಲ್ಲೇ ಇರಬೇಕು. ಈಗ ತುಸು ಮಟ್ಟಿಗೆ ಪಾಂಡಿತ್ಯವನ್ನು ಗಳಿಸ್ತಾ ಇದ್ದೀನಿ’ ಎಂದು ಅವರು ಹೇಳಿದ್ದರು.

‘ನಿಮ್ಮ ಗುರುಗಳು ಎಲ್ಲಿರ್ತಾರೆ, ನಿಮ್ಮ ಹೃದಯದಲ್ಲಿ ಯಾವಾಗ್ಲೂ ಇರ್ತಾರೆಯೇ’ ಅಂತ ಯಾರೋ ಕೇಳಿದರು. ‘ಹೃದಯದಲ್ಲಿ ಗೊತ್ತಿಲ್ಲರೀ, ನನ್ನ ಈ ಮೂರು ಬೆರಳಿನಲ್ಲಿ ಇರತಾರೆ’ ಅಂದೆ. ನಾ ನುಡಿಸಬೇಕಿದ್ದರೆ ಅವರು ಈ ಮೂರು ಬೆರಳಿನಲ್ಲಿ ಇರತಾರೆ. ನಾ ಛಲೋ ಬಾರಿಸಿದರೆ ಅಲ್ಲೇ ಇರತಾರೆ. ಕೆಟ್ಟು ಹೋಯಿತು ಅಂದರೆ ಎದ್ದು ಹೋಗಿರತಾರೆ, ಅಷ್ಟೆ’ ಎಂದು ಹೇಳುತ್ತಿದ್ದ ಅವರ ಮಾತಿನಲ್ಲಿ ಸಂಗೀತಗಾರನೊಬ್ಬ ಹೇಗೆ ಅಭ್ಯಾಸ ಮಾಡಬೇಕು ಎಂಬ ದೊಡ್ಡಪಾಠವೇ ಇರುತ್ತಿತ್ತು.

ಅದು 1953ನೇ ಇಸ್ವಿ. ಬೆಂಗಳೂರಿನ ಟೌನ್‌ಹಾಲ್‌ನಲ್ಲಿ ಆಯೋಜನೆಗೊಂಡಿದ್ದ ಕಛೇರಿ ಅದು. ಆಗಿನ್ನೂ ಹಿಂದೂಸ್ತಾನಿಯ ಅಭಿರುಚಿ ಬೆಳೆಯುತ್ತಿದ್ದ ಕಾಲ. ಆದರೂ ಅಂದಿನ ಸಿತಾರ್-ಸರೋದ್ ಜುಗಲಬಂದಿ ಕಛೇರಿಗೆ ಟೌನ್‌ಹಾಲಿನಲ್ಲಿ ರಸಿಕರು ಕಿಕ್ಕಿರಿದು ಸೇರಿದ್ದರು. 30ರ ಆಸುಪಾಸಿನಲ್ಲಿದ್ದ ಪಂಡಿತ್ ರವಿಶಂಕರ್ - ಉಸ್ತಾದ್ ಅಲಿ ಅಕ್ಬರ್ ಖಾನ್ ವೇದಿಕೆಯೇರುತ್ತಿದ್ದಂತೆಯೇ ಕರತಾಡನ ಎಲ್ಲೆಮೀರಿತ್ತು. ಸರೋದ್ ಬಗ್ಗೆ ಅಷ್ಟೇನೂ ಕುತೂಹಲವಿಲ್ಲದಿದ್ದರೂ ಸಿತಾರ್ ತುಂಬ ಇಷ್ಟಪಡುವ 20ರ ಹರೆಯದ ಯುವಗಾಯಕ ರಾಜೀವರು ಅಂದಿನ ಕಛೇರಿಗೆ ಬಂದಿದ್ದರು. ಆದರೆ, ಕಛೇರಿ ಮುಗಿಯುವಷ್ಟರಲ್ಲಿ ಅವರ ಮೈಮನಸ್ಸನ್ನು ಸರೋದ್ ನಾದದ ಗುಂಗು ಸಂಪೂರ್ಣವಾಗಿ ಆವರಿಸಿತ್ತು.

ಆ ದಿನ ಅಲ್ಲಿ ಸೇರಿದ್ದ ಇನ್ನೂ ನೂರಾರು ರಸಿಕರು ಅದೇ ಸಿತಾರ್-ಸರೋದ್ ನಾದವನ್ನು ಆಲಿಸಿದ್ದರು, ಖುಷಿಪಟ್ಟಿದ್ದರು. ಆದರೆ ಅವರ‍್ಯಾರನ್ನೂ ಕಾಡದ, ಆವರಿಸಿದ ಮಾಯೆಯೊಂದು ಈ ಯುವ ರಾಜೀವರನ್ನು ಆವರಿಸಿತಲ್ಲ... ಬದುಕಿನಲ್ಲಿ ಇನ್ನು ಕಲಿತರೆ ಸರೋದ್ ಮಾತ್ರ, ಹೇಗಾದರೂ ಮಾಡಿ ಈ ಉಸ್ತಾದರ ಬಳಿ ಹೋಗಲೇಬೇಕೆಂಬ ತಹತಹ ಹುಟ್ಟಿ ಹೆಮ್ಮರವಾಯಿತಲ್ಲ! ಉಸ್ತಾದ್ ಅಲಿ ಅಕ್ಬರ್ ಖಾನ್ ಹೀಗೆ ಎಷ್ಟೆಲ್ಲ ಕಡೆ ಒಬ್ಬರೇ ಕಛೇರಿ ನೀಡಿದ್ದರು, ರವಿಶಂಕರ್ ಜೊತೆಗೂಡಿ ಜುಗಲಬಂದಿ ಕಛೇರಿ ನೀಡಿದ್ದರು... ಆದರೆ, ಅವರ ಒಂದೇ ಒಂದು ಕಛೇರಿಯನ್ನು ಕೇಳಿ, ‘ಇರುವುದೆಲ್ಲ ಬಿಟ್ಟು’, ಸರೋದ್ ಕಲಿಯಲೇಬೇಕು ಎಂದು ಬೆನ್ನುಹತ್ತಿ ಬಂದಿದ್ದು ಇವರು ಮಾತ್ರ. ಹಾಗೆ ಸರೋದ್ ಮಾಯೆಯ ಬೆಂಬತ್ತಿ, ಗುರುವನ್ನು ಹುಡುಕಿಕೊಂಡು ಮುಂಬೈಗೆ ಕಾಲಿಟ್ಟಿದ್ದರು ಆ ಯುವಗಾಯಕ.

ಹಾಗೆ ನೋಡಿದರೆ ಅವರ ಸಂಗೀತ ಪಯಣ ಆರಂಭವಾಗಿದ್ದು ಬೆರಳುಗಳ ಮೂಲಕವೇ. ಮೂರು-ನಾಲ್ಕು ವರ್ಷದ ಬಾಲಕನಾಗಿದ್ದಾಗ, ಎಡಗೈ, ಬಲಗೈ ವ್ಯತ್ಯಾಸ ತಿಳಿಯುವ ಮೊದಲೇ, ಎಳೆಯ ಪುಟ್ಟ ಬೆರಳುಗಳು ತಬಲಾದ ಮೇಲಾಡುತ್ತಿದ್ದವು. ಆಯುರ್ವೇದ ಪಂಡಿತರೂ ಆಗಿದ್ದ ತಂದೆ ತಾರಾನಾಥರು ತುಂಬ ಚಿಕ್ಕ ವಯಸ್ಸಿನಲ್ಲಿಯೇ ಇವರಿಗೆ ತಬಲಾ ಕಲಿಸಿದ್ದರು. ಅದು ಮುಂದೆ ಆಯುರ್ವೇದದಲ್ಲಿ ನಾಡಿ ನೋಡುವುದಕ್ಕೂ ಸಹಾಯವಾಗುತ್ತದೆ ಎಂದು. ರಾಜೀವರು ಹುಟ್ಟಿ ಬೆಳೆದಿದ್ದು ರಾಯಚೂರಿನ ಮಂತ್ರಾಲಯದ ಸಮೀಪದ ತುಂಗಭದ್ರ ಎಂಬ ಊರಿನಲ್ಲಿ. ಹತ್ತೊಂಬತ್ತನೇ ಶತಮಾನದ ಆರಂಭದ ಆ ಕಾಲಘಟ್ಟದಲ್ಲಿ ಕ್ರಾಂತಿಕಾರಿಯೆಂದು ಹೆಸರಾಗಿದ್ದ, ಸಾಹಿತ್ಯ, ಸಂಗೀತ ಹಾಗೂ ಆಯುರ್ವೇದದಲ್ಲಿ ಪರಿಣತಿ ಹೊಂದಿದ್ದ ಪಂಡಿತ ತಾರಾನಾಥ ಮತ್ತು ಪ್ರಗತಿಪರ ನಿಲುವಿನ, ಮಹಿಳೆಯರ ಹಕ್ಕುಗಳ ಕುರಿತು ಅಧಿಕಾರಯುಕ್ತವಾಗಿ ಮಾತನಾಡುತ್ತಿದ್ದ ಸುಮತೀಬಾಯಿಯವರ ಹಿರಿಯ ಮಗನಾಗಿ ಹುಟ್ಟಿದ ರಾಜೀವರಿಗೆ ಬಾಲ್ಯದಲ್ಲಿಯೇ ದೊಡ್ಡತನದ, ಔತ್ತಮ್ಯದ ಮಾದರಿಗಳು ಕಣ್ಣ ಮುಂದಿದ್ದವು.

ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತವನ್ನು ಕ್ರಮಬದ್ಧವಾಗಿ ಕಲಿಯತೊಡಗಿದ ರಾಜೀವರು ಮೊದಲ ಕಾರ್ಯಕ್ರಮ ನೀಡಿದಾಗ ಅವರುಗೆ ಒಂಬತ್ತೇ ವರ್ಷ. ಆಕಾಶವಾಣಿಯಲ್ಲಿ ಸಂಗೀತ ಕಾರ್ಯಕ್ರಮ ನೀಡಿದಾಗ ಅವರಿಗೆ ಹತ್ತೊಂಬತ್ತು ವರ್ಷ. ತಲತ್ ಮಹಮೂದರ ಗಝಲ್ ಅನ್ನು ತುಂಬ ಇಷ್ಟಪಡುತ್ತಿದ್ದ ರಾಜೀವರ ಕಣ್ಣಿನಲ್ಲಿ ಹಿನ್ನೆಲೆ ಗಾಯಕರಾಗುವ ಕನಸು ಆಗೀಗ ತೂಗುತ್ತಿತ್ತು. ಆದರೆ ಉಸ್ತಾದ್ ಅಲಿ ಅಕ್ಬರ್ ಖಾನರ ಸರೋದ್ ವಾದನ ಮೈಮನವನ್ನು ತುಂಬಿದ ನಂತರ ಕೊರಳಿಗಿಂತ ಬೆರಳಿನ ಕರೆಯೇ ತೀವ್ರವಾಗಿತ್ತು.

ಸಂಗೀತ-ಸಾಹಿತ್ಯ ಎರಡನ್ನೂ ಬೆಸೆಯುವ ಕೊಂಡಿಯಾಗಿದ್ದ ರಾಜೀವರಿಗೆ ಎಂದೋ ಓದಿದ್ದ ಸಂಸ್ಕೃತದ ರಘುವಂಶ, ರಾಮಾಯಣ, ಮಹಾಭಾರತ, ಅಮರಕೋಶ, ಭಗವದ್ಗೀತೆ, ಇಂಗ್ಲಿಷ್‌ನ ರಸೆಲ್, ಷೇಕ್ಸ್‌ಪಿಯರ್, ಎಲಿಯಟ್ ಅವರ ಸಾಹಿತ್ಯದ ಸಾರವೆಲ್ಲ ಅವರ ಮಾತಿನಲ್ಲಿ ಇಣುಕುತ್ತಿತ್ತು. ಗುರುಭಕ್ತಿಯನ್ನು ನಾವು ಅವರಿಂದಲೇ ಕಲಿಯಬೇಕಿತ್ತು. ಸಂಗೀತದ ಔನ್ನತ್ಯದಲ್ಲಿದ್ದರೂ ಇಳಿವಯಸ್ಸಿನಲ್ಲಿ ಕೂಡ ರಿಯಾಜ್‌ನ ಜಪ ಮಾಡುತ್ತಿದ್ದ ರಾಜೀವರು ನಮ್ಮ ನಡುವೆ ಬದುಕಿದ್ದರು ಎನ್ನುವುದೇ ನಮ್ಮ ಸೌಭಾಗ್ಯ. ವಯಸ್ಸಿನ ಸುಸ್ತು ಉಸ್ಸಪ್ಪಗಳನ್ನು ಕೊನೆಯವರೆಗೆ ಹತ್ತಿರ ಬಿಟ್ಟುಕೊಂಡವರಲ್ಲ. ನನ್ನ ನಾಳೆಗಳನ್ನು ಎದುರು ನೋಡ್ತಿರ್ತೇನೆ ಎನ್ನುತ್ತಿದ್ದರು, ನನಗೀಗ ನನ್ನ ನಾಳೆಗಳು ಮಸುಕಾಗಿವೆ.



ತುಂಗಾತೀರದಿಂದ ಕಾವೇರಿ ತಟಕ್ಕೆ....

ರಾಯಚೂರಿನ ತುಂಗಭದ್ರ ಗ್ರಾಮದಲ್ಲಿ 1932ರ ಅ.17ರಂದು ತಾರಾನಾಥ-ಸುಮತಿಬಾಯಿ ದಂಪತಿ ಪುತ್ರರಾಗಿ ಜನಿಸಿದ ರಾಜೀವರು, ಸಂಗೀತದ ಜೊತೆಗೆ ಇಂಗ್ಲಿಷ್, ಉರ್ದು ಹಾಗೂ ಸಂಸ್ಕೃತ ಪಾಠಗಳನ್ನು ತಂದೆಯಿಂದಲೇ ಕಲಿತರು. ಮೈಸೂರು ವಿಶ್ವವಿದ್ಯಾಲಯದಿಂದ ಎಂ.ಎ ಇಂಗ್ಲಿಷ್, ಪಿಎಚ್‌ಡಿ ಪದವಿ ಪಡೆದ ನಂತರ ಮೈಸೂರು, ಧಾರವಾಡ, ಬೆಂಗಳೂರು, ಪುಣೆಯ ಕಾಲೇಜುಗಳಲ್ಲಿ ಹಾಗೂ ಹೈದರಾಬಾದ್ ‘ಸಿಐಇಎಫ್‌ಎಲ್’ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿದ್ದರು. ಸಾಹಿತ್ಯ ವಿಮರ್ಶಾ ವಲಯದಲ್ಲೂ ಹೆಸರು ಮಾಡಿದ್ದರು.

ಸಿಡ್ನಿಯ ಒಪೇರಾ ಹೌಸ್‌ನಲ್ಲಿ ಸಂಗೀತ ಕಛೇರಿ ನೀಡಿದ ಮೊದಲ ಭಾರತೀಯ ಹೆಗ್ಗಳಿಕೆಗೆ ಪಾತ್ರರಾಗಿದ್ದರು. ವಿಶ್ವದ ವಿವಿಧೆಡೆ ಕಛೇರಿ ನಡೆಸಿದ್ದರು. ಪಂಡಿತ್ ರವಿಶಂಕರ್ ಅವರೊಂದಿಗೂ ಸಂಗೀತ ಕಛೇರಿ ನೀಡಿದ್ದರು. ಯೆಮನ್ ದೇಶದ ಏಡನ್ ದೂರದರ್ಶನ ಕೇಂದ್ರ ಅವರ ಬಗ್ಗೆ ‘ಫೆನ್ನನ್ ಮಿನ್ ಅಲ್ ಹಿಂದ್’ ಸಾಕ್ಷ್ಯಚಿತ್ರ ನಿರ್ಮಿಸಿ ಗೌರವಿಸಿದೆ. ಕರ್ನಾಟಕ ಸರ್ಕಾರವೂ 1983ರಲ್ಲಿ ‘ಸರೋದ್ ಸಾಮ್ರಾಟ ಡಾ.ರಾಜೀವ ತಾರನಾಥ’ ಸಾಕ್ಷ್ಯಚಿತ್ರ ತಯಾರಿಸಿದೆ.

‘ಸಂಸ್ಕಾರ’, ‘ಪಲ್ಲವಿ’, ‘ಖಂಡವಿದೆಕೋ ಮಾಂಸವಿದೆಕೋ’, ‘ಅನುರೂಪ’, ‘ಪೇಪರ್ ಬೋಟ್ಸ್’, ‘ಶೃಂಗಾರಮಾಸ’, ‘ಆಗುಂತಕ’, ‘ಕಾಂಚನಾ ಸೀತಾ’, ‘ಕಡವು’ ಚಲನಚಿತ್ರಗಳಿಗೆ ಸಂಗೀತ ನೀಡಿದ್ದರು. 1993ರಲ್ಲಿ ಕರ್ನಾಟಕ ಕಲಾಶ್ರೀ, 1996ರಲ್ಲಿ ರಾಜ್ಯೋತ್ಸವ ಪ್ರಶಸ್ತಿ, 1998ರಲ್ಲಿ ಚೌಡಯ್ಯ ಪ್ರಶಸ್ತಿ, 2000ರಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡೆಮಿ, 2018ರಲ್ಲಿ ಸಂಗೀತ್ ವಿದ್ವಾನ್, ನಾಡೋಜ ಪ್ರಶಸ್ತಿ, 2019ರಲ್ಲಿ ಪದ್ಮಶ್ರೀ, 2019ರಲ್ಲಿ ಬಸವಶ್ರೀ ಪ್ರಶಸ್ತಿಗೆ ಭಾಜನರಾಗಿದ್ದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಒಂದು ವರ್ಷದಲ್ಲಿ 193 ಕೆರೆಗಳ ಪುನಶ್ಚೇತನ

ಬರ ಗೆದ್ದು ಬೀಗಿದ ‘ನಮ್ಮೂರು ನಮ್ಮ ಕೆರೆ’

ಪ್ರಜಾವಾಣಿ ವಾರ್ತೆ

ಮಂಗಳೂರು: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ‘ನಮ್ಮೂರು ನಮ್ಮ ಕೆರೆ’ ಕಾರ್ಯಕ್ರಮದ ಅಡಿಯಲ್ಲಿ 2023-24ನೇ ಸಾಲಿನಲ್ಲಿ ರಾಜ್ಯದ ವಿವಿಧೆಡೆಗಳ ಒಟ್ಟು 193 ಕೆರೆಗಳ ಪುನಶ್ಚೇತನ ಕಾರ್ಯ ನಡೆಸಲಾಗಿದೆ ಎಂದು ಸಂಸ್ಥೆಯ ಕಾರ್ಯ ನಿರ್ವಾಹಕ ನಿರ್ದೇಶಕ ಅನಿಲ್‌ಕುಮಾರ್ ಎಸ್.ಎಸ್. ತಿಳಿಸಿದ್ದಾರೆ.

ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಹಾಗೂ ಹೇಮಾವತಿ ಹೆಗ್ಗಡೆ ಅವರ ಪರಿಕಲ್ಪನೆಯಲ್ಲಿ 2016ರಲ್ಲಿ ಪ್ರಾರಂಭವಾಗಿರುವ ಕಾರ್ಯಕ್ರಮದಡಿ ಈವರೆಗೆ 760 ಕೆರೆಗಳನ್ನು ಪುನಶ್ಚೇತನಗೊಳಿಸಲಾಗಿದ್ದು, ಅವುಗಳಲ್ಲಿ 315 ಕೆರೆಗಳು ಬರಗಾಲದಲ್ಲಿಯೂ ಜಲದಿಂದ ನಳನಳಿಸುತ್ತಿದ್ದವು. ಈ ವರ್ಷ ₹13.44 ಕೋಟಿ ವೆಚ್ಚದಲ್ಲಿ ನಡೆಸಿದ 193 ಕೆರೆಗಳ ಅಭಿವೃದ್ಧಿ ಕಾರ್ಯದಲ್ಲಿ ಎಂಟು ಎಂಜಿನಿಯರ್‌ಗಳು, 125 ನೋಡಲ್ ಅಧಿಕಾರಿಗಳು, ಕೆರೆ ಸಮಿತಿಗಳ 965ಕ್ಕೂ ಹೆಚ್ಚು ಪದಾಧಿಕಾರಿಗಳು ಜಲಯೋಧರಾಗಿ ದುಡಿದಿದ್ದಾರೆ. ಹೂಳು ಸಾಗಣೆಗೆ ರೈತರು ಉತ್ಸಾಹದಿಂದ ಭಾಗವಹಿಸಿದ್ದಾರೆ. ಗ್ರಾಮಸ್ಥರ ಸಹಭಾಗಿತ್ವದಲ್ಲಿ ನಡೆದ ಕಾರ್ಯದಿಂದಾಗಿ ಕಡಿಮೆ ವೆಚ್ಚದಲ್ಲಿ ಗುಣಮಟ್ಟದ ಕಾಮಗಾರಿ ನಡೆಸಲು ಸಾಧ್ಯವಾಗಿದೆ ಎಂದು ಅವರು ಹೇಳಿದ್ದಾರೆ.

ಪುನಶ್ಚೇತನಗೊಂಡ ಮೇಲೆ ಜಲ ನಳನಳಿಸುತ್ತಿರುವ ಗೋಕಾಕದ ಕರಿಯಮ್ಮನದೇವಿ ಕೆರೆ

ಪುನಶ್ಚೇತನಗೊಂಡ ಒಟ್ಟು ಕೆರೆಗಳು	760
ಪುನಶ್ಚೇತನಗೊಂಡ ಕೆರೆಗಳ ವಿಸ್ತೀರ್ಣ	6,131 ಎಕರೆ
ತೆಗೆದ ಹೂಳಿನ ಪ್ರಮಾಣ	203 ಲಕ್ಷ ಕ್ಯು.ಮೀ
ಹೆಚ್ಚಳವಾಗಿರುವ ನೀರಿನ ಸಂಗ್ರಹಣಾ ಸಾಮರ್ಥ್ಯ	2,318 ಕೋಟಿ ಲೀಟರ್
ಪ್ರಯೋಜನ ಪಡೆದಿರುವ ಕೃಷಿಭೂಮಿ	2.20 ಲಕ್ಷ ಎಕರೆ
ಪ್ರಯೋಜನ ಪಡೆದ ಕುಟುಂಬಗಳು	3.60 ಲಕ್ಷ
ಸಂಸ್ಥೆಯಿಂದ ನೀಡಿದ ಅನುದಾನ	₹58.14 ಕೋಟಿ
ಹೂಳು ಸಾಗಣೆಯ ಮೌಲ್ಯ (ಸ್ಥಳೀಯರಿಂದ)	₹51.11 ಕೋಟಿ
ಒತ್ತುವರಿ ತೆರವುಗೊಳಿಸಿದ ಪ್ರದೇಶ	305 ಎಕರೆ

ಕೆರೆಗಳ ದುರಸ್ತಿಗೆ 522 ಜೆಸಿಬಿ ಹಾಗೂ ಹಿಟಾಚಿ ಯಂತ್ರಗಳು, 4,212ಕ್ಕೂ ಹೆಚ್ಚು ಟ್ರ್ಯಾಕ್ಟರ್, ಟಿಪ್ಪರ್‌ಗಳನ್ನು ಬಳಕೆ ಮಾಡಲಾಗಿದೆ. ಬಂಟ್ವಾಳದ ಕಲ್ಕುಟ ಕೆರೆ, ರಾಮನಗರದ ಚಿಕ್ಕಲಾಚಮ್ಮರವರು ತಮ್ಮ ಸ್ವಂತ ಜಮೀನನ್ನು ದಾನ ಮಾಡಿ ನಿರ್ಮಿಸಿ ಕೊಟ್ಟ ಚಿಕ್ಕಲಾಚಮ್ಮನ ಕೆರೆ, ಔಷಧೀಯ ಗುಣಹೊಂದಿರುವ ಹನೂರು ಉಗೇನಿಯಾ ದೊಡ್ಡ ಕೆರೆ, ಕೆ.ಆರ್.ಪೇಟೆಯ ಬಿಲ್ಲರಾಮನಹಳ್ಳಿ ಕೆರೆ, ಭದ್ರಾವತಿಯ ರಂಗನಾಥಪುರ ಪುನಶ್ಚೇತನಗೊಂಡಿರುವ ಪ್ರಮುಖ ಕೆರೆಗಳು. ಇವುಗಳನ್ನು ಮುಂದಿನ ನಿರ್ವಹಣೆಗಾಗಿ ಕೆರೆ ಸಮಿತಿ, ಗ್ರಾಮ ಪಂಚಾಯಿತಿಗಳಿಗೆ ವಹಿಸಿಕೊಡಲಾಗುತ್ತದೆ. ಕೆರೆ ಸುತ್ತ ಮಳೆಗಾಲದಲ್ಲಿ ಗಿಡ ನಾಟಿ ಮಾಡಲಾಗುವುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಶೋಕಗೆ ಸಿಗದ ಸರ್ಕಾರಿ ನಿವಾಸ

ಬೆಂಗಳೂರು: ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರಿಗೆ ಇನ್ನೂ ಸರ್ಕಾರಿ ವಸತಿ ಗೃಹ ಹಂಚಿಕೆ ಮಾಡದೇ ಇರುವುದು ತಕರಾರಿಗೆ ಕಾರಣವಾಗಿದೆ.

‘ಅಶೋಕ ಅವರು ವಿರೋಧ ಪಕ್ಷದ ನಾಯಕರಾಗಿ ಆರು ತಿಂಗಳು ಕಳೆದಿದೆ. ಸರ್ಕಾರಿ ನಿವಾಸ ಮಂಜೂರು ಮಾಡುವಂತೆ ಕೋರಿ ನಾಲ್ಕು ಪತ್ರಗಳನ್ನು ಬರೆದರೂ ಸರ್ಕಾರದಿಂದ ಈವರೆಗೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ’ ಎಂದು ವಿರೋಧ ಪಕ್ಷದ ನಾಯಕರ ಕಚೇರಿ ಮೂಲಗಳು ಹೇಳಿವೆ.

‘ಅಶೋಕ ಅವರ ವಿಶೇಷ ಅಧಿಕಾರಿ ಈ ಸಂಬಂಧ ಮುಖ್ಯ ಕಾರ್ಯದರ್ಶಿಯವರನ್ನು ಎರಡು- ಮೂರು ಬಾರಿ ಭೇಟಿ ಮಾಡಿದ್ದರು. ಬೇಗನೆ ಕೊಡುತ್ತೇವೆ ಎಂದು ಹೇಳಿದರೂ ಇಲ್ಲಿಯವರಿಗೂ ಕೊಟ್ಟಿಲ್ಲ’ ಎಂದು ಮೂಲಗಳು ತಿಳಿಸಿವೆ.

ನಂ 1- ಕುಮಾರ ಕೃಪಾ ಪೂರ್ವ, ನಂ 1 ಮತ್ತು ನಂ 2 ರೇಸ್‌ವ್ಯೂ ಕಾಟೇಜ್, ರೇಸ್‌ಕೋರ್ಸ್ ರಸ್ತೆ, ಈ ಮೂರರಲ್ಲಿ ಒಂದನ್ನು ಅಧಿಕೃತ ನಿವಾಸವಾಗಿ ಕೊಡಬೇಕು ಎಂದು ಅಶೋಕ ಅವರು ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ಮುಖ್ಯಮಂತ್ರಿಯವರಿಗೆ ಪತ್ರ ಬರೆದಿದ್ದರು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕರಾಗಿ ಜಿ.ಟಿ.ದೇವೇಗೌಡ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್.ಡಿ. ಕುಮಾರಸ್ವಾಮಿ ಅವರು ಕೇಂದ್ರ ಸಚಿವರಾಗಿರುವುದರಿಂದ ಜೆಡಿಎಸ್ ‘ಕೋರ್ ಕಮಿಟಿ’ ಅಧ್ಯಕ್ಷರಾಗಿರುವ ಜಿ.ಟಿ. ದೇವೇಗೌಡ ಅವರನ್ನೇ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕರನ್ನಾಗಿ ಆಯ್ಕೆಮಾಡಲು ಪಕ್ಷದ ವರಿಷ್ಠರು ಯೋಚಿಸಿದ್ದಾರೆ.

ಕೇಂದ್ರ ಸಚಿವರಾಗಿರುವ ಕಾರಣದಿಂದ ಕುಮಾರಸ್ವಾಮಿ ಅವರು ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಶಾಸಕ ಸ್ಥಾನಕ್ಕೆ ಶೀಘ್ರದಲ್ಲೇ ರಾಜೀನಾಮೆ ನೀಡಲಿದ್ದಾರೆ. ಇದರಿಂದಾಗಿ ಅವರು ನಿರ್ವಹಿಸುತ್ತಿದ್ದ ಶಾಸಕಾಂಗ ಪಕ್ಷದ ನಾಯಕನ ಸ್ಥಾನವೂ ತೆರವಾಗಲಿದೆ. ಜಿ.ಟಿ. ದೇವೇಗೌಡರನ್ನೇ ಆ ಸ್ಥಾನಕ್ಕೆ ಆಯ್ಕೆ ಮಾಡುವುದು ಸೂಕ್ತ ಎಂಬ ಚರ್ಚೆ ಪಕ್ಷದ ಪ್ರಮುಖ ನಾಯಕರಲ್ಲಿ ನಡೆದಿದೆ. ಬಹುತೇಕರು ಈ ಪ್ರಸ್ತಾವಕ್ಕೆ ಸಮ್ಮತಿ ಸೂಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

‘ಕುಮಾರಸ್ವಾಮಿ ಅವರು ಶುಕ್ರವಾರ ದೆಹಲಿಯಿಂದ ಬೆಂಗಳೂರಿಗೆ ವಾಪಸಾಗುವರು. ಆ ಬಳಿಕ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಮತ್ತು ಇತರ ನಾಯಕರ ಜತೆ ಚರ್ಚಿಸುವರು. ಜಿ.ಟಿ. ದೇವೇಗೌಡರ ಆಯ್ಕೆಗೆ ಹೆಚ್ಚಿನ ಮಂದಿ ಒಲವು ಹೊಂದಿದ್ದಾರೆ’ ಎಂದು ಜೆಡಿಎಸ್ ಪ್ರಮುಖರೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಜಿ.ಟಿ. ದೇವೇಗೌಡ

ಅಧ್ಯಕ್ಷರ ಆಯ್ಕೆ ತುಸು ವಿಳಂಬ: ಕೆಲಸಗಳ ಒತ್ತಡ ಹೆಚ್ಚಿರುವ ಕಾರಣದಿಂದ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸ್ಥಾನ ತೊರೆಯುವುದಕ್ಕೂ ಕುಮಾರಸ್ವಾಮಿ ನಿರ್ಧರಿಸಿದ್ದಾರೆ. ಈ ಬಗ್ಗೆ ದೆಹಲಿಯಲ್ಲಿರುವ ಪಕ್ಷದ ಮುಖಂಡರ ಜತೆ ಸೋಮವಾರ ರಾತ್ರಿ ನಡೆದ ಚರ್ಚೆ ವೇಳೆ ಪ್ರಸ್ತಾಪಿಸಿದ್ದಾರೆ. ಆದರೆ, ರಾಜ್ಯ ಘಟಕದ ನೂತನ ಅಧ್ಯಕ್ಷರ ಆಯ್ಕೆ ಕೆಲವು ದಿನ ಕಾಲ ವಿಳಂಬ ಆಗಬಹುದು ಎಂದು ಮೂಲಗಳು ಹೇಳಿವೆ.

‘ಪೆನ್‌ಡ್ರೈವ್ ಹಂಚಿಕೆ ಪಾಪದ ಕೆಲಸ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯದ ದೃಶ್ಯಗಳನ್ನು ಸೆರೆಹಿಡಿದು ಪೆನ್‌ಡ್ರೈವ್‌ನಲ್ಲಿ ಕಾಪಿ ಮಾಡಿ ಹಂಚಿರುವುದು ಅತ್ಯಂತ ಪಾಪದ ಕೆಲಸ ಹಾಗೂ ಯಾರೊಬ್ಬರೂ ಮಹಿಳೆಯರ ಕೆಟ್ಟದಾಗಿ ಬಿಂಬಿಸಬಾರದು’ ಎಂದು ಹೈಕೋರ್ಟ್, ತೀವ್ರ ವೇದನೆ ವ್ಯಕ್ತಪಡಿಸಿದೆ.

ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ದೌರ್ಜನ್ಯ ಮತ್ತು ಅತ್ಯಾಚಾರ ಆರೋಪದ ಪ್ರಕರಣದಲ್ಲಿನ ಪೆನ್‌ಡ್ರೈವ್ ವಿತರಣೆಗೆ ಸಂಬಂಧಿಸಿದಂತೆ ನನ್ನ ವಿರುದ್ಧ ಹಾಸನ ‘ಸೆನ್’ (ಸೈಬರ್, ಎಕನಾಮಿಕ್ ಅಂಡ್ ನಾರ್ಕೋಟಿಕ್ ಕ್ರೈಂ) ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಗೊಳಿಸಬೇಕು’ ಎಂದು ಕೋರಿ ಹಾಸನದ, ರವೀಂದ್ರ ನಗರದ ಶರತ್ ಬಿನ್ ಪರಮೇಶ್ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಎಚ್.ಪವನಚಂದ್ರ ಶೆಟ್ಟಿ, ‘ಅರ್ಜಿದಾರರು ಪೆನ್‌ಡ್ರೈವ್‌ಗಳನ್ನು ಹಂಚಿದ್ದಾರೆ ಎಂದು ಆರೋಪಿಸಲಾಗಿದೆ. ಆದರೆ, ಶರತ್ ಕೈಯಿಂದ ಯಾವುದೇ ಪೆನ್ ಡ್ರೈವ್ ಅನ್ನು ವಶಪಡಿಸಿಕೊಂಡಿಲ್ಲ. ಕೇವಲ ಮಾಹಿತಿ ಇದೆ ಎಂದ ಮಾತ್ರಕ್ಕೆ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗದು’ ಎಂದರು.

ಇದನ್ನು ಬಲವಾಗಿ ಆಕ್ಷೇಪಿಸಿದ ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, ‘ಪೆನ್‌ಡ್ರೈವ್‌ಗಳ ಕಾಪಿ ಮತ್ತು ವಿತರಣೆ ಪ್ರಕರಣದಲ್ಲಿ ಆರೋಪಿಯೇ ಪ್ರಮುಖ ವ್ಯಕ್ತಿಯಾಗಿದ್ದಾರೆ. ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುವ ಅಗತ್ಯವಿದೆ. ಹಾಗಾಗಿ, ನ್ಯಾಯಾಲಯ ಈ ಹಂತದಲ್ಲಿ ಯಾವುದೇ ಪರಿಹಾರ ನೀಡಬಾರದು’ ಎಂದರು.

ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, ‘ಕೋರ್ಟ್ ಸದ್ಯಕ್ಕೆ ಈ ವಿಚಾರದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ. ಆರೋಪಿ ತನಿಖಾಧಿಕಾರಿಗಳ ಮುಂದೆ ಹಾಜರಾಗಲಿ’ ಎಂದು ವಿಚಾರಣೆಯನ್ನು ಒಂದು ವಾರ ಕಾಲ ಮುಂದೂಡಿತು.

ಅರ್ಜಿಯಲ್ಲಿ, ಹಾಸನ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಮತ್ತು ಬಿಜೆಪಿ ಮೈತ್ರಿಕೂಟದ ಏಜೆಂಟ್ ಆಗಿ ಕೆಲಸ ನಿರ್ವಹಿಸಿದ್ದ ಫಿರ್ಯಾದುದಾರ ಪೂರ್ಣಚಂದ್ರ ತೇಜಸ್ವಿ ಹಾಗೂ ಹಾಸನ ಸೆನ್ ಠಾಣೆಯ ಅಧಿಕಾರಿಯನ್ನು ಪ್ರತಿವಾದಿಯನ್ನಾಗಿ ಮಾಡಲಾಗಿದೆ.

ಶರತ್ ವಿರುದ್ಧ ಮಾಹಿತಿ ತಂತ್ರಜ್ಞಾನ ಕಾಯ್ದೆ-2000ರ ಕಲಂ 67 (ಎ) ಹಾಗೂ ಭಾರತೀಯ ದಂಡ ಸಂಹಿತೆ-1860ರ ಕಲಂ 171 ಜಿ ಅನ್ವಯ ಪ್ರಕರಣ ದಾಖಲಿಸಲಾಗಿದೆ. ಈ ಕುರಿತಂತೆ ಹಾಸನ ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿನ ವಿಚಾರಣೆಗೆ ತಡೆ ನೀಡುವಂತೆಯೂ ಅರ್ಜಿದಾರರು ಮಧ್ಯಂತರ ಮನವಿ ಮಾಡಿದ್ದಾರೆ.

ಜಯ್ನಾ ಕೊಠಾರಿ ರಾಜೀನಾಮೆ

ಬೆಂಗಳೂರು: ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ದೌರ್ಜನ್ಯ ಹಗರಣದ ಆರೋಪ ಪ್ರಕರಣದ ತನಿಖೆ ನಡೆಸುತ್ತಿರುವ ಎಸ್‌ಐಟಿ ಪರ ಹೆಚ್ಚುವರಿ ವಿಶೇಷ ಪ್ರಾಸಿಕ್ಯೂಟರ್ ಆಗಿ ನೇಮಕಗೊಂಡಿದ್ದ ಹಿರಿಯ ವಕೀಲೆ ಜಯ್ನಾ ಕೊಠಾರಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಈ ಕುರಿತಂತೆ ಅವರು ಗೃಹ ಇಲಾಖೆಯ ಉಪ ಕಾರ್ಯದರ್ಶಿಗೆ ಮಂಗಳವಾರ ತಮ್ಮ ರಾಜೀನಾಮೆ ಪತ್ರ ರವಾನಿಸಿದ್ದಾರೆ.

ಪ್ರಕರಣವೇನು?: ‘ಸಂತ್ರಸ್ತ ಮಹಿಳೆಯನ್ನು ಅಪಹರಿಸಲಾಗಿದೆ’ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಕೆ.ಆರ್.ನಗರ ಪೊಲೀಸ್ ಠಾಣೆಯಲ್ಲಿ ಐಪಿಸಿ ಕಲಂ 364ಎ, 365 ಮತ್ತು 34 ಅಡಿ ಎಫ್‌ಐಆರ್ ದಾಖಲಿಸಲಾಗಿದೆ. ಇದರಲ್ಲಿ ಶಾಸಕ ಎಚ್.ಡಿ.ರೇವಣ್ಣ ಮೊದಲ ಆರೋಪಿಯಾಗಿದ್ದರೆ, ಸತೀಶ ಬಾಬಣ್ಣ ಎರಡನೇ ಆರೋಪಿಯಾಗಿದ್ದಾರೆ.

ಸ್ವಾಮಿಮಲೈ ವಲಯದ ‘ಹದ್ದಿನಪಡೆ’ ಅರಣ್ಯದಲ್ಲಿ ಖನಿಜ ಪತ್ತೆಗೆ ಕೆಐಒಸಿಎಲ್ ಆಸಕ್ತಿ

1,074 ಎಕರೆ ಅರಣ್ಯದ ಮೇಲೆ ಕಣ್ಣು

• ಹರಿಶಂಕರ್ ಆರ್.

ಬಳ್ಳಾರಿ: ಸಂಡೂರು ತಾಲೂಕಿನ ಸ್ವಾಮಿಮಲೈ ವಲಯದ ‘ಹದ್ದಿನಪಡೆ’ ಬ್ಲಾಕ್‌ನ ದಟ್ಟ ಅರಣ್ಯದಲ್ಲಿ ಗಣಿಗಾರಿಕೆ ಮಾಡಲು ಕುದುರೆಮುಖ ಐರನ್ ಓರ್ ಕಂಪನಿ ಲಿಮಿಟೆಡ್ (ಕೆಐಒಸಿಎಲ್) ಸಂಸ್ಥೆ ಉದ್ದೇಶಿಸಿದೆ. ಇದಕ್ಕಾಗಿ 1,074.24 ಎಕರೆ (434.73 ಹೆಕ್ಟೇರ್) ಅರಣ್ಯ ಪ್ರದೇಶದಲ್ಲಿ ಅದಿರು ಪತ್ತೆ ಮಾಡಲು ಬಯಸಿದೆ.

ಅದಿರು ಸಮೀಕ್ಷೆಗೆ ಅನುಮತಿ ಕೋರಿ ಈ ವರ್ಷ ಜನವರಿ 8ರಂದು ಅರಣ್ಯ ಇಲಾಖೆಗೆ ಪತ್ರ ಬರೆದ ಸಂಸ್ಥೆಯು 2023ರ ಡಿಸೆಂಬರ್‌ನಲ್ಲೇ ನಿರ್ದಿಷ್ಟ ಪ್ರದೇಶದ ಭೌಗೋಳಿಕ ನಕ್ಷೆ ಮತ್ತು ಭೌತಿಕ ಗಡಿರೇಖೆಗಳನ್ನೂ ಸಿದ್ಧಪಡಿಸಿಕೊಂಡಿದೆ. ಅದಿರಿನ ಪ್ರಮಾಣ ಪತ್ತೆ ಮಾಡಲು 4 ಅಂಗುಲದ 9 ಬೋರ್ ಹೋಲ್ (ಕೊಳವೆ) ಕೊರೆಯಲು ಉದ್ದೇಶಿಸಿದೆ. ಈ ಕುರಿತ ದಾಖಲೆಗಳು ‘ಪ್ರಜಾವಾಣಿ’ಗೆ ಲಭ್ಯವಾಗಿವೆ.

‘ವಿಳಂಬ ಮಾಡದೇ ಸಮೀಕ್ಷೆಗೆ ಅನುಮತಿ ನೀಡಬೇಕು’ ಎಂದು ಹೇಳಿರುವ ಸಂಸ್ಥೆಯು ಅದಕ್ಕಾಗಿ ಕಾಯ್ದೆ, ಕಟ್ಟಳೆಗಳನ್ನೂ ಪ್ರಸ್ತಾಪಿಸಿದೆ. ‘ಅರಣ್ಯದಲ್ಲಿ ಯಾವ ಮರವನ್ನೂ ಕಡವದೇ, ಅನ್ವೇಷಣೆ, ಪರಿಶೋಧನೆ ಅಥವಾ ಸಮೀಕ್ಷೆ ಕಾರ್ಯ ನಡೆಸಲು, 10 ಚದರ ಕಿಲೋಮೀಟರ್ ಪರಿಮಿತಿಯಲ್ಲಿ 4 ಅಂಗುಲದ 25 ಕೊಳವೆಗಳನ್ನು ಕೊರೆಯಲು ‘ಅರಣ್ಯ (ಸಂರಕ್ಷಣೆ) ಕಾಯಿದೆ-1980’ರ ನಿಬಂಧನೆಗಳು ಅನ್ವಯಿಸುವುದಿಲ್ಲ‘ ಎಂದು ತಿಳಿಸಿದೆ.

> ಸಂಡೂರು ಅರಣ್ಯದ ಹದ್ದಿನಪಡೆ ಬ್ಲಾಕ್‌ನಲ್ಲಿನ ಖನಿಜ ಸಂಪತ್ತಿನ ಸಮೀಕ್ಷೆಗೆ ಅನುಮತಿ ಕೋರಿ ಕೆಐಒಸಿಎಲ್ ಪ್ರಸ್ತಾವ ಸಲ್ಲಿಸಿದ್ದು ನಿಜ. ಅದರ ಪರಾಮರ್ಶೆ ನಡೆದಿದೆ. ಸದ್ಯ ಯಾವುದೂ ನಿರ್ಧಾರವಾಗಿಲ್ಲ
>
> **ಸಂದೀಪ್ ಸೂರ್ಯವಂಶಿ,** ಉಪ ಅರಣ್ಯ ಸಂರಕ್ಷಣಾಧಿಕಾರಿ, ಬಳ್ಳಾರಿ

> ಸಮೀಕ್ಷೆಗೆ ಯಾವುದೇ ಕ್ಷಣ ಅನುಮತಿ ಸಿಗಬಹುದು. ಅದಿರು ಸಿಗದೇ ಕಂಗೆಟ್ಟ ಕೆಐಒಸಿಎಲ್, ವಿಐಎಸ್‌ಎಲ್‌ನಂಥ ಸಂಸ್ಥೆಗಳು ನಮ್ಮಲ್ಲಿನ ಸಂಪತ್ತಿಗೆ ಕೈ ಹಾಕುವುದು ಯಾವ ನ್ಯಾಯ
>
> **ಟಿ.ಎಂ.ಶಿವಕುಮಾರ್,** ಉಪಾಧ್ಯಕ್ಷ, ಜನಸಂಗ್ರಾಮ ಪರಿಷತ್, ರಾಜ್ಯ ಘಟಕ

ಆದರೆ, ಸಮೀಕ್ಷೆ ವೇಳೆ ರಸ್ತೆ ನಿರ್ಮಾಣ, ಕೊಳವೆಗಳನ್ನು ಕೊರೆಯಲು ಅಲ್ಪ ಪ್ರಮಾಣದ ಅರಣ್ಯ ನಾಶವಾಗಲಿದೆ ಎಂದು ಸ್ವತಃ ಸಂಸ್ಥೆಯೇ ಪತ್ರದ ಕೊನೆಯಲ್ಲಿ ಉಲ್ಲೇಖಿಸಿದೆ.



ಸ್ವಾಮಿಮಲೈ ವಲಯದ ‘ಹದ್ದಿನಪಡೆ’ ಬ್ಲಾಕ್‌ನ ದಟ್ಟ ಅರಣ್ಯ

ಈ ಮಧ್ಯೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯು 2023-24ನೇ ಸಾಲಿನ ವರದಿಯಲ್ಲಿ ಹದ್ದಿನಪಡೆ ಬ್ಲಾಕ್‌ನಲ್ಲಿ ಖನಿಜ ಸಂಪತ್ತಿನ ಶೇಖರಣೆ ಇದೆ ಎಂದು ಅಧಿಕೃತವಾಗಿ ಪ್ರಕಟಿಸಿದೆ.

‘ಅನುಮತಿ ಕೋರಿದ್ದು ಕೇಂದ್ರ ಸರ್ಕಾರದ ಸಂಸ್ಥೆ. ಗಣಿಗಾರಿಕೆಗೆ ಅನುಮತಿ ನೀಡುವುದು ಕೇಂದ್ರದ ಅರಣ್ಯ ಮತ್ತು ಪರಿಸರ ಇಲಾಖೆ. ಇಂಥ ವಿಷಯದಲ್ಲಿ ಕರ್ನಾಟಕ ಅರಣ್ಯ ಇಲಾಖೆ ಪಾತ್ರ ನಗಣ್ಯ. ನಮ್ಮಿಂದ ಸಂಪದ್ಭರಿತ, ಜೀವವೈವಿಧ್ಯದ ತಾಣಕ್ಕೆ ಪ್ರತಿಯಾಗಿ ಬರಡು ಭೂಮಿ ಪರಿಹಾರವಾಗಿ ಕೊಡಲಾಗುತ್ತದೆ. ಅಲ್ಲಿ ಗಿಡ, ಮರ ಬೆಳೆಸಬಹುದು. ಆದರೆ, ಅರಣ್ಯ ನಾಶದಿಂದ ವನ್ಯಜೀವಿಗಳು ಸಂತ್ರಸ್ತವಾಗುತ್ತವೆ. ಅವುಗಳ ಪಾಡೇನು? ಇದಕ್ಕೆ ಯಾರ ಬಳಿಯೂ ಉತ್ತರವಿಲ್ಲ’ ಎಂದು ಅರಣ್ಯ ಇಲಾಖೆಯ ಅಧಿಕಾರಿಯೊಬ್ಬರು ಹೇಳಿದರು.

ಮರ ಕಡಿಯಲು ವಿರೋಧ

ಭದ್ರಾವತಿಯ ವಿಶ್ವೇಶ್ವರಾಯ ಕಬ್ಬಿಣ ಹಾಗೂ ಉಕ್ಕಿನ ಕಾರ್ಖಾನೆಗೆ (ವಿಐಎಸ್‌ಎಲ್) ಅದಿರು ಪೂರೈಸುವ ಗಣಿಗಾರಿಕೆಗಾಗಿ ಸಂಡೂರು ತಾಲ್ಲೂಕಿನ 150 ಎಕರೆ ದಟ್ಟ ಅರಣ್ಯದ 29,400 ಮರಗಳನ್ನು ಕಡಿಯುವುದಕ್ಕೆ ಸಾಮಾಜಿಕ ಜಾಲತಾಣದಲ್ಲಿ ಆಕ್ಷೇಪ ವ್ಯಕ್ತವಾಗಿದೆ.

‘ಪಶ್ಚಿಮ ಘಟ್ಟಗಳ ಜೀವವೈವಿಧ್ಯ ರಕ್ಷಣೆಗಾಗಿ ಭದ್ರಾವತಿ, ಕುದುರೆಮುಖದಲ್ಲಿ ಗಣಿಗಾರಿಕೆಗೆ ನಿಷೇಧ ಇದೆ. ಅದಕ್ಕೆ ಎಲ್ಲರ ಕಣ್ಣು ಬಳ್ಳಾರಿ ಮೇಲಿದೆ. ಮಲೆನಾಡಿನ ಕೈಗಾರಿಕೆಗಳಿಗೆ ಅದಿರು ಪೂರೈಸಲು ಬಯಲುಸೀಮೆಯ ಕಿರು ಅರಣ್ಯಗಳಲ್ಲಿ ಗಣಿಗಾರಿಕೆ ಮಾಡುವ ಅಗತ್ಯವಿದೆಯೇ’ ಎಂಬ ಪ್ರಶ್ನೆಗಳನ್ನು ಕೆಲವರು ಕೇಳಿದ್ದಾರೆ. ಮರಗಳ ಹನನ ಕುರಿತು ಜೂನ್ 9ರ ‘ಪ್ರಜಾವಾಣಿ’ ಸಂಚಿಕೆಯಲ್ಲಿ ವಿಶೇಷ ವರದಿ ಪ್ರಕಟವಾಗಿತ್ತು.

ಪ್ರಧಾನಿ ನರೇಂದ್ರ ಮೋದಿ 3.0 ಸರ್ಕಾರ ಅಧಿಕೃತ ಕಾರ್ಯಾರಂಭ

ನೂತನ ಸಚಿವರ ಅಧಿಕಾರ ಸ್ವೀಕಾರ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ನೂತನ ಸರ್ಕಾರದ ಸಂಪುಟ ದರ್ಜೆ ಸಚಿವರು ಮತ್ತು ರಾಜ್ಯ ದರ್ಜೆ ಸಚಿವರು ಮಂಗಳವಾರ ತಮ್ಮ ತಮ್ಮ ಕಚೇರಿಯಲ್ಲಿ ಅಧಿಕಾರ ವಹಿಸಿಕೊಂಡರು. ಈ ಮೂಲಕ ಬದಲಾವಣೆ ಮತ್ತು ನಿರಂತರತೆ ಎರಡನ್ನೂ ಸೂಚಿಸುವ ಮೋದಿ 3.0 ಆಡಳಿತ ಯಂತ್ರ ತನ್ನ ಕೆಲಸವನ್ನು ಅಧಿಕೃತವಾಗಿ ಆರಂಭಿಸಿತು.

ಮೋದಿ ಅವರು ಸತತ ಮೂರನೇ ಅವಧಿಗೆ ಪ್ರಧಾನಿಯಾಗಿ ಭಾನುವಾರ ಪ್ರಮಾಣವಚನ ಸ್ವೀಕರಿಸಿದ್ದರು. ಎನ್‌ಡಿಎ ಮೈತ್ರಿಕೂಟ ಸರ್ಕಾರದ ನೂತನ ಸಚಿವರಿಗೆ ಸೋಮವಾರ ಖಾತೆ ಹಂಚಿಕೆ ಮಾಡಲಾಗಿತ್ತು.

ಕಳೆದ ಅವಧಿಯಲ್ಲಿ ಸಚಿವರಾಗಿದ್ದ ಅಮಿತ್ ಶಾ (ಗೃಹ), ರಾಜನಾಥ್ ಸಿಂಗ್ (ರಕ್ಷಣೆ), ನಿರ್ಮಲಾ ಸೀತಾರಾಮನ್ (ಹಣಕಾಸು, ಕಾರ್ಪೊರೇಟ್ ವ್ಯವಹಾರ) ಮತ್ತು ಎಸ್.ಜೈಶಂಕರ್ (ವಿದೇಶಾಂಗ) ಸೇರಿದಂತೆ ಕೆಲವರನ್ನು ಅದೇ ಖಾತೆಗಳಲ್ಲಿ ಮುಂದುವರಿಸಲಾಗಿದೆ.

'ದೇಶ ಮೊದಲು ಮತ್ತು ವಸುದೈವ ಕುಟುಂಬಕಂ ಎಂಬುದು ಭಾರತದ ವಿದೇಶಾಂಗ ನೀತಿಯ ಎರಡು ಸೂತ್ರಗಳಾಗಿವೆ' ಎಂದು ಅಧಿಕಾರ ವಹಿಸಿಕೊಂಡ ಬೆನ್ನಲ್ಲೇ ಸಚಿವ ಎಸ್.ಜೈಶಂಕರ್ ಹೇಳಿದರು.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ರಾಸಾಯನಿಕ ಮತ್ತು ರಸಗೊಬ್ಬರ ಸಚಿವರಾಗಿ ಅಧಿಕಾರ ವಹಿಸಿಕೊಂಡರು. ಮೋದಿ ಅವರ 'ವಿಕಸಿತ ಭಾರತ' ಪರಿಕಲ್ಪನೆಯ ಈಡೇರಿಕೆಗಾಗಿ ಕೆಲಸ ಮಾಡುತ್ತೇವೆ ಎಂದು ಹಲವು ಸಚಿವರು ಹೇಳಿದರು.

ಗುಜರಾತ್ ಬಿಜೆಪಿ ಘಟಕದ ಅಧ್ಯಕ್ಷ ಚಂದ್ರಕಾಂತ್ ರಘುನಾಥ್ ಪಾಟೀಲ್

ಗೃಹ ಸಚಿವರಾಗಿ ಅಧಿಕಾರ ವಹಿಸಿಕೊಳ್ಳುವುದಕ್ಕೂ ಮುನ್ನ ಅಮಿತ್ ಶಾ ಅವರು ನವದೆಹಲಿಯ ರಾಷ್ಟ್ರೀಯ ಪೊಲೀಸ್ ಸ್ಮಾರಕ್ಕೆ ಭೇಟಿ ನೀಡಿ ಗೌರವ ಸಲ್ಲಿಸಿದರು –ಪಿಟಿಐ ಚಿತ್ರ

ಅವರು ಜಲಶಕ್ತಿ ಸಚಿವರಾಗಿ ಅಧಿಕಾರ ವಹಿಸಿಕೊಳ್ಳುವ ವೇಳೆ ಬೆಂಬಲಿಗರು 'ಭಾರತ್ ಮಾತಾ ಕಿ ಜೈ' ಹಾಗೂ 'ವಂದೇ ಮಾತರಂ' ಎಂಬ ಘೋಷಣೆ ಮೊಳಗಿಸಿದರು.ಆಹಾರ ಸಂಸ್ಕರಣಾ ಕೈಗಾರಿಕಾ ಸಚಿವ ಚಿರಾಗ್ ಪಾಸ್ವಾನ್ ಅವರು ಅಧಿಕಾರ ಸ್ವೀಕಾರಕ್ಕೂ ಮುನ್ನ ತಮ್ಮ ತಾಯಿ ಹಾಗೂ ಕುಟುಂಬದ ಸದಸ್ಯರ ಸಮ್ಮುಖದಲ್ಲಿ ಸಣ್ಣ ಮಟ್ಟದ ಧಾರ್ಮಿಕ ಆಚರಣೆ ನಡೆಸಿದರು.

'ಭದ್ರತೆ ಮುಂದಿನ ಹಂತಕ್ಕೆ': 'ಗೃಹ ಸಚಿವಾಲಯವು ದೇಶದ ಭದ್ರತೆಯನ್ನು ಮುಂದಿನ ಹಂತಕ್ಕೆ ಕೊಂಡೊಯ್ಯುತ್ತದೆ' ಗೃಹ ಸಚಿವರಾಗಿ ಅಧಿಕಾರ ವಹಿಸಿಕೊಂಡ ಅಮಿತ್ ಶಾ ಹೇಳಿದರು.

2047ರ ವೇಳೆಗೆ ಇಂಧನ ಸ್ವಾವಲಂಬನೆ ಗುರಿ: ಪ್ರಲ್ಹಾದ ಜೋಶಿ

ಪ್ರಜಾವಾಣಿ ವಾರ್ತೆ

ನವದೆಹಲಿ: 'ದೇಶದಲ್ಲಿ 2047ರ ವೇಳೆಗೆ ಇಂಧನ ಸ್ವಾವಲಂಬನೆ ಸಾಧಿಸುವುದೇ ನಮ್ಮ ಸಂಕಲ್ಪ' ಎಂದು ಆಹಾರ, ಗ್ರಾಹಕ ವ್ಯವಹಾರ ಹಾಗೂ ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ ಮಂಗಳವಾರ ಇಲ್ಲಿ ಹೇಳಿದರು.

ಎನ್‌ಡಿಎ ಮೈತ್ರಿ ಸರ್ಕಾರದಲ್ಲಿ ಸಂಪುಟ ದರ್ಜೆ ಸಚಿವರಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಅವರು ಮಾತನಾಡಿದರು. 'ಶುದ್ಧ ಇಂಧನ ಒದಗಿಸುವ ಜತೆಗೆ ಇಂಧನ ಭದ್ರತೆ ಕಲ್ಪಿಸುವ ಮೂಲಕ ಭಾರತವನ್ನು ಜಾಗತಿಕವಾಗಿ ಬಲಿಷ್ಠಗೊಳಿಸುವ ಸಂಕಲ್ಪ ಮಾಡಲಾಗಿದೆ' ಎಂದರು.

'ಹೊಸ ಮತ್ತು ನವೀಕರಿಸಬಹುದಾದ ಇಂಧನದಲ್ಲಿ ಭಾರತವನ್ನು ಜಾಗತಿಕ ಉತ್ಪಾದನಾ ಕೇಂದ್ರವನ್ನಾಗಿ ರೂಪಿಸುವ ದೃಷ್ಟಿಯೊಂದಿಗೆ ಹೊಸ ಯೋಜನೆ ಹಾಗೂ ಕಾರ್ಯಕ್ರಮಗಳನ್ನು ಹಾಕಿಕೊಂಡು ಮುಂದುವರಿಯುತ್ತೇವೆ' ಎಂದೂ ಹೇಳಿದರು.

'ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಭಾರತದ ಜನರಿಗೆ ಆಹಾರ ಭದ್ರತೆ ಖಾತರಿಪಡಿಸಲು ಬದ್ಧರಾಗಿದ್ದೇವೆ ಮತ್ತು ದೇಶದಲ್ಲಿ ನೈಸರ್ಗಿಕ ಕೃಷಿಯನ್ನು ಬಲಪಡಿಸುವ ನಿಟ್ಟಿನಲ್ಲಿ ಮತ್ತಷ್ಟು ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಿದ್ದೇವೆ' ಎಂದು ತಿಳಿಸಿದರು.

ಸೋಮಣ್ಣ ಅಧಿಕಾರ ಸ್ವೀಕಾರ: ರೈಲ್ವೆ ಖಾತೆಯ ರಾಜ್ಯ ಸಚಿವರಾಗಿ ವಿ.ಸೋಮಣ್ಣ ಅವರು ರೈಲ್ವೆ ಭವನದಲ್ಲಿ

ಜೋಶಿ ಅವರು ತಮ್ಮ ಕಚೇರಿಯಲ್ಲಿ ಲಕ್ಷ್ಮಿ ಪೂಜೆ ನೆರವೇರಿಸುವ ಮೂಲಕ ಕಾರ್ಯಾರಂಭ ಮಾಡಿದರು.

ಮಂಗಳವಾರ ಅಧಿಕಾರ ಸ್ವೀಕರಿಸಿದರು. ಬಳಿಕ ಸೋಮಣ್ಣ ಮಾತನಾಡಿ, 'ಕಳೆದ 10 ವರ್ಷಗಳಲ್ಲಿ ನರೇಂದ್ರ ಮೋದಿ ನೇತೃತ್ವದಲ್ಲಿ ರೈಲ್ವೆ ಕ್ಷೇತ್ರ ಗಮನಾರ್ಹ ಪ್ರಗತಿ ಕಂಡಿದೆ. ದೇಶದ 140 ಕೋಟಿ ಜನರಿಗೆ ರೈಲ್ವೆ ಯೋಜನೆಗಳನ್ನು ತಲುಪಿಸಲು ಪ್ರಯತ್ನ ಮಾಡುತ್ತೇನೆ. ವಿಕಸಿತ ಭಾರತ ಕನಸು ನನಸು ಮಾಡಲು ಶ್ರಮಿಸುತ್ತೇನೆ' ಎಂದು ಹೇಳಿದರು.

ಅತಿ ಸಣ್ಣ, ಸಣ್ಣ ಹಾಗೂ ಮಧ್ಯಮ ಕೈಗಾರಿಕೆ, ಕಾರ್ಮಿಕ ಉದ್ಯೋಗ ಸಚಿವರಾಗಿ ಶೋಭಾ ಕರಂದ್ಲಾಜೆ ಅಧಿಕಾರ ವಹಿಸಿಕೊಂಡರು.

ವ್ಯಾಜ್ಯ ನೀತಿಗೆ ಸಚಿವಾಲಯ ಅಂಕಿತ

ಹಲವು ಬಾರಿ ಚರ್ಚೆಗೆ ಒಳಗಾಗಿದ್ದ ರಾಷ್ಟ್ರೀಯ ವ್ಯಾಜ್ಯ ನೀತಿಗೆ ಕೇಂದ್ರ ಕಾನೂನು ಸಚಿವಾಲಯವು ಮಂಗಳವಾರ ಅಂತಿಮ ರೂಪ ನೀಡಿದೆ. ಬಾಕಿ ಉಳಿದಿರುವ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಪಡಿಸುವ ಉದ್ದೇಶವನ್ನು ಈ ನೀತಿ ಹೊಂದಿದೆ.

ಕೇಂದ್ರ ಕಾನೂನು ಸಚಿವರಾಗಿ ಮಂಗಳವಾರ ಅಧಿಕಾರ ಸ್ವೀಕರಿಸಿದ ಅರ್ಜುನ್ ರಾಮ್ ಮೇಘವಾಲ್ ಅವರು, ರಾಷ್ಟ್ರೀಯ ವ್ಯಾಜ್ಯ ನೀತಿ ಕಡತಕ್ಕೆ ಸಹಿ ಹಾಕಿದರು.

ಇದನ್ನು ಮುಂದಿನ ದಿನಗಳಲ್ಲಿ ಕೇಂದ್ರ ಸಚಿವ ಸಂಪುಟದ ಅನುಮೋದನೆಗೆ ರವಾನಿಸಲಾಗುತ್ತದೆ.

ಈ ನೀತಿಯು ನರೇಂದ್ರ ಮೋದಿ ನೇತೃತ್ವದ ಸರ್ಕಾರದ 100 ದಿನಗಳ ಕಾರ್ಯಸೂಚಿಯ ಒಂದು ಭಾಗ ಎಂದು ಮೂಲಗಳು ತಿಳಿಸಿವೆ.

ಸುಪ್ರೀಂ ಕೋರ್ಟ್, ಹೈಕೋರ್ಟ್‌ಗಳು, ಅಧೀನ ನ್ಯಾಯಾಲಯಗಳು, ನ್ಯಾಯಮಂಡಳಿಗಳು ಹಾಗೂ ಗ್ರಾಹಕರ ನ್ಯಾಯಾಲಯಗಳಲ್ಲಿ ಬಾಕಿ ಉಳಿದಿರುವ ಪ್ರಕರಣಗಳಲ್ಲಿ ನ್ಯಾಯದಾನ ತ್ವರಿತವಾಗಿ ಆಗುವಂತೆ ಮಾಡುವುದು ಸಚಿವಾಲಯದ ಆದ್ಯತೆಯ ಕೆಲಸಗಳಲ್ಲಿ ಸೇರಿದೆ ಎಂದು ಮೇಘವಾಲ್ ಅವರು ತಿಳಿಸಿದರು.

'ವಿಐಎಸ್‌ಎಲ್ ಪುನರುಜ್ಜೀವನಕ್ಕೆ ಆದ್ಯತೆ'

ಪ್ರಜಾವಾಣಿ ವಾರ್ತೆ

ನವದೆಹಲಿ: ಭದ್ರಾವತಿಯಲ್ಲಿರುವ ವಿಶ್ವೇಶ್ವರಾಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು (ವಿಐಎಸ್‌ಎಲ್) ಪುನರುಜ್ಜೀವನಗೊಳಿಸಲು ಇರುವ ಸಾಧ್ಯಾಸಾಧ್ಯತೆಗಳು, ಅವಕಾಶಗಳ ಬಗ್ಗೆ ಶೀಘ್ರವೇ ಸಮಗ್ರ ಮಾಹಿತಿ ಕೊಡುವಂತೆ ಕೇಂದ್ರ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಉಕ್ಕು ಸಚಿವಾಲಯದ ಉನ್ನತ ಅಧಿಕಾರಿಗಳೊಂದಿಗೆ ಕುಮಾರಸ್ವಾಮಿ ಮಂಗಳವಾರ ಇಲ್ಲಿ ಸಭೆ ನಡೆಸಿದರು. ಬಳಿಕ ಉಕ್ಕು ಹಾಗೂ ಬೃಹತ್ ಕೈಗಾರಿಕಾ ಸಚಿವರಾಗಿ ಅಧಿಕಾರ ಸ್ವೀಕರಿಸಿದರು. ಕಾರ್ಖಾನೆಯ ಪುನಶ್ಚೇತನದ ಕುರಿತು ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದರು.

ಈ ಕಾರ್ಖಾನೆಯನ್ನು ಪುನರುಜ್ಜೀವನಗೊಳಿಸಲು ಕೇಂದ್ರ ಸರ್ಕಾರ ಎಲ್ಲ ಕ್ರಮಗಳನ್ನು ಕೈಗೊಂಡಿದೆ. ಈ ಎಲ್ಲ ಕ್ರಮಗಳು ವಿಫಲಗೊಂಡ ಕಾರಣ ಕಾರ್ಖಾನೆಯನ್ನು ಮುಚ್ಚಲು ತೀರ್ಮಾನಿಸಲಾಗಿದೆ' ಎಂದು ಕೇಂದ್ರ ಸರ್ಕಾರ ಈ ಹಿಂದೆ ತಿಳಿಸಿತ್ತು.

ಸಂಸ್ಥೆಯನ್ನು ಖಾಸಗೀಕರಣ ಮಾಡಲು ಕೇಂದ್ರ ಸಚಿವ ಸಂಪುಟವು 2016ರಲ್ಲಿ ಒಪ್ಪಿಗೆ ನೀಡಿತ್ತು. ಸಂಸ್ಥೆಯನ್ನು ಸಂಪೂರ್ಣವಾಗಿ ಮಾರಾಟ ಮಾಡಲು ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆಯು (ಡಿಐಪಿಎಎಂ) ಈ ಹಿಂದೆ ಬಿಡ್ ಕರೆದಿತ್ತು. ಬಿಡ್‌ದಾರರು ಆಸಕ್ತಿ ವಹಿಸದ ಕಾರಣಕ್ಕೆ ಕಾರ್ಖಾನೆಯನ್ನು ಖಾಸಗೀಕರಣ ಮಾಡುವ ಪ್ರಕ್ರಿಯೆಯನ್ನು ಕೇಂದ್ರ ಸರ್ಕಾರ 2022ರ ನವೆಂಬರ್‌ನಲ್ಲಿ ಕೈ ಬಿಟ್ಟಿತ್ತು. ನಂತರ ಸರ್ಕಾರವು ಕಾರ್ಖಾನೆಯನ್ನು ಮುಚ್ಚುವ ಪ್ರಕ್ರಿಯೆ ಆರಂಭಿಸಿತ್ತು' ಎಂದು ಕೇಂದ್ರ ತಿಳಿಸಿತ್ತು.

'ಪುನರುಜ್ಜೀವನದ ಭಾಗವಾಗಿ ಈ ಕಾರ್ಖಾನೆಗೆ ಬಳ್ಳಾರಿ ಜಿಲ್ಲೆಯಲ್ಲಿ 140 ಹೆಕ್ಟೇರ್ ಕಬ್ಬಿಣದ ಅದಿರು ಗಣಿಗಾರಿಕೆ ನೀಡಲು ಪ್ರಯತ್ನಿಸಲಾಗಿತ್ತು. ಆದರೆ, ದಾವೆಯ ಹಂತಕ್ಕೆ ಹೋಗಿದ್ದರಿಂದ ಇದನ್ನು ಕಾರ್ಯಗತಗೊಳಿಸಲು ಸಾಧ್ಯವಾಗಿರಲಿಲ್ಲ. ಈ ವಿಚಾರ ಇಂದಿಗೂ ಇತ್ಯರ್ಥ ಆಗಿಲ್ಲ' ಎಂದು ಕೇಂದ್ರ ಅಸಹಾಯಕತೆ ವ್ಯಕ್ತಪಡಿಸಿತ್ತು. ಕಾರ್ಖಾನೆ ಪುನರುಜ್ಜೀವನಗೊಳಿಸಲು ತುರ್ತು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿ ಕರ್ನಾಟಕ ಸರ್ಕಾರವು ಇತ್ತೀಚೆಗೆ ಪತ್ರ ಬರೆದಿತ್ತು.

ಸಭೆಯಲ್ಲಿ ಮಾತನಾಡಿದ ಅಧಿಕಾರಿಗಳು, ಬೆಂಗಳೂರಿನಲ್ಲಿ ಉಕ್ಕು ಸಂಶೋಧನಾ ಕೇಂದ್ರ ಸ್ಥಾಪನೆ ಬಗ್ಗೆ ಸಚಿವರ ಗಮನ ಸೆಳೆದರು.

ಕೇಂದ್ರ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಸಚಿವ ಎಚ್. ಡಿ. ಕುಮಾರಸ್ವಾಮಿ ಅವರು ಅಧಿಕಾರ ವಹಿಸಿಕೊಳ್ಳುವ ಮೊದಲು ತಮ್ಮ ಕಚೇರಿಯಲ್ಲಿ ಪೂಜೆ ಸಲ್ಲಿಸಿದರು

ಕುಮಾರಸ್ವಾಮಿಗೆ ಜೈರಾಮ್ ಪಂಚ ಪ್ರಶ್ನೆ

ಕುಮಾರಸ್ವಾಮಿ ಅವರು ತುಕ್ಕು ಹಿಡಿದಿರುವ ಉಕ್ಕಿನ ಖಾತೆಗೆ ಸಚಿವರಾಗಿದ್ದಾರೆ. ಅವರು ಪಂಚ ಪ್ರಶ್ನೆಗಳಿಗೆ ಉತ್ತರ ನೀಡಬೇಕು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಆಗ್ರಹಿಸಿದ್ದಾರೆ.

- ವಿಶಾಖಪಟ್ಟಣದ ಉಕ್ಕಿನ ಕಾರ್ಖಾನೆಯನ್ನು (ಆರ್‌ಐಎನ್‌ಎಲ್) ಪ್ರಧಾನಿಯವರ ಸ್ನೇಹಿತರಿಗೆ ಮಾರುವುದಿಲ್ಲ ಎಂದು ಕುಮಾರಸ್ವಾಮಿ ಅವರು ಲಿಖಿತ ಭರವಸೆ ನೀಡಬಲ್ಲರೇ?
- ಸೇಲಂನ ಉಕ್ಕಿನ ಕಾರ್ಖಾನೆಯ ಖಾಸಗೀಕರಣ ಪ್ರಕ್ರಿಯೆಯನ್ನು ನೂತನ ಸಚಿವರು ಮುಂದುವರಿಸುತ್ತಾರೆಯೇ?
- ಬಸ್ತಾರ್‌ನ ನಗರ್ನಾರ್ ಉಕ್ಕಿನ ಕಾರ್ಖಾನೆಯನ್ನು ಖಾಸಗೀಕರಣ ಮಾಡುವುದಿಲ್ಲ ಎಂದು ಕೇಂದ್ರ ಸಚಿವ ಅಮಿತ್ ಶಾ ಈ ಹಿಂದೆ ಮಾತು ಕೊಟ್ಟಿದ್ದರು. ಶಾ ಮಾತಿಗೆ ಕುಮಾರಸ್ವಾಮಿ ಬದ್ಧರಾಗಿರುತ್ತಾರೆಯೇ ಅಥವಾ ಪ್ರಧಾನಿಯವರ ಉದ್ಯಮ ಸ್ನೇಹಿತರಿಗೆ ಈ ಕಾರ್ಖಾನೆಯನ್ನು ಮಾರಾಟ ಮಾಡುತ್ತಾರೆಯೇ?
- ವಿಐಎಸ್‌ಎಲ್ ಕಾರ್ಖಾನೆ ಮುಚ್ಚುವ ನಿರ್ಧಾರ ಕೈಬಿಟ್ಟು ಅದರ ಉಳಿವಿಗೆ ಅಗತ್ಯ ಕ್ರಮ ಕೈಗೊಳ್ಳುವರೇ?
- ದುರ್ಗಾಪುರದ ಉಕ್ಕಿನ ಕಾರ್ಖಾನೆಯನ್ನು ಮಾರಲು ಮೋದಿ ಸರ್ಕಾರ ಪ್ರಯತ್ನಿಸಿತ್ತು. ಈ ಕಾರ್ಖಾನೆಯ ಖಾಸಗೀಕರಣಕ್ಕೆ ಅವಕಾಶ ನೀಡುವುದಿಲ್ಲ ಎಂದು ಅಲ್ಲಿನ ಹಾಗೂ ಪಶ್ಚಿಮ ಬಂಗಾಳದ ಜನರಿಗೆ ಸಚಿವರು ಭರವಸೆ ನೀಡಬಲ್ಲರೇ?

2 ಬಾರಿ ಪ್ರವೇಶ: ವಿ.ವಿಗಳಿಗೆ ಅವಕಾಶ

ಒಂದನೇ ಪುಟದಿಂದ

- ಉದ್ಯಮಗಳಿಗೆ ವರ್ಷಕ್ಕೆ ಎರಡು ಬಾರಿ ಕ್ಯಾಂಪಸ್ ನೇಮಕಾತಿಗಳನ್ನು ಮಾಡಿಕೊಳ್ಳಲು ಅವಕಾಶ ದೊರೆಯುತ್ತದೆ. ಇದರಿಂದ ಪದವೀಧರರಿಗೆ ಉದ್ಯೋಗಾವಕಾಶಗಳೂ ಹೆಚ್ಚುತ್ತವೆ
- ಉನ್ನತ ಶಿಕ್ಷಣ ಸಂಸ್ಥೆಗಳು ತಮ್ಮ ಸಂಪನ್ಮೂಲಗಳಾದ ಅಧ್ಯಾಪಕರು, ಪ್ರಯೋಗಾಲಯ, ತರಗತಿ ಕೊಠಡಿಗಳು ಮತ್ತು ಇತರ ಪೂರಕ ಸೇವೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಸದ್ಬಳಕೆ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ವಿಶ್ವವಿದ್ಯಾಲಯಗಳು ಇನ್ನಷ್ಟು ಕ್ರಿಯಾಶೀಲವಾಗಿ ಕಾರ್ಯ ನಿರ್ವಹಿಸುತ್ತವೆ
- ಜಗತ್ತಿನಾದ್ಯಂತ ಬಹುತೇಕ ವಿಶ್ವವಿದ್ಯಾಲಯಗಳು ವರ್ಷಕ್ಕೆ ಎರಡು ಬಾರಿ ಪ್ರವೇಶ ಪ್ರಕ್ರಿಯೆ ವ್ಯವಸ್ಥೆಯನ್ನು ಈಗಾಗಲೇ ಅನುಸರಿಸುತ್ತಿವೆ. ಭಾರತೀಯ ಉನ್ನತ ಶಿಕ್ಷಣ ಸಂಸ್ಥೆಗಳು ಈ ಮಾದರಿಯನ್ನು ಅಳವಡಿಸಿಕೊಂಡರೆ ಜಾಗತಿಕ ಮಟ್ಟದಲ್ಲಿ ಅನುಕೂಲಗಳಾಗುತ್ತವೆ
- ಅಂತರರಾಷ್ಟ್ರೀಯ ಸಹಯೋಗ ಮತ್ತು ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮಗಳನ್ನು ಹೆಚ್ಚಿಸಲು ಇದು ಪೂರಕವಾಗಿದೆ. ಅಲ್ಲದೆ ಇದರಿಂದ ನಮ್ಮ ಸಂಸ್ಥೆಗಳ ಜಾಗತಿಕ ಸ್ಪರ್ಧಾತ್ಮಕತೆಯೂ ಸುಧಾರಿಸುತ್ತದೆ. ಜತೆಗೆ ಜಾಗತಿಕ ಶೈಕ್ಷಣಿಕ ಮಾನದಂಡಗಳನ್ನೂ ಪಾಲಿಸಿದಂತಾಗುತ್ತದೆ
- ವರ್ಷಕ್ಕೆ ಎರಡು ಬಾರಿ ಪ್ರವೇಶ ಪ್ರಕ್ರಿಯೆ ನಡೆಸುವುದು ವಿಶ್ವವಿದ್ಯಾಲಯ ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಕಡ್ಡಾಯವೇನಲ್ಲ. ಇದಕ್ಕೆ ಅಗತ್ಯವಿರುವಷ್ಟು ಅಧ್ಯಾಪಕರು, ಮೂಲಸೌಕರ್ಯ ಹೊಂದಿರುವ ಉನ್ನತ ಶಿಕ್ಷಣ ಸಂಸ್ಥೆಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು
- ಇದು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಪ್ರವೇಶವನ್ನು ಹೆಚ್ಚಿಸಲು ಮತ್ತು ಉದಯೋನ್ಮುಖ ಕ್ಷೇತ್ರಗಳಲ್ಲಿ ಹೊಸ ಕೋರ್ಸ್‌ಗಳನ್ನು ಪರಿಚಯಿಸಲು ಅವಕಾಶ ಕಲ್ಪಿಸುತ್ತದೆ. ಇದನ್ನು ಅಳವಡಿಸಿಕೊಳ್ಳಲು ಉನ್ನತ ಶಿಕ್ಷಣ ಸಂಸ್ಥೆಗಳು ತಮ್ಮ ಸಾಂಸ್ಥಿಕ ನಿಯಮಗಳಿಗೆ ಸೂಕ್ತ ತಿದ್ದುಪಡಿಗಳನ್ನು ತರಬೇಕಾಗುತ್ತದೆ

'ಯೋಜನೆ ರೂಪಿಸಲು ಸಜ್ಜಾಗಬೇಕು'

ಪ್ರಸ್ತುತ, ವಿಶ್ವವಿದ್ಯಾಲಯ ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರತಿ ವರ್ಷ ಜುಲೈ–ಆಗಸ್ಟ್‌ನಲ್ಲಿ ಪ್ರವೇಶ ಪ್ರಕ್ರಿಯೆಗಳು ನಡೆಯುತ್ತವೆ. ಹೀಗಾಗಿ ಶೈಕ್ಷಣಿಕ ವರ್ಷ ಜುಲೈ–ಆಗಸ್ಟ್‌ನಲ್ಲಿ ಆರಂಭವಾಗಿ, ಮೇ– ಜೂನ್‌ನಲ್ಲಿ ಕೊನೆಗೊಳ್ಳುತ್ತದೆ. ವರ್ಷಕ್ಕೆ ಎರಡು ಬಾರಿ ಪ್ರವೇಶಕ್ಕೆ ಅವಕಾಶ ಕಲ್ಪಿಸಿದರೆ, ಅದಕ್ಕೆ ಪೂರಕವಾಗಿ ಯೋಜನೆಗಳನ್ನು ರೂಪಿಸಿಕೊಂಡು, ಸರ್ವರೀತಿಯಲ್ಲೂ ಸಜ್ಜಾಗಬೇಕಾದದ್ದು ವಿ.ವಿ ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳ ಕರ್ತವ್ಯ ಎಂದು ಯುಜಿಸಿ ಅಧ್ಯಕ್ಷ ಜಗದೀಶ್ ಕುಮಾರ್ ವಿವರಿಸಿದ್ದಾರೆ.

ಅಲ್ಲದೆ, ಈ ಸಂಬಂಧ ಎದುರಾಗಬಹುದಾದ ಸವಾಲು ಅರಿತು ಅದಕ್ಕೆ ತಕ್ಕಂತೆ ಯೋಜನೆ ರೂಪಿಸಿಕೊಳ್ಳಬೇಕು. ಆಡಳಿತಾತ್ಮಕ ಜಟಿಲತೆಗಳ ಮೇಲೆ ಹೆಚ್ಚು ಕೆಲಸ ಮಾಡಬೇಕು. ಲಭ್ಯವಿರುವ ಸಂಪನ್ಮೂಲಗಳನ್ನು ಇನ್ನಷ್ಟು ಸಮರ್ಪಕ ಬಳಸಿಕೊಳ್ಳಲು ಕಾರ್ಯತಂತ್ರ ರೂಪಿಸಬೇಕು. ವರ್ಷದ ವಿಭಿನ್ನ ಸಮಯಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ತೊಂದರೆ, ಅಡೆ–ತಡೆ ಆಗದಂತೆ ವ್ಯವಸ್ಥೆಗಳನ್ನು ಎಚ್ಚರದಿಂದ ನಿರ್ವಹಿಸಬೇಕು. ಈ ಕುರಿತ ವ್ಯವಸ್ಥೆಯ ಪರಿವರ್ತನೆಗೆ ವಿದ್ಯಾರ್ಥಿಗಳು, ಅಧ್ಯಾಪಕರು, ಸಿಬ್ಬಂದಿಯನ್ನು ಸರಿಯಾಗಿ ಸಿದ್ಧಪಡಿಸಿದಾಗ ಮಾತ್ರ ಇದರ ಉಪಯುಕ್ತತೆ ಹೆಚ್ಚುತ್ತದೆ ಎಂದಿದ್ದಾರೆ.

ಆನ್‌ಲೈನ್ ಕೋರ್ಸ್‌ಗಳಿಗೆ ಅನುಷ್ಠಾನ: ಮುಕ್ತ ಮತ್ತು ದೂರಶಿಕ್ಷಣ (ಒಡಿಎಲ್) ಹಾಗೂ ಆನ್‌ಲೈನ್ ಕೋರ್ಸ್‌ಗಳಿಗೆ ವರ್ಷಕ್ಕೆ ಎರಡು ಬಾರಿ (ಜುಲೈ ಮತ್ತು ಜನವರಿ) ಪ್ರವೇಶಕ್ಕೆ ಯುಜಿಸಿ ಈಗಾಗಲೇ ಅವಕಾಶ ಮಾಡಿಕೊಟ್ಟಿದೆ. ಈ ನಿರ್ಧಾರದಿಂದ ಹಿಂದಿನ ಸಾಲಿನಲ್ಲಿ ಲಕ್ಷಾಂತರ ವಿದ್ಯಾರ್ಥಿಗಳು ಪದವಿ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಸಾಧ್ಯವಾಗಿದೆ ಎಂದು ಕುಮಾರ್ ವಿವರಿಸಿದ್ದಾರೆ. ಯುಜಿಸಿ ಪೋರ್ಟಲ್‌ನ ಮಾಹಿತಿ ಪ್ರಕಾರ, ಒಡಿಎಲ್ ಹಾಗೂ ಆನ್‌ಲೈನ್ ಕೋರ್ಸ್‌ಗಳಿಗೆ 2022ರ ಜುಲೈನಲ್ಲಿ 19.73 ಲಕ್ಷ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದರೆ, 2023ರ ಜನವರಿಯಲ್ಲಿ 4.29 ಲಕ್ಷ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ ಎಂದು ಅವರು ಅಂಕಿ ಅಂಶಗಳನ್ನು ನೀಡಿದ್ದಾರೆ.

ವಾಸ್ತವಾಂಶ ತೆರೆದಿಟ್ಟ ಚುನಾವಣೆ

ಬಿಜೆಪಿ ಕಾರ್ಯಕರ್ತರ 'ಅತಿ ಆತ್ಮವಿಶ್ವಾಸ' ಮುಳುವಾಯಿತು: 'ಆರ್ಗನೈಸರ್'

ನವದೆಹಲಿ (ಪಿಟಿಐ): ಈ ಬಾರಿಯ ಲೋಕಸಭಾ ಚುನಾವಣೆ ಫಲಿತಾಂಶವು 'ಅತಿಯಾದ ಆತ್ಮವಿಶ್ವಾಸ' ಹೊಂದಿದ್ದ ಬಿಜೆಪಿ ಕಾರ್ಯಕರ್ತರು ಮತ್ತು ಮುಖಂಡರಿಗೆ ವಾಸ್ತವಾಂಶದ ದರ್ಶನ ಮಾಡಿಸಿಕೊಟ್ಟಿದೆ ಎಂದು ಆರ್‌ಎಸ್‌ಎಸ್ ಮುಖವಾಣಿ 'ಆರ್ಗನೈಸರ್' ನಿಯತಕಾಲಿಕೆಯಲ್ಲಿ ಪ್ರಕಟಗೊಂಡ ಲೇಖನದಲ್ಲಿ ವಿಶ್ಲೇಷಿಸಲಾಗಿದೆ.

'ಪ್ರಧಾನಿ ನರೇಂದ್ರ ಮೋದಿ ಅವರು 400ಕ್ಕೂ ಅಧಿಕ ಸ್ಥಾನಗಳನ್ನು ಗೆಲ್ಲಬೇಕೆಂದು ಹೇಳುತ್ತಿದ್ದುದು, ತಮಗೆ ನೀಡಿದ ಗುರಿ ಎಂಬುದು ಪಕ್ಷದ ಹೆಚ್ಚಿನ ಕಾರ್ಯಕರ್ತರಿಗೆ ತಿಳಿಯಲೇ ಇಲ್ಲ' ಎಂದು ರತನ್ ಶಾರ್ದಾ ಅವರು ತಮ್ಮ ಲೇಖನದಲ್ಲಿ ಬರೆದಿದ್ದಾರೆ.

ಈ ಬಾರಿ 240 ಸ್ಥಾನಗಳನ್ನು ಗೆದ್ದಿರುವ ಬಿಜೆಪಿಗೆ ಸ್ವಂತ ಬಲದಿಂದ ಸರ್ಕಾರ ರಚಿಸಲು ಸಾಧ್ಯವಾಗಿಲ್ಲ. ಎನ್‌ಡಿಎ ಮೈತ್ರಿಕೂಟ 293 ಸ್ಥಾನಗಳನ್ನು ಗೆದ್ದ ಕಾರಣ ಮೋದಿ ಸತತ ಮೂರನೇ ಬಾರಿ ಪ್ರಧಾನಿ ಹುದ್ದೆಗೇರಿದ್ದಾರೆ.

'ಕ್ಷೇತ್ರದಲ್ಲಿ ಕಠಿಣ ಪರಿಶ್ರಮ ನಡೆಸುವ ಮೂಲಕ ಗುರಿಗಳನ್ನು ಈಡೇರಿಸ ಬಹುದೇ ಹೊರತು, ಪೋಸ್ಟರ್‌ಗಳು ಮತ್ತು ಸೆಲ್ಫಿಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳುವುದರಿಂದ ಯಾವುದೇ ಪ್ರಯೋಜನವಿಲ್ಲ. ಕೆಲವು ಮುಖಂಡರು ಮೋದಿ ಅವರ ವರ್ಚಸ್ಸನ್ನು ತಮ್ಮ ಲಾಭಕ್ಕೆ ಬಳಸಿಕೊಂಡರೇ ಹೊರತು, ಜನರ ಧ್ವನಿಗೆ ಯಾರೂ ಕಿವಿಯಾಗಲಿಲ್ಲ' ಎಂದು ಟೀಕಿಸಿದ್ದಾರೆ.

ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿಯು ನಿರೀಕ್ಷೆಗಿಂತ ಕಡಿಮೆ ಸ್ಥಾನಗಳನ್ನು ಗೆಲ್ಲಲು 'ಅನಗತ್ಯ ರಾಜಕಾರಣ' ಕೂಡಾ ಕಾರಣ ಎಂದು ಅಭಿಪ್ರಾಯ ಪಟ್ಟಿದ್ದಾರೆ.

'ಬಿಜೆಪಿಯ ಅನಾವಶ್ಯಕ ರಾಜಕಾರಣಕ್ಕೆ ಮಹಾರಾಷ್ಟ್ರದಲ್ಲಿ ನಡೆದ ಬೆಳವಣಿಗೆ ಉತ್ತಮ ಉದಾಹರಣೆಯಾಗಿದೆ. ಬಿಜೆಪಿ ಮತ್ತು ವಿಭಜಿತ ಶಿವಸೇನಾಗೆ ಸ್ಪಷ್ಟ ಬಹುಮತ ಇದ್ದರೂ, ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿಯನ್ನು ಸೇರಿಸಿಕೊಳ್ಳಲಾಯಿತು. ಮುಂದಿನ ಒಂದೆರಡು ವರ್ಷಗಳಲ್ಲಿ ಶರದ್ ಪವಾರ್ ವರ್ಚಸ್ಸು ಕಡಿಮೆಯಾಗುತ್ತಿತ್ತಲ್ಲದೆ, ಅವರ ಕುಟುಂಬದೊಳಗಿನ ಕಚ್ಚಾಟದಿಂದಾಗಿ ಎನ್‌ಸಿಪಿ ತನ್ನ ಶಕ್ತಿ ಕಳೆದುಕೊಳ್ಳುತ್ತಿತ್ತು' ಎಂದಿದ್ದಾರೆ.

'ಇವೆಲ್ಲದರ ನಡುವೆಯೂ ಎನ್‌ಸಿಪಿಯನ್ನು (ಅಜಿತ್ ಪವಾರ್ ಬಣ) ಸೆಳೆದುಕೊಳ್ಳುವ ನಿರ್ಧಾರ ಕೈಗೊಂಡದ್ದು ಏಕೆ? ಕಾಂಗ್ರೆಸ್ ಸಿದ್ಧಾಂತದ (ಎನ್‌ಸಿಪಿ) ವಿರುದ್ಧ ಹಲವು ವರ್ಷಗಳಿಂದ ಹೋರಾಡಿದ್ದ ಬಿಜೆಪಿ ಕಾರ್ಯಕರ್ತರಿಗೆ ಇದು ನೋವುಂಟು ಮಾಡಿತು. ಒಂದು ಕೆಟ್ಟ ನಿರ್ಧಾರದಿಂದ ಬಿಜೆಪಿ ತನ್ನ ಬ್ರ್ಯಾಂಡ್ ಮೌಲ್ಯ ಕಳೆದುಕೊಂಡಿತು' ಎಂದು ಹೇಳಿದ್ದಾರೆ.

ರಾಷ್ಟ್ರದಾದ್ಯಂತ ಪಕ್ಷ ಪುನರ್ ಸಂಘಟನೆಗೆ ಬಿಜೆಪಿ ಸಿದ್ಧತೆ

ನಡ್ಡಾ ಅವಧಿ ವಿಸ್ತರಣೆ ಸಾಧ್ಯತೆ

ನವದೆಹಲಿ (ಪಿಟಿಐ): ಪಕ್ಷಕ್ಕೆ ಹೊಸ ಸದಸ್ಯರನ್ನು ಸೇರಿಸಿಕೊಳ್ಳುವುದು, ರಾಜ್ಯಗಳಲ್ಲಿ ಆಂತರಿಕ ಚುನಾವಣೆಗಳನ್ನು ನಡೆಸುವುದು ಮತ್ತು ಪಕ್ಷದ ರಾಷ್ಟ್ರೀಯ ಅಧ್ಯಕ್ಷರನ್ನು ಆಯ್ಕೆ ಮಾಡಲು ಚುನಾವಣೆ ನಡೆಸುವುದಕ್ಕೆ ಬಿಜೆಪಿ ಮುಂದಾಗಿದ್ದು, ಪಕ್ಷ ಪುನರ್ ಸಂಘಟನೆಗೆ ಸಿದ್ಧತೆ ಆರಂಭ ಮಾಡಿದೆ.

ಜೆ.ಪಿ. ನಡ್ಡಾ

ಪಕ್ಷದ ಹಾಲಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ಅಧಿಕಾರವಧಿಯನ್ನು ವಿಸ್ತರಣೆ ಮಾಡಲಾಗಿತ್ತು. ಅದು ಜೂನ್ 30ಕ್ಕೆ ಕೊನೆಗೊಳ್ಳಲಿದೆ. ಬಿಜೆಪಿಯ ಸಂವಿಧಾನಕ್ಕೆ ಇತ್ತೀಚೆಗೆ ತಿದ್ದುಪಡಿ ತರಲಾಗಿದ್ದು, ಅದು ಅಧ್ಯಕ್ಷರ ಅವಧಿ ಸೇರಿದಂತೆ ತುರ್ತು ಸಂದರ್ಭಗಳಲ್ಲಿ ನಿರ್ಧಾರ ಕೈಗೊಳ್ಳುವ ಅವಕಾಶವನ್ನು ಪಕ್ಷದ ಸಂಸದೀಯ ಮಂಡಳಿಗೆ ಕಲ್ಪಿಸಿದೆ.

ನಡ್ಡಾ ಅವರು ಆರೋಗ್ಯ ಸಚಿವರಾಗಿ ಮೋದಿ ಸಂಪುಟ ಸೇರಿರುವುದರಿಂದ ಅವರನ್ನು ಬದಲಿಸಬೇಕಾದ ಪರಿಸ್ಥಿತಿ ಏರ್ಪಟ್ಟಿದೆ. ಇಷ್ಟಾದರೂ ಪಕ್ಷದ ಚುನಾವಣೆ ಮುಗಿಯುವವರೆಗೆ ಸಂಸದೀಯ ಮಂಡಳಿಯು ನಡ್ಡಾ ಅವರ ಅವಧಿಯನ್ನು ವಿಸ್ತರಿಸುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ.

ಕೆಲವು ರಾಜ್ಯಗಳ ಘಟಕಗಳ ಅಧ್ಯಕ್ಷರು ಕೇಂದ್ರ ಸರ್ಕಾರದಲ್ಲಿ ಅಥವಾ ರಾಜ್ಯ ಸರ್ಕಾರಗಳಲ್ಲಿ ಸಚಿವರಾಗಿದ್ದಾರೆ. ಅಂಥ ರಾಜ್ಯಗಳಲ್ಲಿ ಮತ್ತು ಲೋಕಸಭಾ ಚುನಾವಣೆಯಲ್ಲಿ ಪಕ್ಷಕ್ಕೆ ಹಿನ್ನಡೆ ಉಂಟಾಗಿರುವ ರಾಜ್ಯಗಳಲ್ಲಿ ಹೊಸ ಅಧ್ಯಕ್ಷರನ್ನು ಆಯ್ಕೆ ಮಾಡಲು ಪಕ್ಷ ಸಜ್ಜಾಗಿದೆ.

ಪಶ್ಚಿಮ ಬಂಗಾಳ ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ಸುಕಾಂತ ಮಜುಂದಾರ್ ಕೇಂದ್ರ ಸಚಿವರಾಗಿದ್ದಾರೆ. ಬಿಹಾರ ಘಟಕದ ಅಧ್ಯಕ್ಷ ಸಾಮ್ರಾಟ್ ಚೌಧರಿ ರಾಜ್ಯದ ಉಪಮುಖ್ಯಮಂತ್ರಿಯಾಗಿದ್ದಾರೆ. ಹರಿಯಾಣದ ಮುಖ್ಯಮಂತ್ರಿ ನಾಯಬ್ ಸಿಂಗ್ ಸೈನಿ ಅವರು ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾಗಿಯೂ ಕೆಲಸ ಮಾಡುತ್ತಿದ್ದಾರೆ.

ಲೋಕಸಭಾ ಚುನಾವಣೆಯ ಕಾರಣಕ್ಕೆ ಪಕ್ಷದ ಆಂತರಿಕ ಚುನಾವಣೆಯನ್ನು ಮತ್ತು ಬದಲಾವಣೆಗಳನ್ನು ಮುಂದೂಡಲಾಗಿತ್ತು. ಚುನಾವಣೆಯಲ್ಲಿ ಪಕ್ಷವು ಕೆಲವು ರಾಜ್ಯಗಳಲ್ಲಿ ನಿರೀಕ್ಷಿತ ಮಟ್ಟದಲ್ಲಿ ಸಾಧನೆ ಮಾಡದೇ ಇರುವುದರಿಂದ ಶೀಘ್ರದಲ್ಲಿಯೇ ಬದಲಾವಣೆ ಪ್ರಕ್ರಿಯೆಯನ್ನು ಆರಂಭಿಸಲಿದೆ.

ಪ್ರಧಾನ ಕಾರ್ಯದರ್ಶಿಗೆ ಪಟ್ಟ?

ಅಮಿತ್ ಶಾ ಅವರು 2019ರ ಲೋಕಸಭಾ ಚುನಾವಣೆಯ ನಂತರ ಕೇಂದ್ರ ಸಂಪುಟಕ್ಕೆ ಸೇರಿದ್ದರು. ಆಗ ಪಕ್ಷದ ಕಾರ್ಯಾಧ್ಯಕ್ಷರಾಗಿ ಆಯ್ಕೆಯಾಗಿದ್ದ ನಡ್ಡಾ ಅವರು, ಜನವರಿ 2020ರಲ್ಲಿ ಪೂರ್ಣಪ್ರಮಾಣದಲ್ಲಿ ಅಧ್ಯಕ್ಷರಾಗಿದ್ದರು.

ಪಕ್ಷದಲ್ಲಿ ಉತ್ತಮ ಸಂಘಟನಾ ಚಾತುರ್ಯವುಳ್ಳ ಧರ್ಮೇಂದ್ರ ಪ್ರಧಾನ್, ಭೂಪೇಂದ್ರ ಯಾದವ್ ರೀತಿಯ ನಾಯಕರು ಮೋದಿ ಸರ್ಕಾರದಲ್ಲಿ ಸಚಿವರಾಗಿದ್ದಾರೆ. ಹೀಗಾಗಿ ಪಕ್ಷವು ರಾಜ್ಯ ಘಟಕಗಳಿಂದ ಅಥವಾ ಪಕ್ಷದ ಪ್ರಧಾನ ಕಾರ್ಯದರ್ಶಿಗಳಿಂದ ಅಧ್ಯಕ್ಷರನ್ನು ಆಯ್ಕೆ ಮಾಡಬಹುದು ಎನ್ನಲಾಗುತ್ತಿದೆ.

ಉಗ್ರರ ದಾಳಿ ಪ್ರಕರಣ: 11 ತಂಡಗಳಿಂದ ಕಾರ್ಯಾಚರಣೆ

ಜಮ್ಮು (ಪಿಟಿಐ): ಮಾತಾ ವೈಷ್ಣೋದೇವಿ ದೇವಾಲಯದ ಯಾತ್ರಿಗಳಿದ್ದ ಬಸ್ಸಿನ ಮೇಲೆ ದಾಳಿ ನಡೆಸಿದ ಉಗ್ರರ ಪತ್ತೆಗೆ ಭದ್ರತಾ ಪಡೆ ಶೋಧ ಕಾರ್ಯವನ್ನು ಚುರುಕುಗೊಳಿಸಿದ್ದು, 11 ತಂಡಗಳು ಈ ಕಾರ್ಯಾಚರಣೆಯಲ್ಲಿ ತೊಡಗಿವೆ.

ಜಮ್ಮು ಮತ್ತು ರಜೌರಿ ಜಿಲ್ಲೆಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದೆ ಎಂದು ಅಧಿಕಾರಿಯೊಬ್ಬರು ಮಂಗಳವಾರ ತಿಳಿಸಿದರು. ಘಟನೆ ಸಂಬಂಧ ಇದುವರೆಗೆ 20 ಮಂದಿಯನ್ನು ವಶಕ್ಕೆ ಪಡೆಯಲಾಗಿದೆ.

ಜಮ್ಮುವಿನ ರಿಯಾಸಿ ಜಿಲ್ಲೆಯ ತೇರ್ಯತ್ ಗ್ರಾಮದಲ್ಲಿ ಭಾನುವಾರ ಸಂಜೆ ಉಗ್ರರು ನಡೆಸಿದ್ದ ಗುಂಡಿನ ದಾಳಿಯಲ್ಲಿ ಒಂಬತ್ತು ಯಾತ್ರಿಕರು ಮೃತಪಟ್ಟು, 41 ಮಂದಿ ಗಾಯಗೊಂಡಿದ್ದರು. ಉಗ್ರರು ಗುಂಡು ಹಾರಿಸಿದಾಗ ಚಾಲಕನ ನಿಯಂತ್ರಣ ಕಳೆದುಕೊಂಡ ಬಸ್ ಆಳವಾದ ಕಮರಿಗೆ ಉರುಳಿತ್ತು.

'ಪೊಲೀಸರು, ಸೇನೆ ಮತ್ತು ಸಿಆರ್‌ಪಿಎಫ್‌ನ ಪ್ರತ್ಯೇಕ ತಂಡಗಳು ಉಗ್ರರ ಬೇಟೆಗೆ ಜಂಟಿ ಕಾರ್ಯಾಚರಣೆಗಿಳಿದಿವೆ. ಕೆಲ ಮಹತ್ವದ ಸುಳಿವು ಲಭ್ಯವಾಗಿವೆ' ಎಂದು ಉಧಂಪುರ–ರಿಯಾಸಿ ವಲಯದ ಡಿಐಜಿ ರಯೀಸ್ ಮೊಹಮ್ಮದ್ ಬಟ್ ಹೇಳಿದ್ದಾರೆ.

ಗುಂಡಿನ ದಾಳಿ ಉಗ್ರ ಸಾವು

ಜಮ್ಮು (ಪಿಟಿಐ): ಜಮ್ಮು ಕಾಶ್ಮೀರದ ಕಠುವಾ ಬಳಿ ಅಂತರರಾಷ್ಟ್ರೀಯ ಗಡಿಯಲ್ಲಿ ಉಗ್ರರ ಮೇಲೆ ಭದ್ರತಾ ಪಡೆಗಳು ಮಂಗಳವಾರ ದಾಳಿ ನಡೆಸಿದ್ದು, ಉಗ್ರನೊಬ್ಬ ಹತನಾಗಿದ್ದಾನೆ.

ಯಾತ್ರಾರ್ಥಿಗಳಿದ್ದ ಬಸ್ ಮೇಲೆ ಉಗ್ರರು ದಾಳಿ ನಡೆಸಿದ ಎರಡು ದಿನದ ಬಳಿಕ ಈ ಕೃತ್ಯ ನಡೆದಿದೆ. ಸಂಜೆ ಹೀರಾನಗರ ವಲಯದ ಸೈದಾ ಸುಖಲ್ ಗ್ರಾಮದಲ್ಲಿ ಉಗ್ರರು ಅಡಗಿದ್ದು, ಶೋಧ ಕಾರ್ಯಾಚರಣೆ ವೇಳೆ ಒಬ್ಬ ಉಗ್ರ ಬಲಿಯಾದ ಎಂದು ಪೊಲೀಸರು ತಿಳಿಸಿದ್ದಾರೆ.

ವಲಸಿಗರ ದೋಣಿ ಮುಳುಗಿ 49 ಸಾವು

ಕೈರೊ(ಎಪಿ): ವಲಸಿಗರನ್ನು ಹೊತ್ತು-ಸಾಗುತ್ತಿದ್ದ ದೋಣಿಯೊಂದು ಯೆಮೆನ್ ಕರಾವಳಿಯಲ್ಲಿ ಮುಳುಗಿದ ಪರಿಣಾಮ 49 ಜನರು ಮೃತಪಟ್ಟು, 140 ಜನರು ನಾಪತ್ತೆಯಾಗಿದ್ದಾರೆ ಎಂದು ವಿಶ್ವಸಂಸ್ಥೆಯ ವಲಸಿಗರ ಅಂತರ ರಾಷ್ಟ್ರೀಯ ಸಂಸ್ಥೆಯು (ಐಒಎಂ) ಮಂಗಳವಾರ ತಿಳಿಸಿದೆ.

ದೋಣಿಯಲ್ಲಿ ಸೋಮಾಲಿಯಾ ಮತ್ತು ಇಥಿಯೋಪಿಯಾದ ಸುಮಾರು 260 ವಲಸಿಗರಿದ್ದರು. ಅವರನ್ನು ದೋಣಿಯು ಸೋಮಾಲಿಯಾದ ಉತ್ತರ ಕರಾವಳಿಯಿಂದ ಅಡೆನ್ ಖಾರಿ ಮೂಲಕ ಯೆಮೆನ್ ದಕ್ಷಿಣ ಕರಾವಳಿಗೆ ಹೊತ್ತುಸಾಗುತ್ತಿತ್ತು ಎಂದು ಐಒಎಂ ಪ್ರಕಟಣೆಯಲ್ಲಿ ತಿಳಿಸಿದೆ.

ಈವರೆಗೆ 71 ಜನರನ್ನು ರಕ್ಷಿಸಲಾಗಿದೆ. ಶೋಧಕಾರ್ಯವು ಮುಂದುವರಿದಿದೆ. ಮೃತರಲ್ಲಿ 31 ಮಂದಿ ಮಹಿಳೆಯರು ಮತ್ತು ಆರು ಮಕ್ಕಳಿದ್ದಾರೆ ಎಂದಿದೆ.

ಪೂರ್ವ ಆಫ್ರಿಕಾದಿಂದ ಗಲ್ಫ್ ರಾಷ್ಟ್ರಗಳಿಗೆ ವಲಸೆ ಹೋಗುವವರಿಗೆ ಯೆಮೆನ್ ಪ್ರಮುಖ ಮಾರ್ಗವಾಗಿದೆ. ಯೆಮೆನ್‌ನಲ್ಲಿ ದಶಕದಿಂದ ನಡೆಯುತ್ತಿರುವ ನಾಗರಿಕ ಯುದ್ಧಗಳ ಕಾರಣ ಪ್ರತಿವರ್ಷ ಗಲ್ಫ್ ರಾಷ್ಟ್ರಗಳಿಗೆ ವಲಸೆ ಹೋಗುತ್ತಿರುವವರ ಸಂಖ್ಯೆಯಲ್ಲೂ ಹೆಚ್ಚಳವಾಗುತ್ತಿದೆ.

'ಯುಸಿಸಿ: ಸರ್ಕಾರದ ಕಾರ್ಯಸೂಚಿ'

ನವದೆಹಲಿ (ಪಿಟಿಐ): 'ಏಕರೂಪ ನಾಗರಿಕ ಸಂಹಿತೆಯ (ಯುಸಿಸಿ) ಜಾರಿ ಸರ್ಕಾರದ ಕಾರ್ಯಸೂಚಿಯ ಭಾಗವಾಗಿದೆ' ಎಂದು ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರು ಮಂಗಳವಾರ ಹೇಳಿದರು.

ಹೈಕೋರ್ಟ್‌ಗಳು ಮತ್ತು ಸುಪ್ರೀಂ ಕೋರ್ಟ್‌ಗೆ ನ್ಯಾಯಮೂರ್ತಿಗಳ ನೇಮಕ, ಬಡ್ತಿ, ವರ್ಗಾವಣೆ ಕುರಿತಂತೆ ಅನುಸರಿಸಬೇಕಾದ ಪ್ರಕ್ರಿಯೆ ಕುರಿತು ಸೂಕ್ತ ಪರಿಹಾರೋಪಾಯ ಕಂಡುಕೊಳ್ಳಲಾಗುವುದು ಎಂದು ಅವರು ಇದೇ ಸಂದರ್ಭದಲ್ಲಿ ಹೇಳಿದರು.

ಕಾನೂನು ಸಚಿವರಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, ಪ್ರಸ್ತುತ ಕಾರ್ಯಾಂಗ ಮತ್ತು ನ್ಯಾಯಾಂಗದ ನಡುವೆ ತಿಕ್ಕಾಟ ನಡೆದಿದೆ ಎಂಬ ಅಭಿಪ್ರಾಯಗಳನ್ನು ಅವರು ತಳ್ಳಿಹಾಕಿದರು.

ಕದನ ವಿರಾಮ: ನಿರ್ಣಯಕ್ಕೆ ಅಸ್ತು

ವಿಶ್ವಸಂಸ್ಥೆ (ಎಪಿ): ಇಸ್ರೇಲ್ ಮತ್ತು ಹಮಾಸ್ ನಡುವಣ ಯುದ್ಧ ಕೊನೆಗೊಳಿಸುವ ಕದನವಿರಾಮ ಯೋಜನೆಯ ನಿರ್ಣಯಕ್ಕೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಸೋಮವಾರ ಒಪ್ಪಿಗೆ ನೀಡಿದೆ.

ಅಮೆರಿಕ ಈ ನಿರ್ಣಯವನ್ನು ರೂಪಿಸಿದೆ. ಈ ಪ್ರಸ್ತಾವಕ್ಕೆ ಇಸ್ರೇಲ್ ಒಪ್ಪಿದೆ ಎಂದು ಅಮೆರಿಕ ಹೇಳಿದೆ.

ಭದ್ರತಾ ಮಂಡಳಿಯ 15 ಸದಸ್ಯ ರಾಷ್ಟ್ರಗಳಲ್ಲಿ 14 ರಾಷ್ಟ್ರಗಳು ನಿರ್ಣಯವನ್ನು ಬೆಂಬಲಿಸಿವೆ. ರಷ್ಯಾ ಮತದಾನದಿಂದ ದೂರ ಉಳಿದಿತ್ತು. ಇಸ್ರೇಲ್ ಮತ್ತು ಹಮಾಸ್ 'ಕದನ ವಿರಾಮದ ನಿಯಮಗಳನ್ನು ಬೇಷರತ್ತಾಗಿ ಅನುಷ್ಠಾನಕ್ಕೆ ತರಬೇಕು' ಎಂದು ನಿರ್ಣಯವು ಹೇಳಿದೆ.

ಪ್ರಸ್ತಾವವನ್ನು ಪೂರ್ಣ ಒಪ್ಪದ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ಹಮಾಸ್ ಸಂಘಟನೆಯನ್ನು ನಾಶಮಾಡುವ ಬದ್ಧತೆಯಿಂದ ಇಸ್ರೇಲ್ ಹಿಂದೆ ಸರಿದಿಲ್ಲ ಎಂದಿದ್ದಾರೆ. ಹಮಾಸ್ ನಿರ್ಣಯವನ್ನು ಸ್ವಾಗತಿಸಿದೆ. ಆದರೆ ಇಸ್ರೇಲ್‌ನ ವಿರುದ್ಧದ ಹೋರಾಟ ಮುಂದುವರಿಯಲಿದೆ ಎಂದು ತಿಳಿಸಿದೆ.

'ಆಂಧ್ರಕ್ಕೆ ಅಮರಾವತಿ ಮಾತ್ರ ರಾಜಧಾನಿ'

ಅಮರಾವತಿ (ಪಿಟಿಐ): ಆಂಧ್ರಪ್ರದೇಶಕ್ಕೆ ಅಮರಾವತಿ ಒಂದೇ ರಾಜಧಾನಿಯಾಗಿರಲಿದೆ ಎಂದು ಟಿಡಿಪಿ ಮುಖ್ಯಸ್ಥ ಎಂ.ಚಂದ್ರಬಾಬು ನಾಯ್ಡು ಮಂಗಳವಾರ ಘೋಷಿಸಿದರು. ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವ ಒಂದು ದಿನದ ಮುಂಚೆಯೇ ನಾಯ್ಡು ಈ ಮಹತ್ವದ ಘೋಷಣೆ ಮಾಡಿದರು.

ಚಂದ್ರಬಾಬು ನಾಯ್ಡು

ಟಿಡಿಪಿ, ಬಿಜೆಪಿ, ಜನಸೇನಾ ಶಾಸಕರ ಜಂಟಿ ಸಭೆಯಲ್ಲಿ ರಾಜ್ಯದಲ್ಲಿ ಎನ್‌ಡಿಎ ನಾಯಕರಾಗಿ ಅವಿರೋಧವಾಗಿ ಆಯ್ಕೆಯಾದ ನಂತರ ನಾಯ್ಡು ಸುದ್ದಿಗಾರರೊಂದಿಗೆ ಮಾತನಾಡಿದರು.

'ನಮ್ಮ ಸರ್ಕಾರದಲ್ಲಿ ಮೂರು ರಾಜಧಾನಿಗಳು ಎನ್ನುವ ನೆಪದಲ್ಲಿ ಯಾವುದೇ ಆಟ ನಡೆಯುವುದಿಲ್ಲ. ನಮ್ಮ ರಾಜಧಾನಿ ಅಮರಾವತಿ' ಎಂದು ಸ್ಪಷ್ಟಪಡಿಸಿದರು.

ಆಂಧ್ರಪ್ರದೇಶದ ವಿಭಜನೆಯ ನಂತರ 2014ರಿಂದ 2019ರವರೆಗೆ ಮೊದಲ ಮುಖ್ಯಮಂತ್ರಿಯಾಗಿ ಅಧಿಕಾರ ನಡೆಸಿದ ನಾಯ್ಡು, ಅಮರಾವತಿಯನ್ನು ರಾಜಧಾನಿ ಎಂದು ಘೋಷಿಸಿದ್ದರು. ನಂತರ ಅಧಿಕಾರಕ್ಕೆ ಬಂದ ಜಗನ್‌ಮೋಹನ್ ರೆಡ್ಡಿ ಅವರು, ಏಕರಾಜಧಾನಿಯ ಬದಲಿಗೆ ಮೂರು ರಾಜಧಾನಿಗಳ ಯೋಜನೆಯನ್ನು ಘೋಷಿಸಿದ್ದರು. ಇದೀಗ ನಾಯ್ಡು ಮತ್ತೆ ಆಂಧ್ರ ಪ್ರದೇಶಕ್ಕೆ ಒಂದೇ ರಾಜಧಾನಿ ಎಂದು ಹೇಳಿದರು.

ಪ್ರಮಾಣ ವಚನ ಇಂದು

ಆಂಧ್ರಪ್ರದೇಶದ ಮುಖ್ಯಮಂತ್ರಿಯಾಗಿ ಚಂದ್ರಬಾಬು ನಾಯ್ಡು ಅವರು ಬುಧವಾರ ಪ್ರಮಾಣ ವಚನ ಸ್ವೀಕರಿಸಲಿದ್ದು, ಅದಕ್ಕಾಗಿ ಸಿದ್ಧತೆ ನಡೆಯುತ್ತಿದೆ.

ವಿಜಯವಾಡ ಹೊರವಲಯದ ಗನ್ನವರಂ ವಿಮಾನ ನಿಲ್ದಾಣ ಬಳಿಯ ಕೇಸರಪಲ್ಲಿ ಐಟಿ ಪಾರ್ಕ್‌ನಲ್ಲಿ ನಾಯ್ಡು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಈ ವೇಳೆ ನಾಯ್ಡು ಅವರೊಂದಿಗೆ ಅವರ ಮಗ ನಾರಾ ಲೋಕೇಶ್, ಜನಸೇನಾ ಮುಖಂಡ ಪವನ್ ಕಲ್ಯಾಣ್, ಎನ್.ಮನೋಹರ್ ಕೂಡ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸುವ ಸಾಧ್ಯತೆ ಇದೆ. ಪವನ್ ಕಲ್ಯಾಣ್ ಅವರು ಉಪ ಮುಖ್ಯಮಂತ್ರಿ ಆಗುವ ಸಾಧ್ಯತೆಗಳಿವೆ.

ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಹಲವು ಗಣ್ಯರು ಸಮಾರಂಭದಲ್ಲಿ ಪಾಲ್ಗೊಳ್ಳುವ ಸಾಧ್ಯತೆ ಇದೆ. ಸಮಾರಂಭದ ಸಿದ್ಧತೆಗಳನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿ ನೀರಭ್ ಕುಮಾರ್ ಪ್ರಸಾದ್ ಪರಿಶೀಲಿಸಿದರು.

ಇನ್ನೊಂದೆಡೆ, ಪವನ್ ಕಲ್ಯಾಣ್ ವಿಧಾನಸಭೆಯಲ್ಲಿ ಜನಸೇನಾ ಪಕ್ಷದ ನಾಯಕರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ತೆನಾಲಿ ಶಾಸಕ ಎನ್. ಮನೋಹರ್ ಅವರು ಪವನ್ ಹೆಸರನ್ನು ಸೂಚಿಸಿದರು.

ಇಂದು ಪ್ರಮಾಣ ವಚನ ಸ್ವೀಕಾರ • ನೂತನ ಸರ್ಕಾರದಲ್ಲಿ ಇಬ್ಬರು ಉಪ ಮುಖ್ಯಮಂತ್ರಿಗಳು

ಮೋಹನ್ ಮಾಝಿ ಒಡಿಶಾ ಮುಖ್ಯಮಂತ್ರಿ

ಭುವನೇಶ್ವರ (ಪಿಟಿಐ): ಒಡಿಶಾದಲ್ಲಿ ಸ್ಪಷ್ಟ ಬಹುಮತದಿಂದ ಅಧಿಕಾರಕ್ಕೆ ಬಂದಿರುವ ಬಿಜೆಪಿಯ ಪ್ರಥಮ ಮುಖ್ಯಮಂತ್ರಿಯಾಗಿ ಬುಡಕಟ್ಟು ಜನಾಂಗದ ನಾಯಕ ಮೋಹನ್ ಚರಣ್ ಮಾಝಿ ಆಯ್ಕೆಯಾಗಿದ್ದಾರೆ.

ನೂತನ ಸರ್ಕಾರದಲ್ಲಿ ಇಬ್ಬರು ಉಪ ಮುಖ್ಯಮಂತ್ರಿಗಳು ಇರಲಿದ್ದಾರೆ. ಈ ಸ್ಥಾನಕ್ಕಾಗಿ ಕೆ.ವಿ.ಸಿಂಗ್ ದೇವ್ ಮತ್ತು ಪ್ರವತಿ ಪರಿದಾ ಅವರನ್ನು ಬಿಜೆಪಿಯ ಕೇಂದ್ರ ನಾಯಕತ್ವವು ಆಯ್ಕೆ ಮಾಡಿದೆ.

'ಪಕ್ಷದ ವೀಕ್ಷಕರ ಸಮ್ಮುಖದಲ್ಲಿ ನಡೆದ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಈ ಆಯ್ಕೆ ಅವಿರೋಧವಾಗಿ ನಡೆಯಿತು' ಎಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮಂಗಳವಾರ ಇಲ್ಲಿ ಪ್ರಕಟಿಸಿದರು.

ರಾಜನಾಥ್ ಸಿಂಗ್ ಹಾಗೂ ಕೇಂದ್ರ ಸಚಿವ ಭೂಪೇಂದರ್ ಯಾದವ್ ಅವರು ವೀಕ್ಷಕರಾಗಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಪಾಲ್ಗೊಂಡಿದ್ದರು. ಆಯ್ಕೆ ಕುರಿತು ಸಿಂಗ್ ಅವರು 'ಎಕ್ಸ್'ನಲ್ಲೂ ಪೋಸ್ಟ್ ಮಾಡಿದ್ದಾರೆ.

ಹೊಸ ಸರ್ಕಾರದ ಪ್ರಮಾಣ ವಚನ ಸಮಾರಂಭ ಇಲ್ಲಿನ ಜನತಾ ಮೈದಾನದಲ್ಲಿ ಬುಧವಾರ ನಡೆಯಲಿದೆ.

52 ವರ್ಷದ ಮಾಝಿ ಅವರು ಕಿಯೊನಿಹರ್ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿದ್ದು, ಬಿಜೆಡಿ ಪಕ್ಷದ ಮಿನಾ ಮಾಝಿ ಅವರ ವಿರುದ್ಧ 11,577 ಮತಗಳ ಅಂತರದಿಂದ ಜಯ ಗಳಿಸಿದ್ದರು.

ಡಿಸಿಎಂಗಳಾಗಿ ಆಯ್ಕೆಯಾಗಿರುವ ಕೆ.ವಿ.ಸಿಂಗ್ ದೇವ್ ಅವರು ಪಟ್ನಾಗರ್ ಕ್ಷೇತ್ರದಿಂದ ಬಿಜೆಡಿಯ ಸರೋಜ್ ಕುಮಾರ್ ಮೆಹ್ ವಿರುದ್ಧ 1,357 ಮತಗಳಿಂದ ಜಯಗಳಿಸಿದ್ದರು. ಪ್ರವತಿ ಪರಿದಾ ಅವರು ನಿಮಪರ ಕ್ಷೇತ್ರದಿಂದ ಬಿಜೆಡಿಯ ದಿಲೀಪ್ ಕುಮಾರ್ ನಾಯಕ್ ವಿರುದ್ಧ 4,588 ಮತಗಳಿಂದ ಆಯ್ಕೆಯಾಗಿದ್ದಾರೆ.

ಪ್ರಧಾನಿ ಭಾಗಿ: ಪಕ್ಷದ ಮೂಲಗಳ ಪ್ರಕಾರ, ಬುಧವಾರ ನಡೆಯಲಿರುವ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ, ಇತರೆ ಹಿರಿಯ ನಾಯಕರು ಭಾಗವಹಿಸಲಿದ್ದಾರೆ.

147 ಸದಸ್ಯ ಬಲದ ವಿಧಾನಸಭೆಗೆ ಈಚೆಗೆ ನಡೆದ ಚುನಾವಣೆಯಲ್ಲಿ ಬಿಜೆಪಿ 78 ಸ್ಥಾನಗಳಿಸಿ ಸ್ಪಷ್ಟ ಬಹುಮತ ಪಡೆದರೆ, ಅಧಿಕಾರ ಕಳೆದುಕೊಂಡ ಬಿಜೆಡಿ 51 ಸ್ಥಾನಗಳಿಸಲಷ್ಟೇ ಶಕ್ತವಾಗಿತ್ತು.

ಸರಪಂಚ್‌ನಿಂದ ಸಿ.ಎಂವರೆಗೆ..

ಭುವನೇಶ್ವರ (ಪಿಟಿಐ): ಒಡಿಶಾದ ನಿಯೋಜಿತ ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ, ಗ್ರಾಮದ ಸರಪಂಚ್ ಆಗಿ ಸಾರ್ವಜನಿಕ ಬದುಕು ಆರಂಭಿಸಿದವರು.

ರಾಜಕೀಯ ಬದುಕಿನ ಈವರೆಗಿನ ಗ್ರಾಮ ಪಂಚಾಯಿತಿ ಮುಖ್ಯಸ್ಥ, ಬಿಜೆಪಿ ಆದಿವಾಸಿ ಮೋರ್ಚಾದ ಅಧ್ಯಕ್ಷ ಸೇರಿ ವಿವಿಧ ಸ್ತರಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ.

ರಾಯಕಲಾ ಗ್ರಾಮದಲ್ಲಿ ಜನಿಸಿದ ಅವರು ಬುಡಕಟ್ಟು ಸಮುದಾಯದವರು. ತಂದೆ ಗುಮಾಸ್ತರಾಗಿದ್ದರು. ಪದವಿ ವಿದ್ಯಾರ್ಹತೆ ಹೊಂದಿದ್ದಾರೆ.

1997–2000ರವರೆಗೆ ಗ್ರಾಮ ಪಂಚಾಯಿತಿ ಮುಖ್ಯಸ್ಥರಾಗಿದ್ದರು. 2000ರಲ್ಲಿ ಮೊದಲ ಬಾರಿಗೆ ಕಿಯೋಂಜರ್ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾದರು. 2024ರ ಚುನಾವಣೆಯಲ್ಲಿ ಜಯಗಳಿಸುವ ಮೂಲಕ ನಾಲ್ಕನೇ ಅವಧಿಗೆ ಆಯ್ಕೆಯಾಗಿದ್ದಾರೆ.

ಹಿಂದಿನ ವಿಧಾನಸಭೆಯಲ್ಲಿ ಬಿಜೆಪಿ ಮುಖ್ಯ ಸಚೇತಕ ಆಗಿದ್ದರು. ಈಗ ಅವರಿಗೆ ರಾಜ್ಯದ ಆಡಳಿತ ಸಾರಥ್ಯ ವಹಿಸುವ ಹೊಣೆಗಾರಿಕೆ.

'ಜಗನ್ನಾಥನ ಕೃಪೆಯಿಂದ ಬಿಜೆಪಿ ಈ ಸಾಧನೆ ಮಾಡಿದೆ. ರಾಜ್ಯದ 4.5 ಕೋಟಿ ಜನರಿಗೆ ಆಭಾರಿಯಾಗಿದ್ದೇವೆ. ಜನರ ನಂಬಿಕೆ ಉಳಿಸುವ ಕೆಲಸ ಮಾಡಲಿದ್ದೇವೆ' ಎಂದು ಶಾಸಕಾಂಗ ಪಕ್ಷದ ನಾಯಕನಾಗಿ ಆಯ್ಕೆಯಾದ ಬಳಿಕ ಪ್ರತಿಕ್ರಿಯಿಸಿದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ನಾನು ಬೇರೆಯವರೊಂದಿಗೆ ಇದ್ದಾಗ ಅವರೇ ನನಗೆ ಗುರುಗಳು. ಅವರಲ್ಲಿನ ಒಳ್ಳೆಯ ಗುಣಗಳನ್ನು ಅನುಸರಿಸಬಹುದು, ಕೆಟ್ಟ ಗುಣಗಳನ್ನು ಕಂಡು ಅಂತಹವುಗಳಿಂದ ದೂರ ಉಳಿಯಬಹುದು.

– ಕನ್‌ಫ್ಯೂಷಿಯಸ್

‘ನೀಟ್’ ಸುತ್ತ ಗೊಂದಲ ಲೋಪ ಸರಿಪಡಿಸಿ, ತಪ್ಪಿತಸ್ಥರ ಶಿಕ್ಷಿಸಿ

ವೈದ್ಯಕೀಯ, ದಂತವೈದ್ಯಕೀಯ ಹಾಗೂ ಇತರ ಕೆಲವು ಕೋರ್ಸ್‌ಗಳ ಪ್ರವೇಶಕ್ಕೆ ಅರ್ಹತೆಯನ್ನು ನಿರ್ಣಯಿಸುವ ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆ (ಪದವಿ) ಅಥವಾ ‘ನೀಟ್’ಗೆ ಸಂಬಂಧಿಸಿದಂತೆ ವಿವಾದ ಹೊಸದೇನೂ ಅಲ್ಲ. ಈ ವರ್ಷ ಕೂಡ ಈ ಪರೀಕ್ಷೆಗೆ ಸಂಬಂಧಿಸಿದಂತೆ ಹಲವು ಪ್ರಶ್ನೆಗಳು ಎದ್ದಿವೆ. ಪರೀಕ್ಷೆಯ ಬಗೆ ಹಾಗೂ ಫಲಿತಾಂಶವನ್ನು ಘೋಷಿಸಿದ ರೀತಿಯ ಕುರಿತು ಟೀಕೆಗಳು ಇವೆ. ಈ ಪರೀಕ್ಷೆಯನ್ನು ನಡೆಸುವ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯು (ಎನ್‌ಟಿಎ) ವಿವಾದ, ಟೀಕೆಗಳ ಕುರಿತು ತನಿಖೆಗೆ ನಾಲ್ಕು ಮಂದಿ ಸದಸ್ಯರ ಸಮಿತಿಯೊಂದನ್ನು ನೇಮಿಸಿದೆ. ಹಲವು ಸಮಸ್ಯೆಗಳ ಬಗ್ಗೆ ನೂರಾರು ಮಂದಿ ವಿದ್ಯಾರ್ಥಿಗಳು ದೂರಿದ್ದಾರೆ. ಕೆಲವು ಕೇಂದ್ರಗಳಲ್ಲಿ ತಾಂತ್ರಿಕ ಅಡಚಣೆಗಳು ಎದುರಾಗಿದ್ದವು, ದೋಷಪೂರಿತ ಪ್ರಶ್ನೆಪತ್ರಿಕೆಗಳು ಇದ್ದವು ಹಾಗೂ ಒಎಂಆರ್ ಷೀಟ್‌ಗಳಲ್ಲಿ ಲೋಪಗಳು ಇದ್ದವು. ಕೆಲವು ಕಡೆಗಳಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ಆಗಿದೆ ಎಂಬ ಆರೋಪ ಇದೆ. ಫಲಿತಾಂಶವನ್ನು ಜೂನ್ 14ರಂದು ಪ್ರಕಟಿಸಬೇಕಿತ್ತು. ಆದರೆ ಹತ್ತು ದಿನ ಮುಂಚಿತವಾಗಿ ಫಲಿತಾಂಶ ಪ್ರಕಟವಾಯಿತು. ಕೆಲವು ಉತ್ತರಪತ್ರಿಕೆ ಮಾದರಿಗಳು ತಪ್ಪಾಗಿದ್ದವು, ಮೌಲ್ಯಮಾಪನವು ಸರಿಯಾಗಿ ನಡೆದಿಲ್ಲ ಎಂಬ ಆರೋಪಗಳೂ ಇವೆ.

ಇಷ್ಟೇ ಅಲ್ಲ, ಇಲ್ಲಿ ಇನ್ನೂ ಹಲವು ಸಂಗತಿಗಳು ಇವೆ. ಪರೀಕ್ಷೆಗೆ ಹಾಜರಾಗಿದ್ದ 67 ವಿದ್ಯಾರ್ಥಿಗಳಿಗೆ ಪೂರ್ಣ ಅಂಕ (720ಕ್ಕೆ 720) ಲಭಿಸಿದೆ. ಹೀಗೆ ಹಿಂದೆಂದೂ ಆಗಿರಲಿಲ್ಲ. ಅತಿ ಹೆಚ್ಚಿನ ಅಂಕ ಪಡೆದವರಲ್ಲಿ ಹಲವರು ಒಂದೇ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಬರೆದವರು. ಕೆಲವು ವಿದ್ಯಾರ್ಥಿಗಳಿಗೆ 718 ಹಾಗೂ 719 ಅಂಕಗಳು ಲಭಿಸಿವೆ. ನೀಟ್ ಪರೀಕ್ಷೆಯಲ್ಲಿ ಅಂಕ ನೀಡುವ ಸೂತ್ರದ ಪ್ರಕಾರ ಇಷ್ಟು ಅಂಕ ಪಡೆಯಲು ಸಾಧ್ಯವೇ ಇಲ್ಲ. ಮಾದರಿ ಉತ್ತರಪತ್ರಿಕೆಯೊಂದರ ಪರಿಷ್ಕರಣೆ ಹಾಗೂ ಕೆಲವು ಕೇಂದ್ರಗಳಲ್ಲಿ ಪರೀಕ್ಷೆ ಬರೆಯಲು ಸಮಯ ಸರಿಯಾಗಿ ಸಿಗದಿದ್ದ ಕಾರಣಕ್ಕೆ ಕೃಪಾಂಕ ನೀಡಿದ್ದರಿಂದಾಗಿ ಭಾರಿ ಅಂಕಗಳು ಸಿಕ್ಕಿವೆ ಎಂದು ಎನ್‌ಟಿಎ ಹೇಳಿದೆ. ಕೃಪಾಂಕ ನೀಡಿದ ಪರಿಣಾಮವಾಗಿ 718, 719 ಅಂಕಗಳು ಲಭಿಸಿವೆ, ಹಲವು ವಿದ್ಯಾರ್ಥಿಗಳು ಭಾರಿ ಅಂಕ ಪಡೆದಿದ್ದಕ್ಕೆ ಕಾರಣ ಅವರಿಗೆ ಪ್ರಶ್ನೆಪತ್ರಿಕೆಯು ಸುಲಭವಾಗಿದ್ದುದು ಎಂದು ಕೂಡ ಎನ್‌ಟಿಎ ವಿವರಣೆ ನೀಡಿದೆ.

ಸರಿಯಾದ ಯೋಜನೆ ರೂಪಿಸಿ, ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಲ್ಲಿ ಲೋಪಗಳಿಗೆ ಆಸ್ಪದ ಇಲ್ಲದಂತೆ ಪರೀಕ್ಷೆ ನಡೆಸಲು ಸಾಧ್ಯವಿದೆ

ಕೆಲವು ವಿದ್ಯಾರ್ಥಿಗಳು ಕೋರ್ಟ್ ಮೊರೆ ಹೋಗಿದ್ದಾರೆ. ಪರೀಕ್ಷೆಯ ಪಾವಿತ್ರ್ಯಕ್ಕೆ ಧಕ್ಕೆ ಆಗಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಅಲ್ಲದೆ, ಎನ್‌ಟಿಎಗೆ ನೋಟಿಸ್ ಜಾರಿಗೆ ಆದೇಶಿಸಿದೆ. ಕೆಲವು ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದ್ದಾರೆ. ಅಕ್ರಮಗಳ ಬಗ್ಗೆ ಸಿಬಿಐ ತನಿಖೆ ನಡೆಸಬೇಕು, ಹೊಸದಾಗಿ ಪರೀಕ್ಷೆ ಆಗಬೇಕು ಎಂದು ಕೆಲವರು ಕೋರಿದ್ದಾರೆ. ರಾಜಕೀಯ ಪಕ್ಷಗಳು ನೀಟ್ ಕುರಿತು ಮಾತನಾಡಿವೆ. ಸರಿಸುಮಾರು ಐದು ಸಾವಿರ ಪರೀಕ್ಷಾ ಕೇಂದ್ರಗಳಲ್ಲಿ ನಡೆಯುವ ಇದು ದೇಶದ ಅತಿದೊಡ್ಡ ಪ್ರವೇಶ ಪರೀಕ್ಷೆ. ಇದಕ್ಕೆ ಸುಮಾರು 23 ಲಕ್ಷ ವಿದ್ಯಾರ್ಥಿಗಳು ಹಾಜರಾಗಿದ್ದರು. ಈ ಪರೀಕ್ಷೆ ನಡೆಯುವ ಬಗೆಯ ಸುತ್ತ ಇಷ್ಟೊಂದು ದೂರುಗಳು, ಇಷ್ಟೊಂದು ಪ್ರಶ್ನೆಗಳು ಇರಲೇಬಾರದು. ದೊಡ್ಡ ಮಟ್ಟದಲ್ಲಿ ನಡೆಯುವ ಹಾಗೂ ಹೆಚ್ಚು ಪ್ರಾಮುಖ್ಯ ಪಡೆದ ನೀಟ್‌ನಂತಹ ಪರೀಕ್ಷೆಗಳು ಅತ್ಯಂತ ಹೆಚ್ಚು ವಿಶ್ವಾಸಾರ್ಹ ಆಗಿರಬೇಕು. ಹೀಗಾಗಬೇಕು ಎಂದಾದರೆ ಪಾರದರ್ಶಕತೆ ಹಾಗೂ ದಕ್ಷತೆ ಇರಬೇಕು. ನಾಲ್ವರು ಸದಸ್ಯರ ಸಮಿತಿಯು ಒಂದು ವಾರದಲ್ಲಿ ವರದಿ ಸಲ್ಲಿಸುವ ನಿರೀಕ್ಷೆ ಇದೆ. ಆ ವರದಿಯು ಎಲ್ಲ ಲೋಪಗಳ ಬಗ್ಗೆ ಬೆಳಕು ಚೆಲ್ಲುವ ಕೆಲಸ ಮಾಡಬೇಕು, ಆ ಲೋಪಗಳು ಉಂಟಾಗಿದ್ದಕ್ಕೆ ಕಾರಣ ಏನು ಎಂಬುದನ್ನು ಹೇಳಬೇಕು. ತಪ್ಪಾಗಿದ್ದಲ್ಲಿ ಅವುಗಳನ್ನು ಸರಿಪಡಿಸಬೇಕು, ತಪ್ಪಿಗೆ ಕಾರಣರಾದವರನ್ನು ಹೊಣೆಗಾರರನ್ನಾಗಿಸಬೇಕು. ಸರಿಯಾದ ಯೋಜನೆ ಇದ್ದಲ್ಲಿ, ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಲ್ಲಿ ಲೋಪಗಳಿಗೆ ಆಸ್ಪದ ಇಲ್ಲದಂತೆ ಪರೀಕ್ಷೆ ನಡೆಸಲು ಸಾಧ್ಯವಿದೆ. ಈಗ ಎದುರಾಗಿರುವ ಸಮಸ್ಯೆಗಳನ್ನು ಇತ್ಯರ್ಥಪಡಿಸಿ, ಅವು ಮುಂದೆ ಮತ್ತೆ ಎದುರಾಗದಂತೆ ನೋಡಿಕೊಳ್ಳಬೇಕು.

ದಿನದ ಟ್ವೀಟ್

ಅಡ್ಡಿಯಾಗದಿರಲಿ, ಸುರಕ್ಷತೆ ಇರಲಿ

ಸುರಕ್ಷಾ ಕ್ರಮಗಳನ್ನು ಕೈಗೊಳ್ಳದೆ ಈ ನಿರ್ಧಾರವನ್ನು ಜಾರಿಗೆ ತಂದಿದ್ದೇ ಆದರೆ, ಎಲ್ಲ ಬಗೆಯ ಪುರುಷರಿಗೂ ಅಡ್ಡೆಯಾಗುವ ಈ ತಾಣ, ಮಹಿಳೆಯರಿಗೆ ಅಸುರಕ್ಷಿತ ಜಾಗವಾಗಲಿದೆ!

(ಬೆಂಗಳೂರಿನಲ್ಲಿ ಉದ್ಯಾನಗಳನ್ನು ಬೆಳಿಗ್ಗೆ 5ರಿಂದ ರಾತ್ರಿ 10 ಗಂಟೆಯವರೆಗೆ ತೆರೆಯುವ ಸರ್ಕಾರದ ನಿರ್ಧಾರಕ್ಕೆ ಪ್ರತಿಕ್ರಿಯೆ)

ಕವಿತಾ ರೆಡ್ಡಿ

ಕಿಡಿನುಡಿ



ಬಿಜೆಪಿಗೆ ಬಹುಮತ ದೊರಕಿಸಿಕೊಡುವಲ್ಲಿ ಮೋದಿ ಅವರು ಸೋತದ್ದೇಕೆ ಎಂಬುದನ್ನು ಆರ್‌ಎಸ್‌ಎಸ್ ಮುಖ್ಯಸ್ಥರು ಬಹಳ ಸರಿಯಾಗಿ ವಿಶ್ಲೇಷಿಸಿದ್ದಾರೆ. ದುರಹಂಕಾರದ ಬಗ್ಗೆ, ಚುನಾವಣೆಗಳನ್ನು ಯುದ್ಧದಂತೆಯೂ ವಿರೋಧಿಗಳನ್ನು ಶತ್ರುಗಳಂತೆಯೂ ಪರಿಗಣಿಸುವುದರ ವಿರುದ್ಧ ಅವರು ಎಚ್ಚರಿಕೆ ನೀಡಿದ್ದಾರೆ. ತುಂಬಾ ಚೆನ್ನಾಗಿ ಹೇಳಿದ್ದೀರಿ ಮೋಹನ್ ಭಾಗವತ್ ಅವರೇ.

ತವ್ಲೀನ್ ಸಿಂಗ್, ಪತ್ರಕರ್ತೆ

25 ವರ್ಷಗಳ ಹಿಂದೆ
ಶನಿವಾರ, 12-6-1999

- **ಪಾಕಿಸ್ತಾನದ ಸಂಚು ಬಯಲು ಇಂದು ಚರ್ಚೆಗೆ ಭಾರತ ಸಜ್ಜು**

ನವದೆಹಲಿ, ಜೂನ್ 11– ಕಾರ್ಗಿಲ್ ವಲಯದಲ್ಲಿನ ಪ್ರಕ್ಷುಬ್ಧ ಪರಿಸ್ಥಿತಿಯ ನಿವಾರಣೆಗೆಂದು ನಾಳೆ ಪಾಕಿಸ್ತಾನದ ಜತೆ ಮಾತುಕತೆ ನಡೆಸುವ ಭಾರತವು ಗಡಿ ನಿಯಂತ್ರಣ ರೇಖೆಯನ್ನು ಉಲ್ಲಂಘಿಸಿರುವ ಪಾಕಿಸ್ತಾನಕ್ಕೆ ತನ್ನ ಸೈನಿಕರು ಮತ್ತು ಅತಿಕ್ರಮಣಕಾರರನ್ನು ಹಿಂದಕ್ಕೆ ಕರೆಸಿಕೊಳ್ಳುವಂತೆ ಆಗ್ರಹಪಡಿಸಲಿದೆ.

ಇದರ ಜತೆಗೆ ಮುಖ್ಯವಾಗಿ ತನ್ನ ಆರು ಮಂದಿ ಯೋಧರನ್ನು ಚಿತ್ರಹಿಂಸೆ ನೀಡಿ ಅಮಾನುಷವಾಗಿ ಕೊಂದಿರುವ ಪ್ರಕರಣವನ್ನು ನಾಳಿನ ಸಭೆಯಲ್ಲಿ ಪ್ರಸ್ತಾಪಿಸಲು ನಿರ್ಧರಿಸಿರುವುದರಿಂದ, ಉಭಯ ರಾಷ್ಟ್ರಗಳ ನಡುವೆ ಉದ್ಭವಿಸಿರುವ ಗಂಭೀರ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಅತ್ಯಂತ ಮಹತ್ವಪೂರ್ಣ ಆಗಲಿದೆ.

ಎರಡು ದೇಶಗಳ ಗಡಿಯಲ್ಲಿ ಶಾಂತಿ ನೆಲಸಬೇಕೆಂಬ ಇಚ್ಛೆ ಪಾಕಿಸ್ತಾನಕ್ಕೆ ನಿಜವಾಗಿಯೂ ಇದ್ದರೆ ಈಗಲೂ ಕಾಲ ಮಿಂಚಿಲ್ಲ. ತನ್ನ ಸೈನಿಕರು ಮತ್ತು ಅತಿಕ್ರಮಣಕಾರರನ್ನು ಹಿಂದಕ್ಕೆ ಕರೆಸಿಕೊಂಡು ಯಥಾಸ್ಥಿತಿಯನ್ನು ಪುನರ್‌ಸ್ಥಾಪಿಸಬೇಕು ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಜಸ್ವಂತ್ ಸಿಂಗ್ ಇಂದು ಕಿಕ್ಕಿರಿದ ಪತ್ರಿಕಾಗೋಷ್ಠಿಯಲ್ಲಿ ಕರೆ ನೀಡಿದರು.

- **ಕಾರ್ಗಿಲ್‌ನಲ್ಲಿ ಪಾಕ್ ಸೇನೆ: ಐಎಸ್‌ಐ ಒಪ್ಪಿಗೆ**

ಇಸ್ಲಾಮಾಬಾದ್, ಜೂನ್ 11 (ಯುಎನ್‌ಐ)– ಪಾಕಿಸ್ತಾನದ ವಿದೇಶಾಂಗ ಸಚಿವ ಸರ್ತಾಜ್ ಅಜೀಜ್ ಅವರ ದೆಹಲಿ ಭೇಟಿಗೆ ಕೇವಲ 36 ಗಂಟೆಗಳು ಇರುವಂತೆ, ಕಾರ್ಗಿಲ್ ಹಾಗೂ ದ್ರಾಸ್ ವಿಭಾಗಗಳ ಭಾರತದ ಪ್ರದೇಶದಲ್ಲಿ ಪಾಕಿಸ್ತಾನದ ಸೇನೆ ಇರುವುದು ನಿಜ ಎಂದು ಪಾಕಿಸ್ತಾನ ಸೇನೆಯ ಬೇಹುಗಾರಿಕೆ ವಿಭಾಗವಾದ ಐಎಸ್‌ಐ ಒಪ್ಪಿಕೊಂಡಿದೆ. ಇದು ಒಂದು ಆಶ್ಚರ್ಯಕರ ಬೆಳವಣಿಗೆ ಎಂದು ಪರಿಗಣಿಸಲಾಗಿದೆ.

ಐಎಸ್‌ಐ ನಿರ್ದೇಶಕ ಬ್ರಿಗೆಡಿಯರ್ ರಶೀದ್ ಕುರೇಶಿ ಅವರು ಈ ಹೇಳಿಕೆ ನೀಡಲು ಇಸ್ಲಾಮಾಬಾದ್ ಬದಲು ಪೇಶಾವರವನ್ನು ಆಯ್ದುಕೊಂಡದ್ದು ಇನ್ನಷ್ಟು ಆಶ್ಚರ್ಯಕರ ಆಗಿದೆ.

ದ್ರಾಸ್ ಹಾಗೂ ಕಾರ್ಗಿಲ್ ಪ್ರದೇಶಗಳ ಗಿರಿಶಿಖರಗಳಲ್ಲಿ ಪಾಕಿಸ್ತಾನದ ಸೇನೆಯು ಠಾಣೆಗಳನ್ನು ಸ್ಥಾಪಿಸಿದ್ದು, ಅಲ್ಲಿಂದ ಶ್ರೀನಗರ-ಲೇಹ್ ಹೆದ್ದಾರಿಯನ್ನು ನಿಯಂತ್ರಿಸುವುದಕ್ಕೆ ಶಕ್ತವಾಗಿದೆ ಎಂದು ಕುರೇಶಿ ಹೇಳಿರುವುದಾಗಿ ಬಿಬಿಸಿ ವರದಿ ಮಾಡಿದೆ.

50 ವರ್ಷಗಳ ಹಿಂದೆ
ಬುಧವಾರ, 12-6-1974

- **ವಾರಾಹಿ ಯೋಜನೆ ಜಾರಿಗೆ ನಿರ್ಧಾರ**

ಬೆಂಗಳೂರು, ಜೂನ್ 11– ವಿದ್ಯುಚ್ಛಕ್ತಿ ಮತ್ತು ನೀರಾವರಿ ಎರಡೂ ಉದ್ದೇಶಗಳಿಗಾಗಿ ಉತ್ತರ ಕನ್ನಡ ಜಿಲ್ಲೆಯ ವಾರಾಹಿ ಯೋಜನೆಯನ್ನು ಕಾರ್ಯಗತ ಮಾಡಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ನಿನ್ನೆ ಮಂತ್ರಿಮಂಡಲ ಕೈಗೊಂಡ ನಿರ್ಧಾರದಂತೆ ವಾರಾಹಿ ನದಿ ನೀರನ್ನು ನೀರಾವರಿಗಾಗಿ ತುಂಗಭದ್ರಾ ನದಿಗೆ ತಿರುಗಿಸುವ ಆಲೋಚನೆಯನ್ನು ಕೈಬಿಡಲಾಯಿತು.

ಈಗಿನ ಅಂದಾಜಿನಂತೆ ವಾರಾಹಿ ಯೋಜನೆ ವೆಚ್ಚ 65 ಕೋಟಿ ರೂ. 230 ಮೆಗಾ ವಾಟ್ ವಿದ್ಯುತ್‌ಚ್ಛಕ್ತಿ ಉತ್ಪನ್ನವಾಗಿ ಕುಂದಾಪುರ ಮತ್ತು ಉಡುಪಿ ತಾಲ್ಲೂಕುಗಳಲ್ಲಿ 60 ಸಾವಿರ ಎಕರೆಯಲ್ಲಿ ನೀರಾವರಿಯಾಗುವುದು.

- **ರೈಲ್ವೆ ನೌಕರರ ಸಮಸ್ಯೆ: ಸಮನ್ವಯ ಸಮಿತಿ ಜೊತೆ ಮತ್ತೆ ಚರ್ಚೆಗೆ ಕೇಂದ್ರದ ನಕಾರ**

ನವದೆಹಲಿ, ಜೂನ್ 11– ರೈಲ್ವೆ ನೌಕರರ ಸಮಸ್ಯೆಗಳ ಬಗ್ಗೆ ಸರ್ಕಾರ ಹಾಗೂ ರಾಷ್ಟ್ರೀಯ ಸಮನ್ವಯ ಸಮಿತಿ ಜತೆ ಮತ್ತೆ ಯಾವುದೇ ಮಾತುಕತೆ ನಡೆಯುವುದನ್ನು ರೈಲ್ವೆ ಖಾತೆ ವೃತ್ತಗಳು ಇಂದು ತಳ್ಳಿಹಾಕಿದವು.

ಇನ್ನೂ ಇತ್ಯರ್ಥವಾಗದಿರುವ ರೈಲ್ವೆ ನೌಕರರ ಬೇಡಿಕೆಗಳನ್ನು ಕುರಿತು ರೈಲ್ವೆ ನೌಕರರ ಬೇಡಿಕೆಗಳನ್ನು ಕುರಿತು ರೈಲ್ವೆ ಸಚಿವರ ಜತೆ ಚರ್ಚಿಸುವುದಕ್ಕೆ ರೈಲ್ವೆ ನೌಕರರ ಹೋರಾಟ ಕುರಿತ ರಾಷ್ಟ್ರೀಯ ಸಮನ್ವಯ ಸಮಿತಿ ಸಂಚಾಲಕ ಜಾರ್ಜ್ ಫರ್ನಾಂಡಿಸ್ ಅವರು ಪ್ರಯತ್ನಿಸಿದ್ದಾರೆ ಎಂಬ ವರದಿಗೆ ರೈಲ್ವೆ ವೃತ್ತಗಳ ಪ್ರತಿಕ್ರಿಯೆ ಇದು.

ಯಾರೂ ಗೆಲ್ಲಲಿಲ್ಲ, ಯಾರೂ ಸೋಲಲಿಲ್ಲ, ಕಾರ್ಮೋಡ ಕರಗಲಿಲ್ಲ

ಚುನಾವಣೆ ಜನಾಂದೋಲನವಾದಾಗ...

ಅನುರಣನ

ನಾರಾಯಣ ಎ.

ಜರ್ಮನ್ ತತ್ವಶಾಸ್ತ್ರಜ್ಞ ಫ್ರೆಡೆರಿಕ್ ನೀಷೆ ‘ದೇವರು ಸತ್ತ’ ಎನ್ನುವ ಜಗತ್ಪ್ರಸಿದ್ಧ ಹೇಳಿಕೆ ನೀಡಿದ್ದ. ಆತ ಅದನ್ನು ಯಾವ ಅರ್ಥದಲ್ಲಿ ಹೇಳಿರಬಹುದು ಎಂಬ ಬಗ್ಗೆ ಪ್ರಪಂಚ ಈಗಲೂ ತಲೆಕೆಡಿಸಿಕೊಂಡಿದೆ. ಆದರೆ, 2024ರಲ್ಲಿ ಭಾರತದಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ‘ದೇವರು ಸೋತ’ ಅಂತ ಚರಿತ್ರಕಾರರು ದಾಖಲಿಸಿದರೆ, ಅದನ್ನು ಅರ್ಥೈಸುವುದಕ್ಕೆ ಯಾರಿಗೂ ಕಷ್ಟವಾಗಲಾರದು. ಯಾಕೆಂದರೆ, ತಾನು ಜೈವಿಕವಾಗಿ ಹುಟ್ಟಿದವನಲ್ಲ, ದೈವಿಕವಾಗಿ ಭೂಮಿಗೆ ರವಾನಿಸಲ್ಪಟ್ಟವನು ಅಂತ ಚುನಾವಣೆಗೆ ಕೆಲವೇ ದಿನಗಳ ಮೊದಲು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಹೇಳಿದ್ದನ್ನು ದೇಶಕ್ಕೆ ದೇಶವೇ ಕೇಳಿಸಿಕೊಂಡಿದೆ. ಮೋದಿಯವರ ನಾಮಬಲವನ್ನು ಅರ್ಥಾತ್ ಸಾಕ್ಷಾತ್ ‘ದೇವರ’ ನಾಮದ ವರ್ಚಸ್ಸನ್ನು ಪಣಕ್ಕಿಟ್ಟು ಸೆಣಸಿದ ಚುನಾವಣೆಯಲ್ಲಿ ಅವರ ಪಕ್ಷಕ್ಕೆ ಸ್ವಂತ ಬಲದಿಂದ ಸರ್ಕಾರ ರಚಿಸಲು ಬೇಕಾದಷ್ಟು ಸ್ಥಾನಗಳನ್ನೂ ಗೆಲ್ಲಲಾಗಿಲ್ಲ. ಅಂದರೆ, ಭಾರತದ ಪ್ರಜಾತಂತ್ರ ‘ದೇವರನ್ನೂ’ ಮಣಿಸುತ್ತದೆ ಎಂದಾಯಿತು. ಪ್ರಜಾತಂತ್ರಕ್ಕೆ ಭಾರತ ಬರೆದ ಹೊಸ ಭಾಷ್ಯ ಇದು.

ಬಿಜೆಪಿಗೆ ಸರಳ ಬಹುಮತವೂ ದಕ್ಕಲಿಲ್ಲ ಎನ್ನುವುದು ಬಹುಮುಖ್ಯವಾದ ಬೆಳವಣಿಗೆ. ಆದರೆ, ಇಷ್ಟಾದದ್ದಕ್ಕೆ ಭಾರತದ ಪ್ರಜಾತಂತ್ರದ ಬಗ್ಗೆ ಭಾರಿ ಆಶಾವಾದವನ್ನು ತಳೆಯುವ ಮುನ್ನ ಸೂಕ್ಷ್ಮವಾಗಿ ಯೋಚಿಸುವ ಅಗತ್ಯವಿದೆ. ಈ ಫಲಿತಾಂಶದ ಕಾರಣಕ್ಕೆ ಸರ್ವಾಧಿಕಾರ ಸೋತಿತು ಎಂದಾಗಲೀ ಸಂವಿಧಾನ ಗೆದ್ದಿತು ಎಂದಾಗಲೀ ಧರ್ಮದ ಹೆಸರಲ್ಲಿ ಮಾಡುವ ರಾಜಕೀಯಕ್ಕೆ ಭಾರತದ ಮತದಾರ ಸೊಪ್ಪು ಹಾಕುವುದಿಲ್ಲ ಎಂದಾಗಲೀ ಸಂಭ್ರಮಿಸಿದರೆ ಅದು ಅವಸರದ ತೀರ್ಮಾನವಾದೀತು ಅನ್ನಿಸುತ್ತದೆ.

ಚುನಾವಣೆಯ ವೇಳೆಗೆ ದೇಶದ ಮುಂದೆ ಏನೇನು ಆತಂಕಗಳಿದ್ದವೋ ಅವೆಲ್ಲವೂ ಈಗಲೂ ಇವೆ. ಇಲ್ಲ ಎಂದುಕೊಂಡು ಎಚ್ಚರ ತಪ್ಪಿದರೆ ಪ್ರಮಾದವಾದೀತು. ಬಿಜೆಪಿಗೆ ಮತ್ತೊಮ್ಮೆ ಹಿಂದಿನಂತೆಯೇ ಬಹುಮತ ಬಂದಿದ್ದರೆ ಪ್ರಜಾತಂತ್ರಕ್ಕೆ ಮತ್ತು ಸಮಾಜಕ್ಕೆ ಕಾದಿದ್ದ ತತ್‌ಕ್ಷಣದ ಅಪಾಯಗಳಿಂದ ದೇಶ ಸದ್ಯಕ್ಕೆ ಪಾರಾಗಿದೆ. ಉಳಿದಂತೆ, ಈ ಚುನಾವಣೆ ಮಹತ್ವ ಪಡೆಯುವುದು ಅದರ ಫಲಿತಾಂಶದ ಕಾರಣಕ್ಕಲ್ಲ. ಬದಲಿಗೆ, ಚುನಾವಣಾ ಕದನ ಪಡೆದುಕೊಂಡ ಸ್ವರೂಪದ ಕಾರಣಕ್ಕೆ. ಈ ವಿಷಯಕ್ಕೆ ಮತ್ತೆ ಬರೋಣ.

ಹಿಂದಿನ ಹತ್ತು ವರ್ಷಗಳಲ್ಲಿ ಏಕಪಕ್ಷ ಕೇಂದ್ರಿತ, ಏಕನಾಯಕ ಕೇಂದ್ರಿತ ಆಳ್ವಿಕೆಯ ಅನಾಹುತಗಳನ್ನು ಕಂಡ ಕಾರಣ, ಮತ್ತೀಗ ಪುನರಾರಂಭಗೊಂಡಿರುವ ಸಮ್ಮಿಶ್ರ ಸರ್ಕಾರದ ಯುಗ ಒಂದು ಸಣ್ಣ ಹಿತಾನುಭವವನ್ನೇನೋ ಹುಟ್ಟುಹಾಕಬಹುದು. ಆದರೆ, ನಿಜಕ್ಕೂ ಸಮ್ಮಿಶ್ರ ಸರ್ಕಾರವೊಂದರಲ್ಲಿ ಇರಬೇಕಿರುವ ಒಂದು ನಿಯಂತ್ರಣ, ಒಂದು ಸಮತೋಲನ ಈ ಸರ್ಕಾರದಲ್ಲೂ ಇರಬಹುದು ಎಂಬ ಭರವಸೆ ಹುಟ್ಟುವುದಿಲ್ಲ.

ಹೊಸ ಮಂತ್ರಿಮಂಡಲವನ್ನೇ ಒಮ್ಮೆ ಗಮನಿಸಿ. ಆಯಕಟ್ಟಿನ ಪ್ರಬಲ ಖಾತೆಗಳನ್ನೆಲ್ಲ ಬಿಜೆಪಿಯೇ ಇಟ್ಟುಕೊಂಡಿದೆ. ಮಾತ್ರವಲ್ಲ, ಹಳೆಯ ಮಂತ್ರಿಗಳೇ ಮುಂದುವರಿದಿದ್ದಾರೆ. ಬಹುಮತ ಇಲ್ಲದೇ ಹೋದರೇನಂತೆ, ಎಲ್ಲವೂ ಹಾಗೆಯೇ ಇವೆ, ಏನೂ ಬದಲಾಗಿಲ್ಲ ಎಂಬ ಸಂದೇಶವನ್ನು ಬಿಜೆಪಿ ರವಾನಿಸಿದೆ. ಜೆಡಿಯು ಮತ್ತು ತೆಲುಗುದೇಶಂ ಪಕ್ಷಗಳು ಬಿಜೆಪಿಯ ನಾಯಕತ್ವದ ಮಹತ್ವಾಕಾಂಕ್ಷೆಗಳು ಅಂಕೆ ಮೀರುವ ಸಾಧ್ಯತೆಗಳನ್ನು ಎಷ್ಟರಮಟ್ಟಿಗೆ ತಡೆಯಬಹುದು ಅಂತ ಸ್ಪಷ್ಟವಾಗುತ್ತಿಲ್ಲ.

ಅಷ್ಟೇ ಅಲ್ಲ, ಬಿಜೆಪಿ ತನ್ನ ಅಲ್ಪಮತವನ್ನು ಬಹುಮತ ಆಗಿಸಿಕೊಳ್ಳಬಹುದಾದ ಸಾಧ್ಯತೆಯೂ ಜೀವಂತವಾಗಿದೆ. ಇದು ಜನಾದೇಶವನ್ನು ಎಗ್ಗಿಲ್ಲದೆ ಖರೀದಿಸಬಹುದಾದ ಕಾಲ. ಈ ವ್ಯಾಪಾರದಲ್ಲಿ ಬಿಜೆಪಿಯದ್ದು ಎತ್ತಿದ ಕೈ. ವಿವಿಧ ಪಕ್ಷಗಳ ಸದ್ಯದ ಸಂಖ್ಯಾಬಲವನ್ನು ಗಮನಿಸಿದರೆ, ಇದು ತುಸು ಕಷ್ಟವಾದರೂ ಅಸಾಧ್ಯ ಎಂದೇನೂ ಇಲ್ಲ. ರಾಜಕೀಯದ ಸಂತೆಯಲ್ಲಿ ತಮ್ಮನ್ನು ತಾವೇ ಮಾರಾಟಕ್ಕೆ ಇಟ್ಟುಕೊಂಡಿರುವ ಮೂವತ್ತೋ ಮೂವತ್ತೈದೋ ಸಂಸದರು ಸಿಕ್ಕಿಬಿಟ್ಟರೆ ಸಾಕು ಅಲ್ಲಿಗೆ ಬಿಜೆಪಿಗೆ ಮತ್ತೊಮ್ಮೆ ಸ್ವಂತ ಬಲದಿಂದ ಅಧಿಕಾರ ಚಲಾಯಿಸುವ ಶಕ್ತಿ ಬಂದಂತೆ.

ಇನ್ನು ಸಂವಿಧಾನ ವಿರೋಧಿ ಧೋರಣೆಗಳನ್ನು ಮತ್ತು ಧರ್ಮದ ಹೆಸರಲ್ಲಿ ನಡೆಯುವ ರಾಜಕೀಯವನ್ನು ಜನ ತಿರಸ್ಕರಿಸಿದ್ದಾರೆ ಅಂತ ನಿಟ್ಟುಸಿರಿಡೋಣವೇ? ಹೋದ ವರ್ಷ ಇದೇ ವೇಳೆ ಕರ್ನಾಟಕದ ಚುನಾವಣೆಯ ಫಲಿತಾಂಶ ಬಂದಾಗಲೂ ಮತದಾರರ ವಿವೇಕ, ವಿವೇಚನೆಯ ಬಗ್ಗೆ ಭಾರಿ ಭರವಸೆ ಹುಟ್ಟಿತ್ತು. ಆದರೆ ವರ್ಷ ಒಂದು ಮುಗಿಯುವುದರೊಳಗೆ ಬಂದ ಲೋಕಸಭಾ ಚುನಾವಣೆಯಲ್ಲಿ ಅಂದು ತಿರಸ್ಕರಿಸಿದ ಪಕ್ಷವನ್ನೇ ಕರ್ನಾಟಕದ ಮತದಾರರು ಮತ್ತೆ ಬೆಂಬಲಿಸಿದ್ದಾರಲ್ಲ! ಇಲ್ಲಿ ಮತದಾರರು ವಿಧಾನಸಭಾ ಚುನಾವಣೆ ಮತ್ತು ಲೋಕಸಭಾ ಚುನಾವಣೆಯನ್ನು ಬೇರೆಬೇರೆಯಾಗಿ ಪರಿಗಣಿಸುತ್ತಾರೆ ಎಂದು ಸಮಜಾಯಿಷಿ ನೀಡಬಹುದು. ಒಪ್ಪಿಕೊಳ್ಳೋಣ. ಆದರೆ ಬರೀ ವರ್ಷದ ಹಿಂದೆ ಮತದಾರರಲ್ಲಿ ಜಾಗೃತವಾಗಿದ್ದ ಸಂವಿಧಾನ ಪ್ರಜ್ಞೆ, ದ್ವೇಷ ರಾಜಕಾರಣ ವಿರೋಧಿ ನಿಲುವುಗಳೆಲ್ಲಾ ಎಲ್ಲಿ ಹೋದವು ಎನ್ನುವುದು ಪ್ರಶ್ನೆ.

ಸ್ವತಃ ಪ್ರಧಾನ ಮಂತ್ರಿಯವರೇ ರಂಗಕ್ಕಿಳಿದು ಹಸಿ ಹಸಿ ದ್ವೇಷವನ್ನು ಸಾರ್ವಜನಿಕ ವೇದಿಕೆಗಳಲ್ಲಿ ಬಿತ್ತರಿಸಿದ ಹೊರತಾಗಿಯೂ ಕರ್ನಾಟಕದ ಮತದಾರರು ಹಿಂದೆ ತಿರಸ್ಕರಿಸಿದ್ದನ್ನೇ ಈಗ ಒಪ್ಪಿಕೊಂಡದ್ದು ಯಾಕೆ ಮತ್ತು ಹೇಗೆ? ಇದು ಕರ್ನಾಟಕದ ಮತದಾರರ ಕತೆ ಮಾತ್ರವಲ್ಲ, ದೇಶದ ಮತದಾರರ ಕತೆಯೂ ಅಷ್ಟೆ. ಈ ಚುನಾವಣೆಯಲ್ಲಿ ಅವರು ಏನನ್ನು ತಿರಸ್ಕರಿಸಿದ್ದಾರೋ ಅದನ್ನೇ ಮುಂದೆ ಒಪ್ಪಿ ಅಪ್ಪಿಕೊಳ್ಳಬಹುದು. ಈ ಬಾರಿ ಏನನ್ನು ಸ್ವೀಕರಿಸಿದ್ದರೋ ಅದನ್ನೇ ಮುಂದೆ ತಿರಸ್ಕರಿಸಬಹುದು. ನಿಜ, ಸಂವಿಧಾನದ ಅಳಿವು ಉಳಿವಿನ ಪ್ರಶ್ನೆ ಈ ಚುನಾವಣೆಯಲ್ಲಿ ಕೆಲವೆಡೆ ದೊಡ್ಡ ಮಟ್ಟದಲ್ಲೇ ಮುನ್ನೆಲೆಗೆ ಬಂದಿತ್ತು. ಮತ್ತೊಮ್ಮೆ ಬಿಜೆಪಿ ಬಹುಮತದಿಂದ ಗೆದ್ದರೆ ಸಂವಿಧಾನ ಉಳಿಯದು ಎಂದು ಆತಂಕಿತರಾಗಿ ಬಿಜೆಪಿಯ ವಿರುದ್ಧ ಮತ ಚಲಾಯಿಸಿರಬಹುದು. ಆದರೆ ಈ ವಿದ್ಯಮಾನವನ್ನು ಹತ್ತಿರದಿಂದ ಕಂಡವರು ಹೇಳುವ ಪ್ರಕಾರ, ಸಂವಿಧಾನವನ್ನು ಉಳಿಸಿಕೊಳ್ಳಬೇಕು ಎಂಬ ಕಾಳಜಿಯು ಒಂದು ಸಮುದಾಯದ ಮತದಾರರಿಗಷ್ಟೇ ಮುಖ್ಯವಾಗಿತ್ತು. ಅದು, ಸಮಸ್ತ ಜನಸಮೂಹದಲ್ಲಿ ಒಂದು ರಾಜಕೀಯ ಪ್ರಜ್ಞೆಯಾಗಿ ಕಾಣಿಸಿಕೊಳ್ಳಲಿಲ್ಲ. ಸಂವಿಧಾನಕ್ಕೆ ಎದುರಾಗಿರುವ ಆತಂಕ ಈ ಫಲಿತಾಂಶದಿಂದ ಕೊನೆಗೊಳ್ಳುವುದಿಲ್ಲ.

ಫಲಿತಾಂಶದ ಆಚೆಗೆ ಇಲ್ಲಿ ಒಂದು ಚಾರಿತ್ರಿಕ ಬೆಳವಣಿಗೆಯನ್ನು ಗಮನಿಸಬೇಕಿದೆ. ಈ ಚುನಾವಣೆಯಲ್ಲಿ ಕಂಡದ್ದು ರಾಜಕೀಯ ಪಕ್ಷಗಳ ನಡುವಣ ಸ್ಪರ್ಧೆಯನ್ನಷ್ಟೇ ಅಲ್ಲ. ಚುನಾವಣೆ ಅಂತ ಆರಂಭವಾದದ್ದು ಬರಬರುತ್ತಾ ಒಂದು ಜನಸಂಗ್ರಾಮವಾಗಿ ರೂಪುಗೊಂಡಿತು. ಇಂಗ್ಲಿಷ್‌ನಲ್ಲಿ ಒಂದು ಮಾತಿದೆ. ರಾಜಕೀಯವನ್ನು ರಾಜಕಾರಣಿಗಳಿಗಷ್ಟೇ ಬಿಟ್ಟು ಸುಮ್ಮನಿರುವುದು ಅಪಾಯ ಅಂತ. ಈ ಮಾತನ್ನು ಈ ದೇಶದ ಜನ ಮನಗಂಡರೋ ಎಂಬಂತೆ ಅವರು ಈ ಚುನಾವಣೆಯನ್ನು ರಾಜಕೀಯ ಪಕ್ಷಗಳಿಗೆ ಮತ್ತು ರಾಜಕಾರಣಿಗಳಿಗಷ್ಟೇ ಬಿಟ್ಟುಬಿಡಲಿಲ್ಲ. ಸಾವಿರಾರು ಸಂಘಟನೆಗಳು, ಲಕ್ಷೋಪಲಕ್ಷ ವ್ಯಕ್ತಿಗಳು ನೇರವಾಗಿ ಚುನಾವಣಾ ಕಣಕ್ಕಿಳಿದು, ದೇಶದ ಪ್ರಜಾತಂತ್ರ ವ್ಯವಸ್ಥೆ ಅದೆಂತಹ ಗಂಡಾಂತರವನ್ನು ಎದುರಿಸುತ್ತಿದೆ ಅಂತ ಜನರಿಗೆ ವಿವರಿಸಿದರು. ನಿಸ್ತೇಜವಾಗಿದ್ದ ವಿರೋಧ ಪಕ್ಷಗಳಿಗೆ ಆತ್ಮಸ್ಥೈರ್ಯ ತುಂಬಿದರು. ಸ್ವತಃ ಪ್ರಧಾನಮಂತ್ರಿಯೇ ಮುಂದೆ ನಿಂತು ಹೇಗೆ ಸುಳ್ಳು ಹೇಳುತ್ತಿದ್ದಾರೆ, ಎಂತಹ ದ್ವೇಷ ಬಿತ್ತುತ್ತಿದ್ದಾರೆ ಅಂತ ಯಾವುದೇ ಅಳುಕಿಲ್ಲದೆ ಪ್ರಚಾರ ಮಾಡಿದರು. ಎಪ್ಪತ್ತೈದು ವರ್ಷಗಳಲ್ಲಿ ಕಟ್ಟಿದ ಪ್ರಜಾತಂತ್ರದ ಸೌಧವನ್ನು ಆಳುವ ಪಕ್ಷ ಹತ್ತು ವರ್ಷಗಳಲ್ಲಿ ಹೇಗೆ ಒಳಗಿನಿಂದಲೇ ದುರ್ಬಲಗೊಳಿಸುತ್ತಿದೆ ಎಂದು ವಿವರಿಸಿದರು.

ಈ ಚುನಾವಣೆಯ ಫಲಿತಾಂಶ ಪ್ರಜಾತಂತ್ರದ ಉಳಿವಿನ ದೃಷ್ಟಿಯಿಂದ ಒಂದು ಸಣ್ಣ ಸಮಾಧಾನವನ್ನಾದರೂ ತಂದಿದ್ದರೆ ಅದರ ಹಿಂದೆ ಈ ಜನಾಂದೋಲನದ ಪಾತ್ರವೂ ಇದೆ. ಆದರೆ ಜನಾಂದೋಲನವು ಸಮಸ್ತ ಜನಸಮೂಹದ ಪ್ರಜ್ಞೆಯಾಗಿ ರೂಪುಗೊಳ್ಳುವುದು ಇನ್ನೂ ಬಾಕಿ ಇದೆ. ಭಾರತದಲ್ಲಿ ಜನತಂತ್ರ ಉಳಿದು ಬೆಳೆಯಬೇಕು ಎಂದಾದರೆ ಈ ಜನಾಂದೋಲನ ಮುಂದುವರಿಯುವ ಅಗತ್ಯವಿದೆ. ಈ ಚುನಾವಣೆ ನಿಜಕ್ಕೂ ಪ್ರಜಾತಂತ್ರದ ಉಳಿವಿಗಾಗಿ ನಡೆದ ಹೋರಾಟವಾಗಿತ್ತು ಎಂದಾದರೆ ಚುನಾವಣೆ ಇನ್ನೂ ಮುಗಿದಿಲ್ಲ. ಅದು ಸದ್ಯಕ್ಕೆ ಮುಗಿಯುವ ಸೂಚನೆಯೂ ಕಾಣಿಸುತ್ತಿಲ್ಲ.

ಚುರುಮುರಿ

ಸ್ಕೋರ್ ವಾರ್

• ಮಣ್ಣೆ ರಾಜು

‘ಪಿಯು ಪರೀಕ್ಷೆಯಲ್ಲಿ ಎಷ್ಟೇ ಸ್ಕೋರ್ ಮಾಡಿದ್ರೂ ಮೆಡಿಕಲ್ ಸೀಟ್ ಪಡೆಯಲು ನೀಟ್ ಸ್ಕೋರ್ ಮುಖ್ಯ. ಮಕ್ಕಳನ್ನು ಡಾಕ್ಟರ್ ಮಾಡಬೇಕು ಎನ್ನುವವರ ಮನೆಗಳಲ್ಲಿ ಸ್ಕೋರ್ ವಾರ್ ಶುರುವಾಗಿಬಿಡುತ್ತದೆ’ ಎಂದಳು ಸುಮಿ.

‘ಕಮ್ಮಿ ಸ್ಕೋರ್‌ನವರೂ ಯಶಸ್ವಿಯಾಗಲು ಅವಕಾಶವಿದೆ. ಮೊನ್ನೆ ಕ್ರಿಕೆಟ್ ಮ್ಯಾಚ್‌ನಲ್ಲಿ ಭಾರತ ತಂಡದವರು ಕಮ್ಮಿ ಸ್ಕೋರ್‌ನಲ್ಲಿ ಪಾಕಿಸ್ತಾನವನ್ನು ಸೋಲಿಸಿ ಗೆದ್ದರು’ ಅಂದ ಶಂಕ್ರಿ.

‘ಪಾರ್ಲಿಮೆಂಟ್ ಎಲೆಕ್ಷನ್‌ನಲ್ಲಿ ಎನ್‌ಡಿಎ ತಂಡ, ‘ಇಂಡಿಯಾ’ ತಂಡದ ನಡುವೆ ಸ್ಕೋರ್ ವಾರ್‌ನಲ್ಲಿ ಕಡಿಮೆ ಸ್ಕೋರ್ ಮಾಡಿದವರಿಗಿಂತ ಜಾಸ್ತಿ ಸ್ಕೋರ್ ಮಾಡಿದವರೇ ಜಾಸ್ತಿ ಸಂಕಟಪಟ್ಟರಂತೆ ಕಣ್ರೀ!’

‘ಇರಬಹುದು, ರಾಹುಲ್ ಗಾಂಧಿ ಎರಡು ಕಡೆ ದಾಖಲೆ ಸ್ಕೋರ್ ಮಾಡಿ ವಿರೋಧಿ ಸಾಲಿನಲ್ಲೇ ಕುಳಿತರು. ಇವರಿಗಿಂತ ಕಡಿಮೆ ಸ್ಕೋರ್ ಮಾಡಿದ ಮೋದಿ ಪ್ರಧಾನಿಯಾದರು. ಸ್ಕೋರ್ ಎಂಬುದು ಬರೀ ನಂಬರ್, ಕೆಲವು ಸಾರಿ ಲೆಕ್ಕಕ್ಕುಂಟು ಆಟಕ್ಕಿರಲ್ಲ’.

‘ಮಂಡ್ಯದ ಟಾಪ್ ಸ್ಕೋರರ್ ಕುಮಾರಣ್ಣ ಮೋದಿ ನೇತೃತ್ವದ ಸರ್ಕಾರದ ಫ್ರಂಟ್ ಬೆಂಚ್ ಮಂತ್ರಿಯಾದರು. ರೈತಮಗನಂತೆ ಪಂಚೆಯುಟ್ಟು ಪ್ರಮಾಣವಚನ ಸ್ವೀಕರಿಸಿದರೂ ಕೃಷಿ ಖಾತೆ ಕೈತಪ್ಪಿ ಉಕ್ಕು, ಕೈಗಾರಿಕೆಯ ಲಕ್ಕು ದಕ್ಕಿತು’.

‘ಪಂಚೆ, ಟವೆಲ್‌ನ ಕೃಷಿ ಕಲ್ಚರ್ ಕುಮಾರಣ್ಣನಿಗೆ ಸೂಟು-ಬೂಟಿನ ಕೈಗಾರಿಕೆ ಮ್ಯಾಚ್ ಆಗುತ್ತೇನ್ರೀ?’

‘ಆಗುತ್ತೆ, ತೆನೆ ಹೊತ್ತ ಮಹಿಳೆ ಕಬ್ಬಿಣ ಹೊರಲಾರಳೇ? ಕೈಗಾರಿಕೆಯಲ್ಲೇ ಕೃಷಿ ಮಾಡಿ ಉತ್ತಮ ಫಸಲು ತೆಗೆದು ಒಳ್ಳೆಯ ಇಳುವರಿ ಕೊಡ್ತಾರೆ ಬಿಡ್ರೀ’.

‘ವಸತಿ ಭಾಗ್ಯ ನಿರೀಕ್ಷಿಸಿದ್ದ ತುಮಕೂರು ಟಾಪ್ ಸ್ಕೋರರ್ ಸೋಮಣ್ಣನವರಿಗೆ ಜಲಭಾಗ್ಯ ಸಿಕ್ಕಿದ್ದಕ್ಕೆ ಬೇಸರವಿಲ್ಲವಂತೆ. ಪಾಲಿಗೆ ಬಂದದ್ದು ಪಂಚಾಮೃತ. ರಾಮನ ಪಾತ್ರಕ್ಕೂ ಸೈ, ಭೀಮನ ಪಾತ್ರಕ್ಕೂ ಜೈ ಎಂದಿದ್ದಾರೆ’.

‘ಹೌದು, ಹೊಲ ಉಳುವವನಿಗೆ ಕರಿ ಎತ್ತುಗಳಾದರೇನು, ಬಿಳಿ ಎತ್ತುಗಳಾದರೇನು ಅಲ್ವಾ?’ ಅಂದಳು ಸುಮಿ.

ಸಂಗತ

ಸ್ವಾರಸ್ಯಕರ ಸುದ್ದಿಯ ಹಿಂದೆ...

ಸೆಲೆಬ್ರಿಟಿಗಳ ವೈವಾಹಿಕ ಬದುಕಿನಲ್ಲಿ ಕಾಣಿಸಿಕೊಳ್ಳುವ ಬೀಸುಗಾಳಿಯೊಂದು ಬಿರುಗಾಳಿಯೇನಲ್ಲ ಎನ್ನುವುದನ್ನು ಜನಸಾಮಾನ್ಯರು ಅರಿಯಬೇಕು

• ಡಾ. ಎ.ಶ್ರೀಧರ

ಸುದ್ದಿಯೇನೋ ಸ್ವಾರಸ್ಯಕರವಾಗಿಯೇ ಇರುತ್ತದೆ. ಆದರೆ ಅದು ಸತ್ಯವನ್ನು ಮರೆಮಾಚಿರಲೂಬಹುದು. ತಂತ್ರಜ್ಞಾನದ ಮೂಲಕ ಹರಿದುಬಂದು ಬಹಿರಂಗಗೊಳ್ಳುತ್ತಿರುವ ಇಂದಿನ ಅನೇಕ ವಿಷಯಗಳು ಸತ್ಯದಿಂದ ದೂರ ಸರಿದಿರುವುದು ಸ್ಪಷ್ಟ. ಹೀಗಿದ್ದರೂ ಇಂತಹ ಸುದ್ದಿಗಳು ಜನಚಿತ್ತಕ್ಕೆ ಬಹು ಆಕರ್ಷಕ. ಯಾಕೆ ಹೀಗೆ ಎನ್ನುವ ಪ್ರಶ್ನೆಗೆ ಹಲವಾರು ವಿವರಣೆಗಳು ಸಿಗುತ್ತವೆ. ಮುಖ್ಯವಾಗಿ, ಸೆಲೆಬ್ರಿಟಿಗಳ ಬದುಕಿನ ಬಗ್ಗೆ ಹೆಚ್ಚು ಕುತೂಹಲ ಇರಿಸಿಕೊಳ್ಳುವ ಮನಸ್ಸುಗಳು ಅವರ ಪ್ರತಿ ಚಲನವಲನವನ್ನೂ ತಪ್ಪದೆ ಗಮನಿಸುತ್ತಲೇ ಇರುತ್ತವೆ. ವೇಷಭೂಷಣ, ನಡೆನುಡಿ, ಹಾವಭಾವ ಮತ್ತು ಜನಪ್ರಿಯತೆಯ ಕಾರಣಕ್ಕೆ ಅವರು ಪಾಲ್ಗೊಳ್ಳುವ ಜಾಹೀರಾತು ಹಾಗೂ ಅವರ ಬಗೆಗಿನ ಪ್ರಚಾರವು ಜನಮಾನಸದಲ್ಲಿ ಸುಲಭವಾಗಿ ಬೆರೆತುಬಿಡುತ್ತವೆ.

ಮೊಬೈಲು, ಕಂಪ್ಯೂಟರಿನಂತಹ ಉಪಕರಣಗಳು ಸುದ್ದಿಯ ತುಣುಕೊಂದನ್ನು ಕ್ಷಣಮಾತ್ರದಲ್ಲಿ ಲಕ್ಷಾಂತರ ಮಂದಿಯ ಮನಸ್ಸಿನೊಳಗೆ ತೂರಿಸಿಬಿಡಬಲ್ಲವು. ಇವುಗಳಲ್ಲಿ ಅಡಗಿರುವ ಭಾವಸೂಚಿ ಗುಂಡಿಗಳನ್ನು ಒತ್ತುವುದರ ಮೂಲಕ ಜನ ತಮ್ಮ ಅಭಿಪ್ರಾಯ, ಆಕ್ರೋಶವನ್ನು ಸುಲಭವಾಗಿ ಹೊರಗೆಡವಬಲ್ಲರು. ಹೀಗೆ ವ್ಯಕ್ತಿಯೊಬ್ಬ ಯಾವುದೇ ವಿಷಯದ ಬಗ್ಗೆ ತನ್ನ ನಿಲುವನ್ನು ಪ್ರಕಟಿಸುವುದು ಬಹು ಸರಾಗ. ಅದರಲ್ಲಿಯೂ ಆಕ್ರೋಶಭರಿತ, ನಕಾರಾತ್ಮಕ ಭಾವನೆಗಳಂತೂ ಅತ್ಯಂತ ವೇಗವಾಗಿ ವ್ಯಕ್ತವಾಗುತ್ತವೆ.

ವಿಷಯದ ಬಗ್ಗೆ ಕೊಂಚ ಆಲೋಚಿಸಿ, ಅದರ ಸತ್ಯಾಸತ್ಯತೆಯನ್ನು ಅರ್ಥಮಾಡಿಕೊಂಡು ಅಭಿಪ್ರಾಯ ಸೂಚಿಸುವಂತಹ ತಾಳ್ಮೆ ಇರುವ ನೆಟ್ಟಿಗರ ಸಂಖ್ಯೆ ತೀರಾ ಕಡಿಮೆ. ಬಹಳಷ್ಟು ಬಾರಿ ಸೆಲೆಬ್ರಿಟಿಗಳ ನಿತ್ಯದ ಬದುಕು ಸಹ ನೆಟ್ಟಿಗರ ಪ್ರತಿಕ್ರಿಯೆಗಳನ್ನೇ ಅವಲಂಬಿಸಿರುತ್ತದೆ.

ಸೆಲೆಬ್ರಿಟಿಗಳ ಗೆಳೆತನ, ಸಹವಾಸ ಮತ್ತು ಆಪ್ತ ಸಂಬಂಧಗಳಿಗೆ ಸಂಬಂಧಿಸಿದ ಸುದ್ದಿಗಳು ಕೆಲವು ಜನಸಾಮಾನ್ಯರಿಗೆ ರೋಮಾಂಚನ ತರುವಂತಹ ವಿಷಯಗಳಾಗಿದ್ದು, ಮಾಧ್ಯಮಗಳು ಇವುಗಳನ್ನು ಚಿತ್ರಸಮೇತ ವಿಶ್ಲೇಷಿಸುವುದು ಸಾಮಾನ್ಯ. ಮದುವೆ, ವಿಚ್ಛೇದನ, ಲೈಂಗಿಕತೆಗೆ ಸಂಬಂಧಿಸಿದ ತುಣುಕು ಸಂಗತಿಗಳೂ ಮಾಧ್ಯಮಗಳಿಗೆ ಲಾಭ ತರುವಂತಹ ದೊಡ್ಡ ಮಾಲುಗಳೇ ಆಗಿರುತ್ತವೆ. ಅದಕ್ಕೆ ಸರಿಯಾಗಿ ಸಾಮಾಜಿಕವಾಗಿ ಸರಿ-ತಪ್ಪು ಎನ್ನುವ ದೃಷ್ಟಿಯಿಂದ ವಿಶ್ಲೇಷಣೆ ಮಾಡುವುದಂತೂ ಬಹು ಲಾಭದಾಯಕ. ಜನ ಕೂಡ ಪ್ರಖ್ಯಾತರ ಹುಳುಕುಗಳನ್ನು ಹುಡುಕಲು ಸದಾ ಉತ್ಸುಕರಾಗಿರುತ್ತಾರೆ. ಬಹುಶಃ ಇದನ್ನು ಒಂದು ರೀತಿಯ ‘ಕೆದಕುವ ಕಾಂಪ್ಲೆಕ್ಸ್’ ಎನ್ನಬಹುದೇನೊ.

ಇಂದಿನ ಯುವಜನರ ಮನಸ್ಸು, ಜೀವನ ನಿಭಾಯಿಸಲು ಮಾಡಿಕೊಳ್ಳುವ ಸಿದ್ಧತೆಗಳು ಹಳೆಯ ತಲೆಮಾರಿನಿಂದ ಬಹಳ ದೂರ ಸರಿದಿದ್ದು, ತುಂಬಾ ಭಿನ್ನವಾಗಿಯೇ ಇರುತ್ತವೆ. ತಮ್ಮ ಬದುಕಿನಲ್ಲಿ ಯಾವ ವಿಷಯಗಳಿಗೆ ಹೆಚ್ಚು ಆದ್ಯತೆ ಕೊಡಬೇಕು, ಸಮಸ್ಯೆಗಳನ್ನು ಗ್ರಹಿಸಿ ಪರಿಹಾರ ಕಂಡುಕೊಳ್ಳುವುದು ಹೇಗೆ ಎಂಬಂತಹ ಸಂಗತಿಗಳು ಯಾವುದೇ ಕಟ್ಟುಪಾಡು, ನೈತಿಕತೆಯ ಚೌಕಟ್ಟಿನಲ್ಲಿ ಬರುವುದಿಲ್ಲ. ಆದರೆ ಸೆಲೆಬ್ರಿಟಿಗಳು ಇಂತಹುದೇ ನಡೆನುಡಿ ಅನುಸರಿಸಿದರೆ ಅದು ಅನುಯಾಯಿಗಳಿಗೆ ಹಿಡಿಸುವುದಿಲ್ಲ. ಈ ಮೂಲಕ ತಮ್ಮ ಆರಾಧನಾ ಸಂಕೇತ ಭಗ್ನಗೊಳ್ಳುತ್ತಿದೆ ಎನ್ನುವುದನ್ನು ಅವರು ಸುಲಭವಾಗಿ ಒಪ್ಪಿಕೊಳ್ಳಲಾರರು. ಹೀಗಾಗಿ, ತಮ್ಮ ತುಡಿತಗಳನ್ನು ಸಾಮಾಜಿಕ ಜಾಲತಾಣಗಳ ಮೂಲಕ ನಾನಾ ರೀತಿಯಲ್ಲಿ ಹೊರಗೆಡಹಲು ಅವರು ಮುಂದಾಗುತ್ತಾರೆ. ಆದರೆ ಸೆಲೆಬ್ರಿಟಿಗಳು ತಮ್ಮದೇ ಸಮಸ್ಯೆ, ಸಂಘರ್ಷಗಳನ್ನು ತಮ್ಮ ಮಾನಸಿಕ ಹಿತ, ಅಗತ್ಯಕ್ಕೆ ತಕ್ಕಂತೆ ನಿರ್ವಹಿಸುವುದನ್ನು ಚೆನ್ನಾಗಿಯೇ ಕಂಡುಕೊಂಡಿರುತ್ತಾರೆ. ತಮ್ಮ ಖಾಸಗಿ ಜೀವನವನ್ನು ಬಹು ಜಾಣತನದಿಂದ ಕಾಯ್ದುಕೊಳ್ಳುವ ತಂತ್ರವು ಎಲ್ಲಾ ಸೆಲೆಬ್ರಿಟಿಗಳಲ್ಲಿ ಇರದು ಎನ್ನುವುದೂ ನಿಜವೇ. ಈ ಸಂಗತಿ ಕೂಡ ಸೆಲೆಬ್ರಿಟಿಗಳ ಬದುಕು ಬಯಲಾಗುವುದಕ್ಕೆ ಕಾರಣ.

ಆದರೆ ಇಂದು ಸಮಾಜ ಗಮನಿಸಬೇಕಾಗಿರುವ ಬಹುಮುಖ್ಯ ವಿಷಯವೆಂದರೆ, ವ್ಯಕ್ತಿಯ ವೈವಾಹಿಕ ಜೀವನದ ಏರುಪೇರುಗಳು ಜನಸಾಮಾನ್ಯರ ನಂಬಿಕೆ, ಸಾಮಾಜಿಕ ಸುಸ್ಥಿರತೆಯನ್ನು ಬುಡಮೇಲು ಮಾಡುವಷ್ಟು ಪ್ರಬಲವಾಗಿ ಇರುವುದಿಲ್ಲ. ಹೀಗಾಗಿ, ಸೆಲೆಬ್ರಿಟಿಗಳ ವೈವಾಹಿಕ ಬದುಕಿನಲ್ಲಿ ಕಾಣಿಸಿಕೊಳ್ಳುವ ಬೀಸುಗಾಳಿಯೊಂದು ಬಿರುಗಾಳಿಯೇನಲ್ಲ ಎನ್ನುವುದನ್ನು ತಿಳಿಯಬೇಕು.

ಪ್ರೀತಿಸಿ, ಮೋಹಿಸಿ ಒಂದಾಗಿದ್ದವರು ಕೆಲವೇ ಸಮಯದಲ್ಲಿ ದೂರ ಸರಿಯುವುದು ಅಸ್ವಾಭಾವಿಕವೇನಲ್ಲ. ಗಾಢವಾಗಿ ಪ್ರೀತಿಸಿ ಅದ್ದೂರಿಯಿಂದ ಮದುವೆಯಾಗಿದ್ದರೂ ಹೆಚ್ಚುದಿನ ಒಟ್ಟಿಗೇ ಇರಲಾರೆವು ಎನ್ನುವ ಭಾವನೆಯಿಂದ ನ್ಯಾಯಯುತವಾಗಿ ದೂರಸರಿಯುವುದು ಕೆಟ್ಟದ್ದೇನಲ್ಲ. ಆದರೆ ಇಂತಹ ಸಂಗತಿಗಳು ಸೆಲೆಬ್ರಿಟಿಗಳನ್ನು ಆರಾಧಿಸುವವರ ಮನಸ್ಸಿಗೆ ಆಘಾತ ಉಂಟುಮಾಡುವುದು ಇಂದಿನ ಸಾಮಾಜಿಕ ಸ್ವಭಾವಗಳಿಗೆ ಹೊಸದಾಗಿ ಸೇರಿರುವ ವಿಷಯ. ಉದಾಹರಣೆಗೆ, ಎಂದಿನಿಂದಲೂ ಹಾಲಿವುಡ್ ನಟನಟಿಯರು, ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತರಾದ ಕ್ರೀಡಾಪಟುಗಳು, ಹೆಸರಾಂತ ಸಾಹಿತಿಗಳು, ವಿಜ್ಞಾನಿಗಳು, ರಾಜಕಾರಣಿಗಳು, ಆಗರ್ಭ ಶ್ರೀಮಂತರು ಸಹ ತಮ್ಮ ಅಮೂಲ್ಯ ಗೆಳೆತನ, ದಾಂಪತ್ಯವನ್ನು ಅಂತ್ಯಗೊಳಿಸಿಕೊಂಡಿದ್ದಿದೆ. ಆದರೂ ಅವರು ತಮ್ಮಲ್ಲಿನ ಸಾಮರ್ಥ್ಯವನ್ನು ಕಳೆದುಕೊಂಡಿಲ್ಲ ಎನ್ನುವುದನ್ನು ಅವರ ಸಾಧನೆಗಳೇ ಬಿಂಬಿಸುತ್ತವೆ. ಆದ್ದರಿಂದ ಮಾಧ್ಯಮಗಳ ಅತಿ ಉತ್ಸಾಹದ ವಿವರಣೆ, ವ್ಯಾಖ್ಯಾನಗಳು, ಕಹಿಯಾದ ನಂಟಿಗೆ ಉತ್ತಮ ಮದ್ದಾಗಲಾರವು.

ಲೇಖಕ: ಮನೋವಿಜ್ಞಾನಿ

ವಾಚಕರ ವಾಣಿ

ಪೊಲೀಸರಿಗೆ ಸಿಗಲಿ ವರ್ಗಾವಣೆ ಭಾಗ್ಯ

ಅಂತರ್‌ಜಿಲ್ಲಾ ವರ್ಗಾವಣೆ ಕೋರಿ ಅರ್ಜಿ ಸಲ್ಲಿಸಿ ಒಂದೂವರೆ ವರ್ಷ ಕಳೆದಿದ್ದರೂ ಪೊಲೀಸ್ ಕಾನ್‌ಸ್ಟೆಬಲ್‌ಗಳಿಗೆ ವರ್ಗಾವಣೆ ಭಾಗ್ಯ ದೊರೆತಿಲ್ಲ ಎಂಬ ಸುದ್ದಿಯನ್ನು (ಪ್ರ.ವಾ., ಜೂನ್ 9) ಓದಿ ಮನ ಮಿಡಿಯಿತು. ಪೊಲೀಸ್ ಸಿಬ್ಬಂದಿಯು ಆರೋಗ್ಯ ಸಮಸ್ಯೆ, ಕೌಟುಂಬಿಕ ಸಂಕಷ್ಟ, ವಯಸ್ಸಾದ ತಂದೆ– ತಾಯಿಯ ಆರೈಕೆಯಂತಹ ಕಾರಣಗಳಿಗೆ ವರ್ಗಾವಣೆ ಬಯಸಿರುತ್ತಾರೆ. ಪತಿ– ಪತ್ನಿ ಪ್ರಕರಣದಲ್ಲಿ ವರ್ಗಾವಣೆ ಪ್ರಕ್ರಿಯೆ ನಡೆದಿದೆಯಾದರೂ ಸಾಮಾನ್ಯ ಕಾನ್‌ಸ್ಟೆಬಲ್‌ಗಳ ವರ್ಗಾವಣೆ ವಿಷಯದಲ್ಲಿ ಇಲಾಖೆಯು ಮಲತಾಯಿ ಧೋರಣೆ ತೋರುತ್ತಿರುವುದು ಸರಿಯಾದ ನಡೆಯಲ್ಲ. ವರ್ಗಾವಣೆ ವಿಷಯದಲ್ಲಿ ಬಸವಳಿದಿರುವ ಪೊಲೀಸ್ ಸಿಬ್ಬಂದಿಯ ಬೇಡಿಕೆಗೆ ಇಲಾಖೆ ಕೂಡಲೇ ಸ್ಪಂದಿಸಲಿ.

ಮಲ್ಲಿಕಾರ್ಜುನ್ ತೇಲಿ, ಜಮಖಂಡಿ

ವಿದ್ಯುತ್ ಅವಘಡ: ಇರಲಿ ಎಚ್ಚರ

ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ಗ್ರಾಮವೊಂದರಲ್ಲಿ ಕಟ್ಟಡಕ್ಕೆ ನೀರು ಹಾಕಲು ಸ್ವಿಚ್ ಆನ್ ಮಾಡಲು ಹೋಗಿ, ಮುಟ್ಟಿದ ಕೂಡಲೇ ಸ್ವಿಚ್ ಬೋರ್ಡ್‌ನಲ್ಲಿ ವಿದ್ಯುತ್ ಪ್ರವಹಿಸಿ ಯುವಕನೊಬ್ಬ ಪ್ರಾಣ ಕಳೆದುಕೊಂಡಿರುವುದನ್ನು ತಿಳಿದು ದುಃಖವಾಯಿತು. ಮಳೆಗಾಲದಲ್ಲಿ ಈ ರೀತಿಯ ಅವಘಡಗಳ ಸಂಖ್ಯೆ ಹೆಚ್ಚು. ಮಳೆ ಆರಂಭವಾಗುವ ಸೂಚನೆ ತಿಳಿದ ಕೂಡಲೇ ಮನೆಯಲ್ಲಿರುವ ಎಲ್ಲಾ ಎಲೆಕ್ಟ್ರಾನಿಕ್ ಉಪಕರಣಗಳನ್ನು ಅನ್‌ಪ್ಲಗ್ ಮಾಡುವುದು ಒಳ್ಳೆಯದು.

ಮಳೆಗಾಲದಲ್ಲಿ ತೇವಾಂಶ ಇರುವುದು ಸಹಜ. ಸ್ವಿಚ್‌ಬೋರ್ಡ್‌ಗೆ ನೀರು ತಾಕುತ್ತಿದೆಯೇ ಎಂದು ನೋಡಿಕೊಳ್ಳಬೇಕು. ಒಂದುವೇಳೆ ನೀರು ತಾಕುತ್ತಿದ್ದರೆ, ಅದನ್ನು ಸರಿಪಡಿಸಬೇಕು. ಮಳೆ, ಗುಡುಗು ಬರುವಾಗ ತೇವಾಂಶ ಇರುವ ಸ್ವಿಚ್ ಬೋರ್ಡ್‌ಗಳನ್ನು ಯಾವುದೇ ಕಾರಣಕ್ಕೂ ಮುಟ್ಟಬಾರದು. ಮಳೆಗಾಲದಲ್ಲಿ ಬೇಡವೆಂದರೂ ಕೈ ಒದ್ದೆಯಾಗುತ್ತಿರುತ್ತದೆ. ಹಾಗೆಂದು ಗಡಿಬಿಡಿಯಲ್ಲಿ ಒದ್ದೆಯಲ್ಲಿ ಸ್ವಿಚ್ ಬೋರ್ಡ್ ಮುಟ್ಟುವ ಸಾಹಸಕ್ಕೆ ಕೈ ಹಾಕಬಾರದು. ಮಳೆಗಾಲದಲ್ಲಿ ಸ್ವಿಚ್ ಬೋರ್ಡ್ ಬಳಸುವ ಮುನ್ನ ಎಚ್ಚರ ವಹಿಸಬೇಕು. ಒದ್ದೆ ಕೈಯಿಂದ ಮುಟ್ಟಿದಾಗ ಶಾಕ್ ಹೊಡೆಯುವ ಅಪಾಯ ಹೆಚ್ಚಾಗಿರುತ್ತದೆ.

ಭೂಮಿಕಾ ರಂಗಪ್ಪ ದಾಸರಡ್ಡಿ, ಬಿದರಿ

Myತ್ರಿ ಸರ್ಕಾರ!

ತ್ರೀ ಟೈಮ್ಸ್ ಮೋದಿ
ಅದಕ್ಕೇ ಈ ಬಾರಿ
Myತ್ರಿ
ಸರ್ಕಾರ

ವಿಜಯ್ ಹೆಮ್ಮಿಗೆ
ಮೈಸೂರು

ನಮ್ಮ ರಾಜಕಾರಣಿಗಳು ಓದುವುದಿಲ್ಲವೇ?

ಲೋಕಸಭೆ ಚುನಾವಣೆಯಲ್ಲಿ ಸೋತಿರುವ ರಾಜ್ಯದ ಕೆಲವು ಅಭ್ಯರ್ಥಿಗಳು ಏನೋ ಅನಾಹುತ ಆಗಿರುವ ರೀತಿಯಲ್ಲಿ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಿದ್ದಾರೆ. ಸೋಲನ್ನು ಕ್ರೀಡಾ ಮನೋಭಾವದಿಂದ ಸ್ವೀಕರಿಸುವವರು ನಮ್ಮಲ್ಲಿ ಕಡಿಮೆ. ರಾಜಕಾರಣಿಗಳ ಇಂತಹ ನಡೆಯನ್ನು ನೋಡಿದರೆ ಅವರಿಗೆ ಓದಿನ ಅಭಿರುಚಿಯೇ ಇಲ್ಲವೇನೊ ಎಂಬ ಅನುಮಾನ ಮೂಡುತ್ತದೆ. ಅಮೆರಿಕದ ಅಧ್ಯಕ್ಷರಾಗಿದ್ದ ಬಿಲ್ ಕ್ಲಿಂಟನ್ ತಮ್ಮ ಊರಿನಲ್ಲಿ ಗ್ರಂಥಾಲಯಕ್ಕೆ ತೆರಳುತ್ತಿರುವ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ಇತ್ತೀಚೆಗೆ ಹರಿದಾಡಿತು. ಹೀಗೆ ವಿವಿಧ ಬಗೆಯ ಅಭಿರುಚಿಗಳನ್ನು ಬೆಳೆಸಿಕೊಂಡು ಅವುಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವವರು ನಮ್ಮಲ್ಲಿ ಎಷ್ಟು ಜನ ಇದ್ದಾರೆ?

ಗುರು ಜಗಳೂರು, ಹರಿಹರ

ಎಚ್‌ಎಸ್‌ಆರ್‌ಪಿ ಅಳವಡಿಕೆ: ಗಡುವು ವಿಸ್ತರಿಸಿ

ಕಾರು ಮತ್ತು ದ್ವಿಚಕ್ರ ವಾಹನಗಳಿಗೆ, ಹೈ ಸೆಕ್ಯೂರಿಟಿ ರಿಜಿಸ್ಟ್ರೇಷನ್ ಪ್ಲೇಟ್‌ಗಳನ್ನು (ಎಚ್‌ಎಸ್‌ಆರ್‌ಪಿ) ಅಳವಡಿಸಿಕೊಳ್ಳಲು ಇದೇ 12 ಕಡೆಯ ದಿನವೆಂದು ಸರ್ಕಾರ ನಿಗದಿಪಡಿಸಿದೆ. ಆದರೆ ಹಲವು ತಾಂತ್ರಿಕ ಸಮಸ್ಯೆಗಳಿಂದಾಗಿ ಬಹಳಷ್ಟು ಜನರಿಗೆ ಇನ್ನೂ ಎಚ್‌ಎಸ್‌ಆರ್ ಪ್ಲೇಟ್‌ಗಳನ್ನು ಅಳವಡಿಸಿಕೊಳ್ಳಲು ಸಾಧ್ಯವಾಗಿಲ್ಲ. ಈ ಸಂಬಂಧ ನನಗಾದ ವೈಯಕ್ತಿಕ ಅನುಭವವೊಂದು ಹೀಗಿದೆ: 1993ರಲ್ಲಿ ನಾನು ‘ಹೀರೊ ಹೋಂಡ’ ಕಂಪನಿಯ ಮೋಟರ್ ಬೈಕನ್ನು ತೆಗೆದುಕೊಂಡಿದ್ದೆ. ಈ ಕಂಪನಿಯು 20 ವರ್ಷಗಳ ಹಿಂದೆಯೇ ಹೀರೊ ಮತ್ತು ಹೋಂಡ ಎಂಬುದಾಗಿ ಎರಡು ಕಂಪನಿಗಳಾಗಿ ಇಬ್ಭಾಗವಾಗಿದೆ. ಈಗ ನಾನು ನನ್ನ ವಾಹನಕ್ಕೆ ಎಚ್‌ಎಸ್‌ಆರ್ ಪ್ಲೇಟ್‌ನ ನೋಂದಣಿಗಾಗಿ ಸೈಬರ್ ಸೆಂಟರ್‌ಗೆ ಹೋದರೆ, ಹೀರೊ ಹೋಂಡ ಹೆಸರಿನ ಕಂಪನಿಯೇ ಇಲ್ಲ ಎಂದು ಒಮ್ಮೆ, ತಾಂತ್ರಿಕ ದೋಷವಿದೆ ಎಂದು ಮತ್ತೊಮ್ಮೆ ಅಲ್ಲಿನ ಕಂಪ್ಯೂಟರ್ ತೋರಿಸುತ್ತದೆ. ಸ್ಪ್ಲೆಂಡರ್ ಕಂಪನಿ ವಾಹನಗಳಿಗೂ ಇದೇ ರೀತಿಯ ಸಮಸ್ಯೆಯಾಗಿದೆ ಎಂದು ಕೆಲವರು ಹೇಳುವುದನ್ನು ಕೇಳಿದ್ದೇನೆ.

ಇಂತಹ ತಾಂತ್ರಿಕ ಸಮಸ್ಯೆಗಳನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು (ಆರ್‌ಟಿಒ) ಮೊದಲು ಬಗೆಹರಿಸಬೇಕು ಮತ್ತು ಎಚ್‌ಎಸ್‌ಆರ್ ಪ್ಲೇಟ್‌ಗಳ ಅಳವಡಿಕೆಗೆ ಇರುವ ಗಡುವನ್ನು ಇನ್ನೊಂದು ತಿಂಗಳ ಮಟ್ಟಿಗಾದರೂ ಮುಂದೂಡಬೇಕು.

ಬೂಕನಕೆರೆ ವಿಜೇಂದ್ರ, ಮೈಸೂರು

ತ್ಯಾಜ್ಯ ಸೇವಾ ಶುಲ್ಕ: ಅತಿರೇಕದ ಚಿಂತನೆ

ಬೆಂಗಳೂರಿನಲ್ಲಿ ಪ್ರತಿ ಮನೆಯಿಂದ ತ್ಯಾಜ್ಯ ಸೇವಾ ಶುಲ್ಕವಾಗಿ ₹ 100 ಸಂಗ್ರಹಿಸಲು ಸರ್ಕಾರ ಮುಂದಾಗಿರುವುದು (ಪ್ರ.ವಾ., ಜೂನ್ 11) ಅಚ್ಚರಿದಾಯಕ. ಸಾರ್ವಜನಿಕರು ಸರ್ಕಾರದ ಯಾವುದೇ ಶುಲ್ಕಕ್ಕೂ ಬೇಸರಿಸದೆ ಹಣವನ್ನು ವ್ಯಯಿಸುತ್ತಾರೆ. ಆದರೆ ತ್ಯಾಜ್ಯ ಸೇವಾ ಶುಲ್ಕ ನೀಡುವುದನ್ನು ಅವರು ವಿರೋಧಿಸುತ್ತಾರೆ. ಏಕೆಂದರೆ, ತ್ಯಾಜ್ಯವು ಪ್ರತಿದಿನವೂ ಮನೆಯಿಂದ ವಿಲೇವಾರಿಯಾಗುವುದೇ ಕಷ್ಟವಾಗಿರುವಾಗ ಸರ್ಕಾರ ವಿಧಿಸಲು ಮುಂದಾಗಿರುವ ತ್ಯಾಜ್ಯ ಶುಲ್ಕ ಅತಿರೇಕದ ಪ್ರಸ್ತಾವವೇ ಸರಿ.

ತಮಗೆ ಅನುಕೂಲವಾದರೆ ಅಲ್ಲವೇ ಶುಲ್ಕವನ್ನು ಜನ ಕೊಡುವುದು. ಎಷ್ಟೋ ಮನೆಗಳಲ್ಲಿನ ತ್ಯಾಜ್ಯವು ವಾರದಲ್ಲಿ ಎರಡು ಅಥವಾ ಮೂರು ಬಾರಿ ಮಾತ್ರ ವಿಲೇವಾರಿಯಾಗುತ್ತಿದೆ. ತ್ಯಾಜ್ಯ ಸೇವಾ ಶುಲ್ಕ ಪಡೆಯಲೇಬೇಕಿದ್ದಲ್ಲಿ, ದಿನವೂ ಪ್ರತಿ ಮನೆಯಿಂದಲೂ ತ್ಯಾಜ್ಯ ಕೊಂಡೊಯ್ಯಬೇಕಲ್ಲವೇ? ಆಗಷ್ಟೇ ತ್ಯಾಜ್ಯ ಸೇವಾ ಶುಲ್ಕ ಪಡೆಯುವುದಕ್ಕೆ ಬೆಲೆ.

ಬಾಲಕೃಷ್ಣ ಎಂ.ಆರ್., ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಾಜ್ಯ ರಾಜಕಾರಣದ ಪುನರಾಗಮನ

ರಾಜಕೀಯ ವಿಶ್ಲೇಷಕರು, ಚುನಾವಣಾ ಪಂಡಿತರ ಲೆಕ್ಕಾಚಾರಗಳನ್ನು ಈ ಬಾರಿಯ ಲೋಕಸಭಾ ಚುನಾವಣಾ ಫಲಿತಾಂಶ ತಲೆಕೆಳಗು ಮಾಡಿದೆ. ಈ ಫಲಿತಾಂಶಕ್ಕೆ ಸಂಬಂಧಿಸಿದಂತೆ ಚುನಾವಣಾ ತಜ್ಞ ಯೋಗೇಂದ್ರ ಯಾದವ್ ಮತ್ತು ತಂಡದವರು ಮಾಡಿರುವ ವಿಶ್ಲೇಷಣೆಗಳ ಸರಣಿ ವರದಿಗಳು ಪ್ರಕಟವಾಗಲಿವೆ

● ಯೋಗೇಂದ್ರ ಯಾದವ್
ರಾಹುಲ್ ಶಾಸ್ತ್ರಿ/ಶ್ರೇಯಸ್ ಸರ್ದೇಸಾಯಿ

ರಾಷ್ಟ್ರೀಯ ಚುನಾವಣೆಯಲ್ಲಿ ರಾಜ್ಯ ರಾಜಕಾರಣವು ಕೇಂದ್ರ ಸ್ಥಾನಕ್ಕೆ ಬಂದಿದೆ ಎಂಬ ಮುಖ್ಯ ವಿಚಾರವನ್ನು ಈ ಬಾರಿಯ ಅಚ್ಚರಿ ಫಲಿತಾಂಶವು ಮಸುಕಾಗುವಂತೆ ಮಾಡಿದೆ ಎಂಬಂತೆ ತೋರುತ್ತಿದೆ.

ನಾವು ಜೂನ್ 4ಕ್ಕೂ (ಫಲಿತಾಂಶದ ದಿನ) ಮೊದಲು, ಬಿಜೆಪಿಗೆ 237 ಸೇರಿದಂತೆ ಎನ್‌ಡಿಎಗೆ 286 ಸ್ಥಾನಗಳು, ಕಾಂಗ್ರೆಸ್‌ಗೆ 89 ಸೇರಿದಂತೆ ಇಂಡಿಯಾ ಒಕ್ಕೂಟಕ್ಕೆ 215 ಸ್ಥಾನಗಳು ಸಿಗಲಿವೆ ಎಂದು ಹೇಳಿದ್ದೆವು. ಈ ಅಂಕಿ ಅಂಶಗಳೊಂದಿಗೆ ಚುನಾವಣೆಯ ಅಂತಿಮ ಫಲಿತಾಂಶದ ಹೋಲಿಕೆ ಅಚ್ಚರಿ ತರುತ್ತದೆಯಲ್ಲವೇ? ಈ ಬಾರಿಯ ಚುನಾವಣೆಯಲ್ಲಿ ಎನ್‌ಡಿಎ 292 (ಬಿಜೆಪಿ 240), 'ಇಂಡಿಯಾ' ಒಕ್ಕೂಟ 233 (ಕಾಂಗ್ರೆಸ್ 99) ಸ್ಥಾನ ಗಳಿಸಿವೆ.

ಇಲ್ಲ, ಈ ಅಂಕಿ ಅಂಶಗಳು ಭವಿಷ್ಯವಾಗಿರಲಿಲ್ಲ. ಬದಲಿಗೆ, 2019ರ ಲೋಕಸಭಾ ಚುನಾವಣೆಯ ನಂತರ ರಾಜ್ಯಗಳಲ್ಲಿ ನಡೆದಿದ್ದ ವಿಧಾನಸಭಾ ಚುನಾವಣಾ ಫಲಿತಾಂಶಗಳ ಆಧಾರದಲ್ಲಿ ಮಾಡಿದ 'ಅಂದಾಜು' ಆಗಿತ್ತು.

ಒಂದು ಲೋಕಸಭಾ ಕ್ಷೇತ್ರ ಹಲವು ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿರುವುದರಿಂದ, ರಾಜ್ಯಗಳಲ್ಲಿ ಇತ್ತೀಚೆಗೆ ನಡೆದಿರುವ ವಿಧಾನಸಭಾ ಚುನಾವಣೆಯಲ್ಲಿ ಪಕ್ಷಗಳು ಪಡೆದಿರುವ ಮತಗಳ ಆಧಾರದಲ್ಲಿ ಪ್ರತಿ ಲೋಕಸಭಾ ಕ್ಷೇತ್ರದಲ್ಲಿ ಮುನ್ನಡೆ ಸಾಧಿಸಬಹುದಾದ ಪಕ್ಷವನ್ನು (ಅಥವಾ ಮೈತ್ರಿಕೂಟ, ಈಗಿನ ಮೈತ್ರಿಗೆ ಹೊಂದಾಣಿಕೆ ಮಾಡಿ) ಮರುಲೆಕ್ಕಾಚಾರ ಮಾಡಿದ್ದೆವು. ಅಂದಾಜು ಮಾಡಲಾದ ಈ ಅಂಕಿ ಅಂಶಗಳನ್ನು ಏಳು ಹಂತಗಳಲ್ಲಿ ನಡೆದಿರುವ ಚುನಾವಣೆಯ ಸಂದರ್ಭದಲ್ಲಿ 'ದಿ ಪ್ರಿಂಟ್'ನಲ್ಲಿ ಪ್ರಕಟವಾದ ಏಳು ಲೇಖನಗಳ ಸರಣಿಯ ಪ್ರತಿಯೊಂದು ವರದಿಯಲ್ಲೂ ನಾವು ಉಲ್ಲೇಖಿಸಿದ್ದೆವು.

ಹಿಂದಿನ ವಿಧಾನಸಭಾ ಫಲಿತಾಂಶದ ಆಧಾರದಲ್ಲಿ ಲೋಕಸಭಾ ಚುನಾವಣಾ ಫಲಿತಾಂಶವನ್ನು ಅಂದಾಜಿಸಬಹುದು ಎಂದು ಹೇಳುವುದು ನಮ್ಮ ಉದ್ದೇಶ ಅಲ್ಲ. ಈ ಬಾರಿ ನಾವು ಹೇಳಿರುವ ಭವಿಷ್ಯ ನಿಜವಾಗಿರುವುದು ಕಾಕತಾಳೀಯ. ಆದರೆ, ಅಂದಾಜು ನಿಜವಾಗಿರುವುದು ಆಳವಾದ ವಿಚಾರವೊಂದರ ಕಡೆಗೆ ನಮ್ಮ ಗಮನವನ್ನು ಸೆಳೆಯುತ್ತದೆ. ಹಿಂದಿನ ಲೋಕಸಭಾ ಚುನಾವಣೆಗಳಿಗೆ ಹೋಲಿಸಿದರೆ, ರಾಜ್ಯ ಮಟ್ಟದ ಚುನಾವಣೆಗಳು ಈ ಸಲದ ಲೋಕಸಭಾ ಚುನಾವಣೆಯ ಫಲಿತಾಂಶ ಹೇಗಿರಬಹುದು ಎಂಬ ಬಗ್ಗೆ ಉತ್ತಮ ಹೊಳಹುಗಳನ್ನು ನೀಡಿದವು.

2019ರ ಫಲಿತಾಂಶವೇ ಪುನರಾವರ್ತನೆಯಾಗಲಿದೆ ಎಂಬ ನಿಲುವಿಗೆ ನೀವು ಅಂಟಿಕೊಳ್ಳದೆ, ಹಿಂದಿನ ವಿಧಾನಸಭಾ ಚುನಾವಣಾ ಫಲಿತಾಂಶಗಳನ್ನು ಪರಿಗಣನೆಗೆ ತೆಗೆದುಕೊಂಡಿದ್ದರೆ, ಬಿಜೆಪಿಯು ಈ ಬಾರಿ 60ರಷ್ಟು ಕಡಿಮೆ ಸ್ಥಾನಗಳನ್ನು ಪಡೆಯಲಿದೆ ಎಂಬುದನ್ನು ಅಂದಾಜಿಸಬಹುದಿತ್ತು. ಆದರೆ, ಇಡೀ ಚುನಾವಣಾ ವರದಿಗಾರಿಕೆ ಮತ್ತು ವಿಶ್ಲೇಷಣೆಗಳಲ್ಲಿ ಈ ವಾಸ್ತವಾಂಶವನ್ನು ನಿರ್ಲಕ್ಷಿಸಲಾಗಿತ್ತು.

ಚುನಾವಣೆಯಲ್ಲಿದ್ದ ಸ್ಪರ್ಧೆಯ ಸ್ವರೂಪ ಮತ್ತು ಫಲಿತಾಂಶ ಯಾವ ರೀತಿ ಬರಬಹುದು ಎಂಬುದನ್ನು ಅರ್ಥೈಸಿಕೊಳ್ಳಲು ಈ ವಿಶ್ಲೇಷಣೆ ನಮಗೆ ಹೇಗೆ ನೆರವಾಗುತ್ತಿತ್ತು ಎಂಬುದನ್ನು ಈ ಲೇಖನದ ಜೊತೆಗೆ ನೀಡಲಾಗಿರುವ ಕೋಷ್ಟಕದಲ್ಲಿರುವ ರಾಜ್ಯವಾರು ಚಿತ್ರಣವನ್ನು ಗಮನಿಸಬಹುದು.

ರಾಜ್ಯ	2019ರ ಲೋಕಸಭಾ ಚುನಾವಣೆಯ ಫಲಿತಾಂಶ			2019–2023ರವರೆಗೆ ವಿವಿಧ ರಾಜ್ಯಗಳ ವಿಧಾನಸಭಾ ಚುನಾವಣೆಗಳಲ್ಲಿ ಚಲಾವಣೆಯಾದ ಮತಗಳ ಆಧಾರದಲ್ಲಿ ಅಂದಾಜಿಸಿದ ಸ್ಥಾನಗಳು			2024ರ ಲೋಕಸಭಾ ಚುನಾವಣೆಯ ಫಲಿತಾಂಶ		
	ಎನ್‌ಡಿಎ	'ಇಂಡಿಯಾ' ಮೈತ್ರಿಕೂಟ	ಇತರೆ	ಎನ್‌ಡಿಎ	'ಇಂಡಿಯಾ' ಮೈತ್ರಿಕೂಟ	ಇತರೆ	ಎನ್‌ಡಿಎ	'ಇಂಡಿಯಾ' ಮೈತ್ರಿಕೂಟ	ಇತರೆ
ಪಶ್ಚಿಮ ಬಂಗಾಳ	18	24	0	10	32	0	12	30	0
ಬಿಹಾರ	39	1	0	30	10	0	30	9	1
ಕರ್ನಾಟಕ	27	1	0	18	10	0	19	9	0
ತಮಿಳುನಾಡು	0	38	1	0	35	4	0	39	0
ಕೇರಳ	0	20	0	0	20	0	1	19	0
ರಾಜಸ್ಥಾನ	24	1	0	10	15	0	14	11	0
ಉತ್ತರ ಪ್ರದೇಶ	64	6	10	61	19	0	36	43	1
ಹರಿಯಾಣ	10	0	0	8	2	0	5	5	0
ಗುಜರಾತ್	26	0	0	23	3	0	25	1	0
ಮಹಾರಾಷ್ಟ್ರ	38	9	1	37	11	0	17	30	1
ಜಾರ್ಖಂಡ್	12	2	0	12	2	0	9	5	0
ಪಂಜಾಬ್	2	9	2	0	13	0	0	10	3
ತೆಲಂಗಾಣ	4	3	10	0	9	8	8	8	1
ಆಂಧ್ರ ಪ್ರದೇಶ	3	0	22	10	0	15	21	0	4
ಒಡಿಶಾ	8	1	12	8	1	12	20	1	0
ಅಸ್ಸಾಂ	9	3	2	9	3	2	11	3	0
ಮಣಿಪುರ	2	0	0	2	0	0	0	2	0
ಮಧ್ಯ ಪ್ರದೇಶ	28	1	0	20	9	0	29	0	0
ಛತ್ತೀಸಗಢ	9	2	0	7	4	0	10	1	0
ದೆಹಲಿ	7	0	0	0	7	0	7	0	0
ಸಣ್ಣ ರಾಜ್ಯಗಳು	18	2	0	14	5	1	14	3	3
ಕೇಂದ್ರಾಡಳಿತ ಪ್ರದೇಶ	6	6	0	7	5	0	4	5	3
ಒಟ್ಟು	354	129	60	286	215	42	292	234	17

ಉದಾಹರಣೆಗೆ ಪಶ್ಚಿಮ ಬಂಗಾಳ ರಾಜ್ಯವನ್ನೇ ತೆಗೆದುಕೊಳ್ಳೋಣ. 2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅಲ್ಲಿ 18 ಸ್ಥಾನಗಳನ್ನು ಗೆದ್ದಿತ್ತು. ನಂತರ ನಡೆದ ವಿಧಾನಸಭಾ ಚುನಾವಣೆಯಲ್ಲಿ ಪಡೆದ ಮತಗಳನ್ನು ನೋಡಿದರೆ, ಈ ಚುನಾವಣೆಯಲ್ಲಿ ಅದು 10 ಲೋಕಸಭಾ ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಲಿದೆ ಎಂದು ನಿರೀಕ್ಷಿಸಬಹುದಿತ್ತು. ಹಾಗಾಗಿ, ಈ ಬಾರಿ ಬಿಜೆಪಿಯ ಸಾಧನೆ (12 ಸ್ಥಾನಗಳಲ್ಲಿ ಗೆಲುವು) ನಮ್ಮನ್ನು ಅಚ್ಚರಿಗೆ ಕೆಡವುತ್ತಿರಲಿಲ್ಲ. ಅದೇ ರೀತಿ, 2023ರ ರಾಜಸ್ಥಾನ ವಿಧಾನಸಭಾ ಚುನಾವಣೆಯಲ್ಲಿ ಆಗಿರುವ ಮತ ಹಂಚಿಕೆಯ ಅಧ್ಯಯನದ ಪ್ರಕಾರ, ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳು 15 ಸ್ಥಾನಗಳನ್ನು ಪಡೆಯಲಿವೆ ಎಂದು ಅಂದಾಜಿಸಬಹುದಿತ್ತು. ಆದರೆ, 11 ಸ್ಥಾನಗಳನ್ನು ಗಳಿಸಿವೆ. ಇದೇ ಲೆಕ್ಕಾಚಾರ ಬಿಹಾರ, ಕರ್ನಾಟಕ ಮತ್ತು ತಮಿಳುನಾಡಿಗೂ ಅನ್ವಯಿಸುತ್ತದೆ. ಉತ್ತರ ಪ್ರದೇಶ, ಹರಿಯಾಣ ಮತ್ತು ಗುಜರಾತ್‌ನಲ್ಲೂ ರಾಜ್ಯ ವಿಧಾನಸಭಾ ಚುನಾವಣೆಗಳು ಬದಲಾವಣೆಯ ದಿಕ್ಕು ಗುರುತಿಸಲು ಸಹಾಯ ಮಾಡಿವೆ.

ಆದರೆ, ಇದು ಎಲ್ಲ ರಾಜ್ಯಗಳಿಗೂ ಅನ್ವಯವಾಗುವುದಿಲ್ಲ. 2019, 2024ರಲ್ಲಿ ಆಂಧ್ರ ಪ್ರದೇಶ, ಒಡಿಶಾದಲ್ಲಿ ವಿಧಾನಸಭೆ ಮತ್ತು ಲೋಕಸಭಾ ಚುನಾವಣೆ ಒಟ್ಟಿಗೆ ನಡೆದಿದ್ದರಿಂದ ಎರಡೂ ರಾಜ್ಯಗಳಲ್ಲಿ ರಾಜಕೀಯ ಭೂಕಂಪನದ ಸೂಚನೆ ಸಿಕ್ಕಿರಲಿಲ್ಲ.

ಮಹಾರಾಷ್ಟ್ರ, ಜಾರ್ಖಂಡ್‌ನಂತಹ ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆಗಳ ನಂತರ ಮೈತ್ರಿಕೂಟಗಳಲ್ಲಿ ಪ್ರಮುಖ ಬದಲಾವಣೆಗಳಾಗಿದ್ದರಿಂದ ಈ ದತ್ತಾಂಶಗಳು ಹೆಚ್ಚು ಪ್ರಯೋಜನಕ್ಕೆ ಬಂದಿಲ್ಲ. ಕಳೆದ ವಿಧಾನಸಭಾ ಚುನಾವಣೆಗಳ ನಂತರ ನಾಟಕೀಯ ರಾಜಕೀಯ ಬೆಳವಣಿಗೆಗಳಿಗೆ ಸಾಕ್ಷಿಯಾದ ತೆಲಂಗಾಣ, ಮಣಿಪುರ ಮತ್ತು ಪಂಜಾಬ್ ರಾಜ್ಯಗಳ ವಿಚಾರದಲ್ಲೂ ಈ ಮಾದರಿ ಕೆಲಸ ಮಾಡಿಲ್ಲ. ಆದರೆ, ರಾಜ್ಯ ಮಟ್ಟದ ಚುನಾವಣಾ ರೀತಿಗಳಲ್ಲಿ ಆಗಿರುವ ಬದಲಾವಣೆಯ ವಾಸ್ತವತೆಯನ್ನು ಈ ಎಲ್ಲ ರಾಜ್ಯಗಳ ಲೋಕಸಭಾ ಚುನಾವಣಾ ಫಲಿತಾಂಶ ಸೂಚಿಸುತ್ತದೆ.

ಆದರೆ, ಮಧ್ಯಪ್ರದೇಶ, ಛತ್ತೀಸಗಢ, ದೆಹಲಿ, ಉತ್ತರಾಖಂಡ ಮತ್ತು ಹಿಮಾಚಲ ಪ್ರದೇಶಗಳಲ್ಲಿ ರಾಜ್ಯ ರಾಜಕಾರಣಕ್ಕೆ ಪ್ರಾಮುಖ್ಯ ಸಿಕ್ಕಿಲ್ಲ. ಈ ರಾಜ್ಯಗಳಲ್ಲಿ ಹಿಂದಿನ ವಿಧಾನಸಭಾ ಚುನಾವಣೆಗಳ ಮತ ಹಂಚಿಕೆಗೆ ಹೋಲಿಸಿದರೆ ಬಿಜೆಪಿ ಹೆಚ್ಚು ಸ್ಥಾನಗಳನ್ನು ಗಳಿಸಿದೆ.



ಸರಿದಾರಿಯತ್ತ ಪ್ರಜಾಪ್ರಭುತ್ವ

ಈ ಬಾರಿಯ ಲೋಕಸಭೆ ಚುನಾವಣಾ ಫಲಿತಾಂಶದ ಅಂಕಿ–ಅಂಶಗಳು ಭಾರತದ ರಾಜಕಾರಣದಲ್ಲಿ ಹೊಸ ಸಂಕಥನವೊಂದು ಉದಯಿಸಿದ್ದನ್ನು ಸೂಚಿಸುತ್ತಿದೆ. ಸುಮಾರು ಎರಡು ದಶಕಗಳ ಹಿಂದೆ, ನಮ್ಮಲ್ಲಿ ಒಬ್ಬರಾದ ಯೋಗೇಂದ್ರ ಯಾದವ್ ಅವರು ಪ್ರೊ. ಸುಹಾಸ್ ಪಲಶಿಕರ್ ಅವರೊಡಗೂಡಿ ಸರಣಿ ಲೇಖನಗಳನ್ನು ಬರೆದಿದ್ದರು. 1990ರ ದಶಕದಲ್ಲಿ ಭಾರತೀಯ ರಾಜಕಾರಣವು ಹೊಸ ಶಕೆಗೆ ಪ್ರವೇಶ ಪಡೆಯಿತು ಮತ್ತು ರಾಷ್ಟ್ರ ಮಟ್ಟದ ಚುನಾವಣೆಯ ಕೇಂದ್ರ ಬಿಂದು ರಾಜ್ಯ ರಾಜಕಾರಣವಾಗಿತ್ತು ಎಂಬುದನ್ನು ಆ ಲೇಖನಗಳು ಚರ್ಚಿಸಿದ್ದವು. ಆ ಸರಣಿ ಲೇಖನಗಳಲ್ಲಿ ಈ ಶಕೆಯನ್ನು ಮೂರನೇ ಚುನಾವಣಾ ವ್ಯವಸ್ಥೆ ಎಂದು ಕರೆಯಲಾಗಿತ್ತು.

1970 ಹಾಗೂ 1980ರ ದಶಕಗಳಲ್ಲಿ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಜನರು, ತಾವು ಪ್ರಧಾನಿಯನ್ನು ಆರಿಸುತ್ತಿದ್ದೇವೆಯೋ ಎನ್ನುವಂತೆ ಮತ ಚಲಾಯಿಸುತ್ತಿದ್ದರು. ಇದಕ್ಕೆ ವಿರುದ್ಧವಾಗಿ 1990ರಲ್ಲಿ ಹಾಗೂ 2000ರ ಹೊತ್ತಿಗೆ ಲೋಕಸಭಾ ಚುನಾವಣೆಯ ವೇಳೆ ತಮ್ಮ ರಾಜ್ಯದ ಮುಖ್ಯಮಂತ್ರಿಯನ್ನೇ ಆರಿಸುತ್ತಿದ್ದೇವೆಯೋ ಎನ್ನುವಂತೆ ಜನರು ಹಕ್ಕು ಚಲಾಯಿಸಲು ಆರಂಭಿಸಿದರು.

ನರೇಂದ್ರ ಮೋದಿ ಅವರು 2014ರಲ್ಲಿ ರಾಷ್ಟ್ರ ರಾಜಕಾರಣಕ್ಕೆ ಬಂದ ನಂತರ ಇವೆಲ್ಲವೂ ಬದಲಾದವು. ಲೋಕಸಭಾ ಚುನಾವಣೆಯಲ್ಲಿ ಮತ ಚಲಾಯಿಸಲು ರಾಷ್ಟ್ರ ರಾಜಕಾರಣವನ್ನೇ ಪರಿಗಣನೆಗೆ ತೆಗೆದುಕೊಳ್ಳಲಾಯಿತು. ರಾಷ್ಟ್ರ ರಾಜಕಾರಣವೇ ಕೆಲವು ವಿಧಾನಸಭಾ ಚುನಾವಣೆಯ ಪ್ರಮುಖ ವಿಚಾರವಾಯಿತು.

ಈ ಬಾರಿಯ ಲೋಕಸಭಾ ಚುನಾವಣೆಯು ಮತ್ತೊಂದು ಸಂಕಥನವನ್ನು ಹುಟ್ಟುಹಾಕಿದೆ. ರಾಜ್ಯ ರಾಜಕಾರಣವು ಲೋಕಸಭಾ ಚುನಾವಣೆಯ ಮತದಾನದ ವೇಳೆ ಹೆಚ್ಚು ಪ್ರಾಮುಖ್ಯ ಪಡೆಯಲಿಲ್ಲ ಎಂಬುದು ನಿಜ. ಆದರೆ, ರಾಷ್ಟ್ರೀಯ ಚುನಾವಣೆಯಲ್ಲಿ ಮತವನ್ನು ಯಾರಿಗೆ ಹಾಕಬೇಕು ಎಂದು ಜನರು ನಿರ್ಧರಿಸುವಲ್ಲಿ ರಾಜ್ಯ ರಾಜಕಾರಣದ ವಿಚಾರಗಳು ಖಂಡಿತಾ ಪ್ರಭಾವಿಸಿವೆ.

2019ರ ಲೋಕಸಭಾ ಚುನಾವಣೆಯ ವೇಳೆ ರಾಜ್ಯ ರಾಜಕಾರಣವು ಜನರನ್ನು ಹೆಚ್ಚೇನು ಪ್ರಭಾವಿಸಿರಲಿಲ್ಲ. ಆದರೆ, ಈ ಬಾರಿ ಈ ಬಗ್ಗೆ ಹೆಚ್ಚು ಗಮನ ಹರಿಸಿದ್ದಾರೆ. ಲೋಕನೀತಿ ಹಾಗೂ ಸಿಎಸ್‌ಡಿಎಸ್ ಸಂಸ್ಥೆಗಳು ನಡೆಸಿದ ಚುನಾವಣೋತ್ತರ ಸಮೀಕ್ಷೆಗಳು ಈ ಅಭಿಪ್ರಾಯವನ್ನು ಪುಷ್ಟೀಕರಿಸುತ್ತವೆ. ಸಮೀಕ್ಷೆಯ ವೇಳೆ ಈ ಸಂಸ್ಥೆಗಳು ಜನರ ಮುಂದೆ ಕೆಲವು ಪ್ರಶ್ನೆಗಳನ್ನು ಇರಿಸಿದ್ದವು; 'ಮತವನ್ನು ಯಾರಿಗೆ ಹಾಕಬೇಕು ಎಂದು ನಿರ್ಧರಿಸುವಾಗ, ಯಾವ ಸರ್ಕಾರದ (ರಾಜ್ಯ ಅಥವಾ ಕೇಂದ್ರ) ವಿಚಾರಗಳನ್ನು ಗಣನೆಗೆ ತೆಗೆದುಕೊಳ್ಳುತ್ತೀರಿ?' ಎಂದು ಕೇಳಿತ್ತು. ಶೇ 23ರಷ್ಟು ಜನರು ಕೇಂದ್ರ ಸರ್ಕಾರ ಎಂದು ಹೇಳಿದರೆ, ಶೇ 21ರಷ್ಟು ಜನರು ರಾಜ್ಯ ಸರ್ಕಾರ ಎಂದು ಹೇಳಿದ್ದರು. ಇದೇ ವೇಳೆ, ಶೇ 41ರಷ್ಟು ಜನರು ಕೇಂದ್ರ ಹಾಗೂ ರಾಜ್ಯ ಸರ್ಕಾರ ಎರಡನ್ನೂ ಗಣನೆಗೆ ತೆಗೆದುಕೊಳ್ಳುವುದಾಗಿ ಹೇಳಿದ್ದರು. ಇದೇ ಪ್ರಶ್ನೆಯನ್ನು 2019ರಲ್ಲಿ ಇದೇ ಸಂಸ್ಥೆಗಳು ಜನರ ಮುಂದಿರಿಸಿದಾಗ, ಶೇ 28ರಷ್ಟು ಜನರು ಕೇಂದ್ರ ಸರ್ಕಾರವನ್ನು ಹಾಗೂ ಶೇ 17ರಷ್ಟು ಜನರು ರಾಜ್ಯ ಸರ್ಕಾರವನ್ನು ಹೆಸರಿಸಿದ್ದರು.

ಭಾರತದಲ್ಲಿ ಕುಸಿಯುತ್ತಿರುವ ಪ್ರಜಾಪ್ರಭುತ್ವ ಭಾಗಶಃ ಸರಿದಾರಿಗೆ ಮರಳುತ್ತಿದೆ ಎನ್ನುವ ಚರ್ಚೆಯನ್ನು ಈ ಚುನಾವಣೆ ಹುಟ್ಟುಹಾಕಿದೆ. ಬಿಜೆಪಿ ಶೈಲಿಯ ರಾಜಕಾರಣದ ಬಗ್ಗೆ ಜನರಲ್ಲಿದ್ದ ಭ್ರಮೆ ಕಳಚಿರುವುದು ಇದಕ್ಕೆ ಕಾರಣ. ಈ ಚುನಾವಣೆಯಲ್ಲಿ ನಿತ್ಯದ ಬದುಕಿನ ವಿಚಾರಗಳು ಮುನ್ನೆಲೆಗೆ ಬಂದು, ರಾಷ್ಟ್ರೀಯತೆ ಎಂಬ ಭಾವಾತ್ಮಕವಾದ ಉತ್ತುಂಗದ ಸ್ಥಿತಿಯು ಹಿಂದೆ ಸರಿದಿದೆ. ರಾಜ್ಯ ರಾಜಕಾರಣವು ಮುನ್ನೆಲೆಗೆ ಮರಳುವ ಮೂಲಕ ಪ್ರಜಾಪ್ರಭುತ್ವದ ಮರುಸಮತೋಲನವು ಈ ಚುನಾವಣೆಯಲ್ಲಿ ಸಾಧ್ಯವಾಗಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡುತ್ತಿರುವ, ಇದೇ ವೇಳೆ ನಿತೀಶ್ ಅವರೊಂದಿಗೆ ಆರ್‌ಜೆಡಿ ಪಕ್ಷದ ತೇಜಸ್ವಿ ಯಾದವ್ ಅವರೂ ಇರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಲೋಕಸಭಾ ಚುನಾವಣಾ ಫಲಿತಾಂಶ ಪ್ರಕಟಗೊಂಡ ಜೂನ್ 4ರ ನಂತರದಿಂದ ಈ ವಿಡಿಯೊವನ್ನು ಹಂಚಿಕೊಳ್ಳಲಾಗುತ್ತಿದೆ. 'ಏನಾಯಿತು? ರಾಜಕೀಯದ ಪಟ್ಟುಗಳು ಇನ್ನೂ ಮುಗಿದಿಲ್ಲ. 'ಇಂಡಿಯಾ' ಮೈತ್ರಿಕೂಟ ಸರ್ಕಾರ ರಚಿಸಲಿದೆ' ಎಂಬ ಬರಹಗಳನ್ನು ಈ ವಿಡಿಯೊದೊಂದಿಗೆ ಪೋಸ್ಟ್ ಮಾಡಲಾಗುತ್ತಿದೆ. ಆದರೆ, ಇದು ಸುಳ್ಳು

ನಿತೀಶ್ ಕುಮಾರ್ ಅವರು ವಿರೋಧ ಪಕ್ಷಗಳನ್ನು ಒಗ್ಗೂಡಿಸಿ, ಬಿಜೆಪಿ ವಿರುದ್ಧ ಚುನಾವಣೆಯಲ್ಲಿ ಸ್ಪರ್ಧಿಸಬೇಕು ಎಂದು ಹೊರಟವರಲ್ಲಿ ಮೊದಲಿಗರು. ಹೀಗೆ ವಿರೋಧ ಪಕ್ಷಗಳ ಗುಂಪನ್ನು ರಚಿಸುವ ವೇಳೆ 2023ರ ಆಗಸ್ಟ್‌ನಲ್ಲಿ ನಿತೀಶ್ ಅವರು ಕಾಂಗ್ರೆಸ್ ನಾಯಕರನ್ನು ಭೇಟಿ ಮಾಡಿದ್ದರು. ನಂತರ, 2024ರ ಜನವರಿಯಲ್ಲಿ ನಿತೀಶ್ ಮತ್ತೊಮ್ಮೆ ಎನ್‌ಡಿಎ ಸೇರಿಕೊಂಡರು. ಆ ಬಳಿಕ ಅವರು ಕಾಂಗ್ರೆಸ್ ನಾಯಕರನ್ನು ಭೇಟಿ ಮಾಡಿಲ್ಲ. ಕಳೆದ ವರ್ಷದ ವಿಡಿಯೊವನ್ನು ಲೋಕಸಭಾ ಚುನಾವಣೆಯ ಫಲಿತಾಂಶದ ನಂತರದಲ್ಲಿ ಹಂಚಿಕೊಳ್ಳಲಾಗುತ್ತಿದೆ ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಮತ್ತೊಂದು ಅವಕಾಶ ಇಲ್ಲದ ಬದುಕು

ನುಡಿ ಬೆಳಗು

ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ಮದೀನಾ ನಗರದಲ್ಲಿ ನಾನು ಇವನನ್ನು ಕಂಡೆ. ಎರಡೂ ಕಾಲಿಲ್ಲದ ಇವನ ಬಳಿ ಸ್ವಯಂಚಾಲಿತ ಆಗಿ ತಿರುಗುವ ಗಾಲಿ ಕುರ್ಚಿಯಿತ್ತು. ಅದರ ಮೇಲೆ ಕೂತು ಇವನು ಭಿಕ್ಷೆ ಬೇಡುತ್ತಿದ್ದ. ಸಿಗರೇಟು ಸದಾ ಉರಿಯುತ್ತಿತ್ತು. ಕಣ್ಣು ನಿಗಿನಿಗಿ ಕೆಂಡ ಮಾಡಿಕೊಂಡು ಭಿಕ್ಷೆ ನೀಡುವ ಜನರನ್ನು ಕೆಕ್ಕರಿಸಿ ನೋಡುತ್ತಿದ್ದ. ಅವನ ಸಿಟ್ಟಿನ ಮುಖ ನನಗೆ ಅರ್ಥವೇ ಆಗಲಿಲ್ಲ. ನಾವು ನಿರ್ಗತಿಕನಿಂದ ಬಯಸುವ ಬೇಡುವ ಕಣ್ಣು, ಕುಗ್ಗಿಸಿಕೊಂಡ ದೇಹ, ದಯಾಮಯ ಮುಖದ ಚಹರೆ ಅವನಲ್ಲಿ ಕಾಣಲಿಲ್ಲ. ಹೀಗೆ ಎರಡು ಮೂರು ದಿನ ನೋಡುತ್ತಾ ಓಡಾಡಿದೆ.

ಒಂದು ದಿನ ಕುತೂಹಲಗೊಂಡು ಅವನನ್ನೇ ಕೆಲ ಹೊತ್ತು ನಿಂತು ನೋಡಿದ್ದಕ್ಕೆ ಗದರಿದ. ಕಫವ ಕ್ಯಾಕರಿಸಿ ನೆಲಕ್ಕೆ ತುಪ್ಪಿದ. ಅವನ ಆಕ್ರೋಶದ ವ್ಯಕ್ತಿತ್ವ ಕೊಂಚವೂ ಕಡಿಮೆಯಾಗಿರಲಿಲ್ಲ. ಎರಡು ರಿಯಾಲ್ ಅವನ ಜೋಳಿಗೆಗೆ ಹಾಕಿದೆ. ಬೇಗ ಮುಂದೆ ಹೋಗು ಎಂದು ಒರಟಾಗಿ, ತಾತ್ಸಾರದಿಂದ ಕೈ ತೋರಿದ. ಅವನ ಜೊತೆ ಮಾತಾಡುವುದು ಕೂಡ ಸಾಧ್ಯವಿರಲಿಲ್ಲ. ಆಗಾಗ ಆಗಸಕ್ಕೆ ಕೈ ಎತ್ತಿ, ಮೈ ಕೊಡವಿ, ನೋವಿನ ದನಿಯಲ್ಲಿ ಬೇಡಿಕೊಳ್ಳುತ್ತಿದ್ದ. ಎದುರಿನ ಭಿಕ್ಷಾ ಹರಿವಾಣದಲ್ಲಿ ನಾನಾ ದೇಶದ ನೋಟುಗಳು ಬಿದ್ದಿದ್ದವು. ಜುಬ್ಬದ ಕಿಸೆ ಕೂಡ ದುಡ್ಡಿನಿಂದ ತುಳುಕುತ್ತಿತ್ತು. ಅಕ್ಕಪಕ್ಕದ ಅಂಗಡಿಯವರು ಅವನ ಬಳಿ ಬಂದು ಚಿಲ್ಲರೆ ಸಂಗ್ರಹಿಸಿಕೊಂಡು ಹೋಗುತ್ತಿದ್ದರು.

ಭಿಕ್ಷೆ ಹಾಕುವ ಯಾವ ಜನರ ಬಗ್ಗೆಯೂ ಅವನಿಗೆ ಕನಿಷ್ಠ ಮಟ್ಟದ ಕೃತಜ್ಞತೆಯೂ ಇರಲಿಲ್ಲ. ಆತ ಸರ್ಕಾರದಿಂದ ಪರವಾನಗಿ ಪಡೆದ ಅಧಿಕೃತ ಭಿಕ್ಷುಕ ಎಂದು ಅಲ್ಲಿನ ಜನ ಹೇಳುತ್ತಿದ್ದರು. ಕೊರಳಲ್ಲಿ ಒಂದು ಗುರುತಿನ ಪತ್ರವೂ ನೇತಾಡುತ್ತಿತ್ತು. ಬಿಡಿಸದ ಒಗಟಾಗಿ, ಅಷ್ಟೇ ಅಚ್ಚರಿಯಾಗಿ ಕಾಡಿದ ಇವನ ಬಗ್ಗೆ ತಿಳಿಯುವ ಕುತೂಹಲ ಹೆಚ್ಚಾಗುತ್ತಲೇ ಹೋಯಿತು. ನಾನು ಮಾತಾಡಲು ನಿಂತ ಐದು ಸಲವೂ ಅವನು ಸಿಟ್ಟಿನ ಕಣ್ಣಿಂದ ತೊಲಗಾಚೆ ಎಂದು ಗದರಿಸುತ್ತಲೇ ಹೋದ.

ಪಕ್ಕದಲ್ಲೇ ಖರ್ಜೂರ ಮಾರುವ ಅಂಗಡಿ ಇತ್ತು. ಅವನ ಪರಿಚಯ ಗಿಟ್ಟಿಸಿಕೊಂಡೆ. ಆತ ಮ್ಯಾನ್ಮಾರ್ ದೇಶದವನು. ಅವನಲ್ಲಿ ಈತನ ಕಥೆ ಏನು ಎಂದು ಕೇಳಿದೆ. ಒಂದು ದಿನ ಇವನು ಕಳ್ಳತನ ಮಾಡಿ ಓಡುತ್ತಿದ್ದ. ಪೋಲೀಸರು ಬೆನ್ನುಹತ್ತಿ ಮಾಲು ಸಮೇತ ಇವನ ಹಿಡಿದರು. ಇಲ್ಲಿ ಕಳ್ಳತನ ಮಾಡುವುದು ಅಕ್ಷಮ್ಯ ಅಪರಾಧ ಎಂಬುದು ನಿಮಗೆ ಗೊತ್ತಲ್ಲ. ಶಿಕ್ಷೆಯ ರೂಪದಲ್ಲಿ ಇವನ ಎರಡೂ ಕಾಲು ಕತ್ತರಿಸಿದರು. ಭಿಕ್ಷೆ ಬೇಡುವುದು ಕೂಡ ಇಲ್ಲಿ ಅಪರಾಧ. ಆದರೆ ಇಂತಹ ಕೆಲವರಿಗೆ ಪಶ್ಚಾತ್ತಾಪ ಅನುಭವಿಸಲು, ಬೇರೆಯವರನ್ನು ನೋಡಿ ಪಾಠ ಕಲಿಯಲು ಮಾದರಿಯಾಗಿ ಸರ್ಕಾರ ಹೀಗೆ ನಿಲ್ಲಿಸುತ್ತದೆ ಎಂದ.

ಸ್ವಂತ ಕಾಲು ಬಳಸಿ ಓಡಾಡುವ ಜನರನ್ನು ಕಂಡರೆ ಅವನಿಗೆ ಉರಿ. ಜನರ ಕನಿಕರದ ದುಡ್ಡು ಬಂದು ಬೀಳುತ್ತಿದ್ದರೆ ಸಂಕಟ. ಹೆಚ್ಚು ಹಣ ಗಳಿಸಿ ಈಗ ಏನು ಉಪಯೋಗ. ಪರರ ಸೊತ್ತಿನ ಮೇಲಿನ ವ್ಯಾಮೋಹವೇ ಬತ್ತಿ ಹೋಗಿದೆ. ಮಾಡಿದ ತಪ್ಪಿಗೆ ಅಧಿಕ ಶಿಕ್ಷೆ ಸಿಕ್ಕಿದೆ. ಪಶ್ಚಾತ್ತಾಪ ದಿನವೂ ನಡೆಯುತ್ತಿದೆ. ಕಳೆದುಕೊಂಡ ಬದುಕು ಮತ್ತೆ ಮೊದಲಿನಂತಾಗದು. ತನ್ನ ದೇಶ, ತನ್ನೂರು, ತನ್ನ ಕುಟುಂಬದವರ ನೆನಪು ಕ್ಷಣಕ್ಷಣವೂ ಭಾದಿಸುತ್ತಿದೆ. ಒಂದು ಕ್ಷಣದ ದುರಾಸೆಯ ಆ ಒಂದು ತಪ್ಪು ಮಾಡಿರದಿದ್ದರೆ ಎಂಬ ವಾಕ್ಯ ಎಷ್ಟು ಸಲ ಅವನೊಳಗೆ ಸುರುಳಿಯಾಗಿ ಸುತ್ತುತ್ತಿರಬಹುದು. ಬದುಕು ಕೆಲವೊಮ್ಮೆ ತಿದ್ದಿಕೊಳ್ಳುವ ಅವಕಾಶವನ್ನೂ ಕೊಡುವುದಿಲ್ಲ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಜೂನ್ 12, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ಷಷ್ಠಿ ಗಂ. 19-17 ನಕ್ಷತ್ರ: ಮಘ ಗಂ. 26-12 ಯೋಗ: ಹರ್ಷಣ ಗಂ. 17-15 ಕರಣ: ಕೌಲವ ಗಂ. 06-18, ವೃಷಭ ಮಾಸದ ನೇ 29 ದಿನ, ಮಳೆನಕ್ಷತ್ರ: ಮೃಗಶಿರ 2.
ರಾಹುಕಾಲ: ಮಧ್ಯಾಹ್ನ 12-00 – 01-30
ಸೂರ್ಯೋದಯ: 06-07 ಸೂರ್ಯಾಸ್ತ: 06-54
ಮುಸ್ಲಿಂ ದಿನಾಂಕ: 05 ಜುಲ್‌ಹಿಜಾ
ದಿನ ವಿಶೇಷ: ವಿಂಧ್ಯ ವಾಸಿನಿ ಪೂಜೆ, ಅರಣ್ಯ ಷಷ್ಠಿ, ಅದೃಷ್ಟ ಸಂಖ್ಯೆ: 4, 11

ಮೇಷ: ಅಶುಭದ ಸಂಕೇತವೆಂದು ಕಂಡ ವಿಷಯಗಳ ಬಗ್ಗೆ ಹೆಚ್ಚಿನ ಯೋಚನೆಯ ಅಗತ್ಯವಿಲ್ಲ. ಎಲ್ಲರೊಂದಿಗೆ ಬೆರೆಯುವ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗಿಯಾಗುವ ಸಂದರ್ಭವೊಂದು ಬರಲಿದೆ.

ವೃಷಭ: ಮುಕ್ತ ಮಾತುಕತೆಯಿಂದ ಮನೋಭಿಲಾಷೆಯ ಸ್ಥಾನಮಾನ ದೊರೆಯುತ್ತದೆ. ತಿಳಿಯದೆ ಮಾಡಿದ ತಪ್ಪಿನಿಂದಾಗಿ ಅನುಭವಿಸುತ್ತಿರುವ ಕಷ್ಟಗಳಿಗೆ ಪರಿಹಾರವನ್ನು ಪ್ರಾಜ್ಞರಿಂದ ಪಡೆಯಿರಿ.

ಮಿಥುನ: ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಸ್ವೀಕರಿಸುವ ಉತ್ತಮ ಅವಕಾಶಗಳು ಎದುರಾಗಲಿವೆ. ಸಮಾಜದಲ್ಲಿ ಪ್ರತಿಷ್ಠೆ ಹೆಚ್ಚಲಿದೆ. ಸಾಂಸಾರಿಕ ಜವಾಬ್ದಾರಿಗಳು ಹೆಚ್ಚಲಿವೆ.

ಕರ್ಕಾಟಕ: ದಾನ-ಧರ್ಮ ಸ್ವಭಾವವನ್ನು ದುರುಪಯೋಗಪಡಿಸಿಕೊಳ್ಳದಂತೆ ಜಾಗ್ರತೆ ವಹಿಸಿ. ಮನೆಯ ಶುಭ ಸಮಾರಂಭಕ್ಕೆ ಹೋಗುವ ಸಲುವಾಗಿ ಕಿರು ಪ್ರಯಾಣ ಇರುವುದು. ದೇವರ ಅನುಗ್ರಹಕ್ಕೆ ಪ್ರಾರ್ಥನೆ ಇರಲಿ.

ಸಿಂಹ: ಸಮಸ್ಯೆಗಳನ್ನು ಸೌಹಾರ್ದಯುತವಾಗಿ ಮತ್ತು ನ್ಯಾಯ ಸಮ್ಮತವಾಗಿ ಬಗೆಹರಿಸಿಕೊಳ್ಳುವ ಪ್ರಯತ್ನ ಮಾಡಿ. ನಡೆದು ಹೋದ ದುರ್ಘಟನೆಗಳನ್ನು ಪದೇ ಪದೇ ನೆನಪಿಸಿಕೊಂಡು ದುಃಖ ಪಡುವುದು ಸರಿಯಲ್ಲ.

ಕನ್ಯಾ: ಹೊಸ ಒಪ್ಪಂದವನ್ನು ಒಪ್ಪಿಕೊಳ್ಳುವ ಮುನ್ನ ತುಸು ಯೋಚಿಸುವುದು ಉತ್ತಮ. ಅವಿವಾಹಿತರು ಬಾಳ ಸಂಗಾತಿಯನ್ನು ಪಡೆಯುವ ಸೂಚನೆಗಳು ಕಾಣಲಿವೆ.

ತುಲಾ: ಹಿರಿಯರ ಆಶೀರ್ವಾದ ಪಡೆದು ಕೆಲಸ ಕಾರ್ಯಗಳನ್ನು ಆರಂಭಿಸಿದಲ್ಲಿ ಜಯ ಸಿಗುತ್ತದೆ. ವಿದ್ಯಾರ್ಥಿ ಜೀವನವನ್ನು ಇಷ್ಟ ಪಡುವವರಿಗೆ ಹೆಚ್ಚಿನ ಅಧ್ಯಯನಕ್ಕೆ ಸಕಾಲವಾಗಿರುತ್ತದೆ.

ವೃಶ್ಚಿಕ: ಆರ್ಥಿಕ ಬಲ ಕಡಿಮೆ ಹೊಂದಿರುವ ನಿಮಗೆ ಮಹಾಗಣಪತಿಯ ಆರಾಧನೆ ಶುಭ ಉಂಟು ಮಾಡುತ್ತದೆ. ಮನೆಯಲ್ಲಿ ನಡೆಯುವ ಕಾರ್ಯಕ್ರಮಕ್ಕೆ ನಿರೀಕ್ಷೆಗಿಂತ ಹೆಚ್ಚು ಜನರು ಬರಲಿದ್ದಾರೆ.

ಧನು: ವಿನಾಕಾರಣ ಬೇರೆಯವರ ಮನಸ್ಸನ್ನು ನೋಯಿಸುವುದು ಸರಿಯಲ್ಲವೆಂದೂ ಗೊತ್ತಿದ್ದರೂ ಆ ತಪ್ಪು ನಡೆಯುವ ಸಾಧ್ಯತೆ ಇರುತ್ತದೆ. ನಿರೀಕ್ಷೆಗೆ ತಕ್ಕ ಪ್ರತಿಕ್ರಿಯೆಯಿಂದ ಮಾನಸಿಕ ನೆಮ್ಮದಿ.

ಮಕರ: ಹಲವು ಕಾರಣಗಳಿಗೆ ಸ್ನೇಹಿತರು ನಿಮ್ಮ ಮಾರ್ಗದರ್ಶನ, ಬೆಂಬಲ ಹಾಗೂ ಸಹಕಾರ ಅಪೇಕ್ಷಿಸಬಹುದು. ವಿವಾಹ ವಿಚಾರವಾಗಿ ಮುಂದುವರಿದ ಸಂಬಂಧಗಳು ವಿನಾಕಾರಣ ಮುರಿದು ಬೀಳುವಂತಾಗಬಹುದು.

ಕುಂಭ: ಸಾಕುಪ್ರಾಣಿಯ ತೀವ್ರ ಅನಾರೋಗ್ಯ ದುಃಖಕರವನ್ನಾಗಿ ಮಾಡಬಹುದು. ಸ್ನೇಹಿತರೊಡನೆ ಸುಂದರ ಸಂಜೆಯನ್ನು ಕಳೆಯುವ ಅವಕಾಶಗಳನ್ನು ತಪ್ಪಿಸಿಕೊಳ್ಳದಿರಿ.

ಮೀನ: ಸಾಧಿಸಲೇಬೇಕೆಂಬ ಛಲವಿರುವ ನಿಮಗೆ ಕಾರ್ಯಗಳೆಲ್ಲವೂ ಅರ್ಥದ ಹಾದಿಯನ್ನು ಮಾತ್ರ ನೋಡುವುದು. ಅನಿರೀಕ್ಷಿತ ಬಂಧುಗಳ ಆಗಮನವು ದಿನಚರಿಯನ್ನು ಅದಲು ಬದಲು ಮಾಡುತ್ತದೆ.

ಪದಬಂಧ 5709

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆ ಗ್ರಹಣ ಬಿಟ್ಟಾಗ ಮೂಸಿ ನೋಡುವಿಕೆ! (3)
2.ಸಮರಸದ ಭಾವ (4)
4.ಸಾರದೊಳಗೇ ಮೂರ್ತೀಭವಿಸುವುದು! (4)
6.ಸಂಗನ ಸಂಗಡವಿದ್ದಾಗ ನಡೆದ ಘಟನೆ! (3)
7.ನೆನಪಲ್ಲೇ ಇರುವ ಕಾರಣ! (2)
9.ಕನ್ನ ಹಾಕಿ ದೋಚಿರುವ ಚಿನ್ನ (3)
11.ಸೂರ್ಯ ಇಲ್ಲಿ ಮೂಡಿದ್ದಾನೆ (2)
13.ಕಾವಲಿದ್ದರೂ ಎರಡಾಗಿ ಸೀಳಿದುದು! (3)
14.ಮೋಸಗಾರಿಕೆಯನ್ನು ಹೀಗೂ ಹೇಳುವರು (4)
16.ಮನದಲ್ಲಿರುವ ವಂಶ (4)
17.ಗಲಬರಿಸುತ್ತಿರುವಾಗ ನಡೆದ ಗಲಾಟೆ (3)

ಮೇಲಿಂದ ಕೆಳಕ್ಕೆ
1.ಆತ್ಮ ಸಾಕ್ಷಾತ್ಕಾರಕ್ಕಾಗಿ ಮಾಡುವ ಪ್ರಯತ್ನ (5)
2.ಶಾರೀರಿಕ ವ್ಯಾಯಾಮ (2)
3.ನೆತ್ತರು ಪ್ರವಹಿಸುವಿಕೆ (5)
5.ರಥದಲ್ಲಿ ಕುಳಿತು ಯುದ್ಧ ಮಾಡುವವನು (3)
8.ಈ ಪರಿ ಆಗಿರುವ ಬದಲಾವಣೆ! (5)
10.ಕೈಯಲ್ಲಿ ಹಿಡಿದಿರುವ ಚಿಪ್ಪು (3)
12.ರಾಜ್ಯದ ಚುನಾಯಿತ ಶಾಸಕರ ಮಂಡಲಿ (5)
15.ಮಾತಿಲ್ಲದ ನೀರವತೆ (2)



5708ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉಪವಾಸ 3.ಅವಸಾನ
5.ಗಡುಸು 6.ರಿಪು
7.ಒಣಹರಟೆ 10.ಮಾಸ
12.ನೆನಪು 14.ನತದೃಷ್ಟ
15.ವರ್ಧಮಾನ

ಮೇಲಿಂದ ಕೆಳಕ್ಕೆ:
1.ಉಸಾಬರಿ 2.ಸಮೀಕರಣ
3.ಅಡಿ 4.ನವಸುಮ
5.ಗಲಾಟೆ 7.ಒನಪು
8.ರಜತೋತ್ಸವ
9.ಮನೆತನ 11.ಸಮಾಧಾನ
13.ಇಷ್ಟ

ಸುಡೊಕು 6094

			5		6			7
	9			4			8	6
7		4	9			5		3
	1				5			
		7		9				5
5	2		6		3			
8		1		5			6	
			1		4	8		9
4		9		6			5	1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6093 ಸುಡೊಕು

3	7	6	8	4	2	5	1	9
5	1	8	6	3	9	7	4	2
2	9	4	5	7	1	3	6	8
7	8	9	1	2	6	4	5	3
1	2	3	4	9	5	6	8	7
6	4	5	7	8	3	9	2	1
8	3	7	2	6	4	1	9	5
4	5	2	9	1	7	8	3	6
9	6	1	3	5	8	2	7	4

ಸುಧಾ, ಮಯೂರ ಓದಿರಿ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

In Loving Remembrance
Hosadu Stany Dias
Born: 01-06-1950 - Died 12-06-2004
We miss you
every moment of our lives.
Your memories can never
fade away from our heart.
Super Dad, Loving Husband and a Wonderful Human Being.
- Rest in Peace
Deeply Mourned by: Wife, Children & Family

ಷೇರುಪೇಟೆ ವಹಿವಾಟು 33



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	23,259
ಇಂದಿನ ಅಂತ್ಯ	23,264
▲	5
ದಿನದ ಗರಿಷ್ಠ	23,389

ವಿನಿಮಯ ದರ

$ ಡಾಲರ್	83.59
£ ಪೌಂಡ್	106.40
€ ಯುರೊ	89.83
¥ ಯೆನ್ (100ಕ್ಕೆ)	53

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹590
12 ಕ್ಕೆ	₹75
ಮೈಸೂರು	
100ಕ್ಕೆ	₹595

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1490 (1480)
ಸೋಯಾ (ರಿಫೈನ್ಡ್)	₹970 (960)
ಸೂರ್ಯಕಾಂತಿ (ರಿಫೈನ್ಡ್)	₹970 (970)
ಪಾಮೋಲಿನ್	₹915 (915)

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹8500-8930
ದಾವಣಗೆರೆ	₹6700-6700
ಮಳವಳ್ಳಿ	₹9150-9150
ತಿಪಟೂರು	₹8700-9500
ಸುಳ್ಯ	₹8600-8900

ಮಾರುಕಟ್ಟೆ ಧಾರಣೆ (₹ಗಳಲ್ಲಿ)

ಏಲಕ್ಕಿ ಧಾರಣೆ ಸಕಲೇಶಪುರ	
ಕೂಳೆ	1300-1400
ನಡುಗೋಲು	1550-1600
ರಾಶಿ	1700-1800
ರಾಶಿ ಉತ್ತಮ	1800-1900
ಹೆರಕಿದ್ದು	2100-2300
ಹಸಿರು ಸಾಧಾರಣ	2000-2050
ಹಸಿರು ಉತ್ತಮ	2300-2400
ಹಸಿರು ಅತಿ ಉತ್ತಮ	2600-2700
ಕಾಳು ಮೆಣಸು	670
ಅಡಿಕೆ ಬಂಟ್ವಾಳ	
ಕೋಕ	18000-28500
ಹೊಸತು	28500-38000
ಹಳತು	38000-46500
ಶಿವಮೊಗ್ಗ	
ಬೆಟ್ಟೆ	44524-55589
ಗೊರಬಲು	18800-38669
ರಾಶಿ	32199-53399
ಸರಕು	42159-85809
ಸಿದ್ದಾಪುರ	
ಬಿಳಿಗೋಟು	26619-29189
ಚಾಲಿ	33999-36399
ಕೋಕ	25469-29899
ಕೆಂಪುಗೋಟು	26300-31900
ರಾಶಿ	43099-49399
ತಟ್ಟಿಬೆಟ್ಟೆ	35880-46699
ಶಿರಸಿ	
ಬೆಟ್ಟೆ	33099-47409
ಬಿಳಿಗೋಟು	23009-31694
ಚಾಲಿ	33039-37581
ಕೆಂಪುಗೋಟು	21099-28699
ರಾಶಿ	44099-49399

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15,400	15,200	-	221.40
ಎಸಿ	9,100	320 on OT	-	
ಆರ್‌ಪಿ	16,500	16,000	-	ಲಂಡನ್
ಆರ್‌ಸಿ	9,750	380 on OT	-	4,236 ಡಾಲರ್ಸ್

ಎಸ್‌ಬಿಐನಿಂದ ಡಿಜಿಟಲ್ ಬ್ಯುಸಿನೆಸ್ ಸಾಲ ಯೋಜನೆ ಪ್ರಕಟ

ಎಸ್‌ಎಂಇಗಳಿಗೆ ತ್ವರಿತ ಸಾಲ

ಮುಂಬೈ (ಪಿಟಿಐ): ಸರ್ಕಾರಿ ಸ್ವಾಮ್ಯದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾವು (ಎಸ್‌ಬಿಐ) ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳಿಗೆ ಅರ್ಜಿ ಸಲ್ಲಿಸಿದ 45 ನಿಮಿಷದೊಳಗೆ ಸಾಲ ಮಂಜೂರಾತಿ ನೀಡಲು 'ಎಸ್‌ಎಂಇ ಡಿಜಿಟಲ್ ಬ್ಯುಸಿನೆಸ್ ಸಾಲ' ಯೋಜನೆಯನ್ನು ಮಂಗಳವಾರ ಜಾರಿಗೊಳಿಸಿದೆ.

ಮುಂದಿನ ಐದು ವರ್ಷಗಳ ಅವಧಿಯಲ್ಲಿ ಬ್ಯಾಂಕ್‌ನ ಬೆಳವಣಿಗೆ ಮತ್ತು ಲಾಭದಾಯಕತೆ ದೃಷ್ಟಿಯಲ್ಲಿ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳಿಗೆ (ಎಂಎಸ್‌ಎಂಇ) ಸಣ್ಣ ವ್ಯಾಪಾರ ಸಾಲ ನೀಡುವುದು ಪ್ರಧಾನ ಆದ್ಯತೆಯಾಗಿದೆ ಎಂದು ಎಸ್‌ಬಿಐ ತಿಳಿಸಿದೆ.

2023–24ನೇ ಆರ್ಥಿಕ ವರ್ಷದ ಮಾರ್ಚ್ ಅಂತ್ಯಕ್ಕೆ ದೇಶದ ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳಿಗೆ ₹4.33 ಲಕ್ಷ ಕೋಟಿ ಸಾಲ ನೀಡಲಾಗಿದೆ. ಒಟ್ಟಾರೆ ಸಾಲ ನೀಡಿಕೆಯಲ್ಲಿ ಶೇ 20ರಷ್ಟು ಏರಿಕೆಯಾಗಿದೆ. 2019–20ನೇ ಆರ್ಥಿಕ ವರ್ಷದಲ್ಲಿ ಈ ವಲಯದ ವಸೂಲಾಗದ ಸಾಲದ ಸರಾಸರಿ ಪ್ರಮಾಣವು (ಜಿಎನ್‌ಪಿಎ) ಶೇ9.43ರಷ್ಟು ಇತ್ತು. ಸದ್ಯ ಶೇ3.75ಕ್ಕೆ ಕುಗ್ಗಿದೆ ಎಂದು ವಿವರಿಸಿದೆ.

'ಈ ಹೊಸ ಯೋಜನೆಯಡಿ ಎಂಎಸ್‌ಎಂಇಗಳಿಗೆ ಕ್ಷಿಪ್ರಗತಿಯಲ್ಲಿ ಸಾಲ ನೀಡಲಾಗುತ್ತದೆ. ಆ ಮೂಲಕ ಈ ವಲಯದ ಉದ್ದಿಮೆಗಳಿಗೆ ಸಾಲ ನೀಡಿಕೆಯಲ್ಲಿ ರಾಷ್ಟ್ರಮಟ್ಟದಲ್ಲಿ ಮುಂಚೂಣಿ ಸ್ಥಾನ ಕಾಯ್ದುಕೊಳ್ಳುವುದೇ ನಮ್ಮ ಗುರಿಯಾಗಿದೆ' ಎಂದು ಬ್ಯಾಂಕ್‌ನ ಅಧ್ಯಕ್ಷ ದಿನೇಶ್ ಖಾರಾ ಹೇಳಿದ್ದಾರೆ.

ಹಳೆಯ ವಿಧಾನದಲ್ಲಿ ಸಾಲ ಮಂಜೂರಾತಿ ಪ್ರಕ್ರಿಯೆ ಪೂರ್ಣಗೊಳಿಸಲು ದೀರ್ಘಾವಧಿ ಹಿಡಿಯುತ್ತಿತ್ತು. ಹೊಸ ವಿಧಾನದಲ್ಲಿ ಇದನ್ನು ಸರಳೀಕರಿಸಲಾಗಿದ್ದು, ತ್ವರಿತವಾಗಿ ಮಂಜೂರಾತಿ ದೊರೆಯಲಿದೆ ಎಂದು ಬ್ಯಾಂಕ್ ತಿಳಿಸಿದೆ. ಸಾಲ ಪಡೆಯಲು ಅರ್ಜಿ ಸಲ್ಲಿಸುವ ಉದ್ದಿಮೆಗಳ ಬಗ್ಗೆ ಆದಾಯ ತೆರಿಗೆ ಇಲಾಖೆ, ಸರಕು ಮತ್ತು ಸೇವಾ ತೆರಿಗೆ ಇಲಾಖೆಯಿಂದ ದತ್ತಾಂಶಗಳನ್ನು ಸಂಗ್ರಹಿಸಲಾಗುತ್ತದೆ.

₹50 ಲಕ್ಷದ ವರೆಗೆ ಸಾಲ ಪಡೆಯಲು ಅರ್ಜಿ ಸಲ್ಲಿಸುವ ಉದ್ದಿಮೆಗಳ ಹಣಕಾಸು ವರದಿಗಳು, ಅವುಗಳ ವ್ಯವಹಾರ ಮತ್ತು ಮೌಲ್ಯಮಾಪನ ವರ್ಷಗಳಿಗೆ ಸಂಬಂಧಿಸಿದಂತೆ ಜಿಎಸ್‌ಟಿ ರಿಟರ್ನ್ಸ್ ಸಲ್ಲಿಕೆ ಬಗ್ಗೆ ಪರಿಶೀಲಿಸಲಾಗುವುದು ಎಂದು ಎಸ್‌ಬಿಐ ತಿಳಿಸಿದೆ.

ಭಾರತದ ಆರ್ಥಿಕತೆ ವೇಗ ಅಬಾಧಿತ: ವಿಶ್ವ ಬ್ಯಾಂಕ್

ನವದೆಹಲಿ (ಪಿಟಿಐ): 'ಇಡೀ ವಿಶ್ವದಲ್ಲಿಯೇ ಭಾರತದ ಆರ್ಥಿಕತೆಯು ವೇಗವಾಗಿ ಬೆಳೆಯುತ್ತಿದೆ. 2024–25ನೇ ಆರ್ಥಿಕ ವರ್ಷ ಸೇರಿ ಮುಂದಿನ ಮೂರು ವರ್ಷಗಳಲ್ಲಿ ಜಿಡಿಪಿಯು ಶೇ 6.7ರಷ್ಟು ಪ್ರಗತಿ ದಾಖಲಿಸಿದೆ' ಎಂದು ವಿಶ್ವ ಬ್ಯಾಂಕ್ ಅಂದಾಜಿಸಿದೆ.

2023–24ನೇ ಆರ್ಥಿಕ ವರ್ಷದಲ್ಲಿ ಭಾರತದ ಜಿಡಿಪಿಯು ಶೇ 8.2ರಷ್ಟು ಪ್ರಗತಿ ಕಂಡಿದೆ. ಜನವರಿಯಲ್ಲಿ ಅಂದಾಜಿಸಿದ್ದಕ್ಕಿಂತಲೂ ಶೇ 1.9ರಷ್ಟು ಹೆಚ್ಚು ಬೆಳವಣಿಗೆ ದಾಖಲಿಸಿದೆ ಎಂದು ಮಂಗಳವಾರ ಬಿಡುಗಡೆಯಾಗಿರುವ ವಿಶ್ವ ಆರ್ಥಿಕತೆಯ ನಿರೀಕ್ಷೆ ಕುರಿತ ವರದಿ ತಿಳಿಸಿದೆ. 2024ರಲ್ಲಿ ಜಾಗತಿಕ ಆರ್ಥಿಕತೆಯು ಶೇ 2.6ರಷ್ಟು ಪ್ರಗತಿ ಕಾಣಲಿದೆ. 2025–26ನೇ ಆರ್ಥಿಕ ವರ್ಷದ ಅಂತ್ಯಕ್ಕೆ ಶೇ 2.7ರಷ್ಟು ಬೆಳವಣಿಗೆ ದಾಖಲಿಸಲಿದೆ. ಇದು ಕೋವಿಡ್ ಸಾಂಕ್ರಾಮಿಕಕ್ಕೂ ಮೊದಲಿನ ದಶಕದಲ್ಲಿ ದಾಖಲಾಗಿದ್ದ ಶೇ 3.1ರಷ್ಟಕ್ಕಿಂತಲೂ ಕಡಿಮೆ ಇದೆ ಎಂದು ತಿಳಿಸಿದೆ.

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹266-506
ದ್ವಿತಳಿ (ಬಿ.ವಿ)	₹302-645

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹197
ಆರ್‌ಎಸ್‌ಎಸ್-5	₹187
ಗುಡ್ ಲಾಟ್	₹177

(ಪ್ರತಿ ಕೆ.ಜಿಗೆ)

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹2800-3600
ಮಧ್ಯಮ	₹2000-2800
ಸಣ್ಣ	₹1000-2000

ಮುಂಬೈ ಧಾರಣೆ (ಶೇಂಗಾ)

11-6-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1500 (1490)
ಒಂದು ವಾರದ ಡೆಲಿವರಿ	1495 (1485)
ಸೋಯಾ ಕಚ್ಚಾ	920 (925)
ಪಾಮ್ ವಾರದ ಡೆಲಿವರಿ	913 (913)
ಸೂರ್ಯಕಾಂತಿ ಎಣ್ಣೆ ಕಚ್ಚಾ	917 (915)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹71,050 (70,850)
ಬೆಳ್ಳಿ ಕೆ.ಜಿ ₹87,650 (88,850)
ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಮಂಜುನಾಥ ಜೆ., ಚಿತ್ರದುರ್ಗ.

- **ಪ್ರಶ್ನೆ: ನಾನು ಸರ್ಕಾರಿ ನೌಕರ. ವಯಸ್ಸು 30 ವರ್ಷ. ಸೇವೆಗೆ ಸೇರಿ 4 ವರ್ಷವಾಗಿದೆ. ನಾನು ಮ್ಯೂಚುವಲ್ ಫಂಡ್‌ನಲ್ಲಿ ಪ್ರತಿ ತಿಂಗಳು ₹5,000ದ ವರೆಗೆ 15ರಿಂದ 20 ವರ್ಷಗಳ ಕಾಲ ಹೂಡಿಕೆ ಮಾಡುವ ಯೋಜನೆ ಇದೆ. ನನಗೆ ಉತ್ತಮ ಆದಾಯ ಸಿಗಬಹುದಾದ ಉಳಿತಾಯ ಯೋಜನೆಯ ಬಗ್ಗೆ ಸಲಹೆ ನೀಡಿ.**

ಉತ್ತರ: ನಿಮ್ಮ ಹೂಡಿಕೆಯ ವಿಚಾರಕ್ಕೆ ಸಂಬಂಧಪಟ್ಟು ಅನೇಕ ಅವಕಾಶಗಳಿವೆ. ಅಲ್ಲದೆ, ಹೂಡಿಕೆಯ ಅವಧಿ ದೀರ್ಘವಾದಂತೆ ಸಿಗುವ ಆದಾಯ ಅಥವಾ ಗಳಿಕೆ ಉತ್ತಮವಾಗುತ್ತದೆ. ನಿಮ್ಮ ಸೇವಾವಧಿಯಲ್ಲಿ ಇನ್ನೂ ಮುಂದಿನ 30 ವರ್ಷಗಳ ಕಾಲ ಸುದೀರ್ಘ ಹೂಡಿಕೆಗೆ ಅವಕಾಶ ಇದೆ. ನೀವು ಅಂದಾಜಿಸಿದಂತೆ 20 ವರ್ಷಗಳ ಕಾಲ ನಿರಂತರ ಹೂಡಿಕೆ ಮಾಡಿದಾಗ ನಿಮ್ಮ ಹೂಡಿಕೆಯ ಅಸಲು ಮೊತ್ತ ಸುಮಾರು ₹12 ಲಕ್ಷ ಆಗಿರುತ್ತದೆ. ಯಾವುದೇ ಆರ್ಥಿಕ ಅಪಾಯ ಇಲ್ಲದ ರೆಕರಿಂಗ್ ಡೆಪಾಸಿಟ್‌ನಲ್ಲಿ ಇದೇ ಮೊತ್ತವನ್ನು ಪ್ರತಿ ತಿಂಗಳೂ ಹೂಡಿಕೆ ಮಾಡಿದರೆ ಇಪ್ಪತ್ತು ವರ್ಷಗಳ ಕೊನೆಗೆ ಅಂದಾಜು ₹29 ಲಕ್ಷ ಸಿಗುತ್ತದೆ.

ಆದರೆ, ಇದೇ ಮೊತ್ತವನ್ನು ಈಕ್ವಿಟಿ ವಿಭಾಗದ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿದರೆ, ಷೇರು ಮಾರುಕಟ್ಟೆ ಏರಿಳಿತಕ್ಕೆ ಅನುಗುಣವಾಗಿ ಮೌಲ್ಯ ವರ್ಧಿಸುತ್ತದೆ. ಉದಾಹರಣೆಗೆ ಮುಂದಿನ 20 ವರ್ಷಗಳ ಹೂಡಿಕೆ ಅವಧಿಯಲ್ಲಿ ಪ್ರತಿವರ್ಷ ವಾರ್ಷಿಕವಾಗಿ ಸರಾಸರಿ ಶೇ 10, 15, 20, 25 ವೃದ್ಧಿಯಾದರೆ ನಿಮ್ಮ ₹12 ಲಕ್ಷದ ಹೂಡಿಕೆಯ ಅಂದಾಜು ಮೌಲ್ಯವು ಕ್ರಮವಾಗಿ ₹38 ಲಕ್ಷ, ₹75 ಲಕ್ಷ, ₹1.58 ಕೋಟಿ ಹಾಗೂ ₹3.43 ಕೋಟಿ ಆಗುತ್ತದೆ.

ಈಕ್ವಿಟಿ ಲಾರ್ಜ್ ಕ್ಯಾಪ್, ಈಕ್ವಿಟಿ ಬ್ಯಾಲನ್ಸ್ಡ್, ಈಕ್ವಿಟಿ ಫ್ಲೆಕ್ಸಿ ಕ್ಯಾಪ್, ಈಕ್ವಿಟಿ ಸೇವಿಂಗ್ಸ್ ಇತ್ಯಾದಿ ವಿಭಾಗದ ಫಂಡ್‌ಗಳನ್ನು ಆಯ್ಕೆ ಮಾಡಿ. ಇವುಗಳ ಆರ್ಥಿಕ ಅಪಾಯದ ಗುಣಾಂಶ ಒಂದರಿಂದ ಒಂದಕ್ಕೆ ವ್ಯತ್ಯಾಸ ಇರುತ್ತದೆ. ಅದಕ್ಕೆ ಅನುಗುಣವಾಗಿ ಸಿಗುವ ಲಾಭವೂ ವ್ಯತ್ಯಾಸವಾಗುತ್ತದೆ. ನೀವು ನಿಖರವಾದ ಫಂಡ್‌ಗಳ ಆಯ್ಕೆಗೆ ಪರಿಣತ ಫಂಡ್ ಸಲಹೆಗಾರರನ್ನು ಸಂಪರ್ಕಿಸಿ. ಇದಲ್ಲದೆ ಗೋಲ್ಡ್ ಫಂಡ್‌ಗಳಲ್ಲೂ ಹೂಡಿಕೆ ಮಾಡಬಹುದು. ಪ್ರತಿವರ್ಷ ಆದಾಯ ಹೆಚ್ಚಿದಂತೆ ಶೇ 10ರಂತೆ ನಿಮ್ಮ ಹೂಡಿಕೆ ಮೊತ್ತವನ್ನು ಹೆಚ್ಚಿಸಿ ಮತ್ತಷ್ಟು ಮೌಲ್ಯ ವೃದ್ಧಿಸಬಹುದು.

ನಿಮಗೆ ನಿರಂತರ ಹೂಡಿಕೆ ಮಾಡುವ ಯೋಜನೆ ಇದ್ದರೆ, ಷೇರುಪೇಟೆಯಲ್ಲೂ ಉತ್ತಮ ಕಂಪನಿಗಳ ಷೇರುಗಳಲ್ಲಿ ನಿಗದಿತ ಮೊತ್ತವನ್ನು ನಿರಂತರ ಹೂಡಿಕೆ ಮಾಡಬಹುದು. ಇಂತಹ ಷೇರುಗಳನ್ನು ಆಯ್ಕೆ ಮಾಡುವ ಮುನ್ನ ಉತ್ತಮ ಆಡಳಿತ, ಏರುತ್ತಿರುವ ವ್ಯವಹಾರ ಹಾಗೂ ಲಾಭ, ಮುಂದಿನ ವರ್ಷಗಳ ದೀರ್ಘ ಯೋಜನೆ ಇರುವ ಕಂಪನಿಗಳಿಗೆ ಪ್ರಾಶಸ್ತ್ಯ ಕೊಡಿ. ನಿಮ್ಮ ಆರ್ಥಿಕ ಚೌಕಟ್ಟು ಮೀರಿ ವ್ಯವಹರಿಸದಿರಿ ಮತ್ತು ದೀರ್ಘಕಾಲದ ಹೂಡಿಕೆ ಮೇಲೆ ಭರವಸೆ ಕಳೆದುಕೊಳ್ಳಬೇಡಿ.

ಸಿದ್ದರಾಮ ಇಕ್ಕಳಕಿ, ಕಲಬುರಗಿ.

- **ಪ್ರಶ್ನೆ: ಕಳೆದ ಒಂದು ವರ್ಷದಿಂದ ನಾನು ಮತ್ತು ನನ್ನ 20 ಗೆಳೆಯರು ಸೇರಿ ಒಂದು ಒಪ್ಪಂದದ ಅನ್ವಯ ಪ್ರತಿ ತಿಂಗಳು ಪ್ರತಿಯೊಬ್ಬರು ₹5,000 ಪಾವತಿಸಿ, ಒಟ್ಟಾಗಿ ₹1 ಲಕ್ಷ ಕೂಡಿಸಿಕೊಂಡು ತಿಂಗಳಿಗೊಮ್ಮೆ ಯಾರಿಗೆ ಅವಶ್ಯಕತೆ ಇರುತ್ತದೆಯೋ ಅವರಿಗೆ ಕೊಡುತ್ತಾ ಇದ್ದೇವೆ.**
ನಾವು ಎಲ್ಲ ಸ್ನೇಹಿತರು ಬೇರೆ ಬೇರೆ ಊರುಗಳಲ್ಲಿ ಇರುವುದರಿಂದ ಹಣದ ವಹಿವಾಟು ಯುಪಿಐ ಮೂಲಕ ಪ್ರತಿ ತಿಂಗಳು ನನ್ನ ವೈಯಕ್ತಿಕ ಬ್ಯಾಂಕ್ ಉಳಿತಾಯ ಖಾತೆಗೆ ಜಮಾ ಮಾಡಿ ಹಾಗೆ ಅದೇ ಖಾತೆಯಿಂದ ಯುಪಿಐ ಮೂಲಕ ಅವಶ್ಯಕತೆ ಇರುವ ಸ್ನೇಹಿತರಿಗೆ ವರ್ಗಾಯಿಸುತ್ತಿದ್ದೇನೆ. ಈ ಕಾರಣ ನನ್ನ ಖಾತೆಯಲ್ಲಿ ಪ್ರತಿ ತಿಂಗಳು ₹2 ಲಕ್ಷ ಯುಪಿಐ ಮೂಲಕ ವ್ಯವಹಾರ ನಡೆಯುತ್ತಿದೆ. ಇದರಿಂದ ನನಗೆ ಮುಂದೆ ತೆರಿಗೆ ಇಲಾಖೆಯಿಂದ ಏನಾದರೂ ತೆರಿಗೆ ಸಂಬಂಧಿತ ಸಮಸ್ಯೆ ಬರಬಹುದಾ? ಪ್ರಸ್ತುತ ನಾನು ಯಾವುದೇ ಉದ್ಯೋಗ ಮಾಡುತ್ತಿಲ್ಲ.

ಉತ್ತರ: ನೀವು ನೀಡಿರುವ ಮಾಹಿತಿಯಂತೆ ನಿಮ್ಮ ಆರ್ಥಿಕ ವ್ಯವಹಾರ ಬಹುತೇಕ ಚಿಟ್ ಫಂಡ್ ವ್ಯವಹಾರದಂತೆ ಕಂಡು ಬರುತ್ತಿದೆ. ಇಂತಹ ವ್ಯವಹಾರವನ್ನು ಕಾನೂನಿನ ಅನ್ವಯ ನಿಯಂತ್ರಿಸಲಾಗುತ್ತದೆ. ಭಾರತದಲ್ಲಿ ಚಿಟ್ ಫಂಡ್ ನಿಯಮ ಜಾರಿಯಲ್ಲಿದ್ದು, ಇದಕ್ಕೆ ಸಂಬಂಧಿತ ಕಾಯ್ದೆಗಳನ್ನು ರಾಜ್ಯ ಸರ್ಕಾರಗಳು ರಿಜಿಸ್ಟ್ರಾರ್ ಅನ್ನು ನೇಮಿಸಿ ನಿಯಂತ್ರಿಸುತ್ತವೆ. ಈ ಸಂಬಂಧ ಅವರಿಂದ ಅಗತ್ಯವುಳ್ಳ ನೋಂದಣಿ ಪಡೆದು ಲೆಕ್ಕ ಪತ್ರಗಳನ್ನೂ ನಿಭಾಯಿಸಬೇಕಾಗುತ್ತದೆ. ಇದರ ಭಾಗವಾಗಿ ಸಂಸ್ಥೆಯ ಹೆಸರಲ್ಲಿ ಅಗತ್ಯ ದಾಖಲೆಗಳೊಡನೆ ಮಾನ್ಯತೆ ಪಡೆದ ಬ್ಯಾಂಕ್‌ಗಳ ಮೂಲಕ ವ್ಯವಹರಿಸುವುದು ಸೂಕ್ತ.

ಯಾವುದೇ ಸಂದರ್ಭದಲ್ಲಿ ಸಣ್ಣ ಮಟ್ಟದಲ್ಲಿ ಆರಂಭವಾಗುವ ಇಂತಹ ವ್ಯವಹಾರಗಳು ಮುಂದೆ ದೊಡ್ಡ ಮಟ್ಟಕ್ಕೆ ನಿಧಾನವಾಗಿ ವರ್ಧಿಸುತ್ತವೆ. ಆಗ ಸಮಸ್ಯೆ ಆರಂಭವಾಗುತ್ತದೆ. ಹೀಗಾಗಿ ಇಂತಹ ವ್ಯವಹಾರಗಳನ್ನು ಸಾರ್ವಜನಿಕರೊಂದಿಗೆ ಮಾಡುವಾಗ ವೈಯಕ್ತಿಕ ಬ್ಯಾಂಕ್ ಖಾತೆ ಬಳಸಿ ಮಾಡುವ ಬದಲು, ಅಧಿಕೃತ ಮಾನ್ಯತೆ ಪಡೆದು ನಿಮ್ಮ ಆಡಳಿತ ನಿಯಮದ ಭಾಗವಾಗಿ ಸಂಸ್ಥೆಯ ಹೆಸರಲ್ಲೇ ಖಾತೆ ತೆರೆದು ವ್ಯವಹರಿಸಿ. ಇದು ವ್ಯವಹಾರದಲ್ಲಿ ಹೆಚ್ಚಿನ ಪಾರದರ್ಶಕತೆ ಹಾಗೂ ವಿಶ್ವಾಸಾರ್ಹತೆಯನ್ನು ಗಳಿಸಿಕೊಡುತ್ತದೆ.

ಇನ್ನು ನಿಮ್ಮ ಆದಾಯ ತೆರಿಗೆಗೆ ಸಂಬಂಧಿಸಿದ ವಿಚಾರವಾಗಿ ಹೇಳುವುದಾದರೆ, ನೀವು ಪ್ರತಿ ತಿಂಗಳೂ ₹2 ಲಕ್ಷ ಮೊತ್ತ ಸಂಗ್ರಹಿಸುತ್ತಿದ್ದೀರಿ. ಇದು ವಾರ್ಷಿಕವಾಗಿ ₹24 ಲಕ್ಷ. ಕ್ರಮೇಣ ಈ ಮೊತ್ತವನ್ನು ನಿಮ್ಮ ಸಂಸ್ಥೆಯ ಹೆಸರಲ್ಲೇ ಬ್ಯಾಂಕ್ ಖಾತೆ ತೆರೆದು ವ್ಯವಹರಿಸಿ. ವೈಯಕ್ತಿಕ ವ್ಯವಹಾರವನ್ನು ಸಂಸ್ಥೆಯ ಆರ್ಥಿಕ ವ್ಯವಹಾರದೊಡನೆ ಬೆರೆಸುವುದು ನಿಮಗೂ- ಸಂಸ್ಥೆಗೂ ಸಮಸ್ಯೆಯಾಗಬಹುದು. ಹೀಗಾಗಿ ಮುಂದಿನ ದಿನಗಳಲ್ಲಿ ನಿಮಗೆ ಬಂದ ಮೊತ್ತವನ್ನು 'ನಿಮ್ಮ ಆದಾಯ' ಎಂದು ಯಾಕೆ ಪರಿಗಣಿಸಬಾರದು ಎಂದು ಆದಾಯ ತೆರಿಗೆ ಇಲಾಖೆ ಪ್ರಶ್ನಿಸಿದರೆ ಅದಕ್ಕೆ ಸಮರ್ಪಕ ಉತ್ತರ ನೀಡಲು ಸಾಕಷ್ಟು ಸಮಜಾಯಿಷಿ ನೀಡಬೇಕಾಗುತ್ತದೆ.

ಪ್ರಸ್ತುತ ನೀವು ಯಾವುದೇ ಉದ್ಯೋಗ ಹೊಂದಿರದಿದ್ದರೂ, ನಿಮ್ಮ ವೈಯಕ್ತಿಕ ಖಾತೆಯಲ್ಲಿ ವ್ಯವಹಾರವಾಗುತ್ತಿರುವ ಕಾರಣ ತೆರಿಗೆ ಇಲಾಖೆಯಿಂದ ನೋಟಿಸ್ ಬರದಿರುವ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001
ಇ–ಮೇಲ್:businessdesk@prajavani.co.in

ಕಿರು ಸಾಲ ನೀಡಿಕೆ ಶೇ 27ರಷ್ಟು ಹೆಚ್ಚಳ

ಮುಂಬೈ (ಪಿಟಿಐ): 2023–24ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಕಿರು ಹಣಕಾಸು ಸಂಸ್ಥೆಗಳಿಂದ ಕಿರು ಸಾಲ ನೀಡಿಕೆಯು ಶೇ 27ರಷ್ಟು ಏರಿಕೆಯಾಗಿದೆ ಎಂದು ಕ್ರೆಡಿಟ್ ಮಾಹಿತಿ ನೀಡುವ ಕಂಪನಿ ಕ್ರಿಫ್ ಹೈ ಮಾರ್ಕ್ ತಿಳಿಸಿದೆ.

ಕಳೆದ ಹಲವು ತ್ರೈಮಾಸಿಕಗಳಿಂದ ಸಾಲ ನೀಡಿಕೆಯು ಸ್ಥಿರವಾಗಿತ್ತು. ಮಾರ್ಚ್ ತ್ರೈಮಾಸಿಕದಲ್ಲಿ ಸಾಲದ ಬಾಕಿ ಪ್ರಮಾಣವು ಏರಿಕೆಯಾಗಿದೆ ಎಂದು ಮಂಗಳವಾರ ಬಿಡುಗಡೆಯಾಗಿರುವ ವರದಿ ತಿಳಿಸಿದೆ.

ಈ ತ್ರೈಮಾಸಿಕದಲ್ಲಿ ₹4.42 ಲಕ್ಷ ಕೋಟಿ ಸಾಲ ನೀಡಲಾಗಿದೆ. ಒಟ್ಟು ಸಾಲದ ಬಂಡವಾಳ ಪ್ರಮಾಣದಲ್ಲಿ ಶೇ 27ರಷ್ಟು ಏರಿಕೆಯಾಗಿದೆ. ಡಿಸೆಂಬರ್ ತ್ರೈಮಾಸಿಕದಲ್ಲಿ ಈ ಪ್ರಮಾಣವು ಶೇ 8.5ರಷ್ಟಿತ್ತು ಎಂದು ತಿಳಿಸಿದೆ.

ಒಟ್ಟಾರೆ ಸಾಲದಲ್ಲಿ 10 ರಾಜ್ಯಗಳ ಪಾಲು ಶೇ 83.5ರಷ್ಟಿದೆ. ಪಶ್ಚಿಮ ಬಂಗಾಳ, ಬಿಹಾರ, ಉತ್ತರ ಪ್ರದೇಶ ಈ ಪಟ್ಟಿಯಲ್ಲಿ ಮುಂಚೂಣಿಯಲ್ಲಿವೆ. 31 ದಿನಗಳಿಂದ 180 ದಿನಗಳನ್ನೂ ಮೀರಿ ಸಾಲಗಳ ಬಾಕಿ ಉಳಿಸಿಕೊಂಡ ಮೊತ್ತದ ಪ್ರಮಾಣವನ್ನು ಡಿಸೆಂಬರ್ ತ್ರೈಮಾಸಿಕದಲ್ಲಿ ಶೇ2ರಷ್ಟಿತ್ತು. ಮಾರ್ಚ್ ತ್ರೈಮಾಸಿಕದಲ್ಲಿ ಶೇ2.1ಕ್ಕೆ ಏರಿಕೆಯಾಗಿದೆ ಎಂದು ವಿವರಿಸಿದೆ.

ಹಣಕಾಸು ಸಂಸ್ಥೆಗಳಿಂದ ಸಾಲ ಮಂಜೂರಾತಿಗೆ ಅನುಮೋದನೆ ಹಾಗೂ ಸಾಲಗಾರರ ಖಾತೆಗಳಿಗೆ ಹಣ ವರ್ಗಾವಣೆ ಮಾಡಿರುವ ಸಾಲಗಳನ್ನು 'ಸಕ್ರಿಯ ಸಾಲ'ಗಳೆಂದು ಪರಿಗಣಿಸಲಾಗುತ್ತದೆ.

ಕರ್ನಾಟಕ ಮುಂಚೂಣಿ: ಸಕ್ರಿಯ ಸಾಲ ಪಡೆದಿರುವವರ ಪೈಕಿ ಅಪರಾಧ ಹಿನ್ನೆಲೆಯನ್ನು ಹೊಂದಿರುವವರ ಸಂಖ್ಯೆಯೂ ಹೆಚ್ಚಿದೆ. ಅಲ್ಲದೆ, ಶೇ 12ರಷ್ಟು ಮಂದಿ ನಾಲ್ಕು ಅಥವಾ ಅದಕ್ಕಿಂತಲೂ ಹೆಚ್ಚು ಸಕ್ರಿಯ ಸಾಲಗಳನ್ನು ಪಡೆದಿದ್ದಾರೆ. ಗರಿಷ್ಠ ಸಕ್ರಿಯ ಸಾಲಗಳನ್ನು ಹೊಂದಿ ರುವ ರಾಜ್ಯಗಳ ಪೈಕಿ ಕರ್ನಾಟಕ ಮುಂಚೂಣಿಯಲ್ಲಿದೆ ಎಂದು ವರದಿ ತಿಳಿಸಿದೆ.

ಕಿರು ಹಣಕಾಸು ಸಂಸ್ಥೆಗಳಿಂದ ಪಡೆಯುವ ಸಾಲಗಳ ಪೈಕಿ ಚಿನ್ನದ ಸಾಲವು ಜನರ ಪ್ರಧಾನ ಆಯ್ಕೆಯಾಗಿದೆ. ಒಟ್ಟು ₹35,679 ಕೋಟಿ ಸಾಲ ನೀಡಲಾಗಿದ್ದು, 41.2 ಲಕ್ಷ ಸಕ್ರಿಯ ಸಾಲಗಳಿವೆ.

ತಂತ್ರಜ್ಞಾನ, ಡಿಜಿಟಲ್ ವ್ಯವಸ್ಥೆಗೆ ಉತ್ತೇಜನ: ಅಶ್ವಿನಿ ವೈಷ್ಣವ್

ನವದೆಹಲಿ (ಪಿಟಿಐ): 'ಸೆಮಿಕಂಡಕ್ಟರ್ ಮತ್ತು ಎಲೆಕ್ಟ್ರಾನಿಕ್ಸ್ ಉಪಕರಣಗಳ ತಯಾರಿಕೆಯಲ್ಲಿ ಭಾರತವು ಮುಂಚೂಣಿ ಸ್ಥಾನಕ್ಕೇರಲು ಅಗತ್ಯವಿರುವ ಎಲ್ಲಾ ಕ್ರಮ ಕೈಗೊಳ್ಳಲು ಸರ್ಕಾರ ಬದ್ಧವಿದೆ' ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ಸಚಿವರಾಗಿ ಮಂಗಳವಾರ ಅಧಿಕಾರ ವಹಿಸಿಕೊಂಡ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ತಂತ್ರಜ್ಞಾನ ಮತ್ತು ಡಿಜಿಟಲ್ ವ್ಯವಸ್ಥೆಗೆ ಉತ್ತೇಜನ ನೀಡುವ ಮೂಲಕ ಜನರ ಜೀವನಮಟ್ಟದ ಸುಧಾರಣೆಗೆ ಅನುಕೂಲಕರ ವಾತಾವರಣ ಕಲ್ಪಿಸಲಾಗುವುದು' ಎಂದರು.

'ಕೃತಕ ಬುದ್ಧಿಮತ್ತೆ ತಂತ್ರಜ್ಞಾನ, ರೋಬೊಟಿಕ್ಸ್, ವರ್ಚುವಲ್ ರಿಯಾಲಿಟಿ ತಂತ್ರಜ್ಞಾನಕ್ಕೆ ಒತ್ತು ನೀಡುವ ಮೂಲಕ ಯುವಜನರ ಸಬಲೀಕರಣಕ್ಕೆ ಆದ್ಯತೆ ನೀಡಲಾಗುವುದು' ಎಂದು ತಿಳಿಸಿದರು.

ಬೆಳ್ಳಿ ದರ ₹1,400 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ ಚಿನ್ನದ ಬೆಲೆ ಏರಿಕೆಯಾಗಿದ್ದರೆ, ಬೆಳ್ಳಿ ಧಾರಣೆ ಇಳಿಕೆ ಕಂಡಿದೆ.

ಬೆಳ್ಳಿ ದರವು ಕೆ.ಜಿಗೆ ₹1,400 ಕಡಿಮೆಯಾಗಿ, ₹90,700 ಆಗಿದೆ. ಚಿನ್ನದ ದರವು 10 ಗ್ರಾಂಗೆ ₹150 ಹೆಚ್ಚಳವಾಗಿ ₹71,950ಕ್ಕೆ ಮಾರಾಟವಾಗಿದೆ. 'ಅಮೆರಿಕದ ಬಾಂಡ್ ಗಳಿಕೆಯಲ್ಲಿ ಇಳಿಕೆಯಾಗಿದೆ. ಡಾಲರ್ ಮೌಲ್ಯ ಕುಸಿತಗೊಂಡಿದೆ. ಹಾಗಾಗಿ, ಚಿನ್ನದ ದರದಲ್ಲಿ ಏರಿಕೆಯಾಗಿದೆ' ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಒಂದು ಔನ್ಸ್‌ಗೆ (28.34 ಗ್ರಾಂ) ಕ್ರಮವಾಗಿ 2,303 ಡಾಲರ್ (ಅಂದಾಜು ₹1.92 ಲಕ್ಷ) ಮತ್ತು 29.20 ಡಾಲರ್‌ನಂತೆ (ಅಂದಾಜು ₹2,441) ಮಾರಾಟ ಆಗಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Multiple Vacancy

VACANCY
Shri Lakshmi Steel Suppliers
One of the Leading Steel Companies in Karnataka is Looking for Sales Executives, Sales Managers, Billing Executives, Sales Co-ordinators (Female), Senior Accountants, Machine Operators and Production Managers.
Location: Bengaluru, Mangalore, Mysore, Hubli, Hospet
Contact Mr. Rajganesh 9480834473 or Mr. Nakul 9606397653 or Email:ganesh.c@slgroup.in

Drivers

ಕವಿ ಲಾಜಿಸ್ಟಿಕ್ಸ್: ಬೆಂಗಳೂರು ಲೋಕಲ್ ನಲ್ಲಿ ಚಲಾಯಿಸಲು ಡ್ರೈವರ್ಸ್ ಬೇಕಾಗಿದ್ದಾರೆ, ಹೆವಿ ಡ್ರೈವಿಂಗ್ ಲೈಸೆನ್ಸ್ ನೊಂದಿಗೆ (Minimum 5 Years Experience) ನಂ.4/1, 2ನೇ ಮುಖ್ಯ ರಸ್ತೆ, ಶ್ರೀರಾಂಪುರಂ, ಬೆಂಗಳೂರು: 9738421001/ 9886683188/ 8073697775

ಚಾಲಕ ಅಗತ್ಯವಿದೆ! ಬೆಂಗಳೂರಿನಲ್ಲಿ ಎವರೆಸ್ಟ್ ಫ್ಲೀಟ್ CNG ಕಾರ್ ಅನ್ನು ಓಡಿಸಿ ಮತ್ತು ತಿಂಗಳಿಗೆ ₹35,000* ಸಂಪಾದಿಸಿ!! +91 9493275000ಗೆ ಕರೆ ಮಾಡಿ

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ,TVSಗಳಿಗೆ, ಆಫೀಸ್‌ಗಳಿಗೆ, SSLC, PUC,Degree, ITIನವರುಗಳು. 18,100- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ ಊಟವಸತಿಯಿದೆ. 13,000/- - 17,000/-, 8951315839, 9141634619

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663542555, 9663563555

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಅಣಬೆ ತರಬೇತಿ ಪಡೆದು ಮನೆಯಿಂದಲೇ ಅಣಬೆ ಬೆಳಸಿ ತಿಂಗಳಿಗೆ 30,000ಕ್ಕೂ ಹೆಚ್ಚು ಸಂಪಾದಿಸಿ ತರಬೇತಿಗಾಗಿ ಬೆಂಗಳೂರು 8095555516 ಶಿವ್ಮೊಗ 8095555517

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

TRAVEL CORNER ಕ್ಲಾಸಿಫೈಡ್ಸ್

Teachers/ Professors

TEACHERS WANTED Round Table Kannada High School Roopena Agrahara, Bangalore-68 BSC Bed (PCM & CBZ) BA Bed (English & Spoken) Contact: 9035137768

Wanted

ವರ್ಕ್ ಫ್ರಮ್ ಹೋಮ್, ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ. 15,000–43,500/–. ವಯೋಮಿತಿ ಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526

ಭವಿಷ್ಯ

Astrology

★ಸ್ತ್ರೀವಶೀಕರಣ ಸ್ಪೆಷಲಿಸ್ಟ್★ ಕೇರಳ ಅಘೋರಿ ನಾಗಸಾಧು, ಕಾಳಿಕಾದೇವಿ ದಿವ್ಯಶಕ್ತಿಯಿಂದ ನಿಮ್ಮಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ. ಇದು`ನಿಜ ನಂಬಿ`ಕರೆಮಾಡಿ. ಪಂಡಿತ್.ಜೈದೇವ್‌ಭಟ್. 9901724082

★||ಸ್ತ್ರೀಪುರುಷ ವಶೀಕರಣ||★ ನಿಮ್ಮ ಯಾವುದೇ ಕಠಿಣ ಗುಪ್ತ ಸಮಸ್ಯೆಗಳಿಗೆ, ಇಷ್ಟಪಟ್ಟವರು ನಿಮ್ಮಂತೆ ಆಗಲು, 1ದಿನದಲ್ಲಿ ಪರಿಹಾರ ಶತಸಿದ್ಧ. 9611968471

★ಗುರು.ಶ್ರೀದೇವಾನಂದ★ ರವರಿಂದ ಕುಟುಂಬ ಮತ್ತು ದಾಂಪತ್ಯ ಕಲಹ ದುರ್ನಡತೆ,ದುಷ್ಟ ರೋಗ,ಸಾಲ, ಶತ್ರು,ಬಂಜೆತನ.ಲೈಂಗಿಕತೆ ಇನ್ನಿತರ ನಿಮ್ಮ ಯಾವುದೇ ಸ್ತ್ರೀಪುರುಷ ಸರ್ವಮನಇಚ್ಛಾ ವಶೀಕರಣ ಮಾಡಿಕೊಳ್ಳಿ.ಕೇಶರಾಶಿಗೆ ಕೇರಳ ತೈಲ ಲಭ್ಯ:9845005009

ಪ್ರವಾಸ

Travel

8 ದಿನಗಳ ಮುಕ್ತಿನಾಥ ನೇಪಾಳ ವಿಶೇಷ. 7/11 ದಿನಗಳು ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್. 11 ದಿನಗಳ ವಿಯೆಟ್ನಾಂ ಮತ್ತು ಕಾಂಬೋಡಿಯ. 6 ದಿನಗಳ ಬಾಲಿ. 13 ದಿನಗಳ ಚಾರ್‌ಧಾಮ್. 9/5 ದಿನಗಳ ಕಾಶಿ,ಅಯೋಧ್ಯ,ಗಯಾ. 6 ದಿನಗಳ ಶ್ರೀಲಂಕಾ. ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. 9900080793 9900080792

27/6/24 ರಾಜಸ್ಥಾನ: ಜೈಪುರ, ಜೈಸಲ್ಮೇರ್, ಮೌಂಟ್ ಅಬು ಇತರೆ 23/7/24 ಜಾರ್ಖಂಡ್ ವೈದ್ಯನಾಥ, ಕಾಶಿ, ಅಯೋಧ್ಯೆ 22/8/2024 ಗುಜರಾತ್: ಪಟೇಲ್ ಪ್ರತಿಮೆ, ದ್ವಾರಕಾ, ಸೋಮನಾಥ, ನಾಗೇಶ್ವರ. ಮಲ್ಲಿಕಾರ್ಜುನ ಪ್ಯಾಕೇಜ್ ತುಮಕೂರು: 8496044942

ಗುಜರಾತ್ ಪ್ರವಾಸ 18/7/24 ನೇಪಾಳ ಮುಕ್ತಿನಾಥ ಪ್ರವಾಸ 24/7/24 ಕಾಶಿ ಅಯೋಧ್ಯ ಪ್ರವಾಸ 23/7/24 ಶಿರಡಿ ಪ್ರವಾಸ 12/7/24 ಸುವರ್ಣಯಾತ್ರ 8660233673 9019462508

ವಿಮಾನ ಮತ್ತು ಏ.ಸಿ.ಬಸ್ಸಿನಲ್ಲಿ 12ದಿನಗಳ:ಅಮರನಾಥ್ ಕಾಶ್ಮೀರ್`,ಗುಲ್ಮಾರ್ಗ ವೈಷ್ಣೋದೇವಿ`ಇತ್ಯಾದಿ. 13ದಿನಗಳ: ಚಾರಧಾಮ್, ಮಸ್ಸೂರಿ,ನವದೆಹಲಿ,ಹರಿದ್ವಾರ್ ಇತ್ಯಾದಿ. 12ದಿನಗಳ:`ಜೈಪುರ, ಉದಯಪುರ,ಜೈಸಲ್ಮೇರ್ ಮೌಂಟ್‌ಅಬು`ಇತ್ಯಾದಿ. 13/16 ದಿನಗಳ:-`ಕಾಶಿ,ಮುಕ್ತಿನಾಥ್ ಅಯೋಧ್ಯ,ನೈಮಿಷರಾಣ್ಯ,ದೆಹಲಿ ಆಗ್ರಾ`ಇತ್ಯಾದಿ`ಪ್ರವಾಸಗಳಿಗೆ ಏಷ್ಯನ್`ಟ್ರಾವಲ್`ಲೈನ್ಸ್. 8105657052/ 9480182865.

12.07.2024 13/17ದಿನಗಳು ರೈಲು/ವಿಮಾನದಲ್ಲಿ ಅಮರನಾಥ ವೈಷ್ಣೋದೇವಿ ಕಾಶ್ಮೀರ ಕುರುಕ್ಷೇತ್ರ ಅಮೃತಸರ್ ಆಗ್ರ,ದೆಹಲಿ ಇತ್ಯಾದಿ 28000/ 40000/(ಕೆಲವೇ ಸೀಟುಗಳಿವೆ) ಆಗಸ್ಟ್/ ಸೆಪ್ಟಂಬರ್ನಲ್ಲಿ 6ದಿನಗಳು ಕಾಶಿ ಅಯೋಧ್ಯಯಾತ್ರೆಗೆ 32000/ 'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್' 9739847429/ 9845560219/ 9886968166

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಹೆಸರು ಬದಲಾವಣೆ
@50/-* PER WORDS
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
*Conditions apply
www.dhclassifieds.com ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 7795158424 | +91 9900428036
+91 9731810277 | +91 9901641752
+91 9845114560 | 080- 45557163/164

ಭಾರತ–ಅಮೆರಿಕ ಹಣಾಹಣಿ ಇಂದು; ಜಸ್‌ಪ್ರೀತ್ ಬೂಮ್ರಾ, ಕನ್ನಡಿಗ ನಾಸ್ತುಷ್ ಮೇಲೆ ಚಿತ್ತ

ರೋಹಿತ್ ಪಡೆಗೆ ‘ಮಿನಿ ಭಾರತ’ ಸವಾಲು

ಪ್ರಜಾವಾಣಿ ವಾರ್ತೆ

ನ್ಯೂಯಾರ್ಕ್: ಭಾರತೀಯ ಅಭಿಮಾನಿಗಳಿಗೆ ಬುಧವಾರ ಹಬ್ಬವೋ ಹಬ್ಬ. ನಾಸೌ ಕೌಂಟಿ ಕ್ರೀಡಾಂಗಣದಲ್ಲಿ ಭಾರತದ 17 ಕ್ರಿಕೆಟಿಗರು ಅಭಿಮಾನಿಗಳನ್ನು ರಂಜಿಸಲು ಸಿದ್ಧರಾಗಿದ್ದಾರೆ.

ಹೌದು; ಇಲ್ಲಿ ನಡೆಯಲಿರುವ ಎ ಗುಂಪಿನ ಪಂದ್ಯದಲ್ಲಿ ಭಾರತ ಮತ್ತು ಅಮೆರಿಕ ತಂಡಗಳು ಮುಖಾಮುಖಿಯಾಗಲಿವೆ. ಆತಿಥೇಯ ತಂಡದಲ್ಲಿ ಆರು ಮಂದಿ ಭಾರತೀಯ ಆಟಗಾರರೇ ಇದ್ದಾರೆ.

ಲಕ್ಷಗಟ್ಟಲೆ ಕ್ರಿಕೆಟಿಗರು ಭಾರತದಲ್ಲಿದ್ದಾರೆ. ಆದರೆ ಇದರಲ್ಲಿ ಅಂತರರಾಷ್ಟ್ರೀಯ ಪಂದ್ಯದಲ್ಲಿ ಕಣಕ್ಕಿಳಿಯುವ ಅವಕಾಶ ಗಿಟ್ಟಿಸುವವರು 11 ಮಂದಿ ಮಾತ್ರ. ಈ ಪ್ರಕ್ರಿಯೆಯಲ್ಲಿ ಅವಕಾಶ ವಂಚಿತರಾದವರು ಕ್ರಿಕೆಟಿಗರಾಗಿ ಬೆಳೆಯುವ ಛಲವನ್ನು ಬಿಟ್ಟಿಲ್ಲ. ಅಂತಹ ಪ್ರತಿಭಾವಂತರು ಬೇರೆ ಬೇರೆ ದೇಶಗಳ ತಂಡಗಳನ್ನು ಪ್ರತಿನಿಧಿಸುತ್ತಿದ್ದಾರೆ. ಅದರಲ್ಲಿ ಅಮೆರಿಕವೂ ಪ್ರಧಾನವಾದದ್ದು. ಅದರಿಂದಾಗಿ ಭಾರತ ಮತ್ತು ಮಿನಿಭಾರತ ತಂಡಗಳ ಹಣಾಹಣಿ ಎಂದೇ ಈ ಪಂದ್ಯ ಬಿಂಬಿತವಾಗಿದೆ.

ಉಭಯ ತಂಡಗಳು ಎ ಗುಂಪಿನಲ್ಲಿ ತಲಾ 4 ಅಂಕಗಳೊಂದಿಗೆ ಮೊದಲೆರಡು ಸ್ಥಾನಗಳಲ್ಲಿವೆ. ತನಗಿಂತ ಬಲಿಷ್ಠ ಹಾಗೂ ಅನುಭವಿ ಪಾಕಿಸ್ತಾನ ತಂಡವನ್ನು ಹಣಿದಿರುವ ಹುಮ್ಮಸ್ಸಿನಲ್ಲಿರುವ ಅಮೆರಿಕ ತಂಡವು ರೋಹಿತ್ ಶರ್ಮಾ ಬಳಗಕ್ಕೆ ಕಠಿಣ ಸವಾಲೊಡ್ಡಲು ಸಿದ್ಧವಾಗಿದೆ.

ಭಾರತ ತಂಡವು ಕಳೆದ ಪಂದ್ಯದಲ್ಲಿ ಪಾಕಿಸ್ತಾನ ವಿರುದ್ಧ ರೋಚಕ ಜಯ ಸಾಧಿಸಿತ್ತು. ಆದರೆ ಆ ಪಂದ್ಯದಲ್ಲಿ ಬ್ಯಾಟಿಂಗ್ ಪಡೆ ಪರದಾಡಿತ್ತು. ರಿಷಭ್ ಪಂತ್ ಮತ್ತು ಅಕ್ಷರ್ ಪಟೇಲ್ ಅವರು ಮಧ್ಯಮ ಕ್ರಮಾಂಕದಲ್ಲಿ ತುಂಬಿದ ಬಲದಿಂದಾಗಿ ತಂಡವು 119 ರನ್ ಗಳಿಸಲು ಸಾಧ್ಯವಾಗಿತ್ತು. ಪಂತ್ ವಿಕೆಟ್‌ಕೀಪಿಂಗ್‌ನಲ್ಲಿಯೂ ಅಮೋಘ ಆಟವಾಡಿದ್ದರು.

ಆದರೆ ಅಮೆರಿಕದ ಪಿಚ್‌ಗಳಲ್ಲಿ ಏನು ಬೇಕಾದರೂ ಆಗಬಹುದು. ಅದರಿಂದಾಗಿ ಭಾರತ ತಂಡವು ಯಾವುದನ್ನೂ ಹಗುರವಾಗಿ ಪರಿಗಣಿಸುವಂತಿಲ್ಲ. ಅಮೆರಿಕ ತಂಡದ ಪ್ರತಿಭಾನ್ವಿತ ಆಟಗಾರರು ಯಾವುದೇ ಹಂತದಲ್ಲಿಯೂ ತಿರುಗೇಟು ನೀಡಬಲ್ಲರು ಎಂಬುದಕ್ಕೆ ಪಾಕಿಸ್ತಾನದ ಎದುರಿನ ಪಂದ್ಯವೇ ಸಾಕ್ಷಿಯಾಗಿತ್ತು. ಭಾರತ ತಂಡದ ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ ಅವರು ಉತ್ತಮ ಆರಂಭ ನೀಡುವ ಅವಶ್ಯಕತೆ ಇದೆ. ಸೂರ್ಯಕುಮಾರ್ ಯಾದವ್ ತಮ್ಮ ನೈಜ ಲಯಕ್ಕೆ ಮರಳಬೇಕಿದೆ. ಹಾರ್ದಿಕ್, ಶಿವಂ ದುಬೆ ಹಾಗೂ ಜಡೇಜ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಬ್ಯಾಟಿಂಗ್‌ನಲ್ಲಿ ಮಿಂಚಿದರೆ ತಂಡಕ್ಕೆ ಅನುಕೂಲ.

ಕಳೆದೆರಡೂ ಪಂದ್ಯಗಳನ್ನು ಭಾರತಕ್ಕೆ ಜಯಿಸಿಕೊಟ್ಟಿದ್ದು ಬೌಲರ್‌ಗಳು. ಜಸ್‌ಪ್ರೀತ್ ಬೂಮ್ರಾ, ಹಾರ್ದಿಕ್, ಅಕ್ಷರ್ ಪಟೇಲ್, ಅರ್ಷದೀಪ್ ಸಿಂಗ್ ಹಾಗೂ ಸಿರಾಜ್ ಅವರನ್ನು ಎದುರಿಸುವುದು ಅಮೆರಿಕ ತಂಡಕ್ಕೆ ಕಠಿಣ ಸವಾಲಾಗಬಹುದು. ಆತಿಥೇಯ ತಂಡದ ಸ್ಪಿನ್ನರ್, ಕನ್ನಡಿಗ ನಾಸ್ತುಷ್ ಕೆಂಜಿಗೆ, ಸೌರಭ್ ನೇತ್ರಾವಳ್ಕರ್ ಅವರೂ ಭಾರತದ ಬ್ಯಾಟರ್‌ಗಳಿಗೆ ಸವಾಲೊಡ್ಡಲು ಸಿದ್ಧರಾಗಿದ್ದಾರೆ.

ಮಳೆ ಸಾಧ್ಯತೆ?

ಬುಧವಾರ ಪಂದ್ಯದ ವೇಳೆ ಮಳೆ ಬರುವ ಸಾಧ್ಯತೆ ಇದೆ ಎಂದು ಸ್ಥಳೀಯ ಹವಾಮಾನ ಇಲಾಖೆ ಮೂಲಗಳು ಹೇಳಿವೆ.

ಮೂರು ದಿನಗಳ ಹಿಂದೆ ಇಲ್ಲಿಯೇ ನಡೆದಿದ್ದ ಭಾರತ ಮತ್ತು ಪಾಕಿಸ್ತಾನ ನಡುವಣ ಪಂದ್ಯದ ಸಂದರ್ಭದಲ್ಲಿಯೂ ಮಳೆಯಾಗಿತ್ತು. ಅದರಿಂದಾಗಿ ಪಂದ್ಯವು ಸುಮಾರು ಒಂದು ಗಂಟೆ ತಡವಾಗಿ ಆರಂಭವಾಗಿತ್ತು.

ಮುಖ್ಯಾಂಶಗಳು

- ಇದೇ ಮೊದಲ ಬಾರಿ ಭಾರತ–ಅಮೆರಿಕ ಮುಖಾಮುಖಿ
- ಅಮೆರಿಕದ ಆ್ಯರನ್ ಜೋನ್ಸ್ ಒಟ್ಟು 130 ರನ್ ಗಳಿಸಿದ್ದಾರೆ
- ಭಾರತದ ವೇಗಿ ಜಸ್‌ಪ್ರೀತ್ ಬೂಮ್ರಾ ಒಟ್ಟು 9 ವಿಕೆಟ್ ಪಡೆದಿದ್ದಾರೆ

ಅಮೆರಿಕ ತಂಡದಲ್ಲಿರುವ ಕನ್ನಡಿಗ ನಾಸ್ತುಷ್ ಕೆಂಜಿಗೆ –ಎಎಫ್‌ಪಿ ಚಿತ್ರ

ಹಾರ್ದಿಕ್ ಪಾಂಡ್ಯ ಮತ್ತು ರೋಹಿತ್ ಶರ್ಮಾ

ತಂಡಗಳು

ಭಾರತ: ರೋಹಿತ್ ಶರ್ಮಾ (ನಾಯಕ), ಹಾರ್ದಿಕ್ ಪಾಂಡ್ಯ, ಯಶಸ್ವಿ ಜೈಸ್ವಾಲ್, ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ರಿಷಭ್ ಪಂತ್ (ವಿಕೆಟ್‌ಕೀಪರ್), ಸಂಜು ಸ್ಯಾಮ್ಸನ್, ಶಿವಂ ದುಬೆ, ರವೀಂದ್ರ ಜಡೇಜ, ಅಕ್ಷರ್ ಪಟೇಲ್, ಕುಲದೀಪ್ ಯಾದವ್, ಯಜುವೇಂದ್ರ ಚಾಹಲ್, ಅರ್ಷದೀಪ್ ಸಿಂಗ್, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಸಿರಾಜ್.

ಅಮೆರಿಕ: ಮೊನಾಂಕ್ ಪಟೇಲ್ (ನಾಯಕ), ಆ್ಯರನ್ ಜೋನ್ಸ್, ಆ್ಯಂಡ್ರಿಸ್ ಗೌಸ್, ಕೋರಿ ಆ್ಯಂಡರ್ಸನ್, ಅಲಿ ಖಾನ್, ಹರ್ಮೀತ್ ಸಿಂಗ್, ಜೆಸಿ ಸಿಂಗ್, ಮಿಲಿಂದ್ ಕುಮಾರ್, ನಿಸರ್ಗ್ ಪಟೇಲ್, ನಿತೀಶ್ ಕುಮಾರ್, ನಾಸ್ತುಷ್ ಕೆಂಜಿಗೆ, ಸೌರಭ್ ನೇತ್ರಾವಳ್ಕರ್, ಶ್ಯಾಡ್ಲಿ ವ್ಯಾನ್ ಶಲ್ಕೆವಕ್, ಸ್ಟೀವನ್ ಟೇಲರ್, ಶಯಾನ್ ಜಹಾಂಗಿರ್.

ಜಯದ ಹಾದಿಗೆ ಮರಳಿದ ಪಾಕ್

ರಿಜ್ವಾನ್ ಅಜೇಯ ಅರ್ಧ ಶತಕ: ಕೆನಡಾ ತಂಡಕ್ಕೆ ಸೋಲು

ಪಾಕಿಸ್ತಾನ ತಂಡದ ಬಾಬರ್ ಅಜಂ ಮತ್ತು ಮೊಹಮದ್ ರಿಜ್ವಾನ್ –ಎಎಫ್‌ಪಿ ಚಿತ್ರ

ನ್ಯೂಯಾರ್ಕ್ (ಪಿಟಿಐ): ಮೊಹಮದ್ ರಿಜ್ವಾನ್ (ಅಜೇಯ 53, 53ಎ) ಮತ್ತು ಬಾಬರ್ ಅಜಂ (33, 33ಎ) ಅವರ ಅರ್ಧ ಶತಕದ ಜೊತೆಯಾಟದ ನೆರವಿನಿಂದ ಪಾಕಿಸ್ತಾನ ತಂಡವು ಟಿ20 ವಿಶ್ವಕಪ್‌ನಲ್ಲಿ ಕೆನಡಾ ವಿರುದ್ಧ 7 ವಿಕೆಟ್‌ಗಳ ಜಯ ಸಾಧಿಸಿತು.

ಈ ಟೂರ್ನಿಯಲ್ಲಿ ಪಾಕಿಸ್ತಾನ ಮೊದಲ ಗೆಲುವು ದಾಖಲಿಸುವ ಮೂಲಕ ‘ಎ’ ಗುಂಪಿನ ಪಾಯಿಂಟ್ ಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೇರಿತು. ಕೆನಡಾ ತಂಡ ನಾಲ್ಕನೇ ಸ್ಥಾನದಲ್ಲಿದೆ.

ಮಂಗಳವಾರ ಇಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಪಾಕ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆ್ಯರನ್ (52; 44ಎ, 4X4, 6X4) ಅವರ ಅಮೋಘ ಬ್ಯಾಟಿಂಗ್ ಬಲದಿಂದ ಕೆನಡಾ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 106 ರನ್ ಗಳಿಸಿತು.

ಈ ಸಾಧಾರಣ ಮೊತ್ತದ ಗುರಿ ಬೆನ್ನಟ್ಟಿದ ಪಾಕ್ ತಂಡವು 17.3 ಓವರ್‌ಗಳಲ್ಲಿ 3 ವಿಕೆಟ್‌ಗೆ 107 ರನ್ ಗಳಿಸಿತು.

ಭಾನುವಾರ ನಡೆದ ಪಂದ್ಯದಲ್ಲಿ ಭಾರತ ವಿರುದ್ಧ ಸೋತ ಬಳಿಕ ಪಾಕ್ ತಂಡದಲ್ಲಿ ಬದಲಾವಣೆ ಮಾಡಲಾಗಿತ್ತು. ಆರಂಭಿಕ ಆಟಗಾರನಾಗಿ ಬಂದ ಸೈಮ್ ಅಯೂಬ್ (6) ಅವರು ದಿಲೊನ್ ಹೆಲಿಗರ್ ಬೌಲಿಂಗ್‌ನಲ್ಲಿ ಶ್ರೇಯಸ್ ಮೊವ್ವಾಗೆ ಕ್ಯಾಚ್ ನೀಡಿ ನಿರ್ಗಮಿಸಿದರು.

ಅನುಭವಿ ಆಟಗಾರ ರಿಜ್ವಾನ್ ಸಂಯಮದಿಂದ ಆಟವಾಡಿ ಅಜೇಯ ಅರ್ಧ ಶತಕ ಗಳಿಸಿದರು. ನಾಯಕ ಬಾಬರ್ 33 ರನ್ ಗಳಿಸಿ ಉಪಯುಕ್ತ ಕಾಣಿಕೆ ನೀಡಿದರು. ಈ ಇಬ್ಬರು ಎರಡನೇ ವಿಕೆಟ್‌ಗೆ 50 ರನ್ ಸೇರಿಸಿದರು.

ಇದಕ್ಕೂ ಮೊದಲು ಪಾಕಿಸ್ತಾನ ತಂಡದ ಅನುಭವಿ ಹಾಗೂ ಸಮರ್ಥ ಬೌಲರ್‌ಗಳನ್ನು ಲೀಲಾಜಾಲವಾಗಿ ಆಡಿದ ಕೆನಡಾದ ಆ್ಯರನ್ ಜಾನ್ಸನ್ ಅರ್ಧಶತಕ ಗಳಿಸಿದರು.

3ನೇ ಓವರ್‌ನಲ್ಲಿಯೇ ಮೊಹಮ್ಮದ್ ಆಮೀರ್ ಎಸೆತದಲ್ಲಿ ನವನೀತ್ ಕ್ಲೀನ್‌ಬೌಲ್ಡ್ ಆದರು. ಈ ಹಂತದಲ್ಲಿ ಪಾಕ್ ಬೌಲರ್‌ಗಳು ಹಿಡಿತ ಸಾಧಿಸುವ ಯತ್ನ ಮಾಡಿದರು. ಒಂದು ಬದಿಯಲ್ಲಿ ವಿಕೆಟ್‌ಗಳು ಪತನವಾಗುತ್ತಿದ್ದರೆ ಜೋನ್ಸ್ ಮಾತ್ರ ಏಕಾಂಗಿಯಾಗಿ ಬೀಸಾಟ ವಾಡಿದರು. ಪರ್ಗತ್ ಸಿಂಗ್, ನಿಕೊಲಸ್ ಕಿರ್ಟನ್, ಶ್ರೇಯಸ್ ಮೊವ್ವಾ ಹಾಗೂ ರವೀಂದ್ರಪಾಲ್ ಸಿಂಗ್ ಒಂದಂಕಿ ಗಳಿಸಿದರು. ಕೇವಲ 54 ರನ್‌ಗಳಿಗೆ ತಂಡವು 5 ವಿಕೆಟ್ ಕಳೆದುಕೊಂಡಿತು.

ಕೆನಡಾ ತಂಡದ ನಾಯಕ, ಪಾಕ್ ಮೂಲದವರಾದ ಸಾಧ್ ಬಿನ್ ಜಾಫರ್ (10 ರನ್) ಹಾಗೂ ಖಲೀಂ ಸನಾ (ಔಟಾಗದೆ 13) ಕೂಡ ತಂಡಕ್ಕೆ ಕಾಣಿಕೆ ನೀಡಿದರು.

ಸಂಕ್ಷಿಪ್ತ ಸ್ಕೋರು: ಕೆನಡಾ: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 106 (ಆ್ಯರನ್ ಜಾನ್ಸನ್ 52, ಸಾದ್ ಬಿನ್ ಜಾಫರ್ 10, ಖಲೀಂ ಸನಾ ಔಟಾಗದೆ 13, ಮೊಹಮ್ಮದ್ ಆಮೀರ್ 13ಕ್ಕೆ2, ಹ್ಯಾರಿಸ್ ರವೂಫ್ 26ಕ್ಕೆ2)

ಪಾಕಿಸ್ತಾನ: 17.3 ಓವರ್‌ಗಳಲ್ಲಿ 3 ವಿಕೆಟ್‌ಗೆ 107 (ಮೊಹಮದ್ ರಿಜ್ವಾನ್ ಔಟಾಗದೇ 53, ಬಾಬರ್ ಅಜಂ 33, ದಿಲ್ಲಾನ್ ಹೇಲಿಗರ್ 18ಕ್ಕೆ2, ಜೆರೆಮಿ ಗೊರ್ಡನ್ 17ಕ್ಕೆ1) ಪಂದ್ಯ ಶ್ರೇಷ್ಠ: ಮೊಹಮ್ಮದ್ ಆಮೀರ್

ಬಾಬರ್, ಅಫ್ರಿದಿ ನಡುವೆ ಒಡಕಿಲ್ಲ: ಅಜರ್

ನ್ಯೂಯಾರ್ಕ್ (ಪಿಟಿಐ): ನಾಯಕ ಬಾಬರ್ ಆಜಂ ಮತ್ತು ಪ್ರಮುಖ ವೇಗಿ ಶಹೀನ್ ಶಾ ಅಫ್ರಿದಿ ನಡುವೆ ಭಿನ್ನಾಭಿಪ್ರಾಯ ಇಲ್ಲ ಎಂದು ಪಾಕಿಸ್ತಾನದ ಸಹಾಯಕ ಕೋಚ್ ಅಜರ್ ಮಹಮೂದ್ ತಿಳಿಸಿದ್ದಾರೆ.

ಅವರಿಬ್ಬರೂ ಪರಸ್ಪರ ಮಾತನಾಡುವುದಿಲ್ಲ ಎಂಬ ಮಾಜಿ ನಾಯಕ ವಾಸಿಂ ಅಕ್ರಂ ಹೇಳಿಕೆ ನಿಜವಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಭಾರತ ವಿರುದ್ಧ ಸೋತ ನಂತರ ಹೊರಗೆ ಹೋಗದೇ ಹೋಟೆಲ್ ರೂಮ್‌ನಲ್ಲಿರಬೇಕಿತ್ತು ಎಂದು ಹೇಳಿರುವವರನ್ನೂ ಅಜರ್ ಟೀಕಿಸಿದ್ದಾರೆ. ಪಾಕ್ ತಂಡದಲ್ಲಿ ಬಣಗಳಿದ್ದು ಒಂದನ್ನು ನಾಯಕ ಬಾಬರ್ ಆಜಂ ಮತ್ತೊಂದನ್ನು ಶಹೀನ್ ಅಫ್ರಿದಿ ನಿಯಂತ್ರಿಸುತ್ತಿದ್ದಾರೆ ಎಂಬ ಬಗ್ಗೆ ಮಾತುಗಳು ಕೇಳಿಬಂದಿವೆ.

‘ವಾಸಿಂ ಹಾಗೆ ಹೇಳಿರಬಹುದು. ಆದರೆ ನನಗೆ ಗೊತ್ತಿಲ್ಲ. ಅವರಿಬ್ಬರು ಮಾತನಾಡುತ್ತಾರೆ. ಒಳ್ಳೆಯ ಸ್ನೇಹಿತರು. ಅವರಿಬ್ಬರೂ ಪಾಕ್ ತಂಡದ ಭಾಗ. ನಾವು ನಿರ್ದಿಷ್ಟ ವ್ಯಕ್ತಿಯಿಂದಾಗಿ ಪಂದ್ಯ ಸೋತಿಲ್ಲ. ಸೋತಿದ್ದು ನಮ್ಮ ತಪ್ಪುಗಳಿಂದ’ ಎಂದು ಅಜರ್ ಭಾರತ ತಂಡಕ್ಕೆ ಆರು ರನ್‌ಗಳಿಂದ ಸೋತಿರುವ ಬಗ್ಗೆ ಪ್ರಸ್ತಾಪಿಸಿದ್ದಾರೆ.

ಅರ್ಷದೀಪ್ ಸಿಂಗ್ ಕ್ಷಮೆ ಕೇಳಿದ ಅಕ್ಮಲ್

ಅರ್ಷದೀಪ್ ಸಿಂಗ್

ಲಾಹೋರ್ (ಪಿಟಿಐ): ಪಾಕಿಸ್ತಾನ ಕ್ರಿಕೆಟ್ ತಂಡದ ಮಾಜಿ ವಿಕೆಟ್‌ಕೀಪರ್ ಕಮ್ರನ್ ಅಕ್ಮಲ್ ಅವರು ಭಾರತದ ಬೌಲರ್ ಅರ್ಷದೀಪ್ ಸಿಂಗ್ ಅವರ ಕ್ಷಮೆಯಾಚಿಸಿದ್ದಾರೆ.

ನ್ಯೂಯಾರ್ಕ್‌ನಲ್ಲಿ ಭಾನುವಾರ ನಡೆದಿದ್ದ ಭಾರತ ಮತ್ತು ಪಾಕಿಸ್ತಾನ ನಡುವಣ ಪಂದ್ಯದಲ್ಲಿ ಅವರು ಅರ್ಷದೀಪ್ ಸಿಂಗ್ ಕೊನೆಯ ಓವರ್ ಬೌಲಿಂಗ್ ಮಾಡಲು ಬಂದಾಗ ಅಕ್ಮಲ್ ‘ಅನುಚಿತ’ ಹೇಳಿಕೆ ನೀಡಿದ್ದರು. ಇದು ಟೀಕೆಗೆ ಒಳಗಾಗಿತ್ತು.

ವೀಕ್ಷಕ ವಿವರಣೆಕಾರ ಹರ್ಭಜನ್ ಸಿಂಗ್ ಕೂಡ ಅಕ್ಮಲ್ ಹೇಳಿಕೆಗೆ ಖಾರವಾದ ಪ್ರತಿಕ್ರಿಯೆ ನೀಡಿದ್ದರು.

‘ನನ್ನ ಹೇಳಿಕೆಗಳ ಬಗ್ಗೆ ವಿಷಾದ ವ್ಯಕ್ತ ಪಡಿಸುತ್ತಿದ್ದೇನೆ. ಹರಭಜನ್ ಸಿಂಗ್ ಮತ್ತು ಸಿಖ್ ಸಮುದಾಯದ ಕ್ಷಮೆಯಾಚಿಸುತ್ತಿದ್ದೇನೆ. ವಿಶ್ವದ ಎಲ್ಲ ಕಡೆ ಇರುವ ಸಿಖ್ ಸಮುದಾಯದ ಬಗ್ಗೆ ನನಗೆ ಅಪಾರವಾದ ಗೌರವ ಇದೆ. ಯಾರ ಮನಸ್ಸೂ ನೋಯಿಸುವ ಉದ್ದೇಶ ನನಗಿರಲಿಲ್ಲ. ಸತ್ಯವಾಗಿಯೂ ಕ್ಷಮೆಯಾಚಿಸುತ್ತೇನೆ’ ಎಂದು ಹ್ಯಾಷ್‌ಟ್ಯಾಗ್ ರೆಸ್ಪೆಕ್ಟ್ ಹಾಗೂ ಅಪಾಲಜಿ ಎಂದು ಅಕ್ಮಲ್ ಅವರು ‘ಎಕ್ಸ್‌’ ನಲ್ಲಿ ಬರೆದು ವಿಡಿಯೊ ಹಾಕಿದ್ದಾರೆ.

ಆ ಪಂದ್ಯದಲ್ಲಿ ಪಾಕ್ ತಂಡವು 120 ರನ್‌ಗಳ ಗುರಿ ಬೆನ್ನಟ್ಟಿತ್ತು. ಕೊನೆಯ ಓವರ್ ನಿರ್ಣಾಯಕವಾಗಿತ್ತು.

‘ಈಗ ಏನು ಬೇಕಾದರೂ ಆಗಬಹುದು. ಅರ್ಷದೀಪ್ ಸಿಂಗ್ ಬೌಲಿಂಗ್ ಮಾಡಲು ಬಂದಿದ್ದಾರೆ. ಅಷ್ಟೊಂದು ಲಯದಲ್ಲಿ ಅವರಿದ್ದಂತೆ ಕಾಣುವುದಿಲ್ಲ. ಅಲ್ಲದೇ ಈಗ 12 ಗಂಟೆಯೂ ಆಗಿದೆ’ ಎಂದು ಅಕ್ಮಲ್ ಹೇಳಿದ್ದರು.

ಇದಕ್ಕೆ ಪ್ರತಿಯಾಗಿ ಕಾಮೆಂಟೇಟರ್ ಹರಭಜನ್ ಸಿಂಗ್, ‘ನೀವು ಬಾಯಿಬಿಡುವ ಮುನ್ನ ಸಿಖ್ ಜನಾಂಗದ ಇತಿಹಾಸ ತಿಳಿದುಕೊಳ್ಳಬೇಕು. ತಮ್ಮ ತಾಯಂದಿರು, ಸಹೋದರಿಯರು ಅತಿಕ್ರಮಣಕಾರರ ದಾಳಿಗೆ ಸಿಲುಕಿಕೊಂಡಾಗ ಸಿಖ್ ವೀರರೇ ರಕ್ಷಿಸಿದ್ದರು.

ಆಗಲೂ ರಾತ್ರಿ 12 ಗಂಟೆಯಾಗಿತ್ತು. ನಾಚಿಕೆಯಾಗಬೇಕು ನಿಮಗೆ, ಒಂದಿಷ್ಟಾದರೂ ಕೃತಜ್ಞರಾಗಿರಿ’ ಎಂದು ಕಿಡಿಕಾರಿದ್ದರು.

ಹಾಕಿ: ಭಾರತಕ್ಕೆ 2025ರ ವಿಶ್ವಕಪ್ ಆತಿಥ್ಯ

ಲುಸಾನ್ (ಸ್ವಿಜರ್ಲೆಂಡ್), (ಪಿಟಿಐ): ಭಾರತವು 9 ವರ್ಷಗಳ ಬಳಿಕ ಮುಂದಿನ ವರ್ಷದ ಪುರುಷರ ಜೂನಿಯರ್ ಹಾಕಿ ವಿಶ್ವಕಪ್‌ನ ಆತಿಥ್ಯ ವಹಿಸಲಿದೆ.

ಈ ವಿಷಯವನ್ನು ಅಂತರರಾಷ್ಟ್ರೀಯ ಹಾಕಿ ಫೆಡರೇಷನ್‌ನ ಕಾರ್ಯಕಾರಿ ಮಂಡಳಿ ಮಂಗಳವಾರ ಪ್ರಕಟಿಸಿದೆ.

ಈ ಟೂರ್ನಿಯು 2025ರ ಡಿಸೆಂಬರ್‌ನಲ್ಲಿ ನಡೆಯಲಿದೆ. ಮೊತ್ತಮೊದಲ ಬಾರಿ ಮುಂದಿನ ಜೂನಿಯರ್ ವಿಶ್ವಕಪ್‌ನಲ್ಲಿ 24 ತಂಡಗಳು ಭಾಗವಹಿಸಲಿವೆ.

ಹೆಚ್ಚಿನ ರಾಷ್ಟ್ರೀಯ ಸಂಸ್ಥೆಗಳಿಗೆ ಹೆಚ್ಚು ಅವಕಾಶಗಳನ್ನು ನೀಡುವುದು ಸಬಲೀಕರಣದ ಆಧಾರಸ್ಥಂಭ ಮತ್ತು ಅವುಗಳನ್ನು ಒಳಗೊಳ್ಳುವಂತೆ ಮಾಡುವುದು ನಮ್ಮ ಕಾರ್ಯತಂತ್ರದ ಭಾಗ ಎಂದು ಎಫ್‌ಐಎಚ್ ಅಧ್ಯಕ್ಷ ತಯ್ಯಬ್ ಇಕ್ರಮ್ ತಿಳಿಸಿದರು.

ಒಮಾನ್‌ನಲ್ಲಿ ಈ ವರ್ಷ ನಡೆದ ಎಫ್‌ಐಎಚ್ ಹಾಕಿ ಫೈವ್ಸ್ ವಿಶ್ವಕಪ್‌ನಲ್ಲಿ ಹೆಚ್ಚು ತಂಡಗಳು ಭಾಗವಹಿಸಿದ್ದು, ಅದರ ಮೌಲ್ಯವರ್ಧಿಸಿತು ಎಂದರು. ಜೂನಿಯರ್ ವಿಶ್ವಕಪ್ 2023ರಲ್ಲಿ ಕ್ವಾಲಾಲಂಪುರದಲ್ಲಿ ನಡೆದಿತ್ತು. ಜರ್ಮನಿ 2–1 ರಿಂದ ಫ್ರಾನ್ಸ್ ಮೇಲೆ ಜಯಗಳಿಸಿತ್ತು.

ಏಷ್ಯನ್ ಯುವ ಚೆಸ್: ಪ್ರತೀತಿಗೆ ಚಿನ್ನ

ಬೆಂಗಳೂರು: ಕರ್ನಾಟಕದ ಪ್ರತೀತಿ ಬೊರ್ಡೊಲಾಯಿ, ಕಜಕಸ್ತಾನದ ಅಲ್ಮಾಟಿಯಲ್ಲಿ ಮಂಗಳವಾರ ಮುಕ್ತಾಯಗೊಂಡ 26ನೇ ಯೂತ್ ಚೆಸ್ ಚಾಂಪಿಯನ್‌ಷಿಪ್‌ನ (ರ್‍ಯಾಪಿಡ್ ವಿಭಾಗ) ಬಾಲಕಿಯರ 12 ವರ್ಷದೊಳಗಿನವರ ವಿಭಾಗದಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾಳೆ. ಈಕೆ ಏಳು ಸುತ್ತುಗಳಿಂದ 6.5 ಪಾಯಿಂಟ್ಸ್ ಸಂಗ್ರಹಿಸಿ ಅಜೇಯರಾಗುಳಿದಳು.

12 ವರ್ಷದೊಳಗಿನವರ ಮುಕ್ತ ವಿಭಾಗದಲ್ಲಿ ಕರ್ನಾಟಕದ ಸಿದ್ಧಾರ್ಥ ಪೂಂಜಾ ಏಳು ಸುತ್ತುಗಳಿಂದ ಆರು ಪಾಯಿಂಟ್ಸ್ ಸಂಗ್ರಹಿಸಿ ಬೆಳ್ಳಿಯ ಪದಕ ಗೆದ್ದುಕೊಂಡನು. ಬುಧವಾರ ಕ್ಲಾಸಿಕಲ್ ವಿಭಾಗದ ಟೂರ್ನಿ ಆರಂಭವಾಗಲಿದೆ. ಭಾರತ ರ್‍ಯಾಪಿಡ್ ವಿಭಾಗದಲ್ಲಿ ಇನ್ನೂ ಎರಡು ಪದಕಗಳನ್ನು ಗಳಿಸಿತು. ನಾರಾಯಣಿ ಮರಾಠೆ (8 ವರ್ಷದೊಳಗಿನವರ ವಿಭಾಗ) ಚಿನ್ನದ ಪದಕ ಗಳಿಸಿದರೆ, ಪೂಜಾಶ್ರೀ ಆರ್. 10 ವರ್ಷದೊಳಗಿನವರ ವಿಭಾಗದಲ್ಲಿ ಸ್ವರ್ಣ ಗೆದ್ದುಕೊಂಡಳು.

ಮೂರನೇ ಸುತ್ತಿನಲ್ಲಿ ಆಡುವ ಕನಸು ಭಗ್ನ

ಕತಾರ್ ಎದುರು ಭಾರತಕ್ಕೆ ಸೋಲು

ಕತಾರ್ ವಿರುದ್ಧ ಪಂದ್ಯದಲ್ಲಿ ಭಾರತದ ಸುರೇಶ್ ಸಿಂಗ್ ಅವರು ಚೆಂಡು ಅನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸಿದರು. ಎಎಫ್‌ಪಿ ಚಿತ್ರ

ದೋಹಾ (ಪಿಟಿಐ): ಏಷ್ಯನ್ ಚಾಂಪಿಯನ್ಸ್ ಕತಾರ್ ತಂಡವು ಫಿಫಾ ವಿಶ್ವಕಪ್ ಅರ್ಹತಾ ಟೂರ್ನಿಯ ‘ಎ’ ಗಂಪಿನ ಪಂದ್ಯದಲ್ಲಿ ಮಂಗಳವಾರ ಭಾರತ ತಂಡದ ವಿರುದ್ಧ 2–1 ಗೋಲುಗಳ ಅಂತರದಲ್ಲಿ ಜಯ ಸಾಧಿಸಿತು. ಈ ಸೋಲಿನೊಂದಿಗೆ ವಿಶ್ವಕಪ್ ಅರ್ಹತಾ ಮೂರನೇ ಸುತ್ತಿನಲ್ಲಿ ಆಡುವ ಭಾರತದ ಕನಸು ಈಡೇರಲಿಲ್ಲ.

ಲಾಲಿಯನ್ಜುವಾಲಾ ಚಾಂಗ್ಟೆ 37ನೇ ನಿಮಿಷದಲ್ಲಿ ಗಳಿಸಿದ ಗೋಲಿನಿಂದ ಭಾರತ ಮುನ್ನಡೆ ಸಾಧಿಸಿತು. ಆದರೆ, 73ನೇ ನಿಮಿಷದಲ್ಲಿ ಕತಾರ್‌ನ ಯೂಸುಫ್ ಐಮೆನ್ ಗೋಲು ಗಳಿಸಿದರು. ಇದರೊಂದಿಗೆ ಸಮಬಲ ಸಾಧಿಸಿತು. 85ನೇ ನಿಮಿಷದಲ್ಲಿ ಅಹ್ಮದ್ ಅಲ್‌-ರಾವಿ ಗಳಿಸಿದ ಗೋಲಿನಿಂದ ಕತಾರ್ ಮೇಲುಗೈ ಸಾಧಿಸಿತು.

ಮೊದಲಾರ್ಧದಲ್ಲಿ 1-0 ಗೋಲಿನಿಂದ ಮುನ್ನಡೆ ಸಾಧಿಸಿದ ನಂತರ ಭಾರತ ತಂಡಕ್ಕೆ ಗೆಲ್ಲುವ ವಿಶ್ವಾಸ ಇತ್ತು. ಆದರೆ ದ್ವಿತೀಯಾರ್ಧದಲ್ಲಿ ಐಮೆನ್ ಮತ್ತು ಅಲ್‌-ರಾವಿ ಅವರ ಗೋಲಿನಿಂದಾಗಿ ಭಾರತದ ಕನಸು ಕೆಲವೇ ನಿಮಿಷಗಳಲ್ಲಿ ಭಗ್ನಗೊಂಡಿತು.

ದಿನದ ಮತ್ತೊಂದು ಪಂದ್ಯದಲ್ಲಿ ಕುವೈತ್ ಮತ್ತು ಅಫ್ಘಾನಿಸ್ತಾನ ತಂಡಗಳ ನಡುವಿನ ಪಂದ್ಯ ಗೋಲಿಲ್ಲದೇ ಡ್ರಾ ಆಗಿದೆ.

ಕತಾರ್ ಮತ್ತು ಕುವೈತ್ ತಂಡಗಳು ಎರಡನೇ ಸುತ್ತಿಗೆ ಪ್ರವೇಶಿಸಿದವು. ಸುನಿಲ್ ಚೆಟ್ರಿ ಅವರಿಲ್ಲದ ಭಾರತ ತಂಡ, ಪ್ರಬಲ ಕತಾರ್ ತಂಡವನ್ನು ಎದುರಿಸಿತು.

ಭಾರತದ ಫುಟ್‌ಬಾಲ್ ರಂಗದ ತಾರೆ ಸುನಿಲ್ ಚೆಟ್ರಿ ನಿವೃತ್ತಿ ಘೋಷಿಸಿದ್ದಾರೆ.

ಕಳೆದ ವಾರವಷ್ಟೇ ಕುವೈತ್ ವಿರುದ್ಧ ಕೋಲ್ಕತ್ತದಲ್ಲಿ ನಡೆದ ಅರ್ಹತಾ ಪಂದ್ಯದಲ್ಲಿ ಕೊನೆಯ ಬಾರಿ ರಾಷ್ಟ್ರೀಯ ತಂಡದ ಪರ ಆಡಿದ್ದರು.

ಬ್ರಿಜ್: ಸೆಮಿಫೈನಲ್‌ಗೆ ಯುನೀಕ್, ಜುತಿಕಾ

ಮಂಗಳೂರು: ಯುನೀಕ್ ಮಾಸ್ಟರ್ಸ್ ಮತ್ತು ಜುತಿಕಾ ತಂಡಗಳು ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಬ್ರಿಜ್ ಚಾಂಪಿಯನ್‌ಷಿಪ್‌ನ ಸಿಲ್ವರ್ ವಿಭಾಗದ ಸೆಮಿಫೈನಲ್ ಪ್ರವೇಶಿಸಿದವು.

ಭಾರತ ಬ್ರಿಜ್ ಫೆಡರೇಷನ್ ಮತ್ತು ಕರ್ನಾಟಕ ರಾಜ್ಯ ಬ್ರಿಜ್ ಸಂಸ್ಥೆಗಳು ಕರಾವಳಿ ಬ್ರಿಜ್ ಸಂಸ್ಥೆಯ ಸಹಯೋಗದಲ್ಲಿ ಆಯೋಜಿಸಿರುವ ಚಾಂಪಿಯನ್‌ಷಿಪ್‌ನ ಕ್ವಾರ್ಟರ್ ಫೈನಲ್‌ನಲ್ಲಿ ಅದು 141–116ರಲ್ಲಿ ಧಂಪುರ್ ಲೆಗಸಿ ವಿರುದ್ಧ ಗೆಲುವು ಸಾಧಿಸಿತು.

ಮತ್ತೊಂದು ಪಂದ್ಯದಲ್ಲಿ ಅನ್‌ಪ್ರೆಡಿಕ್ಟಬಲ್ ಎದುರು ಜುತಿಕಾ 133–126ರಲ್ಲಿ ಜಯ ಸಾಧಿಸಿತು. ಜೈ ಜಗನ್ನಾಥ್ ವಿರುದ್ಧ ಹೆಕ್ಸಗನ್ 114–112ರಲ್ಲಿ ಮತ್ತು ಅಲ್ಫಾ ಏಸ್ ವಿರುದ್ಧ ಏಸ್ ಕಾನ್ಕರರ್ಸ್ 127–76ರಲ್ಲಿ ಗೆದ್ದಿತು.

ಸೆಮಿಫೈನಲ್‌ಗೆ ಮೇವರಿಕ್ಸ್: ಗೋಲ್ಡ್ ವಿಭಾಗದಲ್ಲಿ ಮೇವರಿಕ್ಸ್ ಸೆಮಿಫೈನಲ್ ಪ್ರವೇಶಿಸಿದೆ. ಕ್ವಾರ್ಟರ್ ಫೈನಲ್‌ನಲ್ಲಿ ಈ ತಂಡ ಶ್ರೀ ರಾಧೇ ವಿರುದ್ಧ ಜಯ ಸಾಧಿಸಿತು.

ಶ್ರೀ ಸಿಮೆಂಟ್ ವಿರುದ್ಧ ಫಾರ್ಮಿಡೇಬಲ್ಸ್, ಫೆನೆಸ್ತಾ ವಿರುದ್ಧ ಮೋನಿಕಾ ಜಾಜೂ, ಸರ್ಲಾ ಫೈಬರ್ಸ್ ಎದುರು ಡಿಯೊರಾಸ್ ಡೆಕ್ಕಾಂಡ್ಸ್ ಗೆದ್ದಿತು.

ಒಲಿಂಪಿಕ್ಸ್‌ಗೆ ಶೂಟಿಂಗ್ ತಂಡ ಪ್ರಕಟ

ಎರಡು ವೈಯಕ್ತಿಕ ಸ್ಪರ್ಧೆಗೆ ಮನು

ಮನು ಭಾಕರ್ ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಮಹಿಳಾ ಪಿಸ್ತೂಲ್ ಶೂಟರ್ ಮನು ಭಾಕರ್ ಅವರು ಆಯ್ಕೆ ಟ್ರಯಲ್ಸ್‌ನಲ್ಲಿ ಅಮೋಘ ಪ್ರದರ್ಶನ ತೋರಿದ ಕಾರಣ ಅವರನ್ನು ಒಲಿಂಪಿಕ್ಸ್ ಶೂಟಿಂಗ್‌ನ ಎರಡು ಸ್ಪರ್ಧೆಗಳಿಗೆ ಆಯ್ಕೆ ಮಾಡಲಾಗಿದೆ. ಪಿಸ್ತೂಲ್ ಮತ್ತು ರೈಫಲ್ ವಿಭಾಗದ ತಂಡಗಳನ್ನು ರಾಷ್ಟ್ರೀಯ ಶೂಟಿಂಗ್ ಫೆಡರೇಷನ್ ಮಂಗಳವಾರ ಪ್ರಕಟಿಸಿದೆ.

ವರ್ಚುವಲ್ ಆಗಿ ನಡೆದ ಆಯ್ಕೆ ಸಮಿತಿ ಸಭೆಯ ನಂತರ ತಂಡ ಗಳನ್ನು ಅಂತಿಮಗೊಳಿಸಲಾಯಿತು. ತಂಡದಲ್ಲಿ ಎಂಟು ಮಂದಿ ರೈಫಲ್ ಶೂಟರ್‌ಗಳು ಮತ್ತು ಏಳು ಮಂದಿ ಪಿಸ್ತೂಲ್ ಶೂಟರ್‌ಗಳು ಸ್ಥಾನ ಪಡೆದಿದ್ದಾರೆ.

ಟ್ರಯಲ್ಸ್ ಫಲಿತಾಂಶಗಳಿಗೆ ಆಯ್ಕೆಗಾರರು ಆದ್ಯತೆ ನೀಡಿದ್ದು, ವಿಶ್ವ ಚಾಂಪಿಯನ್ ರುದ್ರಾಂಕ್ಷ್ ಪಾಟೀಲ್ ಅಂಥ ಸ್ಪರ್ಧಿಗಳಿಗೆ ಬಾಗಿಲು ಮುಚ್ಚಿದ್ದಾರೆ. ತಮಗೆ ಅವಕಾಶ ನೀಡುವಂತೆ ಪಾಟೀಲ್ ಮನವಿ ಮಾಡಿದ್ದರು. ಮೆಚ್ಚಿನ 10 ಮೀ. ಏರ್ ರೈಫಲ್‌ನಲ್ಲಿ ಅವರು ಕೋಟಾ ಗಿಟ್ಟಿಸಿದ್ದರು. ಆದರೆ ಶೂಟಿಂಗ್‌ನಲ್ಲಿ ದೊರೆಯುವ ಕೋಟಾ, ವೈಯಕ್ತಿಕವಾಗಿ ಶೂಟರ್‌ಗಳಿಗೆ ಹೋಗುವುದಿಲ್ಲ ಅದು ಆ ದೇಶಕ್ಕೆ ಲಭಿಸುತ್ತದೆ.

ತಂಡದ ಎಲ್ಲ ಸದಸ್ಯರು, ಕೋಚ್ ಮತ್ತು ನೆರವು ಸಿಬ್ಬಂದಿಗಳ ಜೊತೆ ಈಗ ಫ್ರಾನ್ಸ್‌ನಲ್ಲಿ ಶಿಬಿರದಲ್ಲಿದ್ದಾರೆ. ಅಲ್ಲಿನ ಹವೆಗೆ ಒಗ್ಗಿಕೊಳ್ಳಲು ಮತ್ತು ಕಠಿಣ ತರಬೇತಿ ದೃಷ್ಟಿಯಿಂದ ಅಲ್ಲಿ ಶಿಬಿರ ನಡೆಯುತ್ತಿದೆ. ಶಿಬಿರದ ನಂತರ ತವರಿಗೆ ಬಂದು ಒಲಿಂಪಿಕ್ಸ್‌ಗೆ ಮೊದಲು ಎರಡು ವಾರಗಳ ವಿರಾಮ ಪಡೆಯಲಿದ್ದಾರೆ. ಪ್ಯಾರಿಸ್ ಒಲಿಂಪಿಕ್ಸ್ ಜುಲೈ 26 ರಿಂದ ಆಗಸ್ಟ್ 11ರವರೆಗೆ ನಿಗದಿಯಾಗಿದೆ.

ಟೋಕಿಯೊ ಮತ್ತು ರಿಯೊ ಕ್ರೀಡೆಗಳಲ್ಲಿ ಭಾರತ ಕ್ರಮವಾಗಿ 12 ಮತ್ತು 15 ಸದಸ್ಯರ ತಂಡಗಳನ್ನು ಕಳುಹಿಸಿತ್ತು. ಆದರೆ ಎರಡೂ ಸಂದರ್ಭಗಳಲ್ಲಿ ತಂಡ ಪದಕವಿಲ್ಲದೇ ಬರಿಗೈಲಿ ಮರಳಿತ್ತು.

ಪ್ಯಾರಿಸ್ ಒಲಿಂಪಿಕ್ಸ್‌ಗೆ ತಂಡಗಳು ಇಂತಿವೆ: ರೈಫಲ್: ಸಂದೀಪ್ ಸಿಂಗ್, ಅರ್ಜುನ್ ಬಬುಟಾ (10 ಮೀ. ಏರ್ ರೈಫಲ್, ಪುರುಷರು), ಇಳವೆನಿಲ್ ವಳರಿವನ್, ರಮಿತಾ (10 ಮೀ. ಏರ್ ರೈಫಲ್, ವನಿತೆಯರು), ಸಿಫ್ತ್ ಕೌರ್ ಸಮ್ರಾ, ಅಂಜುಂ ಮೌದ್ಗಿಲ್ (50 ಮೀ. ರೈಫಲ್ 3 ಪೊಸಿಷನ್ಸ್, ವನಿತೆಯರು), ಐಶ್ವರಿ ತೋಮಾರ್, ಸ್ವಪ್ನಿಲ್ ಕುಸಲೆ (50 ಮೀ. ರೈಫಲ್ 3 ಪೊ. ಪುರುಷರು).

ಪಿಸ್ತೂಲ್: ಸರಬ್ಜೋತ್ ಸಿಂಗ್, ಅರ್ಜುನ್ ಚೀಮಾ (10 ಮೀ. ಏರ್ ಪಿಸ್ತೂಲ್, ಪುರುಷರು), ಮನು ಭಾಕರ್, ರಿದಂ ಸಂಗ್ವಾನ್ (10 ಮೀ. ಏರ್ ಪಿಸ್ತೂಲ್, ವನಿತೆಯರು), ಅನಿಶ್ ಭಾನವಾಲ್, ವಿಜಯವೀರ್ ಸಿಧು (25 ಮೀ. ರ್‍ಯಾಪಿಡ್ ಫೈರ್ ಪಿಸ್ತೂಲ್, ಪುರುಷರು), ಮನು ಭಾಕರ್, ಇಶಾ ಸಿಂಗ್ (25 ಮೀ. ರ್‍ಯಾಫೈ. ಪಿಸ್ತೂಲ್, ಮಹಿಳೆಯರು).

ಉದ್ಯೋಗ ವಾಣಿ

ರಾಷ್ಟ್ರೀಯ ಆರೋಗ್ಯ ಅಭಿಯಾನ
ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ
ಆರೋಗ್ಯ ಸೌಧ, 1ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು–23

ನಂ.: NHM/SPMU/HR/Recruitment-State/Notification/50/2024-25(E-1127145) ದಿನಾಂಕ:10.06.2024

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ವಿವಿಧ ಹುದ್ದೆಗಳಿಗೆ ನೇರ ಸಂದರ್ಶನ

ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿಯು ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳಿಗೆ ನೇರ ಸಂದರ್ಶನಕ್ಕೆ ಅರ್ಹ ಅಭ್ಯರ್ಥಿಗಳನ್ನು ಆಹ್ವಾನಿಸುತ್ತಿದೆ. ಹುದ್ದೆಗಳು ತಾತ್ಕಾಲಿಕ ಮತ್ತು ಗುತ್ತಿಗೆ ಆಧಾರದಲ್ಲಿರುತ್ತದೆ. **www.hfwcom.karnataka.gov.in & nhm.karnataka.gov.in** ನೇರ ಸಂದರ್ಶನದ ದಿನಾಂಕ: **19.06.2024 ರಂದು ಬೆಳಿಗ್ಗೆ 11.00 ಗಂಟೆಗೆ** ಮುಖ್ಯ ಆಡಳಿತಾಧಿಕಾರಿ, ರಾಷ್ಟ್ರೀಯ ಆರೋಗ್ಯ ಅಭಿಯಾನ ಕಚೇರಿ 1ನೇ ಮಹಡಿ, ಪಶ್ಚಿಮ ವಿಭಾಗ, ಆರೋಗ್ಯ ಸೌಧ, ಮಾಗಡಿ ರಸ್ತೆ, 1ನೇ ಕ್ರಾಸ್, ಬೆಂಗಳೂರು – 560023 ಇಲ್ಲಿ ನಿಗದಿಪಡಿಸಲಾಗಿದೆ,

ಕ್ರ. ಸಂ.	ಯೋಜನೆಯ ಹೆಸರು	ಹುದ್ದೆಯ ಹೆಸರು	ಹುದ್ದೆಯ ಸಂಖ್ಯೆ	ಮೀಸಲಾತಿ ವರ್ಗ
1	Maternal Health	Consultant MH	1	UR
		LaQshya Programme Co-ordinator	1	UR
2	Demography	State GIS Co-ordinator	1	UR
		State HMIS/MCTC Co-ordinator	1	UR
3	RCH	PIP Consultant	1	UR
4	NUHM	Consultant NUHM	1	UR
5	Child Health	State SNCU Clinical Care Co-ordinator	1	UR
		Child Health Advisor	1	UR

* ನಿಗದಿತ ಸಮಯದ ನಂತರ ಬಂದ ಅಭ್ಯರ್ಥಿಗಳನ್ನು ಅನುಮತಿಸಲಾಗುವುದಿಲ್ಲ.

ಸಹಿ/–
ಅಭಿಯಾನ ನಿರ್ದೇಶಕರು
ರಾಷ್ಟ್ರೀಯ ಆರೋಗ್ಯ ಅಭಿಯಾನ

DIPR/CP/BCPL/278/2024-25

G20 ಭಾರತ 2023 INDIA
LiFE Lifestyle for Environment

ಸಂತೋಷವನ್ನು ಹಂಚುವುದರಲ್ಲಿ ನಮ್ಮ ಜೊತೆ ಪಾಲುದಾರರಾಗಿ

ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೋರೇಷನ್ ಲಿಮಿಟೆಡ್ ಎಂಬುದು ಮಹಾರತ್ನ ಕೇಂದ್ರ ಸಾರ್ವಜನಿಕ ವಲಯದ (CPSE) ಉದ್ಯಮವಾಗಿದೆ. ಬೆಂಗಳೂರಿನಲ್ಲಿರುವ 'ಎಚ್‌ಪಿ ಗ್ರೀನ್ ಆರ್ & ಡಿ ಸೆಂಟರ್' ಹೆಸರಿನ ತನ್ನ ಅತ್ಯಾಧುನಿಕ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರದಿಂದ ಬೆಂಬಲದೊಂದಿಗೆ ಪೆಟ್ರೋಲಿಯಂ ಉತ್ಪನ್ನಗಳ ಸಂಸ್ಕರಣೆ ಮತ್ತು ಮಾರ್ಕೆಟಿಂಗ್‌ನಲ್ಲಿ ಪ್ರಬಲವಾದ ಉಪಸ್ಥಿತಿಯನ್ನು ಹೊಂದಿದೆ. ಪರಿಸರ ಸಂರಕ್ಷಣೆ ಮತ್ತು ಸುಸ್ಥಿರ ಅಭಿವೃದ್ಧಿಗಾಗಿ ವಹಿವಾಟು ನಡೆಸಲು ನಾವು ಬದ್ಧರಾಗಿದ್ದೇವೆ. ನಾವು ಅರ್ಥಪೂರ್ಣವಾದ ಕೆಲಸದ ಪ್ರೊಫೈಲ್‌ಗಳನ್ನು ಒದಗಿಸುವುದರೊಂದಿಗೆ, ಬೆಳವಣಿಗೆಯ ಅಪಾರ ಅವಕಾಶಗಳು, ಸಂಸ್ಕೃತಿಯ ಒಳಗೊಳ್ಳುವಿಕೆ ಮತ್ತು ಉದ್ಯೋಗಿಗಳ ಉನ್ನತ ಕಾರ್ಯಕ್ಷಮತೆಯ ಗುರುತಿಸುವಿಕೆಯ ಜೊತೆಗೆ ರಾಷ್ಟ್ರದ ಅಭಿವೃದ್ಧಿಗೆ ಕೊಡುಗೆ ನೀಡುವ ಮೂಲಕ ಮತ್ತು ದೇಶದ ಇಂಧನ ಅಗತ್ಯಗಳನ್ನು ಪೂರೈಸುವ ಮೂಲಕ ಸಂತೋಷವನ್ನು ಹಂಚುತ್ತೇವೆ.

ನಮ್ಮಲ್ಲಿರುವ ಪ್ರತಿಭಾವಂತ ವೃತ್ತಿಪರರ ತಂಡವನ್ನು ಸೇರಿ ಮತ್ತು ನಿಮ್ಮ ವೃತ್ತಿಜೀವನದಲ್ಲಿ ಉನ್ನತಿಯನ್ನು ಹೊಂದುವುದರೊಂದಿಗೆ ಸಂತೋಷವನ್ನು ಹಂಚಿ. ವಿವರವಾದ ಜಾಹೀರಾತಿಗಾಗಿ http://hindustanpetroleum.com ನಲ್ಲಿ ನಮ್ಮ ವೃತ್ತಿಪುಟದಲ್ಲಿ ವಿವರಗಳನ್ನು ನೋಡಿ.

ಲಭ್ಯವಿರುವ ಸ್ಥಾನಗಳು
R&D ವೃತ್ತಿಪರರು | ಇಂಜಿನಿಯರ್‌ಗಳು | ಚಾರ್ಟರ್ಡ್ ಅಕೌಂಟೆಂಟ್ಸ್ | ಪೆಟ್ರೋಕೆಮಿಕಲ್ ವೃತ್ತಿಪರರು | ಇಂಧನೇತರ ವ್ಯಾಪಾರದ ವೃತ್ತಿಪರರು | ಸಿಟಿ ಗ್ಯಾಸ್ ಡಿಸ್ಟ್ರಿಬ್ಯೂಷನ್ ಕಾರ್ಯಾಚರಣೆಗಳು & ನಿರ್ವಹಣೆ / ಪ್ರಾಜೆಕ್ಟ್ಸ್ ವೃತ್ತಿಪರರು | ಮಾಹಿತಿ ವ್ಯವಸ್ಥೆಗಳು | ಗುಣಮಟ್ಟ ನಿಯಂತ್ರಣದ ವೃತ್ತಿಪರರು

ಪ್ರಮುಖ ದಿನಾಂಕಗಳು
ಆನ್‌ಲೈನ್ ಅರ್ಜಿಯ ಪ್ರಾರಂಭ: 5ನೇ ಜೂನ್ 2024
ಆನ್‌ಲೈನ್ ಅರ್ಜಿಯ ಕೊನೆಯ ದಿನಾಂಕ: ಎಲ್ಲಾ ಇತರ ಹುದ್ದೆಗಳಿಗೆ: 30ನೇ ಜೂನ್ 2024; R&D ವೃತ್ತಿಪರರಿಗೆ: 20ನೇ ಜುಲೈ 2024

ಅರ್ಥಪೂರ್ಣವಾದ ಕೆಲಸ | ಅಭಿವೃದ್ಧಿಗೆ ಅವಕಾಶಗಳು | ಕಟಿಂಗ್ ಎಡ್ಜ್ ತಂತ್ರಜ್ಞಾನ | ಸಂಸ್ಕೃತಿಯ ಒಳಗೊಳ್ಳುವಿಕೆ | ಪುರಸ್ಕಾರಗಳು ಮತ್ತು ಮನ್ನಣೆ | ಸಮರ್ಥನೀಯತೆ ಮತ್ತು ಜವಾಬ್ದಾರಿ | ತಂಡದ ಉತ್ಸಾಹ

ನೊಂದಾಯಿತ ಕಛೇರಿ: 17, ಜಮ್ಶೆಡ್ಜಿ ಟಾಟಾ ರಸ್ತೆ, ಮುಂಬೈ - 400020
CIN NO: L23201MH1952GOI008858
Delivering Happiness
/hpcl | /hpcl | /hpcl
www.hindustanpetroleum.com

ಸುಮಿತ್ ನಗಾಲ್

ನಗಾಲ್ ಮುನ್ನಡೆ

ಪೆರುಗಿಯಾ (ಇಟಲಿ), (ಪಿಟಿಐ): ಭಾರತದ ಅಗ್ರ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಅವರು ಎಟಿಪಿ 125 ಪೆರುಗಿಯಾ ಚಾಲೆಂಜರ್ ಟೆನಿಸ್ ಟೂರ್ನಿಯಲ್ಲಿ ಮಂಗಳವಾರ ಬೋಸ್ನಿಯಾದ ನೆರ್ಮನ್ ಫಾಟಿಕ್ ಅವರನ್ನು ನೇರ ಸೆಟ್‌ಗಳಿಂದ ಸೋಲಿಸಿ ಪ್ರಿಕ್ವಾರ್ಟರ್‌ಫೈನಲ್ ತಲುಪಿದರು.

ಕಳೆದ ವಾರ ಜರ್ಮನಿಯಲ್ಲಿ ನಡೆದ ಹೀಲ್‌ಬ್ರಾನ್ ನೆಕರ್‌ಕಪ್ ಟೂರ್ನಿಯಲ್ಲಿ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡಿದ್ದ ಆರನೇ ಶ್ರೇಯಾಂಕದ ಸುಮಿತ್ ಇಲ್ಲಿ ಮೊದಲ ಸುತ್ತಿನಲ್ಲಿ 7–6 (7–1), 6–2 ರಿಂದ ನೆರ್ಮನ್ ಅವರನ್ನು ಒಂದು ಗಂಟೆ 52 ನಿಮಿಷಗಳವರೆಗೆ ನಡೆದ ಪಂದ್ಯದಲ್ಲಿ ಸೋಲಿಸಿದರು.

ಅಂತರರಾಷ್ಟ್ರೀಯ ಟೆನಿಸ್ ಫೆಡರೇಷನ್, ಜೂನ್ 12ರ ಒಳಗೆ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯುವ ಆಟಗಾರರ ಹೆಸರನ್ನು ಅಂತಿಮಗೊಳಿಸಲಿದೆ.

ಮೂರನೇ ಸ್ಥಾನಕ್ಕಿಳಿದ ಸಾತ್ವಿಕ್–ಚಿರಾಗ್

ನವದೆಹಲಿ (ಪಿಟಿಐ): ಭಾರತದ ಅಗ್ರಮಾನ್ಯ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ, ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ ಮಂಗಳವಾರ ಪ್ರಕಟಿಸಿದ ರ್‍ಯಾಂಕಿಂಗ್‌ನಲ್ಲಿ ಎರಡು ಸ್ಥಾನ ಕೆಳಕ್ಕಿಳಿದು ಮೂರನೇ ಸ್ಥಾನಕ್ಕಿಳಿದಿದ್ದಾರೆ.

ಭಾರತದ ಜೋಡಿ ಕಳೆದ ವಾರ ನಡೆದ ಇಂಡೊನೇಷ್ಯಾ ಓಪನ್‌ನಿಂದ ಹಿಂದೆಸರಿದಿತ್ತು. ಕಳೆದ ವರ್ಷ ಅಲ್ಲಿ ಚಾಂಪಿಯನ್ ಆಗಿತ್ತು. ಚೀನಾದ ಲಿಯಾಂಗ್ ವೀ ಕೆಂಗ್ –ವಾಂಗ್ ಚಾಂಗ್ ಜೋಡಿ ಮೊದಲ ಬಾರಿ ಅಗ್ರ ಕ್ರಮಾಂಕಕ್ಕೆ ಏರಿದೆ. ಡೆನ್ಮಾರ್ಕ್‌ನ ಕಿಮ್ ಆಸ್ಟ್ರುಪ್– ಆ್ಯಂಡರ್ಸ್ ಸ್ಕಾರುಪ್ ರೊಸ್ಮುಸ್ಸೇನ್ ಎರಡು ಸ್ಥಾನ ಮೇಲೇರಿ ಎರಡನೇ ಕ್ರಮಾಂಕ ಗಳಿಸಿದೆ.

ಮೇ ತಿಂಗಳಲ್ಲಿ ಥಾಯ್ಲೆಂಡ್ ಓಪನ್‌ನಲ್ಲಿ ಗೆದ್ದ ನಂತರ ಸಾತ್ವಿಕ್–ಚಿರಾಗ್ ವಿಶ್ವ ಕ್ರಮಾಂಕದಲ್ಲಿ ಮರಳಿ ಅಗ್ರಪಟ್ಟ ಪಡೆದಿದ್ದರು. ಆದರೆ ಫಾರ್ಮ್ ಕಳೆದುಕೊಂಡು ಸಿಂಗಪುರ ಓಪನ್ ಟೂರ್ನಿಯ ಮೊದಲ ಸುತ್ತಿನಲ್ಲೇ ನಿರ್ಗಮಿಸಿದ್ದರು. ಈಗ ನಡೆಯುತ್ತಿರುವ ಆಸ್ಟ್ರೇಲಿಯನ್ ಓಪನ್‌ನಲ್ಲೂ ಈ ಜೋಡಿ ಆಡುತ್ತಿಲ್ಲ.

12 ಮಂದಿಯ ಭಾರತ ತಂಡ ಕಣಕ್ಕೆ

ಇಟಲಿ: ಶಾಟ್‌ಗನ್ ವಿಶ್ವಕಪ್ ಇಂದಿನಿಂದ

ನವದೆಹಲಿ (ಪಿಟಿಐ): ಕಾಮನ್ವೆಲ್ತ್ ಗೇಮ್ಸ್ ಚಿನ್ನದ ಪದಕ ವಿಜೇತೆ ಶ್ರೇಯಸಿ ಸಿಂಗ್ ಸೇರಿದಂತೆ 12 ಮಂದಿ ಭಾರತದ ಶೂಟರ್‌ಗಳು ಬುಧವಾರ ಇಟಲಿಯ ಲೊನಾಟೊದಲ್ಲಿ ನಡೆಯಲಿರುವ ಐಎಸ್‌ಎಸ್‌ಎಫ್ ಶಾಟ್‌ಗನ್ ವಿಶ್ವಕಪ್‌ನಲ್ಲಿ ಪಾಲ್ಗೊಳ್ಳಲಿದ್ದಾರೆ.

ಪುರುಷರ ಮತ್ತು ಮಹಿಳೆಯರ ವಿಭಾಗದ ಟ್ರ್ಯಾಪ್ ಸ್ಪರ್ಧೆಗಳು ನಡೆಯಲಿವೆ. ಭಾರತ ಈ ಎಲ್ಲಾ ವಿಭಾಗಗಳಲ್ಲಿ ಮೂರು ಮಂದಿಯ ತಂಡಗಳನ್ನು ಕಣಕ್ಕಿಳಿಸಿದೆ.

ಇಲ್ಲಿ ಗೆಲ್ಲುವ ಪದಕಗಳಿಂದ ಶೂಟರ್‌ಗಳಿಗೆ ಪಾಯಿಂಟ್‌ಗಳು ದೊರೆಯಲಿವೆ. ಇವು ಒಲಿಂಪಿಕ್ಸ್‌ಗೆ ಸ್ಥಾನ ಪಡೆಯಲು ನೆರವಾಗಲಿದೆ. ಈಗಾಗಲೇ ಪ್ಯಾರಿಸ್ ಒಲಿಂಪಿಕ್ಸ್‌ಗೆ ಪಿಸ್ತೂಲ್ ಮತ್ತು ರೈಫಲ್ ವಿಭಾಗದಲ್ಲಿ ಸ್ಪರ್ಧಿಸುವ ಒಟ್ಟು 15 ಮಂದಿಯ ತಂಡವನ್ನು ಪ್ರಕಟಿಸಲಾಗಿದೆ. ಪೃಥ್ವಿರಾಜ್ ತೊಂಡೈಮನ್, ವಿವಾನ್ ಕಪೂರ್ ಮತ್ತು ಭೌನೀಶ್ ಮೆಂಡಿರಟ್ಟಾ ವಿಶ್ವಕಪ್‌ನ ಪುರುಷರ ಟ್ರ್ಯಾಪ್ ವಿಭಾಗದಲ್ಲಿ, ರಾಜೇಶ್ವರಿ ಕುಮಾರಿ, ಶ್ರೇಯಸಿ ಮತ್ತು ಮನಿಶ್ ಕೀರ್ ಮಹಿಳೆಯರ ಟ್ರ್ಯಾಪ್ ವಿಭಾಗದ ಸ್ಪರ್ಧೆಗಳಲ್ಲಿ ಭಾರತವನ್ನು ಪ್ರತಿನಿಧಿಸಲಿದ್ದಾರೆ.